ಕಾಮಲಾಪುರದ ಶಾಸನಗಳು ಮತ್ತು ದೇವಾಲಯಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್.ಪ್ರಬಂಧ)

ಸಂಶೋಧಕರು

ಕೆ.ಶಿವಲೀಲಾ

ಮಾರ್ಗದರ್ಶಕರು

ಡಾ. ಕೆ.ಜಿ.ಭಟ್‌ಸೂರಿ

ಶಾಸನಶಾಸ್ತ್ರ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೩

75

ಕಾಮಲಾಪುರದ ಶಾಸನಗಳು ಮತ್ತು ದೇವಾಲಯಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್.ಪ್ರಬಂಧ)

ಸಂಶೋಧಕರು

ಕೆ.ಶಿವಲೀಲಾ

ಮಾರ್ಗದರ್ಶಕರು

ಡಾ. ಕೆ.ಜಿ.ಭಟ್‌ಸೂರಿ

ಶಾಸನಶಾಸ್ತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೩

ಮಾರ್ಗದರ್ಶಕರ ಪ್ರಮಾಣಪತ್ರ

ಕಾಮಲಾಪುರದ ಶಾಸನಗಳು ಮತ್ತು ದೇವಾಲಯಗಳು ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಕುಮಾರಿ ಕೆ.ಶಿವಲೀಲಾ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲರೂಪದ ಸಂಶೋಧನಾ ಕೃತಿಯಾಗಿದ್ದು, ಇದನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಕೆ.ಜಿ.ಭಟ್‌ಸೂರಿ
ಮಾರ್ಗದರ್ಶಕರು ಮತ್ತು ಅಧ್ಯಾಪಕರು
ಶಾಸನಶಾಸ್ತ್ರ ವಿಭಾಗ

ಸ್ಥಳ : ವಿದ್ಯಾರಣ್ಯ
ದಿನಾಂಕ : 28-[illegible]-2003

ಪ್ರಮಾಣ ಪತ್ರ

ಕಾಮಲಾಪುರದ ಶಾಸನಗಳು ಮತ್ತು ದೇವಾಲಯಗಳು ಎಂಬ ನಿಬಂಧವನ್ನು ಡಾ.ಕೆ.ಜಿ.ಭಟ್‌ಸೂರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲರೂಪದ ಸಂಶೋಧನಾ ಕೃತಿಯಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಕೆ. ಶಿವಲೀಲಾ

ಕೆ. ಶಿವಲೀಲಾ
ಎಂ.ಫಿಲ್.ವಿದ್ಯಾರ್ಥಿನಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 28. 4. 2003

ಸಂಕೇತ ಸೂಚಿ

AR	Annual Reports
ARIE	Annual Reports on Indian Epigraphy
ARSIE	Annual Reports on South Indian Epigraphy
BKI	Bombay Karnataka Inscriptions Volume I
EI	Epigraphia Indica
EC	Epigraphy Karnataka
IA	Indian Antiquery
JESI	Journal of the Epigraphical Soceity of India, Mysore
KI	Karnataka Inscriptions
MAR	Annual Reports of the Mysore Arocheological Department
SII	South Indian Inscriptions
VPR	Vijayanagara Progress Reports
ಅ.ಸ.ಜಿ.	ವಿಜಯನಗರದ ಆಡಳಿತ ಮತ್ತು ಸಾಮಾಜಿಕ ಜೀವನ
ಇ.ತಿ.ದ.	ಇತಿಹಾಸ ದರ್ಶನ
ಕಂ.ವಿ.	ಕಂಠೀರವ ನರಸರಾಜ
ಕ.ವಿ.ಶಾ.ಸಂ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
ಜ್ಞಾ.ಚ.	ಜ್ಞಾನ ಚಂದ್ರಾಭ್ಯುದಯ
ಚ.ಪು.	ಚನ್ನಬಸವ ಪುರಾಣ
ಜೀ.ವ.	ಜೀವಂಧರ ಚರಿತೆ
ಧ.ಪು.	ಧರ್ಮನಾಥ ಪುರಾಣ

ಪ.ಪು.	ಪದ್ಮರಾಜ ಪುರಾಣ
ಪ್ರೌ.ಕಾ	ಪ್ರೌಢರಾಯನ ಕಾವ್ಯ
ಭ.ವೈ.	ಭರತೇಶ ವೈಭವ
ಮೋ.ತ.	ಮೋಹನ ತರಂಗಿಣಿ
ರಾ.ಚ.	ರಾಮನಾಥ ಚರಿತೆ
ವಿ.ಚ	ವಿಜಯಕುಮಾರಿ ಚರಿತೆ
ವಿ.ಶಾ.	ವಿಜಯನಗರ ಶಾಸನಗಳು
ವಿ.ಅ.	ವಿಜಯನಗರ ಅಧ್ಯಯನ
ಸ.ರಾ.ಜೀ.	ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಹಾಗೂ ರಾಜಕೀಯ ಜೀವನ
ಸ.ಕೌ.	ಸಮ್ಯಕ್ತ ಕೌಮುದಿ
ಸೊ.ಸೋ	ಸೊಬಗಿನ ಸೋನೆ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಪೀಠಿಕೆ

ಒಂದು ನಾಡಿನ ಚರಿತ್ರೆ ಎಂದರೆ ಜನ ಸಮಷ್ಟಿಯ ಚರಿತ್ರೆ. ಅಂದರೆ ಜನರ ಜೀವನ ಸಿದ್ಧಾಂತಗಳನ್ನು ಬದುಕಿನ ಮೂಲೆಗಳನ್ನು ಪರಿಚಯಿಸುತ್ತದೆ. (ಶೀಲಾಕಾಂತ ಪತ್ತಾರ್ ೨೦೦೦ ಪು.೧) ಒಂದು ಐತಿಹಾಸಿಕ ಪ್ರದೇಶದ ಅಧ್ಯಯನ ಆ ನಾಡಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮೌಲ್ಯಗಳನ್ನು ತಿಳಿದುಕೊಳ್ಳಲು ಜನ ಜೀವನವನ್ನು ವಿಕಸನಗೊಳಿಸಲು ಪಸರಿಸುವ ವಿಧಾನ ಹೆಚ್ಚು ಸಹಾಯಕಾರಿ. ಕರ್ನಾಟಕದ ಸಂಸ್ಕೃತಿಯ ಹಿರಿಮೆಯನ್ನು ತೋರಿಸಿದ ಹಲವಾರು ಪ್ರಾಚೀನ ಸ್ಥಳಗಳಲ್ಲಿ ಹಂಪೆಯೂ ಒಂದು.

ಪ್ರಸ್ತುತ ಕಾಮಲಾಪುರ ಗ್ರಾಮ ಹಂಪೆ ಕ್ಷೇತ್ರಕ್ಕೆ ಒಳಪಡುವುದರಿಂದ ಕಾಮಲಾಪುರ ಗ್ರಾಮದ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಒಂದಾದ ಶಾಸನಗಳ ಹಾಗೂ ದೇವಾಲಯಗಳ ಅಧ್ಯಯನ ಮಾಡುವುದು ಅರ್ಥಪೂರ್ಣ, ಸ್ವಾರಸ್ಯಪೂರ್ಣ. ಕಾಮಲಾಪುರ ಹಂಪಿ ಕ್ಷೇತ್ರಕ್ಕೆ ಒಳಪಟ್ಟರೂ ಪ್ರತ್ಯೇಕವಾಗಿ ಕಾಮಲಾಪುರ ಗ್ರಾಮದ ಶಾಸನಗಳ ಮತ್ತು ದೇವಾಲಯಗಳ ಕುರಿತು ಅಧ್ಯಯನವಾಗದೇ ಇರುವುದು ಪ್ರಸ್ತುತ ಈ ಅಧ್ಯಯನಕ್ಕೆ ಮೂಲಕಾರಣ.

ವ್ಯಾಪ್ತಿ

ಕರ್ನಾಟಕದ ಸಂಸ್ಕೃತಿ ವಿಜಯನಗರ ಕಾಲದಲ್ಲಿ ಪೆರ್ದ್ದೊರೆಯಾಗಿ ಪ್ರವಹಿಸಿತು. ವಿಜಯನಗರವನ್ನು ಆಳಿ-ಅಳಿದ ಅರಸರುಗಳು ಇಂದು ಇಲ್ಲವಾದರೂ ಅಂದು ಬಿಟ್ಟು ಹೋದ ಸಂಸ್ಕೃತಿಯ ಕುರುಹುಗಳು ಕರ್ನಾಟಕದ ಹಿರಿಮೆಯನ್ನು ಸಾರಿ ಹೇಳುವಂತಿವೆ. ಒಟ್ಟಾರೆ ಕಾಮಲಾಪುರ ಗ್ರಾಮವನ್ನು ಒಳಗೊಂಡು ಹಂಪಿ ಪ್ರದೇಶವೆಂದು ಕರೆಯಲ್ಪಟ್ಟರೂ ಹಂಪಿಯನ್ನು ಕೇಂದ್ರಬಿಂದುವಾಗಿ ಕೇಂದ್ರೀಕರಿಸಲಾಗಿದೆ. ಹಂಪಿ ರಾಜಧಾನಿಯಾಗಿ ಅಂದು ಅಸ್ತಿತ್ವವನ್ನು ಕಳೆದುಕೊಂಡು ಹಂಪಿ ಇಂದು ಸಂಸ್ಕೃತಿ ಸ್ಥಳ ಎಂಬ ಮನ್ನಣೆಗೆ ಪಾತ್ರವಾಗಿದೆ. ಹಂಪಿ ಕ್ಷೇತ್ರವನ್ನು ಒಳಗೊಂಡ ಕಾಮಲಾಪುರ ಗ್ರಾಮದಲ್ಲಿ ಪಸರಿಸಿದ ಶಾಸನಗಳ ಮತ್ತು ದೇವಾಲಯಗಳ ಕುರುಹುಗಳು ನಾಡಿನ ಅಮೂಲ್ಯ ಸಂಪತ್ತಾಗಿದೆ. ಇಂತಹ ಕುರುಹುಗಳ ಅಧ್ಯಯನವನ್ನು ಪ್ರತ್ಯೇಕವಾಗಿ ಸೀಮಿತಿವಾಗಿಸಿಕೊಂಡು ಅಧ್ಯಯನದ ವ್ಯಾಪ್ತಿಯನ್ನು ಮಾಡಲಾಗಿದೆ. ಕಾಮಲಾಪುರ ಗ್ರಾಮದಲ್ಲಿನ ಐತಿಹಾಸಿಕ ಕುರುಹುಗಳನ್ನು ಪೂರ್ವಾಭಿಮುಖವಾಗಿ ಅಳ್ಳಿಕೆರೆಯವರೆಗೆ ಪಶ್ಚಿಮಾಭಿಮುಖವಾಗಿ



ಅಕ್ಕ-ತಂಗಿಯವರ ಗುಂಡಿನವರೆಗೆ ಉತ್ತರಾಭಿಮುಖವಾಗಿ ಗಾಣಗಿತ್ತಿ ಬಸದಿಯವರೆಗೆ ದಕ್ಷಿಣಾಭಿಮುಖವಾಗಿ ಕೆರೆಯ ಕಟ್ಟೆಯವರೆಗೆ ಈ ಅಧ್ಯಯನದ ವ್ಯಾಪ್ತಿ ಮಾಡಿಕೊಳ್ಳಲಾಗಿದೆ.

ಈ ವರೆಗಿನ ಅಧ್ಯಯನ ಪ್ರಮುಖ ರಾಜಮನೆತನಗಳ ಬಗ್ಗೆ, ನಾಡು-ನುಡಿ ಸಂಸ್ಕೃತಿಯ ಬಗ್ಗೆ, ಹಲವಾರು ಪ್ರಕಟಣೆಗಳು ಹೊರಬಂದಿವೆ. ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಅದರಲ್ಲೂ ಹೆಚ್ಚಾಗಿ ಹಂಪಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಆಕರಗಳಲ್ಲಿ ಹಾಗೂ ಆನುಷಂಗಿಕ ಆಕರಗಳಲ್ಲಿ ಸಾಕಷ್ಟು ಮಾಹಿತಿಗಳು ದೊರಕುತ್ತವೆ. ಪ್ರಾಥಮಿಕ ಆಕರಗಳಲ್ಲಿ ಮುಖ್ಯವಾಗ ಭಾರತೀಯ ಪುರಾತತ್ವ ಶಾಸನ ಶಾಸ್ತ್ರದ ವಾರ್ಷಿಕ ವರದಿಗಳಲ್ಲಿ, ದಕ್ಷಿಣ ಭಾರತೀಯ ಶಾಸನ ಶಾಸ್ತ್ರ ವರದಿಗಳಲ್ಲಿ, ವಿಜಯನಗರ ಸಂಶೋಧನಾ ಸಂಪುಟಗಳಲ್ಲಿ, ಶಾಸನಗಳ, ಉತ್ಖನನಗಳ ಹಾಗೂ ಸ್ಮಾರಕಗಳ, ಕುರಿತು ಮಾಹಿತಿಗಳು ದೊರಕುತ್ತವೆ. ಹಂಪಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ವಿದ್ವಾಂಸರುಗಳು ಗ್ರಂಥಗಳು, ಲೇಖನಗಳು ಈಗಾಗಲೇ ಪ್ರಕಟವಾಗಿವೆ. ಡಾಮಿಕ್ ಡೇವಿಜನ್ ಜೆನ್‌ಕಿನ್(೧೯೮೮), ದೇಕುಂಜರಿ(೧೯೭೦), ಜೋನ್ ಮತ್ತು ಜೋರ್ಜ(೧೯೯೦), ಮೊಂಗಟಸ್ಟ್ ಎ.ಎಚ್.(೧೯೮೨), ರೊಬರ್ಟ್‌ಸಿವಿಲ್(೧೯೦೦), ಸರಸ್ವತಿ ಎನ್.(೧೯೯೨), ರಾಜಶೇಖರ್ ಎಸ್. (೧೯೮೩), ಕೊಟ್ರಯ್ಯ ಸಿ.ಟಿ.ಎಂ.(೧೯೯೭-೨೦೦೧), ಚೆನ್ನಬಸಪ್ಪ ಎಸ್.ಪಾಟೀಲ್(೧೯೯೬), ಬಸವರಾಜ ಮಲ್ಲಶೆಟ್ಟಿ(೧೯೮೧), ದೀಕ್ಷಿತ್ ಜಿ.ಎಸ್.(೧೯೯೧), ದೇವರಕೊಂಡಾರೆಡ್ಡಿ(೨೦೦೦), ರಾಘುವೇಂದ್ರರಾವ್ ವಿ.(೧೯೬೮), ವೆಂಕಟರತ್ನಂ(೧೯೭೪), ವಸುಂಧರ ಫಿಲಿಯೋಜ(೧೯೮೨), ವಾಸುದೇವನ್ ಸಿ.ಎಸ್.(೨೦೦೧), ಶ್ರೀಕಂಠಯ್ಯ ಕೆ.,(೧೯೮೩), ಶ್ರೀಕಂಠಶಾಸ್ತ್ರೀ(೧೯೮೯), ಶಿವರುದ್ರಸ್ವಾಮಿ ಎಸ್.ಎನ್.(೨೦೦೦), ಸುರೇಶ ಕೆ.ಎಂ.(೧೯೯೯) ಮುಂತಾದ ವಿದ್ವಾಂಸರುಗಳು ಹಂಪಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಪಕಟಣೆಗಳನ್ನು ಹೊರತಂದಿದ್ದಾರೆ. ಕರ್ನಾಟಕ ಪ್ರಾಚ್ಯ ವಸ್ತು ಮತ್ತು ನಿರ್ದೇಶನಾಲಯ ೧೯೯೪ ರಿಂದ ವಿನಜಯಗರಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುತ್ತಲೇ ಇದ್ದು ವಿಜಯನಗರ ಅಧ್ಯಯನ ಎಂಬ ಶೀರ್ಷಿಕೆಯ ಅಡಿ ಪ್ರಕಟಣೆಯನ್ನು ಹೊರತರುತ್ತಲಿದೆ. ವಿಜಯನಗರದ ಅಧ್ಯಯನದಲ್ಲಿ ಹಂಪಿ ಕ್ಷೇತ್ರದಲ್ಲಿನ ದೇವಾಲಯಗಳು, ಶಾಸನಗಳ, ನಾಣ್ಯಗಳ ಕುರಿತು ಹಲವಾರು ಸಂಶೋಧನಾ ಲೇಕನಗಳನ್ನು ಒಳಗೊಂಡಿದೆ. ಇವೆಲ್ಲಾ ಲೇಖನಗಳು, ಸಂಶೋಧನಗಳು ಪ್ರಕಟವಾದಾಗ್ಯೂ ಕಾಮಲಾಪುರ ಗ್ರಾಮಕ್ಕೆ ಸಂಬಂಧಿಸಿದಂತೆ ಇನ್ನೂ ಪ್ರಕಟವಾಗದ ಶಾಸನಗಳು ಮತ್ತು ದೇವಾಲಯಗಳು ಸಾಕಷ್ಟು ಇವೆ. ವಿಜಯನಗರಕ್ಕೆ ಸಂಬಂಧಿಸಿದಂತೆ ಹಂಪಿ ಕುರಿತು ಅಲ್ಲಲ್ಲಿ ಬಿಡಿ ಲೇಖನಗಳು ಪ್ರಕಟಣೆಗಳು ಹೊರಬಂದರೂ ಕಾಮಲಾಪುರ ಗ್ರಾಮದ ಪುರಾತತ್ವ ಕುರುಹುಗಳ ಪ್ರತ್ಯೇಕತೆಯನ್ನು ತೋರಿಸುವ ದೃಷ್ಟಿಯಿಂದ ಇದುವರೆಗೆ ಅಧ್ಯಯನ ನಡೆದಿಲ್ಲ. ಈ ಒಂದು ಹಿನ್ನೆಲೆಯನ್ನು ಆಧರಿಸಿ ಕಾಮಲಾಪುರ ಗ್ರಾಮದ ಶಾಸನಗಳ ಮತ್ತು ದೇವಾಲಯಗಳ ಕುರಿತಾದ ವ್ಯಷ್ಠಿಯಾಗಿ ಅಭಿವ್ಯಕ್ತಿಗೊಂಡ ವಿಚಾರಗಳನ್ನು ಮರುಪರಿಶೀಲಿಸಿ ಸಮಗ್ರವಾಗಿ ವಿವೇಚನೆ ಇಟ್ಟ ಮೊದಲಹೆಜ್ಜೆ ಇದಾಗಿದೆ.

ಆಕರ ಸಾಮಗ್ರಿಗಳು

ಒಂದು ನಾಡಿನ ಚರಿತ್ರೆ ಎಂದರೆ ಅದು ಆ ನಾಡಿನ ಜನ ಜೀವನದ ಚರಿತ್ರೆ ಎಂದರ್ಥ. ನಾಡಿನ ಜನ ಜೀವನದ ಚರಿತ್ರೆಗೆ ಆಕರಗಳು ಅಡಿಪಾಯ. ಆಕರಗಳ ವೈವಿಧ್ಯತೆ ತೆರತೆರನವು. ೧. ಸಾಹಿತ್ಯಿಕ ಆಕರಗಳು ೨. ವಿದೇಶಿಯರ ಪ್ರವಾಸಿ ಕಥಾನಕಗಳು ೩. ಪುರಾತತ್ವ ಆಕರಗಳಾದ ಶಾಸನಗಳು, ದೇವಾಲಯಗಳು ಹೆಚ್ಚಿನ ಮಟ್ಟಿಗೆ ನೆರವಾಗುವ ಆಕರಗಳು ಕಾಮಲಾಪುರ ಗ್ರಾಮದ ಸಾಂಸ್ಕೃತಿಕ ಕುರುಹುಗಳಾದ ಶಿಲಾಶಾಸನಗಳಿಗೆ ಮತ್ತು ಸ್ಮಾರಕಗಳಿಗೆ ಸೀಮಿತವಾಗಿರಿಸಿಕೊಂಡು ಅಧ್ಯಯನದ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನದ ವಿಧಾನ

ನನ್ನ ಅಧ್ಯಯನದ ಶೀರ್ಷಿಕೆ 'ಕಾಮಲಾಪುರದ ಶಿಲಾ ಶಾಸನಗಳು ಮತ್ತು ದೇವಾಲಯಗಳು' ಎಂದಾದರೂ ಇದಕ್ಕೆ ಪೂರಕವಾದ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಶಾಸನಗಳು ಮತ್ತು ದೇವಾಲಯಗಳು ಮತ್ತು ಗ್ರಂಥಗಳಿಂದ ವಿಷಯ ಸಂಗ್ರಹಿಸಲು ಪಟ್ಟಿಕೆ ವಿಧಾನ ಅನುಸರಿಸಲಾಯಿತು. ದೇವಾಲಯಗಳು ಎಂಬ ಶಬ್ದವನ್ನು ಶೀರ್ಷಿಕೆಯಲ್ಲಿ ತೆಗೆದುಕೊಂಡರೂ ಸ್ಮಾರಕ ಎಂಬ ಅರ್ಥದಲ್ಲಿ ಬಳಸಿ ವಾಸ್ತು ಶೈಲಿಯಲ್ಲಿ ಲೌಖಿಕ ವಾಸ್ತುಶೈಲಿ. ಸೈನಿಕ ವಾಸ್ತು ಶೈಲಿಯನ್ನು ಅಳವಡಿಸಲಾಯಿತು. ದೇವಾಲಯಗಳ ಕುರಿತು ಅಲ್ಲಲ್ಲಿ ಪ್ರಕಟಿತ ಮಾಹಿತಿ ದೊರೆತರೂ ಪ್ರಕಟಿತ ಮಾಹಿತಿಯ ಜೊತೆಗೆ ಕಾಮಲಾಪುರ ಗ್ರಾಮವನ್ನು ಸೀಮಿತವಾಗಿರಿಸಿಕೊಂಡು ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಕ್ಷೇತ್ರಕಾರ್ಯದಲ್ಲಿ ಅಪ್ರಕಟಿತ ದೇವಾಲಯಗಳು, ಮೂರ್ತಿಶಿಲ್ಪಗಳೂ ಒಳಗೊಂಡಿವೆ. ಕ್ಷೇತ್ರ ಕಾರ್ಯದಲ್ಲಿ ವಾಸ್ತು ಶಿಲ್ಪಾಧ್ಯಯನಕ್ಕಾಗಿ, ಛಾಯಾಚಿತ್ರಗಳನ್ನು ಸಂಗ್ರಹಿಸಿ, ಅಧ್ಯಯನಕ್ಕೆ ಬಳಸಲಾಯಿತು. ಒಟ್ಟಾರೆ ಈ ಅಧ್ಯಯನದಲ್ಲಿ ಪಟ್ಟಿಕಾ ವಿಧಾನ ಸರ್ವೇಕ್ಷಣೆ ನಕಾಶೆ, ರೇಖಾಚಿತ್ರ ಛಾಯಾಚಿತ್ರಗಳ ಬಳಕೆಯನ್ನು ಅಳವಡಿಸಲಾಗಿದೆ. ಸಂಶೋಧನಾ ಕಾರ್ಯಕ್ಕೆ ನಾನು ಇಟ್ಟ ಪ್ರಥಮ ಹೆಜ್ಜೆ ಇದು.

ಕಾಮಲಾಪುರ ಪದದ ನಿಷ್ಪತ್ತಿ

ಭರತದ ಖಂಡದ ಸಂಸ್ಕೃತಿ ಉಳಿದ ಪ್ರಾಚೀನ ಸಂಸ್ಕೃತಿಗಳಿಗಿಂತ ಹೆಚ್ಚು ಪ್ರಾಚೀನ. ಈ ಸಂಸ್ಕೃತಿಗೆ ಪ್ರಾಚೀನ, ಅರ್ವಾಚೀನಗಳೆರಡನ್ನೂ ಸೇರಿಸುವ ಸಾಮರಸ್ಯದ ಶಕ್ತಿ ಇದೆ. ಕನ್ನಡ ನಾಡು ತನ್ನ ಬಹುಮುಖ ಸಂಸ್ಕೃತಿಯಲ್ಲೂ ಏಕತೆಯಿಂದ ಮೆರೆದಿದೆ. "ಮಾನ-ಮರ್ಯಾದೆಗಳು, ವ್ಯಕ್ತಿಯ ಗೌರವ, ಪ್ರತಿಷ್ಠೆಗಳನ್ನೆಳೆಯುವಂತೆ, ನಾಡಿನ ಪ್ರತಿಷ್ಠೆ ಗೌರವಗಳನ್ನು ಅಳೆಯುವುದೇ ಸಂಸ್ಕೃತಿ". ವ್ಯಕ್ತಿಯ ವೈಯಕ್ತಿಕ ವಿಕಾಸವೇ ಸಂಸ್ಕೃತಿ ಎಂಬ ಮಾತೂ ಅದನ್ನೇ ಸಮರ್ಥಿಸುತ್ತದೆ. ಸಂಸ್ಕೃತಿ ಎಂಬುದು ಆಯಾ ಕಾಲ

ದೇಶ, ಭಾಷೆ, ಆಯಾ ಪ್ರದೇಶದ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ. ನಾಡಿಗೆ ಇದು ಶ್ರೀರಕ್ಷೆ. ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ಮಾನವನ ಕ್ರಿಯಾಶೀಲತೆಯೇ ಕಾರಣ. (ಡಾ.ಎಚ್. ತಿಪ್ಪೇರುದ್ರಸ್ವಾಮಿ, ೧೯೬೮ ಪು. ೧೨-೧೫)

ಈ ಹಿನ್ನೆಲೆಯಲ್ಲಿ ವಿಭಿನ್ನ ಆಡಳಿತ ವಿಭಾಗಗಳಾಗಿದ್ದ ಕಾಮಲಾಪುರವನ್ನೊಳಗೊಂಡ ಕೃಷ್ಣಾಪುರ ಅಚ್ಯುತಾಪುರ, ವಿಠಲಾಪುರ, ಮಲಪನಗುಡಿ, ಶಾಲೆ ತಿರುಮಲಾರಾಯ ಪಟ್ಟಣ, ಅನಂತಪುರ, ವರದಾಜಮ್ಮನ ಪಟ್ಟಣ, ವೆಂಕಟಾಪುರ, ಆನೆಗೊಂದಿ, ನಿಂಬಾಪುರ, ನಾಗಲಾಪುರಗಳಲ್ಲಿ ಮಾಂಡಲೀಕರು, ಪ್ರಭುನಾಯಕರು ಗಳು ಸಾಮಂತರುಗಳು, ಆಳಿ-ಅಳಿದು ಉಳಿದ ಕುರುಹುಗಳು ಇಲ್ಲಿ ಸಾಕಷ್ಟಿವೆ. (ಡಾ.ಸಿ.ಎಸ್. ವಾಸುದೇವನ್, ೨೦೦೨, ಪು.೧೦೧)

ಇಂತಹವುಗಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ವಿಜನಯಗರದ ಆಡಳಿತದ ವಿಭಾಗಗಳಲ್ಲಿ ಉಪನಗರವಾದ ಕಾಮಲಾಪುರ ಗ್ರಾಮವು ಒಂದು. ಈ ಒಂದು ಆಧಾರದ ಹಿನ್ನೆಲೆಯನ್ನು ಆಧರಿಸಿ ಕಾಮಲಾಪುರ ಗ್ರಾಮದ ಪದ ನಿಷ್ಪತ್ತಿ ಮತ್ತು ಹಿನ್ನೆಲೆಯನ್ನು ಅರಿಯಲು ಮಾಡಿದ ಪ್ರಯತ್ನ ಇದಾಗಿದೆ.

ಮೂಲಾಧಾರಗಳು

ಸಾಹಿತ್ಯಿಕ ಮತ್ತು ಜಾನಪದ ಹಿನ್ನೆಲೆ : ಸಾಹಿತ್ಯಿಕ ಆಧಾರಗಳಲ್ಲಿ ಜಾನಪದ ಅಥವಾ ಜನಪದ ಆಕರವೂ ಒಂದು. ಕಾಮಲಾಪುರದ ಕೆರೆಯಲ್ಲಿ ಬಿಳಿ (ಶ್ವೇತ) ಬಣ್ಣದ ಕಮಲದ ಹೂಗಳು ಯಥೇಚ್ಛವಾಗಿ ಬೆಳೆಯುವುದರಿಂದ ಈ ಪುರಕ್ಕೆ ಕಾಮಲಾಪುರ ಎಂದು ಹೆಸರು ಬಂದಿರಲು ಸಾಕು. ಕಾಮಲಾಪುರದ ಕೆರೆಯಲ್ಲಿ ಇಂದಿಗೂ ಬೆಳೆಯುವ ಕಮಲದ ಹೂಗಳು ಈ ಮಾತಿಗೆ ಪುಷ್ಠಿಯನ್ನು ನೀಡುವಂತಿವೆ. ಈ ಪದ (ಶಬ್ದ)ದ ಅರ್ಥವನ್ನು ಅರ್ಥೈಸಿದಾಗ ಕಾಮಲಾ ಎಂದರೆ "ಉತ್ತಮ ಸ್ತ್ರೀ" ಲಕ್ಷ್ಮೀ ಎಂಬ ಅರ್ಥ ನೀಡುತ್ತದೆ. ಪುರ ಎಂದರೆ "ಪಟ್ಟಣ" ಅಥವಾ "ನಗರ" ಎಂಬ ಅರ್ಥ. ಒಟ್ಟಿನಲ್ಲಿ ಕಾಮಲಾಪುರ ಎಂಬ ಪದವನ್ನು ವಿಂಗಡಿಸಿ ನೋಡಿದಾಗ ಸ್ತ್ರೀ ನಗರ ಅಥವಾ ಲಕ್ಷ್ಮೀ ನಗರ ಎಂಬ ಅರ್ಥವೂ ಬರುತ್ತದೆ. (ಕವಲಿ ಜೆ.ಎ., ೧೯೭೭, ಪು.೧೭೪, ೫೭೬)

ಪ್ರಸ್ತುತ ಕಮಲಾಪುರ ಎಂದು ಪದ ಉಚ್ಚಾರ ಮಾಡಿದಾಗ ಕಮಲ = ನೀರಿನಲ್ಲಿ ಅರಳುವ ಪುಷ್ಪ, ತಾವರೆ, ಪುರ = ನಗರ ಪಟ್ಟಣ "ಪುರ" ಎಂಬ ಶಬ್ದವನ್ನು ಸಪ್ತಾಂಗಗಳಲ್ಲಿಯೂ ಬಳಸಲಾಗಿದೆ. ಕಮಲಾಪುರ ಎಂದರೆ "ಕೆರೆಯಲ್ಲಿ ಬೆಳೆಯುವ ತಾವರೆ ಹೂವಿನನಗರ" ಎಂಬ ಅರ್ಥ ಕೊಡುತ್ತದೆ. ಈ ಕೆರೆಗೆ ಶೋಭೆಯನ್ನುಂಟು ಮಾಡುವ ಶ್ವೇತ ಬಣ್ಣದ ಕಮಲದ ಪುಷ್ಪಗಳು ಇಲ್ಲಿ ಬೆಳೆಯುವುದರಿಂದ ಈ ಪ್ರದೇಶಕ್ಕೆ "ಕಾಮಲಾಪುರ" ಹೆಸರು ಬಂದಿರಲು ಸಾಕು.

ಕಾಮಲಾಪುರವನ್ನು ಕೃಷ್ಣದೇವರಾಯ ತನ್ನ ಪತ್ನಿ ಕಮಲಾದೇವಿಯ ಹೆಸರಿನಲ್ಲಿ ನಿರ್ಮಿಸಿದ ಎಂಬ ಅಭಿಪ್ರಾಯವೂ ಇದೆ. (ವಸುಂಧರಾ ಫಿಲಿಯೋಜ ೧೯೮೨ ಪು. ೯೯) ಕಮಲಾದೇವಿ ಎಂಬುವವಳು ಈ ಪ್ರದೇಶದ ಆರಾಧ್ಯ ದೇವತೆಯಾಗಿದ್ದರಿಂದ 'ಕಾಮಲಾಪುರ' ಹೆಸರು ಬಂದಿರಲು ಸಾಕೆಂದು ಲೋಕಾ ರೂಢಿಯ ಮಾತು. "ಲಕ್ಷ್ಮೀ" ಶ್ರೇಷ್ಠ ಸ್ತ್ರೀಯಾಗಿದ್ದರಿಂದ, ಇವಳನ್ನು ಎಲ್ಲರೂ ದೈವ ಭಾವನೆಯಿಂದ ನೋಡಿ ಇವಳ ಜ್ಞಾಪಕಾರ್ಥವಾಗಿ ಈ ಪುರಕ್ಕೆ ಕಾಮಲಾಪುರ ಎಂದು ಕರೆದಿರಬಹುದು. (ಡಾ.ಎಂ.ಎಂ. ಕಲ್ಬುರ್ಗಿ., ೧೯೯೪, ಪು. ಸಂ. ೪೩೦) ಪ್ರೌಡದೇವರಾಯನ ಪತ್ನಿ ಕಾಮಲದೇವಿಯ ಹೆಸರೂ ಈ ಗ್ರಾಮಕ್ಕೆ ಬಂದಿರಲು ಸಾಕು. ಅವಳ ಹೆಸರೇ ಈ ಪುರಕ್ಕೆ ಬಂದಿದೆ ಎಂಬ ಅಭಿಪ್ರಾಯವಿದೆ (ವೀಣಾ ಎಂ.ಪಿ., ೨೦೦೨ ಪು. ಸಂ. ೨೨) ಈ 'ಕಾಮಲಾಪುರ' ಎಂಬ ಪುರ ವಿಜಯನಗರ ಕಾಲಕ್ಕಿಂತ ಪೂರ್ವದ್ದಾಗಿದ್ದರಿಂದ ಪ್ರೌಢದೇವರಾಯನ ಪತ್ನಿ ಕಾಮಲಾ ದೇವಿಯ ಹೆಸರು ನಂತ ಕಾಲದ್ದಾದರಿಂದ ಕಾಮಲಾಪುರ ಹೆಸರು ಕಮಲಾಪುರಕ್ಕೆ ಬಂದಿದೆ ಎಂಬುದು ಸರಿಯಲ್ಲ. ಬಹುಶಃ ಕಾಮಲ ಕಮಲ-ಸ್ತ್ರೀ ನಾಮಯಾಗಿದ್ದರಿಂದ ಈ ಹೆಸರನ್ನು ಈ ಪುರಕ್ಕೆ ಇಟ್ಟಿರಲಿಕ್ಕೆ ಸಾಕು.

ಪುರಾತತ್ವ ಆಕರಗಳು

ಪುರಾತತ್ವ ಆಕರಕ್ಕೆ ಸಂಬಂಧಿಸಿದಂತೆ ಎರಡು ಶಾಸನಗಳು ಮಾತ್ರ "ಕಾಮಲಾಪುರ" ಗ್ರಾಮದ ಹೆಸರನ್ನು ಉಲ್ಲೇಖಿಸಿವೆ. ಕ್ರಿ.ಶ. ೧೫೮೧ರ ಶಾಸನ ಕಾಮಲಾಪುರದಲ್ಲಿರುವ ಪ್ರಾಚ್ಯವಸ್ತು ಸಂಗ್ರಹಾಲಯ ರಸ್ತೆಯ ಬದಿಯಲ್ಲಿರುವ ಗುಂಡಿನ ಒಂದು ಶಾಸನದಲ್ಲಿ ಅಚ್ಯುತದೇವರಾಯನ ಆಳ್ವಿಕೆಯಲ್ಲಿ ಸಾಳುವ ದಣ್ಣಾಯಕ ತನ್ನ ಆಡಳಿತದಲ್ಲಿದ್ದ "ಕಾಮಲಾಪುರ" ಸ್ಥಳದ ಕೊಂಡಮಾರಸಯ್ಯ ಪಾಳೆಯದ ಭೂಮಿಯನ್ನು ಲಕ್ಷ್ಮೀ ನರಸಿಂಹ ದೇವರ ದೀಪಾರಾಧನೆಗೆ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. (ಎ.ಆರ್., ೧೯೦೪ ನಂ. ೨೨)

ಕ್ರಿ.ಶ. ೧೫೪೦ರ ಚಿಕ್ಕ ಹುಡೆ ದೇವಾಲಯದ ದಕ್ಷಿಣಕ್ಕಿರುವ ಕಲ್ಲಿನ ಮೇಲಿನ ಇನ್ನೊಂದು ಶಾಸನದಲ್ಲಿ ವರದ ರಾಜಮ್ಮನ ಪಟ್ಟಣದ ಪೂರ್ವ ದಿಕ್ಕಿಗೆ ಪೆನುಗೊಂಡೆ ಬಾಗಿಲ ಬಳಿ ರಘುನಾಥ ದೇವರನ್ನು ಪ್ರತಿಷ್ಠೆ ಮಾಡಿಸಿ ದೇವರ ಅಮೃತಪಡಿಗೆ ನೈವೇದ್ಯಕ್ಕೆ ಕಾಮಲಾಪುರ ಕೆರೆಯ ಕೆಳಗಿನ ಹೂವಿನ ಸಿದ್ಧಯ್ಯ ಗದ್ದೆ ಇನ್ನೂ ಮೊದಲಾದ ಊರಿನ ಗದ್ದೆಗಳ ಉತ್ಪತ್ತಿಯ ಭಾಗಗಳನ್ನು ಮತ್ತು ತೆಂಗಿನ ಮರಗಳನ್ನು ದಾನವಾಗಿ ನೀಡಿದ ವಿವರಗಳನ್ನು ವಿವರಿಸುತ್ತವೆ. (ಎ.ಆರ್. ೧೮೮೯ ನಂ. ೧೬) ಒಟ್ಟಾರೆ ಕಾಮಲಾಪುರ ಎಂದು ಶಾಸನಗಳಲ್ಲಿ ಉಲ್ಲೇಖವಾಗಿದ್ದರೂ ಕೂಡ ಇಂದಿಗೂ ವಾಡಿಕೆ ಇರುವುದು ಕಮಲಾಪುರ ಎಂದೇ, ಬಹುಶಃ ಅಂದಿನ ಕಾಮಲಾಪುರ ಇಂದು ಕಮಲಾಪುರವಾಗಿದೆ.

ಭೂ-ಭೌಗೋಳಿಕ ಹಿನ್ನೆಲೆ

ಪ್ರತಿಯೊಂದು ಜನಾಂಗದ ಪರಿಸರ ಆಯಾ ಭೌಗೋಳಿಕ ಪರಿಸರದ ಬೆಟ್ಟ-ಗುಡ್ಡ-ನದಿ-ತೊರೆ ಮೊದಲಾದ ನೈಸರ್ಗಿಕ ಸಂಪತ್ತನ್ನು ಅವಲಂಬಿಸಿದೆ. (ಶೇಷಶಾಸ್ತ್ರಿ ಆರ್., ೧೯೮೪, ಪು. ೧೦೩) ಪ್ರಸ್ತುತ ಅಧ್ಯಯನಕ್ಕಾಗಿ ಆಯ್ದುಕೊಂಡ ಪ್ರದೇಶದ ಅಥವಾ ನೆಲೆಯ ಭೌಗೋಳಿಕ ವಿವರಗಳನ್ನು ಅರಿತುಕೊಳ್ಳುವುದು ಅತ್ಯಂತ ಅವಶ್ಯಕ. ಕಾಮಲಾಪುರದ ಭೂ-ಭೌಗೋಳಿಕ ಪರಿಸರದಲ್ಲಿ ಕಂಡು ಬರುವ ವಾಯುಗುಣ, ಉಷ್ಣಾಂಶ, ಮಳೆ ಮತ್ತು ಭೌತಿಕ ಲಕ್ಷಣಗಳನ್ನು ಅರಿಯದಿದ್ದರೆ ನಾವು ಒಂದು ಪ್ರಧಾನ ನೆಲೆಯನ್ನು ಉಪೇಕ್ಷಿಸಿದಂತಾಗುತ್ತದೆ. ಆದಕಾರಣ ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳ ಪರಂಪರೆ ನಿಕಟ ಸಂಬಂಧ ಹೊಂದಿದೆ. ಇದು ಒಂದಕ್ಕೊಂದು ಪೂರಕವೂ ಹೌದು. ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳು ಮತ್ತು ಪರಂಪರೆ ಒಂದಕ್ಕೊಂದು ಪೂರಕವಾಗಿರುವಾಗ ಇದರ ಪ್ರಭಾವವೇ ಭೌಗೋಳಿಕ ವೈಶಿಷ್ಟತೆ ಎಂದು ಹೇಳಬಹುದು.

ಕಾಮಲಾಪುರದ ಒಂದು ಇತಿಹಾಸ ಅಧ್ಯಯನಕ್ಕೆ ಪ್ರಾಶಸ್ತ್ಯ ನೀಡುವ ಮೊದಲು ಅದರ ಮೇಲ್ಮೈ ಲಕ್ಷಣ ಮತ್ತು ಯಾವ ರೀತಿಯಲ್ಲಿ ಪ್ರಭಾವ ಬೀರಿದೆ ಎಂಬುದನ್ನು ಅರಿಯುವುದು ಅಷ್ಟೇ ಅವಶ್ಯಕ.

ನೆಲ ಮತ್ತು ಜನ ಸಮುದಾಯ

ಈಗಿನ ಕಾಮಲಾಪುರವು ಸುಮಾರು ಅಂದರೆ ೧೯೫೫ ರಿಂದ ಈಚೆಗೆ ೨೯.೬೦ ಚ.ಕಿ.ಮೀಗಳಷ್ಟು ವಿಸ್ತಾರವನ್ನು ಒಳಗೊಂಡಿದೆ (ಪಟ್ಟಣ ಪಂಚಾಯತಿಯ ಮೂಲ ದಾಖಲೆ). ಕಳೆದ ಜನಗಣತಿಯ ಪ್ರಕಾರ ೨೦.೪೬೦ ಜನಸಂಖ್ಯೆ ಇದೆ. ಇಲ್ಲಿ ವಿವಿಧ ಜಾತಿಯ ಜನರು ಈ ಜನ ಸಮುದಾಯದಲ್ಲಿದ್ದಾರೆ. ಹೆಚ್ಚಿನ ಮಟ್ಟಿಗೆ ನಾಯಕ ಜನಾಂಗವಿದೆ. ಈ ಪ್ರದೇಶದ ಜನತೆಯ ಭಾಷೆ ಗ್ರಾಮೀಣ್ಯವಾಗಿದ್ದರೂ ಮೂಲತಃ ಮಾತೃಭಾಷೆ ಕನ್ನಡ. ಕಾಮಲಾಪುರ ಸಮುದ್ರ ಮಟ್ಟಕ್ಕಿಂತ ೪೫೭ ಮೀ. ಮೇಲಿದೆ. ರೇಖಾಂಶ ರೇಖೆ ೧೫.೪೦° ಉತ್ತರ ಅಕ್ಷಾಂಶ ೭೫.೧೫°

ವಾಯುಗುಣ ಮತ್ತು ಮಳೆ

ಕಾಮಲಾಪುರ ಸಾಧಾರಣ ಹೆಚ್ಚಿನ ಉಷ್ಣಾಂಶದಿಂದ ಕೂಡಿದ್ದು ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆ ಉಷ್ಣತೆಯಿಂದ ಕೂಡಿದ್ದು, ಜೂನ್ ತಿಂಗಳಿಂದ ಸೆಪ್ಟಂಬರ್ ತಿಂಗಳವರೆಗೂ ಮಳೆಗಾಲವಿರುತ್ತದೆ. ಇದು ಉಷ್ಣವಲಯದ ಪ್ರದೇಶ. ಗರಿಷ್ಠ ಉಷ್ಣೋಗ್ರತೆ ೪೦° ಸೆಲ್ಸಿಯಸ್ ಕನಿಷ್ಠ ಉಷ್ಣೋಗ್ರತೆ ೧೫° ಸೆಲ್ಸಿಯಸ್ ಇರುತ್ತದೆ. ಹೆಚ್ಚು ಕಡಿಮೆ ವಾರ್ಷಿಕ ಮಳೆಯ ಸರಾಸರಿ ಪ್ರಮಾಣ ೨೫-೩೦ ಇನ್‌ಚಸ್, ಬೀಳುತ್ತದೆ.

ಬೆಟ್ಟಗಳು ಮತ್ತು ಸುತ್ತಲಿನ ಪರಿಸರ

ಕಾಮಲಾಪುರ ತನ್ನ ಸುತ್ತಮುತ್ತ ಹೆಚ್ಚಿನ ಬೆಟ್ಟಗಳನ್ನು ವ್ಯಾಪಿಸಿಕೊಂಡಿದ್ದು ಅಲ್ಲಿಯ ಪ್ರಕೃತಿ ಸೌಂದರ್ಯಕ್ಕೆ ಮೆರಗು ನೀಡುತ್ತಿರುವುದು ಇಲ್ಲಿಯ ವೈಶಿಷ್ಟ್ಯತೆಗಳಲ್ಲಿ ಒಂದು. ಕಾಮಲಾಪುರ ಹಂಪೆಯ ಅಧೀನದಲ್ಲಿರುವ ಕ್ಷೇತ್ರವೇ ಆಗಿರುವುದರಿಂದ ಈ ಹಂಪೆ ಕ್ಷೇತ್ರದ ಪರಿಸರದ ಸುತ್ತಲಿನ ಬೆಟ್ಟಗಳು ಸಾಕಷ್ಟು ಪ್ರಭಾವ ಬೀರಿವೆ. ಮಾಲ್ಯವಂತ, ಋಷಿಮೂಕ, ಕಿಷ್ಕಿಂದೆ, ಅಂಜನಾದ್ರಿ ಮಾತಂಗ ಪರ್ವತ, ಜಂಬುನಾಥ ಬೆಟ್ಟ, ಹಂಪೆ ನದಿಯ ಎಡಬದಿಯಲ್ಲಿ ರಾಮನ ಮಲ್ಯೆ, ಕುಮಾರಸ್ವಾಮಿ ರಾಮಯಾಣ, ಮಹಾಭಾರತದ ಕುರುಹುಗಳು ಇಲ್ಲಿನ ಇತಿಹಾಸಕ್ಕೆ ಮೆರಗು ನೀಡಿದೆ. ಹಂಪೆ ಪ್ರಸಿದ್ಧ ಕ್ಷೇತ್ರ. ಐತಿಹಾಸಿಕ ಹಿನ್ನೆಲೆಯಿಂದ ನೋಡಿದಾಗ ಕಾಮಲಾಪುರ ಸುತ್ತಲಿನ ಪ್ರದೇಶದಲ್ಲಿಯ ಪರಿಸರ ಇಲ್ಲಿನ ದೇವಾಲಯಗಳು, ಮೂರ್ತಿಶಿಲ್ಪಗಳು, ಕೋಟೆ-ಕೊತ್ತಲಗಳು ಸಾಕಷ್ಟು ಕೊಡುಗೆ ನೀಡಿವೆ.

ನದಿ-ಕೆರೆ-ಬಾವಿಗಳು

ಕಾಮಲಾಪುರದ ಪಶ್ಚಿಮಕ್ಕೆ ತುಂಗಭದ್ರಾ ನದಿಯ ೧೫ ಕಿ.ಮೀ. ದೂರದಲ್ಲಿದೆ. ಇದು ಕನ್ನಡ ಮತ್ತು ಆಂಧ್ರಪ್ರದೇಶದ ಜನರಿಗೂ ಅತಿ ಉಪಯುಕ್ತ ನದಿ. ಡಾಣಾಯಕನ ಕೆರೆ, ಕಾಮಲಾಪುರ ಕೆರೆ, ಹಳ್ಳಿಕೆರೆ, ಜಂಬಯ್ಯ ಕೆರೆ, ಪೋತಲ ಕಟ್ಟೆ ಕೆರೆ (ಅಂಕ ಸಮುದ್ರ) ನಂದಿ ಬಂಡೆಕೆರೆ, ವಿಠಲಾಪುರ ಕೆರೆ - ಇವೆಲ್ಲವೂ ಅಂದಲ್ಲದೆ ಇಂದಿಗೂ ಉಪಯುಕ್ತವಾಗಿದೆ. ಆಗಿನ ವಿಜಯನಗರ ಸಾಮ್ರಾಜ್ಯದ ಉಪನಗರಗಳ ಜನರ ಜೀವನಗಳ ಆಧಾರಕ್ಕೆ ಇದು ಜೀವನಾಡಿಯಾಗಿವೆ. ಉದಾಹರಣೆ: ಇಂದಿಗೂ ಕಾಮಲಾಪುರದ ಕೆರೆ, ಹಳ್ಳಿಕೆರೆಯ ನೀರನ್ನು ಇಲ್ಲಿನ ಜನರು ಉಪಯೋಗಿಸುತ್ತಿದ್ದಾರೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹೆಚ್ಚಿನ ಮಟ್ಟಿಗೆ ವರ್ತುಲಾಕಾರನ ಬಾವಿಗಳು ಇರುತ್ತಿದ್ದವು. ಇದರಲ್ಲಿ ಕೆಲವು ಬಾವಿಗಳಿಗೆ ಬುಗ್ಗಿ ಇದ್ದರೆ ಕೆಲವು ಬಾವಿಗಳಿಗೆ ಮಳೆ ನೀರೇ ಆಶ್ರಯ. (ವಾಸುದೇವನ್ ಸಿ.ಎಸ್., ೨೦೦೨ ಪು. ೩೫೪)

ಕಾಮಲಾಪುರ ಪರಿಸರದ ಸುತ್ತಮುತ್ತ ೪ ವಿಧವಾದ ಮಣ್ಣುಗಳಿಂದ ಕೂಡಿದ ಭೂ-ಪ್ರದೇಶದವಾಗಿದೆ. ಕೆಂಪುಮಣ್ಣು, ಕಪ್ಪುಮಣ್ಣು, ಮರಳುಮಣ್ಣು, ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣು ಇಲ್ಲಿ ಲಭ್ಯ. ಈ ಭೂ-ಪ್ರದೇಶವು ಏರಿಳಿತಗಳಿಂದ ಕೂಡಿದ್ದು ಹಿಂಗಾರು-ಮುಂಗಾರು ಬೆಳೆಗಳು ಇಲ್ಲಿಯ ಭೂಮಿಯ ಫಲವತ್ತತೆಯನ್ನು ಗುರುತಿಸುತ್ತವೆ. ಈ ರೀತಿ ಭೂ-ಭೌಗೋಳಿಕ ಆಸ್ತಿಗಳಾದ ಕೆರೆ-ಬಾವಿ, ಬೆಟ್ಟ-ಗುಡ್ಡ ಇಲ್ಲಿನ ಜನ ಸಮುದಾಯಗಳ ವ್ಯಕ್ತಿಗಳಿಗೆ ಪ್ರಕೃತಿಯ ತಾಣವಾಗಿದೆ. ಒಟ್ಟಾರೆ ಭೂ-ಭೌಗೋಳಿಕ ಪರಿಸರ ದೇವಾಲಯಗಳ, ಶಾಸನಗಳ ಪ್ರಭಾವ ಬೀರಿದೆ. ಈ ಪ್ರಕೃತಿಯ ತಾಣದಲ್ಲಿ ಸಿಗುವ ಗ್ರಾನೈಟ್ ಕಲ್ಲನ್ನೇ ದೇವಾಲಯ ಮೂರ್ತಿ ಶಿಲ್ಪಗಳಿಗೆ ಬಳಸಲಾಗಿದೆ. ಈ ಪ್ರಕೃತಿಯ ಸೊಬಗು ಮೂರ್ತಿ ಶಿಲ್ಪಗಳ ಮೇಲೆ ಪ್ರಭಾವ ಬೀರಿದೆ.

ಶಾಸನಗಳಿಂದ ರಾಜಕೀಯ ಇತಿಹಾಸ

ಒಂದು ದೇಶದ ಅಥವಾ ನಾಡಿನ ಇತಿಹಾಸವೆಂದರೆ ನಿಜವಾಗಿ ಜನತೆಯ ಇತಿಹಾಸ ಎಂದರ್ಥ. ರಾಜಕೀಯ ಇತಿಹಾಸ ಎಂಬುದು ಸಾಂಸ್ಕೃತಿಕ ಅಧ್ಯಯನದಲ್ಲಿ ಒಂದು ಭಾಗವಾದರೂ ಸಾಂಸ್ಕೃತಿಕ ಅಧ್ಯಯನದಲ್ಲಿ ಬಹಳ ಮಹತ್ವದ್ದು. ವಿಜಯನಗರ ಸ್ಥಾಪನೆಗಿಂತ ಮೊದಲೇ ಹಂಪೆ ಪ್ರದೇಶ ಬಹಳ ಮಹತ್ವದಾಗಿತ್ತು. (ಕೊಟ್ರಯ್ಯ ಸಿ.ಟಿ.ಎಂ. ೧೯೮೩ ಪು. ૩೮೧-૩೮೭) ೧-೨ನೇ ಶತಮಾನಕ್ಕೆ ಸೇರಿದ ಮೂರು ಬ್ರಾಹ್ಮೀ ಶಾಸನಗಳು ಇದಕ್ಕೆ ಉತ್ತಮ ಉದಾಹರಣೆ. ಪ್ರಸ್ತುತ ಕಾಮಲಾಪುರ ಗ್ರಾಮಕ್ಕೆ ಸಂಬಂಧಿಸಿದ ಒಟ್ಟು ೧೪ ಶಾಸನಗಳು ದೊರಕಿದ್ದು ಈ ಶಾಸನಗಳಲ್ಲಿ ಕೆಲವು ಕಲ್ಯಾಣ ಚಾಲುಕ್ಯ ವಿಜಯನಗರ ಅರಸರುಗಳಿಗೆ ಸಂಬಂಧಿಸಿದವುಗಳಾಗಿವೆ. ಕ್ರಿ.ಶ. ೧೦೭೬ಕ್ಕೆ ಸೇರಿದ ಕಲ್ಯಾಣ ಚಾಲುಕ್ಯರ ಶಾಸನವೊಂದು ೬ನೇ ವಿಕ್ರಮಾದಿತ್ಯನ ಕಾಲದ್ದು. ಹಂಪಿಕ್ಷೇತ್ರಕ್ಕೆ ಸಂಬಂಧಿಸಿದಂತೆ ೬ನೇ ವಿಕ್ರಮಾದಿತ್ಯನಿಂದ ಪ್ರಾರಂಭಗೊಂಡು ಚಾಲುಕ್ಯ ವಿಕ್ರಮ ಶಕೆ ವರ್ಷದಲ್ಲಿರುವ ಪ್ರಥಮ ಶಾಸನ (A.R.I.E. 1983, No. 95) ಇದು ಈ ಕ್ಷೇತ್ರ ೧೨ನೇ ಶತಮಾನಕ್ಕೆ ಕಳಚೂರ್ಯರ ಆಡಳಿತಕ್ಕೆ, (ವಿ.ಶಾ., ಸಂ.I ನಂ. ೪೧) ೧೩ನೇ ಶತಮಾನದಲ್ಲಿ ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿತ್ತು. (ವಿ.ಶಾ., ಸಂ.I ೯೮) ೧೪ನೇ ಶತಮಾನಕ್ಕೆ ಕಾಮಲಾಪುರ ಗ್ರಾಮವನ್ನು ಒಳಗೊಂಡು ಹಂಪೆ ಪ್ರದೇಶವನ್ನು ಮುಮ್ಮಡಿ ಸಿಂಗ ನಾಯಕನ ಮಗ ಕಂಪಿಲದೇವನು ತನ್ನ ರಾಜಧಾನಿ ಕುಮ್ಮಟದಿಂದ ಈ ಪ್ರದೇಶವನ್ನು ಆಳುತ್ತಿದ್ದನು. (ಚೆನ್ನಬಸಪ್ಪ ಪಾಟೀಲ್, ಡಿ.ವಿ. ದೇವರಾಜ್ ೧೯೯೬-೯೮ ಪು. ೧೭೮-೧೯). ಶಾಸನಗಳು ವಿಜಯನಗರವನ್ನು ಸಂಗಮ, ಸಾಳುವ, ತುಳುವ ಮ್ತು ಅರವೀಡು ವಂಶವದವರು ಆಳಿದರು ಎಂಬುದನ್ನು ಪ್ರತಿಪಾದಿಸಿದೆ.

ವಿಜಯನಗರ ಸ್ಥಾಪನೆ ಕುರಿತು ಹಲವಾರು ಭಿನ್ನಾಭಿಪ್ರಾಯಗಳೂ ಇದ್ದರೂ ಕ್ರಿ.ಶ. ೧૩૪೦ರ ಶಾಸನವೊಂದು ವಿಜಯ ಎಂಬ ಹೆಸರಿನ ಪಟ್ಟಣದಲ್ಲಿ ಒಂದನೇ ಹರಿಹರ ಮತ್ತು ಬುಕ್ಕನು ಆಳುತ್ತಿದ್ದರೆಂದು ಅದು ಇಂದ್ರನ ಅಮರಾವತಿ ಇತ್ತೆಂದು ವರ್ಣಿತವಾಗಿದೆ. ೧೪ನೇ ಶತಮಾನದ ಶಾಸನವೊಂದು ವೀರ ಹರಿಹರರಾಯ ಎಂದು ಉಲ್ಲೇಖಿಸಿ ವೀರಬುಕ್ಕರಾಯ ಸಂಗಮ ವಂಶದ ಈ ಅರಸು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣ ಕರ್ತನೆಂದು ಹೇಳಲಾಗಿದೆ. ಕ್ರಿ.ಶ. ೧૩೮೬ರ ಶಾಸನವೊಂದು ಇರುಗುಪ್ಪ ದಂಡನಾಯಕನು ಕುಂತು ಜಿನನಾಥನಿಗೆ ಕಾಮಲಾಪುರದಲ್ಲಿ ಕಲ್ಲಿನ ದೇವಾಲಯವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖಿಸುತ್ತದೆ. (A.R., 1889, No.17) ಕ್ರಿ.ಶ. ೧೪೧೧ರ ಶಾಸನ ನರಹರಿ ದೇವರ ಮಗ ದೇವರಾಯನನ್ನು ಉಲ್ಲೇಖಿಸುತ್ತದೆ. (V.P.R., 1983-84, No.15) ಕ್ರಿ.ಶ. ೧೪೨೦ರ ಇನ್ನೊಂದು ಶಾಸನ ೧ನೇ ದೇವರಾಯನ ಕಾಲದಲ್ಲಿ ಬಸವ ಮತ್ತು ರಾಮನಾಯಕ

ಎಂಬುವರು ಮಿಯಾರಾವುತನಿಗೆ ಪುಣ್ಯವಾಗಲಿ ಎಂದು ಮಸೀದಿ, ಗುಮ್ಮಟ ಮತ್ತು ಗೋಡೆ ನಿರ್ಮಿಸಿದ್ದನ್ನು ಉಲ್ಲೇಖಿಸುತ್ತದೆ. (V.P.R.1984-87, No.118) ೧೪ನೇ ಶತಮಾನಕ್ಕೆ ಸೇರಿದ ಇಮ್ಮಡಿ ಹರಿಹರರಾಯನ ಶಾಸನಗಳು ಇಲ್ಲಿ ದೊರೆತಿವೆ. (V.P.R.1984-87, No.124-127) ಎರಡನೇ ದೇವರಾಯನು ಇಲ್ಲಿ ಆಡಳಿತ ನಡೆಸಿದ್ದನೆಂಬುದಕ್ಕೆ ಉಲ್ಲೇಖವಿದೆ. ಉದಾ: ಕ್ರಿ.ಶ. ೧೪೨೪ರ ಶಾಸನವೊಂದು ಪಾನ್ ಸುಪಾರಿ ಬಜಾರ್‌ನಲ್ಲಿ ೧೪೨೬ರಲ್ಲಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದನು. (S.I.I. Volume I No. 153) ಸಾಳುವ ವಂಶಕ್ಕೆ ಸಂಬಂಧಪಟ್ಟಂತೆ ಪ್ರಸ್ತುತ ಕಾಮಲಾಪುರದಲ್ಲಿ ಯಾವ ಶಾಸನಗಳು ದೊರೆತಿಲ್ಲ.

ಕ್ರಿ.ಶ. ೧೫೧೮ರ ಶಾಸನ ವಿಜಯನಗರದ ಕೃಷ್ಣದೇವರಾಯನ ಕಾಲಕ್ಕೆ ಸೇರಿದೆ. (A.R., 1982, NO.479) ಕ್ರಿ.ಶ. ೧೫೨೧ರ ಶಾಸನ ಕೃಷ್ಣದೇವರಾಯನು ಶ್ರೀರಾಮಚಂದ್ರ ದೇವರ ಭಂಡಾರಕ್ಕೆ ದಾನ ನೀಡಿದ್ದನ್ನು ಮತ್ತು ತಾಳೂರಿನಲ್ಲಿ ದೊಡ್ಡ ಕೆರೆಯೊಂದನ್ನು ಕಟ್ಟಿಸಿದ್ದನ್ನು ದಾಖಲಿಸಿದೆ. (A.R.S.I.E, 1889, P.21) ೧೫೨೨ರಲ್ಲಿ ಕೃಷ್ಣದೇವರಾಯನು ತಿರುವೆಂಗಳ ದೇವರ ಧೂಪ ದೀಪ ನೈವೇದ್ಯಕ್ಕಾಗಿ ಕೃಷ್ಣದೇವರಾಯನು ಸ್ಥಳವನ್ನು ದಾನ ಮಾಡಿದನೆಂದಿದೆ(A.R.,1889, No.20)೧೫೨೫ರಲ್ಲಿ ಆದಿ ನಾರಾಯಣ ದೇವರಿಗೆ ಅಂಗಡಿಯನ್ನು ದಾನ ನೀಡಿದ್ದನ್ನು ಉಲ್ಲೇಖಿಸಿದೆ. ಅಚ್ಯುತದೇವರಾಯನ ಕಾಲದಲ್ಲಿ ಎರಡು ಪ್ರಮುಖ ಉಪನಗರಗಳೇ ನಿರ್ಮಾಣವಾದವು. ಇವು ಅಚ್ಯುತಾಪುರ, ಅಚ್ಯುತರಾಯ ಪೇಟೆ. (ಪಾಟೀಲ್ ಸಿ.ಎಸ್., ೧೯೯೬ ಪು.೨೦) ದೇವಾಲಯಗಳನ್ನು ಕಟ್ಟಿಸಿ ದಾನ ನೀಡುವ ಸಾಧನೆ ಸದಾ ಶಿವನ ಕಾಲದಲ್ಲೂ ಮುಂದುವರಿಯಿತು. ಸದಾ ಶಿವರಾಯನ ನಂತರ ಅರವೀಡು ವಂಶದ ರಾಮರಾಜನ ಆಳ್ವಿಕೆಯಲ್ಲಿ ಕೊಂಡರಾಜಯ್ಯನ ಬೊಕ್ಕಸ ಭಂಡಾರ ಕರ್ತನಾಧ ಕಂಬನಾಯಕನು ಬಾಗಿಲು ಹನುಮಂತ ದೇವರಾಯರಿಗೆ ಭೂಮಿ ದಾನ ಮಾಡುತ್ತಾನೆ. (ವಿ.ಶಾ.ಸಂ ನಂ.III ೩೬೩) ಒಟ್ಟಾರೆ ಇಲ್ಲಿ ಲಭ್ಯವಾದ ಶಾಸನಗಳು ಕೇವಲ ತುಣುಕುಗಳು ಮಾತ್ರ ಸಾಹಿತ್ಯ ಆಕರಗಳನ್ನು ಇಲ್ಲಿ ಬಳಸಿಕೊಂಡಾಗ ಇಲ್ಲಿನ ರಾಜಕೀಯ ಚರಿತ್ರೆ ಪರಿಪೂರ್ಣವಾಗುತ್ತದೆ. ಇಲ್ಲಿ ಲಭ್ಯವಾದ ಶಾಸನಗಳು ಒಟ್ಟಾರೆ ಒಂದನೇ ಹರಿಹರ, ಒಂದನೇ ಬುಕ್ಕ, ಇಮ್ಮಡಿ ಹರಿಹರ, ಒಂದನೇ ದೇವರಾಯ, ಇಮ್ಮಡಿ ದೇವರಾಯ, ಮುಮ್ಮಡಿ ದೇವರಾಯ, ಮಲ್ಲಿಕಾರ್ಜುನ, ವಿರುಪಾಕ್ಷ, ನರಸಿಂಹ, ಇಮ್ಮಡಿ ನರಸಿಂಹ, ಕೃಷ್ಣದೇವರಾಯ ಅಚ್ಯುತದೇವರಾಯ, ಸದಾಶಿವರಾಯ, ಶ್ರೀರಂಗರಾಮರಾಜರ ಕಾಲಕ್ಕೆ ಸೇರಿವೆ. ಆಳಿ-ಅಳಿದ ಈ ಅರಸರುಗಳ ಸಾಧನೆ ಬಿಟ್ಟು ಹೋಧ ಕುರುಹಗಳು ಅಪಾರ. ಆಳಿ-ಅಳಿದು ಬಿಟ್ಟು ಹೋದ ಕುರುಹುಗಳ ಕಿರುನೋಟ ಚಿತ್ರಣ ಇದು. ಕಾಮಲಾಪುರ ಗ್ರಾಮದ ಮತ್ತು ಇದರ ಪರಿಸರದಲ್ಲಿ ಲಭ್ಯವಾದ ಶಾಸನಗಳ ವೈವಿಧ್ಯತೆಯನ್ನು ಮತ್ತು ದೇವಾಲಯಗಳ ಮೂರ್ತಿಶಿಲ್ಪಗಳ ಲಕ್ಷಣಗಳ ವೈಶಿಷ್ಠ್ಯತೆಗಳನ್ನು ಮುಂದಿನ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ.

[illegible]

[illegible]

ಅಧ್ಯಾಯ ೨

ಐತಿಹಾಸಿಕ ಹಿನ್ನೆಲೆಯಲ್ಲಿ ಕಾಮಲಾಪುರ

ಸಾಮಾಜಿಕ

ಜನ ಜೀವನದ ಸ್ವರೂಪಕ್ಕೆ ಧರ್ಮ ನಿರ್ಣಾಯಕ ಶಕ್ತಿ. ಮಾನವನು ಸಮಾಜ ಜೀವಿ. ಸಮಾಜವನ್ನು ಸೇರಿ ಸಾಮಾಜಿಕ ಮೌಲ್ಯಗಳಿಗೆ ಒಳಪಟ್ಟು ಪ್ರಭಾವಿತನಾಗಿರುತ್ತಾನೆ. ಜೀವನದ ಎಲ್ಲಾ ರಂಗಗಳಲ್ಲೂ ಧರ್ಮ ಹಾಸು ಹೊಕ್ಕಾಗಿದೆ. ಒಂದು ಕಡೆಯಿಂದ ಇದರಿಂದ ಒಳಿತಾದರೂ ಧರ್ಮ ಪ್ರಭಾವ ಬೀರಿದಾಗ ಅದಕ್ಕೆ ಅನುಗುಣವಾಗಿ ಸಾಮಾಜಿಕ ಜೀವನವು ಪ್ರವಹಿಸಿ, ಧರ್ಮದ ನಿಜಸ್ವರೂಪದ ಬೆಳಕಿನಲ್ಲಿ ಸಾಮಾಜಿಕ ಜೀವನವನ್ನು ಹಸನು ಗೊಳಿಸುವ ಪ್ರಯತ್ನವೂ ನಡೆಯಿತು. ಪ್ರಸ್ತುತ ಕರ್ನಾಟಕದೊಳಗಿನ ಹಂಪಿ ಕ್ಷೇತ್ರದೊಳಗಿನ ಕಮಲಾಪುರ ಗ್ರಾಮದ ಸಾಹಿತ್ಯಿಕ ಆಧಾರಗಳು, ವಿದೇಶಿ ಪ್ರವಾಸಿಗರು ಬರಹಗಳು, ಶಾಸನಗಳು, ಸಾಮಾಜಿಕ ವ್ಯವಸ್ಥೆಯ ರಚನೆಯನ್ನು ಮಾಡಲು ಬಹಳೇ ಸಹಕಾರಿಯಾಗಿವೆ.

ಸಾಮಾಜಿಕ ವ್ಯವಸ್ಥೆ ಕುರಿತು ಅಧ್ಯಯನದ ಹಿತದೃಷ್ಠಿಯಿಂದ ಮೂರು ಹಂತಗಳಾಗಿ ವಿಭಾಗಿಸಬಹುದು.

೧. ವರ್ಣಾಶ್ರಮಧರ್ಮ
೨. ಸ್ತ್ರೀಯರಿಗೆ ಇದ್ದ ಸ್ಥಾನ-ಮಾನ
೩. ಸಾಮಾಜಿಕ ಕಾರ್ಯಗಳು

ಕರ್ನಾಟಕದಲ್ಲಿ ಪ್ರಾದೇಶಿಕತೆಯಂತೆ ಜಾತಿ ಅಥವಾ ವರ್ಣವ್ಯವಸ್ಥೆ ಒಂದು ವಿಧ. ಸಾಮಾನ್ಯ ಜನ-ಜೀವನದ ಒಂದು ಸಮಗ್ರ ಚಿತ್ರಣವನ್ನು ಅರಿಯುವುದು ಕಷ್ಟಸಾಧ್ಯ. ಐಶ್ವರ್ಯ, ಮೇಲು-ಕೀಳು ಒಟ್ಟಾರೆ ಆರ್ಥಿಕ ಅಸಮಾನತೆ ಅನೇಕ ತರಹದ ಸಾಮಾಜಿಕ ವ್ಯವಸ್ಥೆಗೆ ಎಡೆ ಮಾಡಿಕೊಟ್ಟಿದೆ.(ಶ್ರೀಕಂಠಶಾಸ್ತ್ರಿ ೧೯೭೯ ಪು.೨೫೪) ಸಮಾಜ ಎಂದ ಮೇಲೆ ತರಹದ ವರ್ಣವ್ಯವಸ್ಥೆಯು ಇಲ್ಲಿ ಇರುತ್ತದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬುದಾಗಿ ಸಮಾಜದಲ್ಲಿನ ನಾಲ್ಕು ವರ್ಣಗಳನ್ನು ಪುರುಷ ಸೂಕ್ತವೂ ವರ್ಣಿಸುತ್ತದೆ. ಬ್ರಾಹ್ಮಣನು ಅತಿಬುದ್ಧಿವಂತಿಕೆಯಿಂದಲೂ ಕ್ಷತ್ರಿಯ ತೋಳಿನಿಂದಲೂ, ವೈಶ್ಯ ತಲೆಯಿಂದಲೂ ಮತ್ತು ಶೂದ್ರನು ಪಾದಗಳಿಂದಲೂ ಜನಿಸಿದನೆಂದು ಹೇಳಲಾಗಿದೆ.(ಚಿದಾನಂದಮೂರ್ತಿ,ಎಂ ೧೯೭೯, ಪು.೨೭೮)

ಸಾಮಾಜಿಕವಾಗಿ ಒಟ್ಟಾರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ವಿಭಾಗಿಸಲ್ಪಟ್ಟಿದ್ದರೂ ಪ್ರಸ್ತುತ ಕಾಮಲಾಪುರದಲ್ಲಿ ಇದರ ಜೊತೆ ವಿವಿಧ ಕೋಮುವಾರು ಜನರೂ ಇದ್ದರು.(ಚೆನ್ನಬಸಪ್ಪ ಪಾಟೇಲ್ ೧೯೯೬, ಪು.೨೨) ಹ್ಯೂಯನ್ ತ್ಸ್ಯಾಂಗ್ ನು ತನ್ನ ಪ್ರವಾಸೀ ಕಥನದಲ್ಲಿ ಇದೇ ಮಾತನ್ನು ಉಲ್ಲೇಖಿಸಿದ್ದಾನೆ. ಜಾತಿವ್ಯವಸ್ಥೆಯಿಂದ ಹೀಗಿದ್ದರೂ ಬ್ರಾಹ್ಮಣರು ವರ್ತಕರಾಗಿಯೂ, ಮಂತ್ರಿಗಳಾಗಿಯೂ,

ಮಾಂಡಲೀಕರಾಗಿಯೂ, ದಂಡನಾಯಕರಾಗಿಯೂ, ಇದ್ದ ನಿದರ್ಶನಗಳು ಇಲ್ಲದಿಲ್ಲ. ಆದರೆ ಹೆಚ್ಚಿನ ಮಟ್ಟಿಗೆ ಬ್ರಾಹ್ಮಣರ ಕರ್ತವ್ಯ ಪೌರೋಹಿತ್ಯ ಮತ್ತು ಅರ್ಚನಾ ವೃತ್ತಿಗಳಿಗೆ ಮೀಸಲಾಗಿದ್ದು ಅಲ್ಲಲ್ಲಿ ಶಾಸನಗಳು ದಾನ-ದತ್ತಿಗಳನ್ನು ಉಲ್ಲೇಖಿಸಿ ಗೌರವಾನ್ವಿತರೆನಿಸಿದ್ದರೆಂದು ಪುಷ್ಟೀಕರಿಸುತ್ತದೆ.

ಕ್ಷತ್ರೀಯರು ಸಮಾಜದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದರು. ಕ್ಷತ್ರಿಯ ಎಂಬ ಪದ ವೀರ ಎಂದರ್ಥ. ಇದರ ಕರ್ತವ್ಯ ಹೆಚ್ಚಿನ ಮಟ್ಟಿಗೆ ವ್ಯಾಪಾರ ಮತ್ತು ವ್ಯವಸಾಯ. ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಮಧ್ಯಮ ವರ್ಗದವರಾಗಿ ಅವರ ಸಾಧನೆಗಳಿಗಾಗಿ ವಿನಹ ಕ್ಷತ್ರಿಯ ಮೂಲದವರೆಂದಲ್ಲ. ಉದಾ : ಇರುಗುಪ್ಪ ನಾಯಕನಂತಹ ಜೈನದಂಡ ನಾಯಕನಿಂದಲೂ ವಿಜಯನಗರ ಸಾಮ್ರಾಜ್ಯಕ್ಕೆ ಗಣನೀಯ ಸೇವೆಸಂದಿದೆ. ಈ ಕಾರಣ ಉಳಿದ ಮತದವರದ್ದು ಏನೂ ಇಲ್ಲ ಎನ್ನುವಂತಿಲ್ಲ. ಆದರೂ ಒಟ್ಟಾರೆ ವಿಜಯನಗರ ಸಾಮ್ರಾಜ್ಯದಲ್ಲಿ ಕ್ಷತ್ರಿಯರದೇ ಮೇಲುಗೈಯಾಗಿತ್ತು.(ಮಹಾಲಿಂಗಮ್ ಟಿ.ವಿ., ೧೯೫೫, ಪು.೩೩)

ಒಟ್ಟಾರೆ ವಿಜಯನಗರದಲ್ಲಿ ಬ್ರಾಹ್ಮಣರು ಕೇವಲ ಪೂರ್ವಾಚಾರ ಸಂಪ್ರದಾಯಗಳ ಕಟ್ಟಿನಲ್ಲಿ ಬಂಧಿತರಾಗಿ ದೇವಾಲಯಗಳಲ್ಲಿನ ಪೂಜಾ ವಿಧಿಗಳನ್ನು ನಂಬಿರದೇ ಇತರ ವೃತ್ತಿಗಳನ್ನು ಅವಲಂಬಿಸಿದ್ದರು ಎಂಬುದು ಪ್ರಯಾಜ್ ನ ಪ್ರವಾಸೀ ಕಥನದಿಂದ ತಿಳಿದುಬರುತ್ತದೆ.(ಶ್ರೀಕಂಠಶಾಸ್ತ್ರಿ, ೧೯೮೯, ಪು.೧೯೦)

ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುವವರು ವರ್ತಕ ವರ್ಗದವರಾದ ಶೆಟ್ಟರ ಜನಾಂಗದವರು. ಇವರು ಸಮಾಜದಲ್ಲಿ ಗಮನಾರ್ಹವಾದ ಸೇವೆಯನ್ನು ನಿರ್ವಹಿಸುತ್ತಿದ್ದರು. ವಣಿಕ ಸಮಾಜ ಅಥವಾ ಶ್ರೇಣಿಯೇ ಮುಖ್ಯಸ್ಥ. ಇಲ್ಲಿ ವೈಶ್ಯ ಜನಾಂಗಕ್ಕೆ ಸೇರಿ ಸಮಾನರಾಗಿ ಪ್ರಾಮುಖ್ಯತೆಯನ್ನು ಪಡೆದಿದ್ದವರು ವೀರ ಪಾಂಚಾಳರು.(ಶಿವರುದ್ರಸ್ವಾಮಿ.ಎಸ್.ಎನ್., ೨೦೦೦, ಪು.೨೬೧) ಶೂದ್ರರು ಅಂದು ಕೆಳವರ್ಗದ ವೃತ್ತಿಗಳನ್ನು ಅವಲಂಬಿಸಿದ್ದರು. ಆರ್ಥಿಕವಾಗಿ ಹಿಂದುಳಿದವರು. ಆದರೂ ಇವರಲ್ಲಿ ಡೊಂಬ, ನಾವಿದ ಮುಂತಾದವರು ಹಕ್ಕು-ಬಾಧ್ಯತೆಗಳನ್ನು ಕಾಪಾಡಿಕೊಂಡಿದ್ದರು. ಇವರೆಲ್ಲರಿಗೂ ವಿಜಯನಗರದ ಅರಸರಿಂದ ಪ್ರೋತ್ಸಾಹ ದೊರೆಯುತ್ತಿತ್ತು.(ಶಿವರುದ್ರಸ್ವಾಮಿ.ಎಸ್.ಎನ್., ೨೦೦೦, ಪು.೨೦೦)

ವರ್ಣ ಎಂಬ ಶಬ್ದ ಬ್ರಾಹ್ಮಣ, ವೈಶ್ಯ, ಕ್ಷತ್ರಿಯ ಶೂದ್ರ ಈ ಕುರಿತು ಅನೇಕ ಸಾಹಿತ್ಯಿಕ ಕೃತಿಗಳೂ ಇವರ ಲಕ್ಷಣಗಳನ್ನು ನಿರೂಪಿಸುತ್ತದೆ. ವೇದಾಧ್ಯಯನ ವಿಪ್ರರಿಗೂ ಧರಣಿ ಪಾಲನ ಕ್ಷತ್ರಿಯರಿನಿಗೂ, ವ್ಯಾಪಾರ ವ್ಯವಹಾರ ವೈಶ್ಯನಿಗೂ ಕೃಷಿ, ಮುಂತಾದ ಸೇವಾ ವೃತ್ತಿಗಳು ಶುದ್ರರಿಗೆ ಹೇಳಿಸಿದವು.(ಶ್ರೀಕಂಠಶಾಸ್ತ್ರೀ, ೧೯೮೯, ಪು.೧೯೪) ಈ ಚತುವರ್ಣಗಳ ಮೂಲ ಏನೇ ಇರಲಿ ಇವು ಅಂದಿನ ಮೇಲಿನ ಅಸಮಾನತೆಯನ್ನು ವೃತ್ತಿಯ ಯೋಗ್ಯತೆಯನ್ನು ತೋರಿಸುತ್ತದೆ.

ಇವುಗಳನ್ನು ಸಾಹಿತ್ಯಿಕ ಕೃತಿಗಳು ಹೇಳಿದರೆ ಶಿವಶರಣರು ದಾಸಕೂಟದವರು ಈ ವ್ಯವಸ್ಥೆಗೆ ಹೊಸ ತಿರುವನ್ನು ನೀಡಿದರು.(ತಿಪ್ಪೇರುದ್ರಸ್ವಾಮಿ ಎಚ್., ೧೯೯೮, ಪು.೧೩೫-೧೩೯) ಒಟ್ಟಾರೆ ಮೇಲ್ಮೈ ಲಕ್ಷಣದಲ್ಲಿ ನಾಲ್ಕು ವರ್ಣವ್ಯವಸ್ಥೆಯನ್ನು ಸೂಚಿಸಿದರೂ ಇಲ್ಲಿನ ಪ್ರಾದೇಶಿಕ ವ್ಯವಸ್ಥೆಯಲ್ಲಿ ಈಗಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಬೋವಿ, ಕುರುಬ, ದಲಿತ, ನಾಯಕ ಹೀಗೆ ಉಪಜಾತಿಗಳೂ ಇಲ್ಲಿವೆ.

ಸ್ತ್ರೀಯರ ಸ್ಥಾನ-ಮಾನ : ಭಾರತೀಯ ಇತಿಹಾಸದಲ್ಲಿ ಸಮಾಜದಲ್ಲಿ ಸ್ತ್ರೀಯರ ಸ್ಥಾನ-ಮಾನ ತೆರೆ ತೆರನವು. ಋಗ್ವೇದದ ಕಾಲದಲ್ಲಿ ಸ್ತ್ರೀಯರಿಗೆ ಇದ್ದ ಸ್ಥಾನಮಾನ ನಂತರದ ಕಾಲದಲ್ಲಿ ಕ್ಷಯಿಸಿತು. ಭಾರತೀಯ ಅದರಲ್ಲೂ ಹೆಚ್ಚಾಗಿ ಕರ್ನಾಟಕದ ಸ್ತ್ರೀಗೆ ಗೌರವಸ್ಥಾನವಿದ್ದರೂ(ಅಭಿಜ್ಞಾನ ಶಾಕುಂತಲಾ ೪೨-೧) ಅರ್ಥೋಹಿ ಕನ್ಯಾ ಪರಕೀಯ ಏವಾ'' ಹೆಣ್ಣು ಮನೆಬಿಟ್ಟು ಹೋಗುವವಳು ಅಥವಾ ಪರಕೀಯ ಎಂಬ ವಾಡಿಕೆಯೂ ಇತ್ತು.(ಚಿದಾನಂದ ಮೂರ್ತಿ ಎಂ., ೧೯೭೬, ಪು.೪೮) ಧಾರ್ಮಿಕ, ರಾಜಕೀಯ, ಆರ್ಥಿಕ ಕಲೆ ಸಾಹಿತ್ಯ ಮುಂತಾದ ವಿವಿಧ ರಂಗಗಳಲ್ಲಿ ಮಹಿಳೆಯರು ವಹಿಸಿದ್ದ ಪಾತ್ರ, ಗಳಿಸಿದ್ದ ಸಾಧನೆ, ಅತಿ ಮಹತ್ವದ್ದು(ಪದ್ಮ ಎಂ.ಬಿ., ೧೯೯೬, ಪು.೭೬) ಸಾಮಾಜಿಕ ರಂಗಗಳಲ್ಲಿ ಮಹಿಳೆ ತಾಯಿ, ಸಹೋದರಿ, ಪತ್ನಿ ಹಾಗೂ ಮಗಳಾಗಿ ಪಾತ್ರಗಳಾಗಿದ್ದಳು. ಇದಕ್ಕೆ ಶಾಸನಗಳು ಪೂರಕ ಮಾಹಿತಿ ನೀಡುತ್ತವೆ. ಹಲವಾರು ಶಿಲ್ಪ ಕಲಾಕೃತಿಗಳು ಮಹಿಳೆಯರನ್ನು, ಹೋರಾಟಗಾರ್ತಿಯರಾಗಿ, ಕುಸ್ತಿಪಟುಗಳಾಗಿ, ಅಂಗರಕ್ಷರಾಗಿಯೂ, ಸಂಗೀತರಾಗಿಯೂ, ನೃತ್ಯಗಾರ್ತಿಯರಾಗಿ ಹಬ್ಬ ಹರಿದಿನ ಆಚರಣೆ ಮಾಡುವುದು ಇತ್ಯಾದಿ ಮೂರ್ತಿಶಿಲ್ಪ ಒಡಮೂಡಿಸಿವೆ. ಇಂತಹ ಶಿಲ್ಪ ಮೂರ್ತಿಗಳನ್ನು ಮಹಾನವಮಿ ದಿಬ್ಬ-ಹಜಾರಾಮ ಮತ್ತು ಪಟ್ಟಾಭಿರಾಮ ದೇವಾಲಯಗಳ ಹೊರಭಿತ್ತಿಗಳಲ್ಲಿ ಹಾಗೂ ಸ್ತಂಭಗಳಲ್ಲಿ ಕಾಣಬಹುದು.

ದೇಗುಲಗಳಿಗೆ ನಾನಾ ಬಗೆಯ ದಾನಗಳನ್ನು ಅರ್ಪಿಸುವುದು ಮಹಿಳೆಯರ ಜೀವನದ ಇನ್ನೊಂದು ಪಾತ್ರ. ಕೃಷ್ಣದೇವರಾಯನ ರಾಣಿಯರಾದ ತಿರುಮಲದೇವಿ ಮತ್ತು ಚಿನ್ನಾದೇವಿ ತಿರುಪತಿಯ ಭಗವಂತನಿಗೆ ಚಿನ್ನದ ಬಟ್ಟಲು, ಕಂಠೀಹಾರ, ಪದಕದ ಹಾರ, ಗ್ರಾಮ ಇತ್ಯಾದಿಗಳನ್ನು ಅರ್ಪಿಸಿದರು.(S.I.I Volum IV P.295) ಬ್ರಾಹ್ಮಣರಿಗೆ ದಾನ ಮಾಡುವುದು, ಕೆರೆ, ಕಟ್ಟೆ, ಅಗ್ರಹಾರ, ಛತ್ರ ನಿರ್ಮಾಣ ಮಾಡುವ ಮುಂತಾದ ಜನೋಪಕಾರ್ಯಗಳಲ್ಲೂ ಮಹಿಳೆ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು. ಮಹಿಳೆಯ ಸ್ಥಾನಮಾನದ ಹಾದಿಯಲ್ಲಿ ಮುಳ್ಳಾಗಿದ್ದ ವೇಶ್ಯಾವೃತ್ತಿ, ದೇವದಾಸಿ ವ್ಯವಸ್ಥೆ ಹಾಗೂ ಸತಿಸಹಗಮನ ಮುಂತಾದ ಅನಿಷ್ಠಗಳು ಈ ಸಮಾಜದಲ್ಲಿ ಪ್ರಬಲವಾಗಿದ್ದವು. ಎಂಬುದು ಗಮನಾರ್ಹ ಅಂಶ(ಪದ್ಮ ಎಂ.ಬಿ, ೧೯೯೬ ಪು.೧೮)

ಸತಿ ಸಹಗಮನ ಪದ್ಧತಿ : ಇದು ಹಿಂದೂ ಸಂಸ್ಕೃತಿಯ ಒಂದು ಸಂಪ್ರದಾಯ. ಮರಣ ಹೊಂದಿದ ಪತಿ ಜೊತೆಗೆ ಚಿತೆಗೆ ಹಾರಿ ತಾವು ಪ್ರಾಣ ತ್ಯಾಗ ಮಾಡುವ ಪದ್ಧತಿ ಇತ್ತು. ಸತಿಸಹಗಮನ ಪದ್ಧತಿ

ವಿಜಯನಗರದ ಕಾಲದಲ್ಲಿ ಹೆಚ್ಚು ಪ್ರಚಲಿತವಿತ್ತು. ಇಂದು ನಮಗೆ ಇದು ನಿಕೃಷ್ಟವೆನಿಸಿದರೂ ಈ ಪದ್ಧತಿ ಅಂದಿನ ಸಮಾಜದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.(ಸರಸ್ವತಿ.ಎನ್ , ೧೯೯೬, ಪು.೭, ೧೪, ೧೬, ೧೭, ೧೮)

ಅಗ್ರಹಾರಗಳು : ಪ್ರಾಚೀನ ಭಾರತದಲ್ಲಿ ವೇದ-ಉಪನಿಷತ್, ವ್ಯಾಕರಣ, ಜ್ಯೋತಿಷ್ಯ, ತರ್ಕ, ಮೀಮಾಂಸೆ ಮೊದಲಾದ ಶಾಸ್ತ್ರಗಳ ಜೊತೆಗೆ ಶಾಸ್ತ್ರ-ಸಂಗೀತ, ನಾಟ್ಯ ಮೊದಲಾದ ವಿದ್ಯೆಗಳನ್ನು ಬೋಧಿಸಲಾಗುತ್ತಿತೆಂದು ರಾಮಾಯಣ ಮಹಾಭಾರತ ಕಾವ್ಯಗಳಿಂದ ತಿಳಿಯಬಹುದು. ಅಗ್ರಹಾರವೆಂಬುದು ಬ್ರಾಹ್ಮಣರಿಗೆ ಕೊಡ ಮಾಡಿದ ಸ್ಥಳ ಅಥವಾ ಊರು.

ಅಗ್ರಹಾರ ಎಂದರೆ ಅಗ್ರೌಆಹಾರ ಅಗ್ರ ಎಂದರೆ ಶ್ರೇಷ್ಠ ಆಹಾರ, ಎಂದರೇ ಸ್ಥಳ. ಶ್ರೇಷ್ಠರಿಗೆ ಕೊಟ್ಟ ಸ್ಥಳ. ಅಗ್ರಹಾರದಲ್ಲಿ ಬ್ರಾಹ್ಮಣರೇ ಇರಬೇಕಾಗಿಲ್ಲ. ಬೇರೆ ಜನಾಂಗದವರೂ ಇರಬಹುದು. ಆದರೆ ಊರಿನ ಉತ್ಪತ್ತಿ ಬ್ರಾಹ್ಮಣರಿಗೆ ಸಲ್ಲುತ್ತದೆ. ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಗುರುಕುಲದಿಂದ ಹಿಂದುಳಿದ ಬ್ರಾಹ್ಮಣರು ಗೃಹಸ್ಥರಾಗಿ ನೆಲೆಗೊಳ್ಳಲು ಅಗ್ರಹಾರಗಳನ್ನು ದಾನವಾಗಿ ಕೊಡುತ್ತಿದ್ದರು.(ಸರ್ಕಾರ ಡಿ.ಸಿ., ೧೯೬೦, ಪು.೧೦೮) ಒಟ್ಟಾರೆ ಬ್ರಾಹ್ಮಣ ವಿದ್ವಾಂಸರ ಜೀವನೋಪಾಯಕ್ಕಾಗಿ ಕೊಟ್ಟ ಗ್ರಾಮವೇ ಅಗ್ರಹಾರ. ಲಕ್ಷ್ಮೀಧರಾಮಾತ್ಯನಿಗೆ ನೀಡಿದ ಗ್ರಾಮವನ್ನು ೧೬೦ ವೃತ್ತಿಗಳನ್ನಾಗಿ ವಿಂಗಡಿಸಿ ೩೦ ವೃತ್ತಿಗಳನ್ನು ತನ್ನ ಸ್ವಂತಕ್ಕೆ ಇಟ್ಟುಕೊಂಡು ಉಳಿದವುಗಳನ್ನು ಬ್ರಾಹ್ಮಣರಿಗೆ ನೀಡಿದನು.(M.A.R ೧೯೧೪-೧೫, ಪು.೫೭-೫೮) ಕ್ರಿ.ಶ.೧೦೬೮ರ ಶಾಸನವೊಂದು ಬುಕ್ಕನ ಮಂತ್ರಿ ಮಾಧವನು ಒಂದು ಅಗ್ರಹಾರವನ್ನು ಸ್ಥಾಪಿಸಿದನೆಂದಿದೆ. ಎರಡನೇ ದೇವರಾಯನು ೧೪೨೪ರಲ್ಲಿ ಚಿತೆಯತ್ ಪುರ ಅಗ್ರಹಾರ ಸ್ಥಾಪಿಸಿ ೮ ಜನ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ದಾಖಲಿಸಿದೆ. ನಾಟ್ಯಗಾರ್ತಿಯರು ಅಗ್ರಹಾರ ಸ್ಥಾಪಿಸಿದ ನಿದರ್ಶನವೂ ಇದೆ.(ವೆಂಕಟರತ್ನಂ.ಎ.ವಿ, ೧೯೭೪, ಪು.೫೮-೬೦)

ಸಾಮಾಜಿಕ ಕಾರ್ಯಗಳು : ಜನ ಜೀವನ ಸ್ವರೂಪಕ್ಕೆ ಧರ್ಮ ನಿರ್ಣಾಯಕ ಶಕ್ತಿ. ಜೀವನದ ಎಲ್ಲಾ ರಂಗಗಳಲ್ಲಿಯೂ ಧರ್ಮ ಹಾಸುಹೊಕ್ಕಾಗಿದೆ. ಮನುಷ್ಯನು ಧರ್ಮವನ್ನು ಅವಲಂಬಿಸಿ ಸದ್ಗತಿಯನ್ನು ಸಂಪಾದಿಸುತ್ತಾನೆ.(E.C.VI K.D.೧೦೨, ೧೧೪೧ A.D) ಮಾನವನ ಮನಸ್ಸಿನಲ್ಲಿ ಬೇರೂರಿದ ಕೆಲವು ಭಾವನೆಗಳಲ್ಲಿ ಧರ್ಮವೂ ಒಂದು. ''ಧರ್ಮೋ ರಕ್ಷತಿ ರಕ್ಷಿತಃ'' ಎಂಬ ಭಾವನೆಯಿಂದ ಧರ್ಮಕಾರ್ಯಗಳನ್ನು ಮಾಡುವುದು ಸಮಾಜದ ಒಳಿತಿಗಾಗಿ ಅಥವಾ ಪುಣ್ಯ ಸಂಪಾದನೆಗಾಗಿ ದಾನ ಮಾಡುವುದು ದೇವಸ್ಥಾನಗಳ ನಿರ್ಮಾಣ, ಕೆರೆ, ಬಾವಿ ಕಟ್ಟಿಸುವುದು ಇವು ಸಾಮಾಜಿಕ ಕಾರ್ಯಗಳು.

ಉದ್ಯಾನವನ : ಉದ್ಯಾನವನ ಎಂಬುದು ಸಾರ್ವಜನಿಕ ಉಪಯೋಗಕ್ಕಾಗಿ ಇದ್ದ ವಿಹಾರೋದ್ಯೋಗ.(S.I IX, 249, 1147, AD) ವಿರುಪಾಕ್ಷೇಶ್ವರ ಪಥದ ಇಕ್ಕೆಲದಲ್ಲಿ ಸುರದ್ರುಮಗಳನ್ನು ಇಡಲಾಗಿತ್ತು, ಇಲ್ಲಿ

ಹೂದೋಟಗಳನ್ನು ನಿರ್ಮಿಸಲಾಗಿತ್ತು.(ಪ್ರೊ.ಸಂ.ಶಿ.ಭೂಸನೂರಮಠ, ೧೯೮೮, ಪು.೨೨೨) ೧೫ ಮತ್ತು ೧೬ನೇ ಶತಮಾನದ ಶಾಸನ ಕೃಷ್ಣರಾಯಕೆರೆಯ(ಸಮುದ್ರದ) ದೇವರ ತೋಟವನ್ನು ಉಲ್ಲೇಖಿಸುತ್ತದೆ. (V.P.R., 1984-87, No.129) ಮುಖ್ಯ ದಾರಿಗಳ ಪಕ್ಕಗಳಲ್ಲಿ ಸಾಲುಮರಗಳನ್ನು ನೆಡಿಸಿದ್ದ ವಿಷಯವನ್ನು ವಿದೇಶಿಯರ ಬರವಣಿಗೆಯ ಪ್ರವಾಸೀ ಕಥನದಲ್ಲಿ ತಿಳಿಸಲಾಗಿದೆ. ಹಾಗೂ ೧೫-೧೬ನೇ ಶತಮಾನದ ಶಾಸನ ವೆಂಕಟರಾಯನ ತೋಟವನ್ನು ಉಲ್ಲೇಖಿಸಿದೆ(V.P.R., 1984-87, No.103)

ಅರವಟ್ಟಿಗೆ : ಪ್ರಯಾಣಿಕರಿಗೆ ಅಥವಾ ಪ್ರವಾಸಿಗರಿಗೆ ಬಾಯಾರಿಕೆಯನ್ನು ಹಿಂಗಿಸಿಕೊಳ್ಳಲು ದಾರಿಗಳ ಪಕ್ಕದಲ್ಲಿ ಅರವಟ್ಟಿಗೆಗಳು ಇರುತ್ತಿದ್ದವು. ಛತ್ರಗಳಲ್ಲಿ ದೇವಸ್ಥಾನಗಳಲ್ಲಿ ಸ್ವತಂತ್ರವಾಗಿಯೂ ಇರುತ್ತಿದ್ದವು. ಇಂತಹ ಅರವಟ್ಟಿಗೆಗಳು ಇಂದಿಗೂ ಕಾಣುಸಿಗುತ್ತವೆ. ಅರವಾಟಿಕಾ ಅರವಂಟಿಕೆಯಾಗಿದೆ. ಬಹುತೇಕ ಪ್ರಾಚೀನ ಕಾವ್ಯಗಳು ಹಾದಿಬದಿಯ ಅವರವಂಟಿಕೆ ಮತ್ತು ಅಲ್ಲಿ ನೀರೆರೆಯುವ ಯುವತಿಯರನ್ನೂ ವರ್ಣಿಸಿವೆ.(ಗೋಪಾಲರಾವ್.ಎಚ್.ಎಸ್, ೧೯೯೩, ಪು.೨೧೫) ಅರೆ ಎಂದರೆ "ಧರ್ಮ" ವಾಟಿಕಾ ಎಂದರೆ ಸ್ಥಳ. ಅಂದರೆ ಧರ್ಮದ ಸ್ಥಳವೆಂದರ್ಥ. "ಅರಚ್ಚಾಲೈ" ಎಂಬುದಾಗಿ ತಮಿಳು ಪದ ಇದೆ. ಧರ್ಮದ ಸ್ಥಳದಲ್ಲಿ ಧರ್ಮಕಾರ್ಯ ಮಾಡುವುದು ಹಿತವೆಂದು ಸಾರ್ವಜನಿಕರಿಗಾಗಿ ಬಾಯಾರಿಕೆ ಇಂಗಿಸಿಕೊಳ್ಳಲು ಇಡುವ ಪದ್ಧತಿ ಮಹತ್ವದ ಸಾರ್ವಜನಿಕ ಕಾರ್ಯಗಳಲ್ಲಿ ಒಂದಾಗಿದೆ.

ಛತ್ರಗಳು : ಪ್ರವಾಸಿಗರಿಗೆ ಅರವಟ್ಟಿಕೆಗಳಲ್ಲಿ ನೀರು ಲಭ್ಯವಾದರೆ ಛತ್ರ(ಸತ್ರ)ಗಳಲ್ಲಿ ಆಹಾರ ವಿಶ್ರಾಂತಿ ತೆಗೆದುಕೊಳ್ಳಲು ವಸತಿಯೂ ಲಭ್ಯವಾಗುತ್ತಿತ್ತು.(ಕಾಣೆ, ಪಿ.ವಿ., ೧೯೩೦, ಪು.೮೮೨) 'ಸತ್ರ' ಎಂಬುದು ಛಾತ್ರದಿಂದ ಬೆಳೆದುಬಂದಿರುವ ಸಾಧ್ಯತೆಗಳು ಉಂಟು. ಛಾತ್ರ ಎನ್ನುವುದು ಊಟ-ವಸತಿಗಳ ಸ್ಥಾನವಾಗಿದ್ದು, ಸಾರ್ವಜನಿಕರ, ಪ್ರವಾಸಿಗರ ಅನ್ನದಾನ ಕೇಂದ್ರಗಳೂ ಆಗಿ ಛತ್ರಗಳಾಗಿವೆ. ಕಾಮಲಾಪುರ ಪರಿಸರದಲ್ಲಿ ನಿರ್ಮಿತವಾದ ಛತ್ರಗಳು

೧. ಅಹಮ್ಮದಾಖಾನ ಛತ್ರ - ಕ್ರಿ.ಶ.೧೪೩೯ರಲ್ಲಿ ೨. ದಾದಾಪೀರ ಛತ್ರ : ಕ್ರಿ.ಶ.೧೮೩೨-೩೩ರಲ್ಲಿ ಸೈಯದ್ ಶಂಸುದ್ದೀನ್ ಖಾದರಿ ಉರ್ಫ್ ದಾದಾ ಪೀರ ನಿರ್ಮಿಸಿದ ಇದು ಹಿಂದೂ-ಮುಸ್ಲಿಂ ಏಕತೆಯ ದೃಷ್ಟಿಯಿಂದ ನಿರ್ಮಿತವಾದ ಛತ್ರವಿದು. ಇದರ ಪೂರ್ವದಿಕ್ಕಿಗೆ ಇದರ ಸಂಬಂಧವಾಗಿ ತೋರಿಸಿದ ನೀರಿನ ಬಾವಿಯೂ ಇದೆ.(ವಿರುಪಾಕ್ಷಿ ಪೂಜಾರಹಳ್ಳಿ, ೧೯೯೭, ಪು.೩)

ಅಹಮ್ಮದಾಖಾನ ಛತ್ರ : ಕ್ರಿ.ಶ.೧೪೩೯ರಲ್ಲಿ ಎರಡನೇ ದೇವರಾಯನ ಸೇವಕನಾದ ಕಟಿಗೆಯ ಅಹಮ್ಮದ್ ಖಾನನು ಅರಸನಿಗೆ ಪುಣ್ಯವಾಗಲೆಂದು ಕ್ರಿ.ಶ.೧೪೩೯ರಲ್ಲಿ ಅಹಮ್ಮದ್ ಖಾನ್‌ನು ಛತ್ರವನ್ನು ಮತ್ತು ಅದರ ಬಳಿ ಬಾವಿಯನ್ನು ಕಟ್ಟಿಸಿದನು. ಹೀಗೆ ಕಮಲಾಪುರದ ಮಧ್ಯಕಾಲೀನ ಇತಿಹಾಸದಲ್ಲಿ ಧರ್ಮಛತ್ರದ ಉಪಯೋಗ ಕುರಿತು ಶಾಸನಗಳೂ ಪೂರಕ ಮಾಹಿತಿಯನ್ನು ನೀಡಿವೆ.

ಅರವಂಟಿಕೆಯಂತೆ ಇನ್ನೊಂದು ಸಮಾಜ ಕಾರ್ಯ ಕೆರೆ, ಬಾವಿ, ಅಣೆಕಟ್ಟು, ಕಾಲುವೆಗಳನ್ನು ತೋಡಿಸುವುದು. "ತೋಟದ ಬಾವಿಯಲ್ಲಿ ಮರಕಟ್ಟದ ಪರ್ಗರೆಯಿಲ್ಲ" ಎಂಬ ಶಾಸನ ಹಾಗೂ "ಕೆರೆಯಂ ಕಟ್ಟಿಸು, ಬಾವಿಯಂ ಸವಿಸು, ದೇವಾಗಾರಮಂ ಮಾಡಿಸು" ಎಂಬ ಲಕ್ಷ್ಮೀಧರಾಮಾತ್ಯನ ಶಾಸನ ಇಲ್ಲಿನ ವಿಜಯನಗರದ ಕಾಲದಲ್ಲಿನ ಸಾಮಾಜಿಕ ಕಾರ್ಯಗಳನ್ನು ಇನ್ನಷ್ಟು ಪುಷ್ಟೀಕರಿಸುತ್ತವೆ.(S.I.I Vol.IV, No.267).

ವಿಜಯನಗರದ ಪಟ್ಟಣದ ಪಕ್ಕದಲ್ಲಿ ಕಟ್ಟಿರುವ ತುಂಗಭದ್ರಾ ನದಿಯ ಆಣೆಕಟ್ಟು ಈಗಲೂ ಉಪಯುಕ್ತ. ತುರ್ತುಕಾಲುವೆಯ ಆಣೆಕಟ್ಟನ್ನು ಚಿಂತಾಯಕ ದೇವಣ್ಣನು ಕಟ್ಟಿಸಿದನೆಂದು ಇದನ್ನು ಕಟ್ಟಿದವನು ಬೊಮ್ಮೊಜನೆಂದು ಶಾಸನ ದಾಖಲಿಸಿದೆ.(V.P.R, ೧೯೮-೮೭, ಸಂ.೧) ಇದೇ ರೀತಿ ಬಾಗಿಲ ಬಸವಣ್ಣ ಅಣ್ಣ ಗುಂಡನ್ನು ಒಡೆಸಿ ವಿರುಪಾಕ್ಷ ಅರಸ ಆದೇಶದ ಮೇರೆಗೆ ಕಾಲುವೆಯನ್ನು ಕಟ್ಟಿಸಿದರ ಬಗ್ಗೆಗೂ ಶಾಸನ ದಾಖಲಿಸಿದೆ. (V.P.R ೧೯೮೪-೮೭, ಸಂ.೭೩) ಇದು ಈಗಿನ ತುರ್ತುಕಾಲುವೆಯ ಶಾಸನವೊಂದು ಕಳಸಾಪುರದ ಮಾಗಣೆಯ ಸಲುವ ರೇವತಾಪುರ ಗ್ರಾಮದಲ್ಲಿ ಹಾಳುಕಾಲುವೆಯನ್ನು ಉಲ್ಲೇಖಿಸುತ್ತದೆ.(A.R, ೧೮೮೯, No.೧೭) ಕೆರೆಗಳ ಕುರಿತು ಜಾನಪದ ಉಲ್ಲೇಖವೊಂದು ಸಮಾಜ ಕಾರ್ಯಕ್ಕಾಗಿ ಜೀವತ್ಯಾಗ ಮಾಡಿದೊಂದು ದಾಖಲಿಸಲಾಗಿದೆ. ಜನಪದ ಗೀತೆಯೊಂದು(ಕೆರೆಗೆ ಹಾರ) ಗೌಡನ ಕಿರಿಯಸೊಸೆ ತನ್ನನ್ನು ಕೆರೆಗೆ ಆಹಾರವಾಗಿ ಅಥವಾ ಬಲಿಯಾಗಿ ಅರ್ಪಿಸಿಕೊಳ್ಳುತ್ತಾಳೆ. (ತೀ.ನಂ.ಶ್ರೀಕಂಠಯ್ಯ, ೧೯೬೫, ಪು.೬೫)

ವಿಜಯನಗರದಲ್ಲಿ ಕೃಷ್ಣದೇವರಾಯ ಕಟ್ಟಿಸಿದ ಕೆರೆಗಾಗಿ ೬೦ ಜನ ಬಲಿಕೊಡಲಾಯಿತ್ತೆಂದು ಪ್ರವಾಸೀ ಕಥನದಲ್ಲಿದೆ.(Robert sewell, 1992, P.163) ಕ್ರಿ.ಶ.೧೩೮೦ರ ಶಾಸನವೊಂದು ಬೇಟೆಗಾರನ ಹೆಬ್ಬಾಗಿಲಿನ ಪೂರ್ವದಿಕ್ಕಿಗೆ ಒರತೆಯ ಮೈಲಾರ ದೇವರನ್ನು ಪ್ರತಿಷ್ಠಾಪಿಸಿ ವಾಯುವ್ಯ ದಿಕ್ಕಿಗೆ ಒರತೆಯ ಕೊಂಡವನ್ನು ನಿರ್ಮಿಸಿದನೆಂದಿದೆ.(V.P.R, 1984-87, P.105).

ಕ್ರಿ.ಶ.೧೪೧೧ರ ಶಾಸನ ನರಸಿಂಹ ದೇವನ ಮಗ ದೇವರಾಯನು ಬುಕ್ಕುರನ ಬಾವಿಯನ್ನು ಕಟ್ಟಿಸಿದಂತೆ ತಿಳಿಸುತ್ತದೆ.(V.P.R, 1983-84, No.15) ಕ್ರಿ.ಶ.೧೪೩೯ರಲ್ಲಿ ದೇವರಾಯ ಮಹಾರಾಯನ ಕಟಿಗೆಯ ಸೇವೆಯ ಅಹಮ್ಮದಖಾನನು ರಾಜನಿಗೆ ಧರ್ಮವಾಗಬೇಕೆಂದು ಧರ್ಮಶಾಲೆ ಮತ್ತು ಬಾವಿಯನ್ನು ನಿರ್ಮಿಸಿದನು.(A.R., 1904, No.150) ಕ್ರಿ.ಶ.೧೫೩೧ರ ಶಾಸನವು ಕುಂತೂರ ಯತಿರಾಜ ದೇವನ ಮಗ ವಲ್ಲಭಯ್ಯ ಕಟ್ಟಿಸಿದ ನಾಡದ ಬಾವಿ, ಕೊಂಡಮರಸಯ್ಯ ಕಟ್ಟಿಸಿದ ಕಪಿಲೆಯ ಬಾವಿ ಇತ್ಯಾದಿ ಉಲ್ಲೇಖಗಳಿವೆ.(A.R, 1902, No.22) ಕ್ರಿ.ಶ.೧೫೩೯ರ ಶಾಸನವು ದೇವರಿ ಪಲ್ಲಿಯ ಮುಮ್ಮಡಿ ಶೆಟ್ಟಿ ಎಂಬುವವನಿಗೆ ಪುಣ್ಯವಾಗಲಿ ಎಂದು ಬಾವಿ ಮತ್ತು ತೋಟದಾನ ನೀಡಿದ ವಿಚಾರ ಇದರಲ್ಲಿ

ಉಲ್ಲೇಖಿತವಾಗಿದೆ.(V.P.R, 1984-87, No.98) ಕ್ರಿ.ಶ.೧೫೫೨ರಲ್ಲಿ ದುರುಗುಂಟು ರಘುನಾಥ ದೇವರ ನೀರಿನ ಕೊಳವನ್ನು ಓಬಯ್ಯನು ಧರ್ಮಕ್ಕಾಗಿ ಕಟ್ಟಿಸಿದನು.(V.P.R, 1984-87, No.128) ರುಧಿರೋದ್ಗಾರಿ ಉಲ್ಲೇಖಿತ ಶಾಸನವೊಂದು ತಿರಿವಿದಿ ಚಿಟಿನಾಗಿನೇನಿಯ ಮಗ ಚಿನ್ನಪನಾಯಂಡು ರಂಗನಾಥ ಬಾವಿಯನ್ನು ಕಟ್ಟಿಸಿದುದನ್ನು ಉಲ್ಲೇಖಿಸುತ್ತದೆ.(V.P.R., 1984-87, No.110)

ಕ್ರಿ.ಶ.೧೫ ಮತ್ತು ೧೬ನೇ ಶತಮಾನದ ಇನ್ನೊಂದು ಶಾಸನ ಲಿಂಗ ಬಾವಿಯನ್ನು (V.P.R, 1984-87, No.108) ಸರಸ್ವತಿ ದೇವಾಲಯದ ಹತ್ತಿರವಿರುವ ಶಾಸನ ಬಾವಿ ಕಟ್ಟಿಸಿದುದನ್ನು (A.R.I.E, 1938-39, No.444) ಉಲ್ಲೇಖಿಸಿವೆ.

ಹೀಗೆ ಇವು ಕೇವಲ ಉದಹಾರಣೆಗಳು ಮಾತ್ರ. ಒಟ್ಟಾರೆ ಸಾಹಿತ್ಯಿಕ ಆಕರಗಳ ಹಾಗೂ ಶಾಸನಗಳು ಸಾರ್ವಜನಿಕ ಚಟುವಟಿಕೆ ಕುರಿತು ಸಾಕಷ್ಟು ಪುರಾವೆಗಳನ್ನು ಒದಗಿಸಿವೆ. ಕಾಮಲಾಪುರದ ಶಾಸನಗಳ ಹೊರತಾಗಿ ಸುತ್ತಮುತ್ತಲಿನ ಪರಿಸರದಲ್ಲಿನ ಶಾಸನಗಳೂ ಕೆರೆ, ತಟಾಕ, ಬಾವಿಗಳ ನಿರ್ಮಾಣ ಮತ್ತು ಸಾಮಾಜಿಕ ಕಾರ್ಯಗಳನ್ನು ಕುರಿತು ಶಾಸನಗಳನ್ನು ಉಲ್ಲೇಖಿಸುತ್ತವೆ. ಪುಣ್ಯಾರ್ಜನೆಗಾಗಿ ದತ್ತಿಗಳನ್ನು ಬಿಡುವುದು ಕೂಡ ವೈಯಕ್ತಿಕ ಪುಣ್ಯ ಕಾರ್ಯ. ಒಟ್ಟಾರೆ ಇಲ್ಲಿನ ಸಮಾಜಕಾರ್ಯಗಳೆಲ್ಲವೂ ಸರ್ವಸಮ್ಮತವಾಗಿತ್ತು ಎಂಬುದನ್ನು ಲಭ್ಯವಾದ ಎಲ್ಲ ಆಕರಗಳೂ ನಿರೂಪಿಸುತ್ತವೆ.

ಆರ್ಥಿಕ ಪರಿಸ್ಥಿತಿ : ಕರ್ನಾಟಕ ಅದರಲ್ಲೂ ಹೆಚ್ಚಾಗಿ ಕಾಮಲಾಪುರವನ್ನು ಒಳಗೊಂಡು ಹಂಪಿಕ್ಷೇತ್ರ ಒಂದು ಐತಿಹಾಸಿಕಕ ಕೇಂದ್ರ. ಹಂಪೆ ಇವುಗಳ ಉಪನಗರಗಳಾದ ಕಾಮಲಾಪುರ ವೆಂಕಟಾಪುರ, ನಲ್ಲಾಪುರ, ತಿರುಮಲಾಪುರ ಈ ಪ್ರದೇಶಗಳಲ್ಲಿ ಅಂದಿನಿಂದ ನಡೆದ ವ್ಯವಸಾಯದ ಚಟುವಟಿಕೆಗಳು ಜನ ಜೀವನದ ಮೇಲೆ ಪ್ರಭಾವ ಬೀರಿದೆ. ಈ ಕ್ಷೇತ್ರದ ಆರ್ಥಿಕ ವ್ಯವಸ್ಥೆಯನ್ನು ಅರಿಯಲು ಆಕರಗಳಲ್ಲಿ ಮುಖ್ಯವಾದ ಶಾಸನಗಳು ಬಹಳೇ ಮಹತ್ವದ ಪಾತ್ರಗಳನ್ನು ವಹಿಸಿವೆ.

ಇಲ್ಲಿನ ಮಾನವನ ಜೀವನ ಮುಖ್ಯವಾಗಿ ಕೃಷಿ. ನೀರಿಗಾಗಿ ಆಶ್ರಯಿಸಿ ಪಶುಗಳನ್ನು ಸಾಗಿಸಿಕೊಂಡು ಒಂದೆಡೆ ಸ್ಥಾಯಿಯಾಗಿ ಜೀವನವನ್ನು ಆರಂಭಿಸಿದ ಮಾನವನು ತನ್ನ ಜೀವನೋಪಾಯಕ್ಕಾಗಿ ಕೈಕೊಂಡ ವ್ಯವಸಾಯಕ್ಕಾಗಿ ತನ್ನ ಸ್ವ-ಅನುಭವದಿಂದ ಕಾಲಕ್ರಮೇಣ ಹೊಸ ಹೊಸ ವಿಚಾರಧಾರೆಗಳನ್ನು, ಅನುಕೂಲಗಳನ್ನು, ವಿಧಾನಗಳನ್ನು, ಅಳವಡಿಸಿಕೊಂಡು ಬಂದಿದ್ದಾನೆ. ಅನೇಕ ವಿದೇಶಿ ಪ್ರವಾಸಿಗರೂ ಉದಹಾರಣೆಗಾಗಿ ಬಾರ್ಬೋಸ, ಗಯಾಸ್, ನ್ಯೂಯಿಜ್ ರವರು ತಮ್ಮ ಪ್ರವಾಸೀ ಕಥನಗಳಲ್ಲಿ ಇಲ್ಲಿನ ಆರ್ಥಿಕ ಸ್ಥಿತಿ ಕುರಿತು ದಾಖಲಿಸಿದ್ದಾರೆ. ಭತ್ತ ಇಲ್ಲಿ ಪ್ರಮುಖ ಬೆಳೆ, ಜೋಳ ರಾಗಿಯನ್ನೂ ಬೆಳೆಯುತ್ತಾರೆ. ಕ್ಷೀರೋತ್ಪನ್ನ ಸಂಮೃದ್ಧ. ವಿವಿಧ ಬಗೆಯ ಪುಷ್ಪದ ಬೆಳಕಾರಿಕೆ ಜನಪ್ರಿಯ, ಪಶುಸಂಪತ್ತು

ಕೃಷಿಗೆ ಅನುಕೂಲ(ಶಿವರುದ್ರ ಸ್ವಾಮಿ.ಎಸ್.ಎನ್, ೨೦೦೦, ಪು.೨೫೮) ನೀರಾವರಿ ಸೌಕರ್ಯವಿರುವ ಇಂಥ ಪ್ರದೇಶಗಳಲ್ಲಿ ವಿಜಯನಗರದ ಅರಸರು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಿದ್ದರು. ಪ್ರಮುಖವಾಗಿ ಇಲ್ಲಿನ ತುಂಗಭದ್ರಾ ನದಿಯ ಆಸು-ಪಾಸಿನಲ್ಲಿ ವಾಣಿಜ್ಯ ಬೆಳೆಗಳಾದ ಕಬ್ಬು ಮತ್ತು ಬಾಳೆ ಬೆಳೆಯುತ್ತಿದ್ದರು.(ವಾಸ ದೇವನ್.ಸಿ.ಎಸ್., ೨೦೦೧, ಪು.೩೦) ಆಣೆಕಟ್ಟುಗಳು, ಕುಂತೆಗಳು ಕೆರೆಬಾವಿಗಳನ್ನು, ಕಾಲುವೆಗಳನ್ನು ನಿರ್ಮಿಸುವುದು ಸಾಮ್ರಾಜ್ಯದ ಪ್ರಮುಖ ನೀತಿಯಾಗಿತ್ತು. ಸುತ್ತಮುತ್ತ ಪರಿಶೀಲಿಸ ಹೊರಟರೆ ೫೫ಕ್ಕೂ ಹೆಚ್ಚು ಕೆರೆಗಳು ವಿಜಯನಗರ ಕಾಲದಲ್ಲೆ ನಿರ್ಮಿಸಿದವು. ಕೆಲವು ಕೆರೆಗಳು ಮಾತ್ರ ವಿಜಯನಗರದ ಪೂರ್ವದಲ್ಲಿ ನಿರ್ಮಿತವಾದವು. ಅನೇಕ ಶಾಸನಗಳಲ್ಲಿ ಈ ಕೆರೆಗಳನ್ನು ಕಟ್ಟೆ, ಸಾಗರ ತಟಾಕ, ಸಮುದ್ರ, ಕೊಳ, ಕುಂಟೆ ಎಂದು ಕರೆಯಲಾಗಿದೆ. ಕೆರೆಗಳಲ್ಲಿ ೨ ಬಗೆಗಳಾಗಿ ವರ್ಗೀಕರಿಸಲಾಗಿದೆ. ೧. ನದಿ ಆಶ್ರಿತ ಕೆರೆಗಳು ೨. ಮಳೆ ಆಶ್ರಿತ ಕೆರೆಗಳು(ವಾಸುದೇವನ್, ಸಿ.ಎಸ್, ೨೦೦೧, ಪು.೩೩-೩೫).

ಇವುಗಳಲ್ಲಿ ಕಾಮಲಾಪುರ ಕೆರೆ ಮೊದಲನೆಯ ಗುಂಪಿಗೆ ಸೇರಿದೆ. ಕೆರೆ ಎಂದೊಡನೆ ಮೊದಲು ನೆನಪಾಗುವುದು ಲಕ್ಷ್ಮೀಧರಾಮಾತ್ಯನ ಶಾಸನ "ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರವಂ ಮಾಡಿಸು" ಎಂಬ ಈ ಶಾಸನ, ವಿಜಯನಗರದ ಪ್ರೌಢ ಪ್ರತಾಪರಾಯನ ಮಂತ್ರಿ ಲಕ್ಷ್ಮೀಧರನು ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಾಳೆ.(S.II Vol.IV, 1995, No.267) ಈ ಶಾಸನದಿಂದ ಸಮಾಜಕಾರ್ಯದ ಜ್ಞಾನವನ್ನು ಮಗು ಇದ್ದಾಗಲೇ ಬಿತ್ತು ಉತ್ತುತ್ತಿರುವುದು ಇದರ ಮೂಲ ಉದ್ದೇಶ. ವಿಜಯನಗರದ ಕಾಲಕ್ಕೆ ಸಂಬಂಧಿಸಿದಂತೆ ಕೆರೆಗಳ ನಿರ್ಮಾಣ ಕಾರ್ಯಕ್ಕೆ ಮೊದಲನೆಯ ಬುಕ್ಕರಾಯನು ಭದ್ರಬುನಾದಿಯನ್ನು ಹಾಕಿದನು. ಪ್ರಸ್ತುತ ಅಧ್ಯಯನ ಕಾಮಲಾಪುರ ಗ್ರಾಮಕ್ಕೆ ಸೀಮಿತವಾಗಿದುದರಿಂದ ಕಾಮಲಾಪುರ ಗ್ರಾಮದಲ್ಲಿನ ಕೆರೆಗಳ ಪ್ರಸ್ತಾವನೆಯನ್ನು ಮಾತ್ರ ಇಲ್ಲಿ ಮಾಡಲಾದೆ.

ಕಾಮಲಾಪುರದ ಕೆರೆ : ಕಾಮಲಾಪುರ ಗ್ರಾಮದ ಪೂರ್ವದಕ್ಷಿಣಾಭಿಮುಖವಾಗಿ ಈ ಕೆರೆ ಇದೆ. ಕಾಮಲಾಪುರದ ಕೆರೆಯನ್ನು ಅಚ್ಯುತರಾಯ ಮಹಾರಾಜನ ಮಗನ ಪ್ರೌಢದೇವರಾಯನು ನಿರ್ಮಿಸಿದನು. (ಕಲಬುರ್ಗಿ ಎಂ.ಎಂ. ೧೯೯೪, ಪು.೫೧೭) ತುಂಗಭದ್ರಾ ನದಿಯಿಂದ ಬಸವಣ್ಣ ಕಾಲುವೆ ಮತ್ತು ವಿಜಯನಗರದ ಕಾಲುವೆ ಎಂಬ ಎರಡು ಕಾಲುವೆಗಳ ಮೂಲಕ ಇಲ್ಲಿ ನೀರು ಶೇಖರವಗುತ್ತದೆ. ಕೆರೆಯ ಆಯಕಟ್ಟಿನ ಕೆರೆ ಪ್ರದೇಶದಲ್ಲಿ ಕಬ್ಬು, ಭತ್ತ, ಬಾಳೆ ಮುಖ್ಯಬೆಳೆ.(ಡಾಮಾನಿಕ್.ಜೆ, ಡೇವಿಸನ್ ಜನ್ ಕಿನ್ಸ್ ೧೯೯೭, ಪು.೪೯-೫೭)

[illegible]

[illegible]

[illegible]

ಅಳ್ಳಿಯ ಕೆರೆ : ಪೂರ್ವಾಭಿಮುಖವಾಗಿ ಪಾಪಿನಾಯಕ ಹಳ್ಳಿಗೆ ಹೋಗುವ ಮಾರ್ಗದಲ್ಲಿ ಈ ಕೆರೆ ಇದೆ. ಕಾಲ ದೃಷ್ಟಿಯಿಂದ ವಿಜಯನಗರದ ಕಾಲಕ್ಕೆ ಸೇರಿದೆ. ಸುತ್ತಮುತ್ತಲಿನ ಗ್ರಾಮಸ್ಥರು ಈ ಕೆರೆಯ ಪ್ರಯೋಜನ ಪಡೆಯುತ್ತಿದ್ದಾರೆ. ಈ ಕರೆಯನ್ನು ಕೃಷ್ಣ ದೇವರಾಯನ ಕಾಲದಲ್ಲಿ ನಿರ್ಮಿಸಲಾಯಿತು ಎಂದು ಬಯಲುವೊದ್ದಿಗೆರೆಯಲ್ಲಿ ಪತ್ತೆಯಾದ ಈ ಶಾಸನ ತಿಳಿಸುತ್ತದೆ.(ವಾಸುದೇವನ್.ಸಿ.ಎಸ್. ೨೦೦೧, ಪು.೬೦) ಡಾಮಿಂಗೋ ಫಯಾಸ್ ಶ್ರೀ ಕೃಷ್ಣದೇವರಾಯನ ಆಳ್ವಿಕೆಯಲ್ಲಿ(೧೫೨೯-೩೦) ವಿಜಯನಗರಕ್ಕೆ ಭೇಟಿ ಇತ್ತ ತನ್ನ ಪ್ರವಾಸೀಕಥನದಲ್ಲಿ ಈ ಕೆರೆಯನ್ನು ಉಲ್ಲೇಖಿಸಿದ್ದಾನೆ. ವಿದೇಶಿ ಪ್ರವಾಸಿಗನಾದ ನ್ಯೂನಿಚ್ ನ ಪ್ರವಾಸೀ ಕಥನದಲ್ಲಿ ರಾಯಕೆರೆ ಮತ್ತು ಈ ಕೆರೆಯನ್ನು ಕಟ್ಟಿಸಿದ ನಂತರ ಕೆರೆಯ ನೀರನ್ನು ಉಪಯೋಗಿಸುವ ವ್ಯವಸಾಯದ ಕುರಿತು ದಾಖಲಿಸಲಾಗಿದೆ.(ರಾಬರ್ಟ್‌ಸಿವೆಲ್, ೧೯೯೨, ಪು..೩೬೫)

ವಿಜಯನಗರದ ಬಹುತೇಕ ಶಾಸನಗಳಲ್ಲಿ ಕೆರೆಗಳ ರಕ್ಷಣೆ ಪೋಷಣೆ ತತ್ಸಂಬಂಧವಾದ ವಿಷಯಗಳು ಒಳಗೊಂಡಿರುತ್ತವೆ. ಇದು ವಿಜಯನಗರ ಕಾಲದಲ್ಲಿ ಇಲ್ಲಿನ ಕೆರೆ ನೀರಾವರಿ ಪದ್ಧತಿಗೆ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುವ ಕನ್ನಡಿ.(ವಾಸುದೇವನ್.ಸಿ.ಎಸ್, ೨೦೦೧, ಪು.೭೬) ಶಾಸನಗಳು ಇದಕ್ಕೆ ಪೂರವಕವಾಗಿ ಅಧಿಕ ಭೂಮಿಯನ್ನು ಬೇಸಾಯಕ್ಕೆ ಪರಿವರ್ತಿಸಿದ ಬಗ್ಗೆ ಅಧಿಕ ನೀರಾವರಿ ಸೌಲಭ್ಯಗಳ ಬಗ್ಗೆ ಗ್ರಾಮ ಮತ್ತು ಉಪನಗರಗಳ ನಿರ್ಮಾಣದ ಬಗ್ಗೆ ಮತ್ತು ವಾಣಿಜ್ಯ ಪ್ರೋತ್ಸಾಹ ನೀಡಿದ ಬಗ್ಗೆ ಮಾಹಿತಿಯನ್ನು ಕೊಡುತ್ತವೆ. ಕಾಮಲಾಪುರ ಮತ್ತು ಇದರ ಈ ಸುತ್ತಮುತ್ತಲಿನ ಪರಿಸರದಲ್ಲಿದ್ದ ಪಸರಿಸಿದ ಶಾಸನಗಳೂ ಈ ಕುರಿತಂತೆ ಉಲ್ಲೇಖಿಸುತ್ತವೆ. ಉದಾಹರಣೆಗಾಗಿ ಕ್ರಿ.ಶ.೧೫೬೧ರ ಶಾಸನವು ತುಂಡು ಭೂಮಿಯನ್ನು ಸಮತಲಮಾಡಿ ವ್ಯವಸಾಯಕ್ಕೆ ಅಳವಡಿಸಿದ್ದನ್ನು ತಿಳಿಸುತ್ತದೆ.(ವಿ.ಶಾ. ಸಂ.I, ೧೯೯೬ ಸಂ.೭೭) ಈಗಿನ ತುರ್ತು ಕಾಲುವೆಯ ಆಣೆಕಟ್ಟನ್ನು ಚಿಂತಾಯಕ ದೇವಣ್ಣನು ಕಟ್ಟಿಸಿದನು.(ವಿ.ಶಾ., ಸಂ.I, ಸಂ.೫೬) ಹಿರಿಯ ಕಾಲುವೆಯನ್ನು ಹೆಗಡೆ ಹಿತ ಬಾಗಿಲ ಬಸವಣ್ಣನು ಅರಸ ವಿರುಪಾಕ್ಷನ ಆಜ್ಞೆಯ ಮೇರೆಗೆ ಕಟ್ಟಿಸಿದನು.(ವಿ.ಶಾ.ಸಂ.I, ೧೯೯೬, ಸಂ.೨೬೭) ಅವಿಕಧವಿತರಸ ಬುಕ್ಕ ಸಾಗರದಲ್ಲಿ ಮತ್ತೊಂದು ಕಾಲುವೆಯನ್ನು ಕಟ್ಟಿಸಿದನು.(ವಿ.ಶಾ., ಸಂ.I, ೧೯೯೬, ಸಂ.೫೪) ನಾಗಾಂಬಿಕಾ ಸಮುದ್ರ ಕೆರೆಯನ್ನು ನಾಗೇನಹಳ್ಳಿಯಲ್ಲಿ ಕಟ್ಟಿಸಿದ ಕುರಿತು ಕ್ರಿ.ಶ.೧೫೧೪ರ ಶಾಸನ ಉಲ್ಲೇಖಿಸುತ್ತದೆ.(ವಿ.ಶಾ., ಸಂ.I, ೧೯೯೬, ಸಂ.೪೧೪) ಸೀತಾರಾಮ ತಂಡದ ಹತ್ತಿರದ ಕೆರೆ ಕಟ್ಟಿಸಿದ ಕುರಿತು ಕ್ರಿ.ಶ.೧೫೩೩ರ ಶಾಸನ ದಾಖಲಿಸುತ್ತದೆ.(ವಿ.ಶಾ.,ಸಂ.I, ೧೯೯೬, ಸಂ.೪೧೨) ಒಟ್ಟಾರೆ ಶಾಸನಗಳು ಇಲ್ಲಿನ ಕೃಷಿಗೆ ಮುಖ್ಯವಾಗಿ ಕೆರೆಗಳನ್ನು ಅವಲಂಬಿಸಿವೆ ಎಂಬುದನ್ನು ಸಾಬೀತು ಪಡಿಸಿವೆ. ಶಾಸನಗಳು ಕೆರೆಯ ಮಾಹಿತಿಯನ್ನು ನೀಡುವುದರ ಜೊತೆಗೆ ದಾನ-ತೆರಿಗೆಗಳ ವಿಷಯವನ್ನೂ ಪ್ರಸ್ತಾಪಿಸುತ್ತಿವೆ. ಕೊಟ್ಟು-ಕೊಡಿಗೆ, ಕೆರೆ-ಕಟ್ಟು, ಮಾನ್ಯ ಕೆರೆಬಿತ್ತು ವತ್ತ ಇಂತಹ ಪದಗಳು ದಾನ ತೆರಿಗೆಗಳ ಮಾಹಿತಿಯನ್ನು ನೀಡುತ್ತವೆ. ವಿವಿಧ

ಮೂಲಗಳಿಂದ ಬರುವ ತೆರಿಗೆ ಹಣವನ್ನು ಸಂಗ್ರಹಿಸಿ ಪ್ರಜಾಹಿತ ಕಾರ್ಯಗಳಿಗೆ ಬಳಸಿಕೊಳ್ಳುತ್ತಿದ್ದರು. ಏರಿ-ವಾರಿಯಂ ಏರಿ-ಆಯಾ(ತಮಿಳು) ಚೆರವು-ಕುಂಚಲು(ತೆಲಗು) ನೀರ ಬಿರಾಡ, ಕೆರೆಬಂಧಿ ಇಂತಹ ತೆರಿಗೆಗಳು, ರಾಜನ ಭಂಡಾರಕ್ಕೆ ಸೇರುವ ಬದಲಿಗೆ ಕೆರೆಯ ರಕ್ಷಣೆಗೆ ಮತ್ತು ಇತರ ಕಾರ್ಯಗಳಿಗೆ ಸಲ್ಲುತ್ತಿತ್ತು. ಒಟ್ಟಾರೆ ನೀರ್ ಕುಳಿ, ಚೆರುವು, ಕುಂಚಲು, ಮೇರ ಕಾಲುವೆಯ ನೀರಬಿರಾಡ, ವಿಭೂತಿ ಕಾಣಿಕೆ, ಜೋಡಿ ಬಿರಾಡ ಸಲುವರಿ ಇಂತ ಶಬ್ದಗಳು ವಿಜಯನಗರ ಕಾಲದಲ್ಲಿನ ತೆರಿಗೆ ಪದ್ಧತಿಯನ್ನು ತಿಳಿಸುತ್ತವೆ.(A.R.S.I.E, 1984-87, No.54).

ಸಾರಿಗೆ ಮತ್ತು ರಸ್ತೆ ವ್ಯವಸ್ಥೆಗೆ ಸಂಬಂಧಿಸಿದಂತೆ ವಿಜಯನಗರ ಪಟ್ಟಣಕ್ಕೆ ಹೆದ್ದಾರಿಗಳನ್ನು ಸಂಪರ್ಕಿಸಲಾಯಿತು. ಎತ್ತಿನ ಗಾಡಿಗಳು ಸಾರಿಗೆಯ ಸಂಪರ್ಕದ ವ್ಯವಸ್ಥೆಯಾಯಿತು. ಕುದುರೆ, ಎತ್ತು, ಕತ್ತೆ, ಹಡಗು, ಕಾವಡಿಗಳು ಸರಕನ್ನು ಸಾಗಿಸುವ ಸಾಧನಗಳಾಗಿದ್ದವು.(ಎ.ಎಸ್.ನಂಜುಡಸ್ವಾಮಿ ೧೯೯೧, ಪು.೧೦೧) ಅಂದು ಉಪಯೋಗಿಸುವ ಹರಿಗೋಲು, ತೆಪ್ಪ, ದೋಣಿ ಮತ್ತು ನಾವೆಗಳನ್ನು ನದಿ ಸಾರಿಗೆಗೆ ಉಪಯೋಗಿಸುವ ಪದ್ಧತಿ ಇಂದಿಗೂ ಇದೆ.

ಅಬ್ದುಲ್ ರಜಾಕನ ಪ್ರವಾಸಿ ಕಥನದಲ್ಲಿ ವಿಜಯನಗರದಲ್ಲಿ ೩೦೦ರೇವು ಪಟ್ಟಣಗಳಿದ್ದವೆಂದು ದಾಖಲಿಸಿದೆ. ವ್ಯಾಪರ ಕ್ಷೇತ್ರದಲ್ಲಿ ವಣಿಕರ ಸಂಘುಗಳು ಹಾಗೂ ಬ್ರಾಹ್ಮಣರು ವ್ಯಾಪಾರಿಗಳಾಗಿದ್ದರು. (ಶಿವರುದ್ರಸ್ವಾಮಿ.ಎಸ್.ಎನ್., ೨೦೦೦, ಪು.೨೫೯-೬೦) ಕಮಲಾಪುರ ಗ್ರಾಮದಲ್ಲಿ ಸಿಕ್ಕ ಶಾಸನಗಳು ಹೆಚ್ಚಿನ ಮಟ್ಟಿಗೆ ಭೂಮಿಯ ದಾನ ಪದ್ಧತಿಯನ್ನು ಉಲ್ಲೇಖಿಸುತ್ತವೆ. ಉದಾ : ಕ್ರಿ.ಶ. ೧೫೧೮ರ ಶಾಸನ ಕೃಷ್ಣದೇವರಾಯನ ಪಟ್ಟಮಹಾದೇವಿ ತಿರುಮಲಾದೇವಿ ಕಮ್ಮಾರಗುಂಟೆ ಎಂಬ ಭೂಮಿಯನ್ನು ತಿರುವೆಂಗಳನಾಥನಿಗೆ ದಾನ ಮಾಡಿದಲ್ಲದೆ, ಈ ಭೂಮಿ ಎಲ್ಲೆಗಳನ್ನು ಹೇಳಲಾಗಿದೆ.(A.R, 1922, No.679).

ಕ್ರಿ.ಶ.೧೫೩೧ರ ಶಾಸನ ವಲ್ಲಭೆಯು ಕಟ್ಟಿಸಿದ ನಾಡದ ಬಾವಿ, ಕೊಂಡನರಸಯ್ಯ ಕಟ್ಟಿಸಿದ ಕಪಿಲೆಯ ಬಾವಿ, ಲಿಂಗಬಾವಿ ಕಟ್ಟಿಸಿದುದನ್ನು ದಾಖಲಿಸುತ್ತದೆ.(A.R,1904, No.22) ಕ್ರಿ.ಶ.೧೫೫೪ರ ಶಾಸನ ನೆಲತಿಮ್ಮನ ಜೋಯಿಕೆರೆಯನ್ನು ಕಟ್ಟಿಸಿದನು.(V.P.R, 1984, No.145).

ಕ್ರಿ.ಶ.೧೫೪೦ರ ಶಾಸನದಲ್ಲಿ ಕಾಮಲಾಪುರದ ಕೆರೆ, ಮಾದಲಾಪುರದ ಕೆರೆ ಅನಂತಾಪುರದ ಕೆರೆಯನ್ನು, ಶಾಸನದಲ್ಲಿ ದಾಖಲಿಸಿದೆ.(A.R, 1889, No.16) ಕ್ರಿ.ಶ.೧೫೪೦ರ ಮತ್ತೊಂದು ಶಾಸನ ಕಳಸಾಪುರ ರೇವತಾಪುರ, ಬಸವಾಪುರ, ಕೃಷ್ಣಾಪುರ, ಅನಂತಾಪುರ ಗ್ರಾಮಗಳ ಆರ್ಥಿಕ ಪರಿಸ್ಥಿತಿಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ.೧೪೨೬ರ ಶಾಸನವೊಂದು ಪಾನ್ ಸುಪಾರಿ ಬಜಾರದ ಹೆಸರನ್ನು ದಾಖಲಿಸುತ್ತದೆ. ಕ್ರಿ.ಶ.೧೫೫೭ರ ಶಾಸನ ಚಿಕ್ಕದೇವರ ಬಸದಿಯ ಶಾಂತಿನಾಥ ಬಸದಿಗೆ ಅಂಗಡಿಯಿಂದ ಬರುವ ಆದಾಯವನ್ನು

[illegible]

ದಾಖಲಿಸಿದೆ.(A.R, 1889, No.18) ಕ್ರಿ.ಶ.೧೫ ಮತ್ತು ೧೬ನೇ ಶತಮಾನದ ಶಾಸನಗಳಲ್ಲಿ ಕೃಷ್ಣರಾಯ ಕೆರೆಯ ಉಲ್ಲೇಖ,(V.P.R, 1984-87, No.129) ಕಳಾಸಾಪುರ ಗ್ರಾಮದ ಉಲ್ಲೇಖಗಳಿವೆ.(V.P.R., 1984-87, No.161).

ನಾಣ್ಯಪದ್ಧತಿಯನ್ನು ಪರಿಶೀಲಿಸಿದರೆ ವಿದೇಶಿಗಳೊಂದಿಗೆ ವ್ಯಾಪಾರ ಹೆಚ್ಚಿದಂತೆ ನಾಣ್ಯಗಳು ಪ್ರಮುಖ ಪಾತ್ರ ವಹಿಸಿದವು. ಚಿನ್ನದ ನಾಣ್ಯಗಳು ಚಲಾವಣೆಯಲ್ಲಿತ್ತು. ವರಹಾ, ಬೆಳ್ಳಿ, ತಾಮ್ರದ ನಾಣ್ಯವನ್ನೂ ಉಪಯೋಗಿಸಲಾಗುತ್ತಿತ್ತು. (ಎಸ್.ಎನ್.ಶಿವರುದ್ರಸ್ವಾಮಿ, ೨೦೦೨, ಪು.೨೬೦) ಕಾಮಲಾಪುರ ಗ್ರಾಮದಲ್ಲಿ ಲಭ್ಯವಾದ ಶಾಸನಗಳು ನಾಣ್ಯಪದ್ಧತಿಯ ಬಗ್ಗೆ ಮಾಹಿತಿಯನ್ನು ನೀಡುತ್ತವೆ.

ಕ್ರಿ.ಶ.೧೫೫೮ರ ಶಾಸನ ತೋಟದ ಬೆಳೆಗಳ ಹಸಿರುವಾಣಿ-ಸುಂಕ, ೧೦೫೦ ಗದ್ಯಾಣಗಳೆಂದು ದಾಖಲಿಸಿದೆ.(A.R,1922, No.695) ಚಿಕ್ಕ ಗದ್ಯಾಣ, ಫಣ್ಣಿ ವರಹಾ, ಗದ್ಯಾಣ, ಹಣಹೊನ್ನು ಕಾಸು, ಪ್ರತಾಪಹಣ, ಪ್ರತಾಪ, ಪ್ರತಾಪಗದ್ಯಾಣ, ವರಹಾ, ಮತ್ತು ವರಹಾ ಗದ್ಯಾಣ ಈ ನಾಣ್ಯ ಪದ್ಧತಿ ಕಮಲಾಪುರ ಪರಿಸರದಲ್ಲಿದ್ದ ಶಾಸನಗಳಲ್ಲೂ ಉಲ್ಲೇಖಿಸಲ್ಪಟ್ಟಿವೆ. ನಾಣ್ಯಗಳ ಮೇಲೆ ಕನ್ನಡ ಲಿಪಿಯಲ್ಲಿ ರಾಜನ ಹೆಸರನ್ನು ಮತ್ತು ದೇವನಾಗರಿ ಲಿಪಿಯಲ್ಲಿ ಕೆತ್ತಲಾಗಿದೆ. ಶಿವ-ಪಾರ್ವತಿ, ಲಕ್ಷ್ಮೀ ನಾರಾಯಣ, ಲಕ್ಷ್ಮೀನರಸಿಂಹ, ನಂದಿದುರ್ಗ, ವೆಂಕಟೇಶ್ವರ ಚಿತ್ರಣ ನಾಣ್ಯದ ಇನ್ನೊಂದು ಮಗ್ಗುಲಿಗೆ ಇರುತ್ತವೆ.

ವಿಜಯನಗರದ ಅರಸ ೨ನೇ ಹರಿಹರನು ಜನರು ಕಂದಾಯವನ್ನು ನಾಣ್ಯರೂಪದಲ್ಲಿ ಕೊಡಬೇಕೆಂದು ನಿರ್ಧರಿಸಿದ್ದರಿಂದ, ವಿವಿಧ ಪ್ರಮಾಣದ ಪ್ರಕಾರದ ಲೋಹದ ನಾಣ್ಯಗಳನ್ನು ನಿರ್ಮಿಸುವುದು ಅನಿವಾರ್ಯ ವಾಯಿತು. (ಮಹಾಲಿಂಗಮ್ ಟಿ.ವಿ., ೧೯೫೫, ಪು.೧೦೧) ಒಟ್ಟಾರೆ ವರಹಾ, ಗದ್ಯಾಣ, ಪೊನ್, ಪ್ರತಾಪ, ಮಾಡ, ಕಾಡ, ಹಾಗ ಚಿನ್ನದ ನಾಣ್ಯಗಳು 'ತಾರೆ' ಎಂಬ ಬೆಳ್ಳಿಯ ನಾಣ್ಯ ಪಣ, ಜಿತೆಲ್ ಕಾಸು ಮುಂತಾದ ತಾಮ್ರದ ನಾಣ್ಯಗಳು ಚಲಾವಣೆಯಲ್ಲಿದ್ದವು.(ದೀಕ್ಷಿತ್ ಜಿ.ಎಸ್., ೧೯೯೦, ಪು.೨೩೧) ಗದ್ಯಾಣ, ಪಣ, ವೀಸಾ, ಅಡ್ಡ-ದುಡ್ಡು ಮುಂತಾದ ನಾಣ್ಯಗಳ ಹೆಸರುಗಳು ಸಾಹಿತ್ಯಿಕ ಆಕರಗಳಲ್ಲಿ ದೊರಕಿವೆ. ಇತ್ತೀಚಿಗೆ ಉತ್ಖನನವನ್ನು ಮಾಡಿದಾಗ ಕಮಲಾಪುರದ ಮಹಾನವಮಿ ದಿಬ್ಬದ ಎದುರುಗಡೆ ಮೂರು ಚಿನ್ನದ ನಾಣ್ಯಗಳು ಲಭ್ಯವಾಗಿದ್ದವು ಎಂಬುದು ಗಮನಾರ್ಹ ಅಂಶ. ಒಟ್ಟಾರೆ ಸಾಹಿತ್ಯಿಕ ಆಕರಗಳು ಕಮಲಾಪುರ ಮತ್ತು ಕಮಲಾಪುರ ಪರಿಸರದಲ್ಲಿ ಸಿಕ್ಕ ಶಾಸನಗಳು ಇಲ್ಲಿನ ಆರ್ಥಿಕ ಸ್ಥಿತಿಗತಿಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡಿವೆ ಎಂಬುದಂತೂ ಸ್ಪಷ್ಟವಾಗಿವೆ.

ಧಾರ್ಮಿಕ

ಧರ್ಮ ಎಂದರೆ ದೈವಗಳು ಹಾಗೂ ಭಕ್ತರು. ಭಾರತದಲ್ಲಿ ಅದರಲ್ಲೂ ಹೆಚ್ಚಾಗಿ ಕರ್ನಾಟಕ ವಿವಿಧ ಮತಧರ್ಮಗಳ ಆಗರವಾಗಿದೆ. ಧರ್ಮ ಆ ನಾಡಿನ ಜನರ ಸಾಮಾಜಿಕ, ಆರ್ಥಿಕ ಜೀವನದ

ಕಥನ.(ರಹಮತ್ ತರೀಕರೆ, ೧೯೯೯ ಪು.೧೦೪) ಧರ್ಮವು ಸಂಸ್ಕೃತಿಯ ಜೀವಾಳ. ಒಂದು ನಾಡಿನ ಜನತೆಯ ಜೀವನದ ರೀತಿಯನ್ನು ರೂಪಿಸುವಲ್ಲಿ ಧರ್ಮದ ಪಾತ್ರ ಬಲುದೊಡ್ಡದು. ''ಧರ್ಮೋ ರಕ್ಷತಿ ರಕ್ಷಿತಃ'' ನಾವು ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುವುದು, ಎಂದು ಎಲ್ಲಾ ಧರ್ಮಗಳಿಗೂ ಮಾನ್ಯತೆ ನೀಡಿ ಧಾರ್ಮಿಕ ಪುರೋಭಿವೃದ್ಧಿಗೆ ಸರ್ವಧರ್ಮ ಸಮನ್ವಯತೆಯಲ್ಲಿ ನಂಬಿಕೆ ಇರಿಸಿಕೊಂಡು ಬಂದ ವಿಜಯನಗರ ಅರಸರ ಪಾತ್ರ ಬಲು ದೊಡ್ಡದು.(ವೆಂಕಟೇಶ ಜೋಯಿಸ್.ಕೆ.ಜಿ, ೧೯೯೬, ಪು.೬೬) ಎಲ್ಲಾ ಧರ್ಮಗಳು ಉಳಿದು ಸೌಹಾರ್ದತೆಯಿಂದ ಬಾಳಿ ಮೆರೆದು ಈ ನಾಡಿನ ಸಾಂಸ್ಕೃತಿಕ ಹಿರಿಮೆಗೆ ಒಂದು ಕೊಡುಗೆ ಎಂದೆನಿಸಿದೆ. ಹಂಪಿ ಕ್ಷೇತ್ರದಲ್ಲಿನ ಕಾಮಲಾಪುರದಲ್ಲಿ ಪ್ರವಹಿಸಿದ ಮತಧರ್ಮಗಳ ಪ್ರಸ್ತವನೆ ಇಲ್ಲಿ ಮಾಡಲಾಗಿದೆ.

ಶೈವಧರ್ಮ

ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದು. ಶಿವೋಪಾಸನೆಯ ಇತಿಹಾಸ ವೇದಗಳಿಗಿಂತ ಹಿಂದಕ್ಕೆ ಹೋಗುತ್ತದೆ. ಶೈವರು ಎಂದರೆ ಶಿವನನ್ನು ನಂಬಿ, ಆ ನಂಬಿಕೆಯಿಂದ ರೂಪಗೊಂಡ ಬದುಕಿನ ಕ್ರಮವನ್ನು ಅನುಸರಿಸುವವರು ಶೈವರು. ಹರಪ್ಪಾ-ಮೆಹೆಂಜೋದಾರೋಗಳಲ್ಲಿ ಸಿಕ್ಕ ಮುದ್ರಿಕೆಗಳು ಇದರಲ್ಲಿನ ಪಶುಪತಿಯ ಚಿತ್ರಣ ಶೈವಧರ್ಮ ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನ ಧರ್ಮ ಎಂಬುದನ್ನು ವ್ಯಕ್ತಪಡಿಸುತ್ತದೆ.(ಸರ್.ಜಾನ್ ಮಾರ್ಷಲ್, ೧೯ ಪು.೫೨-೫೪) ಸಿಂಧೂ ಬಯಲಿನ ಜನರು ಶಿವನನ್ನು ರುದ್ರನೆಂದು ಪರಿಗಣಿಸಿ ಪೂಜಿಸಿದ್ದಾರೆ. ಪುರಾಣಗಳಲ್ಲಿ ಶಿವನಿಗೆ ವಿಶೇಷ ಸ್ಥಾನವಿದೆ. (ಎಚ್.ಎಸ್. ಗೋಪಾಲರಾವ್, ೧೯೯೩, ಪು.೧೭೭)

ಕರ್ನಾಟಕಕ್ಕೆ ಸಂಬಂಧಿಸಿದಂತೆ ಶೈವಧರ್ಮ ಕದಂಬರ ಕಾಲದಲ್ಲಿಯೇ ಪ್ರಚಲಿತವಿತ್ತು. ಪ್ರಸ್ತುತ ಅಧ್ಯಯನ ಶೈವ ಧರ್ಮ ಕಾಮಲಾಪುರಕ್ಕೆ ಸೀಮಿತಾವಾಗಿದೆ. ಕಾಮಲಾಪುರ ಗ್ರಾಮವನ್ನು ಒಳಗೊಂಡು ಹಂಪಿ ಕ್ಷೇತ್ರ ಸುಪ್ರಸಿದ್ಧ ಶೈವಕೇಂದ್ರ. ಪಂಪಾಪತಿ ಅಥವಾ ವಿರುಪಾಕ್ಷ ಈ ಸಾಮ್ರಾಜ್ಯದ ಅಧಿದೇವ. ಶಿವಶಕ್ತಿಯರು ಅವಿನಾಭಾವದಿಂದ ಕೂಡಿರುವುದರಿಂದ ಶಕ್ತಿ, ವಿಶಿಷ್ಟಾದ್ವೈತವೆಂದು ವೀರಶೈವ ಮತಕ್ಕೆ ಹೆಸರು ಬಂದಿತು.(ಪಿ.ನಾಗರಾಜರಾವ್(ಅನು), ಹಂಪನಾಗರಾಜಯ್ಯ, ೧೯೯೨, ಪು.೯೩)

ಧರ್ಮ ಪ್ರಚಾರದ ಶ್ರದ್ಧೆ ಪ್ರವಹಿಸಿ ಧರ್ಮ ಪ್ರಸಾರ ಕಾರ್ಯ ವ್ಯಾಪಿಸಿತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಅದರ ಮಾರ್ಗವನ್ನು ಅನುಸರಿಸಿ ಹಿಂದೂ ಧರ್ಮದ ಪುನರುತ್ಥಾನ ವೀರಶೈವ ತತ್ವಶಾಸ್ತ್ರಜ್ಞರು ಹಾಗೂ ಪಂಡಿತೋತ್ತಮರ ಮೇಲೂ ತನ್ನ ಪ್ರಭಾವವನ್ನು ಬೀರಿತು. ಹಿಂದೂ ಧರ್ಮದ ಇದರ ಸಂಪ್ರದಾಯಗಳ ಪ್ರತಿಪಾದಕರು ಅನುಸರಿಸಿದ ಮಾರ್ಗದಲ್ಲಿ ವೀರಶೈವ ತತ್ವವೇತ್ತರರೂ ಶೈವ ತತ್ವವನ್ನು ಸಮನ್ವಯಗೊಳಿಸಿ ಪರಿಪೋಷಿಸಿದರು.(ಪಿ.ನಾಗರಾಜರಾವ್, ೧೯೯೨, ಪು.೯೦)

ಸಾಹಿತ್ಯಿಕ : ವಿಜಯನಗರ ಕಾಲದ ಜನರು ನವ ಚೈತನ ಪಡೆದು ನಾನಾ ಬಗೆಯ ಸಾಹಿತ್ಯ ರೂಪದಲ್ಲಿ ಅನೇಕ ಕೃತಿಗಳು ಅವರಿಂದ ಹೊರಹೊಮ್ಮಿದವು. ಇಲ್ಲಿ ಬರಹಗಾರರಿಗೆ ಅತುಲವಾದ ಉತ್ತೇಜನವಿತ್ತು. ರಾಜಾಧಿರಾಜರು, ಸಾಮಂತರು ಸ್ವತಃ ಪಂಡಿತರಾಗಿದ್ದರು.(ವಿ.ರಾಘವೇಂದ್ರರಾವ್, ೧೯೪೯, ಪು.೯೩-೯೪) ವಿರೂಪಾಕ್ಷ ಪಂಡಿತ "ಚೆನ್ನಬಸವ ಪುರಾಣ" ಹರಿಹರನ ರಗಳೆಗಳಲ್ಲಿನ ಪುಷ್ಪ ರಗಳೆಯಲ್ಲಿ ಶಿವಾಚಾರ್ಯಸ ಸಂಭ್ರಮ, ಚಾಮರಸನ ಪ್ರಭುಲಿಂಗ ಲೀಲೆಯಲ್ಲಿನ "ಅರ್ಚನಾ ವೈಭವ"(ಶ್ರೀಕಂಠಶಾಸ್ತ್ರೀ, ೧೯೮೯, ಪು.೨೬೧) ಇವು ಮುಖ್ಯವಾದ ಸಾಹಿತ್ಯಿಕ ಕೃತಿಗಳು. ಬುಕ್ಕರಾಯನ ಕಾಲದಲ್ಲಿನ ಸಾಚಿನ ಸೋಮ, ಗುರುದೇವ, ಬೀಮಕವಿ, ಪದ್ಮಣಾಂಕ ಮತ್ತು ನೀಲಕಂಠ ಶಿವಾಚಾರ್ಯ ಇವರೆಲ್ಲರೂ ವೀರಶೈವ ಕವಿಗಳು, ಪದ್ಮಣಾಂಕನ "ಪದ್ಮರಾಜ ಪುರಾಣ" ಗುರುದೇವ ವೀರಶೈವ ಪಂಚಸ್ತೋತ್ರಗಳ ಪೀಠಿಕೆಗೆ ಕರ್ತೃ. ಮಲ್ಲಿಕಾರ್ಜುನ ಶೈವಧರ್ಮಕ್ಕೆ ಸಾಹಿತ್ಯಿಕ ಅಭಿವೃದ್ಧಿಗೆ ಉತ್ತೇಜನ ನೀಡಿದರು.(ಶ್ರೀಕಂಠಯ್ಯ.ಕೆ, ೧೯೮೩, ಪು.೧೧-೧೫)

ಲಕ್ಕಣ್ಣ ದಂಡನಾಯಕ "ಶಿವತತ್ವ ಚಿಂತಾಮಣಿಯನ್ನು ಜಕ್ಕಣ್ಣನ "ವೀರಶೈವಾ ಮೃತ"ವನ್ನೂ ರಚಿಸಿದರು. ಕುಮಾರ ಬಂಕನಾಥ "ಷಡ್ ಸ್ಥಲೋಪದೇಶ" ಎಂಬ ಕೃತಿಯನ್ನು ಚಂದ್ರಕವಿ ಶಂಕರ ಶತಕವನ್ನು ರಚಿಸಿದವ.(ಎಸ್.ರಾಜಶೇಖರ್, ೧೯೯೧, ಪು.೯೩-೯೮) ಬೊಮ್ಮರಸ "ಸೌಂದರ ಪುರಾಣ"ವನ್ನು ಸಿದ್ದೇಶ್ವರ "ಷಟ್ಸ್ಥಲ ಜ್ಞಾನಾಮೃತ" ಎಂಬ ವಚನಕಾವ್ಯವನ್ನು ರಚಿಸಿದರು. ಗುಬ್ಬಿಯ ಮಲ್ಲಣನು "ವೀರಶೈವಾಮೃತ ಪುರಾಣ"ವನ್ನು ರಚಿಸಿದನು. ಧೂರ್ಜತೆಯು "ಕಾಳ ಹಸ್ತೀಶ್ವರ ಶತಕಂ ಎಂಬ ಕೃತಿ ರಚಿಸಿದನು. ಅಪ್ಪಯ್ಯ ದೀಕ್ಷಿತ "ಶಿವತತ್ವ ವಿವೇಕ" (ವಿ.ರಾಘವೇಂದ್ರರಾವ್, ೧೯೪೯, ಪು.೯೩-೧೦೩) ಈ ಎಲ್ಲಾ ಕವಿಗಳ ಕೃತಿಗಳೂ ಶೈವಧರ್ಮಕ್ಕೆ ಸಾಹಿತ್ಯದ ಅಭಿವೃದ್ಧಿಗೆ ಉತ್ತೇಜನ ನೀಡಿದವು. ಹೀಗೆ ಶೈವ, ವೀರಶೈವಧರ್ಮ ಕಾಮಲಾಪುರ ಗ್ರಾಮದಲ್ಲಿ ಅದರಲ್ಲೂ ಹೆಚ್ಚಾಗಿ ಹಂಪಿ ಕ್ಷೇತ್ರದಲ್ಲಿತ್ತು ಎಂಬುದು ಸ್ಪಷ್ಟವಾಗಿದೆ.

ಸಾಹಿತ್ಯಿಕ ಆಕರಗಳ ಜೊತೆಗೆ ಶಾಸನಗಳೂ ಕೂಡ ಶೈವಧರ್ಮ ಇತಿಹಾಸ ರಚನೆಯಲ್ಲಿ ಮಹತ್ತರ ಪಾಲನ್ನು ವಹಿಸಿದೆ. ಕ್ರಿ.ಶ.೧೦೭೬ರ ಶಾಸನವೊಂದು ಮಠದಲ್ಲಿ ಪುರಾಣ ವ್ಯಾಖ್ಯಾಯನ ಮಾಡುವ ಉಪಾಧ್ಯಾಯರಿಗೆ ಪ್ರತಿವರ್ಷ ೮೦ ಲೊಕ್ಕಿ ಗದ್ಯಾಣಗಳನ್ನು ದಾನ ಕೊಟ್ಟನೆಂದು ತಿಳಿಸುತ್ತದೆ.(A.R.I.E, 1984-87, No.95) ಕ್ರಿ.ಶ.೧೩೩೭ರಲ್ಲಿ ಬುಕ್ಕರಾಯ ಒಡೆಯನು ಹಸ್ತಿನಾವತಿಯನ್ನು(ಆನೆಗೊಂದಿಯನ್ನು) ಆಳುತ್ತಿದ್ದಾಗ ಇವನ ಮಹಾಪ್ರಧಾನ ಬಸವೇದಂಡನಾಯಕನು ವಿರುಪಾಕ್ಷದೇವರ ಸೇವೆಗಾಗಿ ರಾಮಾಪುರದ ಕೆರೆಗೆ ಭೂಮಿಯನ್ನು ದಾನಮಾಡಿದನು.(V.P.R 1984-87, No.89) ಕ್ರಿ.ಶ.1380ರ ಶಾಸನ ಹರಿಹರರಾಯನ ಆಳ್ವಿಕೆಯ ಕಾಲದಲ್ಲಿ ಮಲಿಗೆ ನಾಯಕನ ಮಗ ಬದ್ದೆಯ ನಾಯಕನು ಬೇಟೆಗಾರನ ಹೆಬ್ಬಾಗಿಲಿನ

ಪೂರ್ವದಿಕ್ಕಿನಲ್ಲಿ ಒರತೆಯ ಮೈಲಾರ ದೇವರನ್ನು ಪ್ರತಿಷ್ಠಾಪಿಸಿದನು. ಅಲ್ಲದೇ ಈ ದೇವಾಲಯದ ವಾಯುವ್ಯಕ್ಕೆ ಒರತೆಯ ಕೊಳವನ್ನು ಮಾಡಿಸಿದ ವಿಷಯ ಶಾಸನಗಳಲ್ಲಿ ದಾಖಲಿಸಲ್ಪಟ್ಟಿದೆ.(V.P.R 1984-87, No.105) ಕ್ರಿ.ಶ.14ನೇ ಶತಮಾನದ ಶಾಸನಗಳಲ್ಲಿ ಸಂಖರದೇವರ ದಿಡ್ಡಿಯ ಬಾಗಿಲು(V.P.R 1983-84 No.4) ಸೋಮದೇವರ ಕೊತ್ತಳ(V.P.R 1983-84, No.3) ಶಂಕರ ದೇವರ ಕೊತ್ತಳ(V.P.R 1984-87 No.8) ಹೆಸರನ್ನು ಸೂಚಿಸಿದೆ. ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಹಂಪಾದೇವಿಯ ಹೆಸರಿನ ದಿಡ್ಡಿಯನ್ನು ಸೂಚಿಸಿದೆ.(V.P.R 1983-84, No.5) ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಶೈವ ಸಿದ ಶಿವಯೋಗಿ ದೇವರ ಗವಿಯನ್ನು (V.P.R 1983-84 No.54) ವಿರುಪಾಕ್ಷ ದೇವರ ಗದ್ದೆ(V.P.R 1984-87 No.77) ದಾನ ನೀಡಿದ್ದನ್ನು ಸೆಟಿ ಮತ್ತು ಅವನ ದಾಯಾದಿಗಳು ತೋಟ ಮತ್ತು ಗದ್ದೆಯಲ್ಲಿನ ಉತ್ಪನ್ನದಲ್ಲಿ ರಾಮಚಂದ್ರ ದೇವರ ಮತ್ತು ವಿರುಪಾಕ್ಷ ದೇವರ ಅಮೃತ ಪಡಿಗೆ ನೀಡಿದ ವಿಷಯ ಪ್ರಸ್ತಾಪಿಸಲಾಗಿದೆ.(V.P.R 1984-87 No.125) ಕ್ರಿ.ಶ.1531ರಲ್ಲಿ ಕೃಷ್ಣರಾಜ ಅರಸು ತನ್ನ ತಂದೆ-ತಾಯಿಯವರಿಗೆ ಪುಣ್ಯವಾಗಲೆಂದು ಕನ್ನತಿಯ ಕಟೆ ಬಂಕಾಪುರ, ನಾಗಲಾಪುರ, ಗೌರಾಜಿಕೆರೆ, ದಾನಗಳನ್ನು ಮೂರು ತೋಟಗಳನ್ನು ಮತ್ತು ಅನೇಕ ಭೂಮಿಗಳನ್ನು ಪ್ರಸನ್ನ ವಿರುಪಾಕ್ಷ ದೇವರ ಸೇವೆಗೆ ದಾನ ನೀಡಿದರು.(A.R.I.E 1907-08 No.500) ಕ್ರಿ.ಶ.1539ರ ಶಾಸನವು ಬಾವಿ ಮತ್ತು ತೋಟವನ್ನು ತಂಮ್ಮಡಿ ನಂಜೇದೇವರ ನಿರಾಸಿ ಮಟಕ್ಕೆ ದಾನ ನೀಡಿದ್ದನ್ನು ಉಲ್ಲೇಖಿಸಿದೆ.(V.P.R 1984-87, No.98). ಕ್ರಿ.ಶ.1561ರ ಶಾಸನದಲ್ಲಿ ವಿರುಪಾಕ್ಷದೇವರ ಮಲ್ಲಿಕಾರ್ಜುನ ದೇವರ ಮತ್ತು ಬೆನಕನ ಗುಡಿಯ ಹೆಸರು ದಾಖಲಿಸಿದೆ.(V.P.R 1983-84, No.22) ಕ್ರಿ.ಶ.15-16ನೇ ಶತಮಾನದಲ್ಲಿ ಮಲ್ಲಿಕಾರ್ಜುನ ದೇವರಿಗೆ ದೀಪವನ್ನು ಉರಿಸುವುದಕ್ಕಾಗಿ ಒಂದು ಅಂಗಡಿ ಮನೆಯನ್ನು ದಾನ ಮಾಡಿದನು.(V.P.R 1984-87 No.82) ಗಂಗಾಧರ ದೇವರ ಮಾನ್ಯದ(ಭೂಮಿಯ)(V.P.R 1984-87 No.132) ಗುರುನಾಥ ದೇವರಿಗೆ ಸೇರಿದ ಭೂಮಿಯ ಬಗ್ಗೆ(V.P.R 1984-87, No.131) ಚೆನ್ನ ಸೋಮದೇವರ ಮಾನ್ಯದ (V.P.R 1984-87 No.130) ಕುರಿತು ನಂದಿ ವಿಗ್ರಹ, ಸುಂಖಿಜೇವಿಯ ಮಗ ಲಿಖಿ ದೇವನಿಗೆ ಸೇರಿದ್ದನ್ನು(V.P.R 1991-92 No.3) ಕಾಳ ಹಸ್ತಿಲಿಂಗದ ಹೆಸರನ್ನು(V.P.R 1984-87 No.142) ಭೈರವ ಮೂರ್ತಿಯನ್ನು (V.P.R 1984-87 No.111) ಸೋಮಯ್ಯ ದೇವರ ಹೆಸರನ್ನು(V.P.R 1984-87 No.137) ಸಂಗನ ಬಸವ ದೇವರ ಹೆಸರನ್ನು(V.P.R 198-84 No.32) ಕೋಟೆ ಶಂಕರ ದೇವರ ಬಾಗಿಲನ್ನು(V.P.R 1984-87 No.83) ಎಂದು ದಾಖಲಿಸಿದೆ. ಕ್ರಿ.ಶ.15-16ನೇ ಶತಮಾನದ ಶಾಸನಗಳಲ್ಲಿ ಕೋಟೆ ಶಂಕರ ದೇವರ ಬಾಗಿಲನ್ನು(V.P.R 1984-87 No.84) ವಿರುಪಾಕ್ಷ ದೇವರಿಗೆ ಸೂರೆ ದೇವಯ್ಯ ದಾನ ಕೊಟ್ಟದ್ದು(V.P.R 1984-87. No.126) ಮಲ್ಲಿರ್ಕಾನ ದೇವರಿಗೆ ದಾನ ಮಾಡಿದ ವಿಷಯಗಳು ದಾಖಿಸಲ್ಪಟಸ್ಪಸಿವೆ.(V.P.R 1983-84 No.43)

ವಿಜಯನಗರದ ಅರಸರ ಕಾಲದಲ್ಲಿ ಶೈವ ಮತ್ತು ವೈಷ್ಣವ ಮತಗಳು ಮುಖ್ಯವಾದವು. ಜೈನ ಧರ್ಮವು ವಿಜಯನಗರ ಅರಸರಿಂದ ಪೋಷಣೆ ಪಡೆಯಿತು. ಹಿಂದೂ ಧರ್ಮದ ಎಲ್ಲಾ ಶಾಖೆಗಳನ್ನು ಜೈನ ಧರ್ಮಾದಿಗಳನ್ನು ಸಮಾನ ಭಾವನೆಯಿಂದ ಕಂಡರು.(ಶ್ರೀಕಂಠಶಾಸ್ತ್ರೀ, ೧೯೮೯, ಪು.೨೧೬)

ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮ ಒಂದು ಪ್ರಬಲವಾದ ಧರ್ಮ. ದಕ್ಷಿಣ ಕರ್ನಾಟಕದ ಶ್ರವಣಬೆಳಗೊಳ ಮತ್ತು ಉತ್ತರ ಕರ್ನಾಟಕದ ಕೊಪ್ಪಳ ಮುಖ್ಯವಾದ ಜೈನಕೇಂದ್ರ. (ಷೇಕ್ ಅಲಿ ಬಿ., ೧೯೯೭, ಪು.೪೭೬) ಅರಸರ ಬೆಂಬಲವನ್ನು ಉಳಿಸಿಕೊಂಡಿದ್ದ ಜೈನಧರ್ಮರ ತನ್ನದೇ ಆದ ಕೊಡುಗೆ ನೀಡಿದೆ.

ಸಾಹಿತ್ಯದ ಆಕರಗಳು

ಬಾಹುಲಬಲಿ ಪಂಡಿತನ "ಧರ್ಮಪುರಾಣ"(ನರಸಿಂಹಾಚಾರ್.ಆರ್., ೧೯೭೨, ಪು.೮೨-೮೩) ಅಭಯ ಸೂರಿಯ "ಗೋಮ್ಮಟಸಾರದ ಕರ್ನಾಟಕ ವೃತ್ತಿ" ಜೈನ ಕವಿ ಮಧುರನ "ಧರ್ಮನಾಥ ಪುರಾಣ" (ನರಸಿಂಹಾಚಾರ್.ಆರ್., ೧೯೭೨, ಪು.೫೦೨-೫೧೦) ಚಂದ್ರಕೀರ್ತಿಯ ಪರಮಾಗಮಸಾರ, ರತ್ನಾಕರ ವರ್ಣಿ "ಭರತೇಶ್ವ ಚರಿತ್ರೆ", ನಾಗರಾಜನ "ಪುಣ್ಯಶ್ರವ" ಮತ್ತು ವೃತ್ತೆ ವಿಲಾಸನ "ಧರ್ಮ ಪರೀಕ್ಷೆ" ಇವು ಮುಖ್ಯವಾದ ಸಾಹಿತ್ಯಿಕ ಆಕರಗಳು.

ಸಾಹಿತ್ಯಿಕ ಆಕರದ ಜೊತೆಗೆ ಶಾಸನಗಳೂ ಕೂಡ ಅಷ್ಟೇ ಮಹತ್ವ ಪೂರ್ಣ. ಕ್ರಿ.ಶ.೧೩೮೦ರ ಶಾಸನವೊಂದು ಜೈನಮುನಿಗಳ ಪಟ್ಟಾವಳಿಗಳನ್ನು ನೀಡುತ್ತದೆ. ಈ ಶಾಸನ ಧರ್ಮಭೂಷಣ, ಭಟ್ಟಾರಕ ಅವನ ನಂತರದ ಅಮರಕೀರ್ತಿ ಮೇಲಿನ ಶಾಸನಗಳು ಶೈವಧರ್ಮ ಪ್ರಚಲಿತದಲ್ಲಿತ್ತೆಂಬುದಕ್ಕೆ ಸೂಕ್ತ ಸಾಕ್ಷಿಯಾಗಿ ಇಂದಿಗೂ ನಿಂತಿವೆ. ಶಾಸನಗಳ ಪಾತ್ರವು ಎಷ್ಟು ಮಹತ್ವದ್ದೋ ಇಲ್ಲಿನ ದೇವಾಯಗಳ ಪಾತ್ರವೂ ಅಷ್ಟೇ ಮಹತ್ವದ್ದು. ಕಮಲಾಪುರದಲ್ಲಿನ ವೀರಭದ್ರದೇವಾಲಯ, ನಗರೇಶ್ವರ ದೇವಾಲಯ, ಚಂದ್ರಶೇಖರ ದೇವಾಲಯ, ಈಶ್ವರ ದೇವಾಲಯ, ಆನೆ ಸಾಲಿನ ಹಿಂಬದಿಯಲ್ಲಿರುವ ಶೈವದೇವಾಲಯ, ಮಲ್ಲಿಕಾರ್ಜುನ ದೇವಾಲಯ. ಈ ಎಲ್ಲಾ ದೇವಾಲಯಗಳೂ ಶೈವ ಧರ್ಮ ಇಲ್ಲಿ ಪ್ರಚಲಿತದಲ್ಲಿತ್ತು ಎಂಬುದರ ಬಗ್ಗೆ ಮತ್ತಷ್ಟು ಪುಷ್ಠಿಯನ್ನು ನೀಡುತ್ತವೆ. ಶಿವಲಿಂಗ, ಭಿಕ್ಷಾಟನಾ ಮೂರ್ತಿ, ಭೈರವ, ಚಂದ್ರಮೌಳೇಶ್ವರ, ವೀರಭದ್ರ, ಮಹೇಶ್ವರ, ವಿರುಪಾಕ್ಷ ನಂದಿ, ಉಮಾಮಹೇಶ್ವರ, ಇವು ಶೈವ ಪಂಥಕ್ಕೆ ಸೇರಿದ ಮೂರ್ತಿಶಿಲ್ಪಗಳು. ಈ ಶೈವ ಪಂಥಕ್ಕೆ ಸೇರಿದ ದೇವಾಲಯಗಳು ಮತ್ತು ಮೂರ್ತಿ ಶಿಲ್ಪಕ್ಕೆ ಸೇರಿದ ವಿವರವಾದ ಅಧ್ಯಯನವನ್ನು ಮುಂದಿನ ಅಧ್ಯಯಗಳಲ್ಲಿ ಕೈಗೊಳ್ಳಲಾಗಿದೆ.

ವೈಷ್ಣವ ಧರ್ಮ

ಶೈವಧರ್ಮದಲ್ಲಿ ಶಿವನಿಗೆ ಇತಿಹಾಸವಿದ್ದಂತೆ ವೈಷ್ಣವ ಧರ್ಮದಲ್ಲಿ ವಿಷ್ಣುವಿಗೆ ಒಂದು ಇತಿಹಾಸವಿದೆ. ವಿಷ್ಣು ತನ್ನ ಮೂರು ಹೆಜ್ಜೆಗಳಿಂದ ಲೋಕ ಸಮಸ್ತವನ್ನೇ ಅಳೆಯುವುದನ್ನು ಋಗ್ವೇದದಲ್ಲಿ ಹೇಳಲಾಗಿದೆ.(ಭಂಡಾರ್‌ಕರ್.ಆರ್.ಜಿ., ಪು.೪೭) ವೈಷ್ಣವ ಧರ್ಮ ದಕ್ಷಿಣ ಭಾರತದಲ್ಲಿ ಕ್ರಿ.ಪೂ.ದಲ್ಲೆ ಇತ್ತೆಂಬ ಬಗ್ಗೆ ನಾನಾಘಟ್ ಶಾಸನ ಉತ್ತಮ ವಿವರಣೆ.(ರಾಧಾಕೃಷ್ಣ ಎಸ್., ೧೯೨೩, ಪು.೪೯೨-೪೯೩) ಸೃಷ್ಟಿ ಮಾಡುವುದು ಬ್ರಹ್ಮನ ಕೆಲಸವಾದರೆ ಅಳಿಸುವುದು, ಶಿವನ ಕೆಲಸ, ಉಳಿಸುವುದು (ಕಾಪಾಡುವುದು) ವಿಷ್ಣುವಿನ ಕೆಲಸ. ಶಾಸನಗಳಲ್ಲೂ ಕೂಡ ಭಾಗವತಃ ವೈಷ್ಣವ ಎಂಬ ಶಬ್ದಗಳು ಲಭ್ಯವಾಗಿವೆ. (ಚಿದಾನಂದಮೂರ್ತಿ, ೧೯೭೯, ಪು.೧೪೬) ಪ್ರಸ್ತುತ ಅಧ್ಯಯನ ಕಾಮಲಾಪುರ ಗ್ರಾಮದಲ್ಲಿನ ವೈಷ್ಣವ ಧರ್ಮಕ್ಕೆ ಸೀಮಿತವಾಗಿರಿಸಿಕೊಳ್ಳಲಾಗಿದೆ.

ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿದಂತೆ, ಮಾಧವಚಾರ್ಯ ಎಂಬ ಕವಿಯ ಸೂಕ್ತ ಸಂಹಿತೆ, ಶ್ರೀರಾಮ ಭದ್ರಾಂಬೆಯ ರಘುನಾಥಾಭ್ಯುದಯಂ ಎಂಬ ಕಾವ್ಯ ಸಾಯಣಾಚಾರ್ಯರ ವೇದಗಳ ಅಮೋಘ ಭಾಷ್ಯೆ, ಸಾಳುವ ನರಸಿಂಹರಾಯನ ರಾಮಾಭ್ಯುದಯಂ ಎಂಬ ಕಾವ್ಯ, ವಿಜಯನಗರ ಕಾಲದಲ್ಲಿನ ಮುಖ್ಯ ಸಾಹಿತ್ಯ ಕೃತಿಗಳು. ಕುಮಾರ ವ್ಯಾಸ ದಶಪರ್ವ ಮಹಾಭಾರತ ಕೃತಿ ರಚಿಸಿದ. ಶ್ರೀ ವ್ಯಾಸರಾಯರು ಮತ್ತು ವಾದಿರಾಜರು ಅನೇಕ ಕೀರ್ತನೆಗಳನ್ನು ಹಾಡಿ ಸಾಹಿತ್ಯದ ಪ್ರೇರಕ ಶಕ್ತಿಗಳಾಗಿದ್ದರು. ಜಯದೇವ ಕವಿ ಗೀತ ಗೋವಿಂದ ನಾಟಕಕ್ಕೆ ಶೃತಿರಂಜನಿ ಎಂಬ ಟೀಕೆ ರಚಿಸಿದ. ಅಪ್ಪಯ್ಯ ದೀಕ್ಷಿತರು ಅದ್ವೈತ ಸಿದ್ಧಾಂತದ ದಿಗ್ದಂತಿ, ಪರಿಮಳ ಗ್ರಂಥ, ಅದ್ವೈತ ತತ್ವದ ಸಮರ್ಥನೆ, ಜಟ್ಟಿಮೂರ್ತಿ "ಹರಿಶ್ಚಂದ್ರ", "ನರಸಭೂಪಲೀಯಮು" ಎಂಬ ಕಾವ್ಯ ರಚಿಸಿದ. ಏಕಾಮ್ರನಾಥನು "ಜಾಂಬವತೀ ಕಲ್ಯಾಣ" ತೆನಾಲಿ ರಾಮಕೃಷ್ಣನು ಪಾಂಡುರಂಗ ಮಹಾತ್ಮ್ಯ, ಘಟಿಕಾ ಚಲ ಮಹಾತ್ಮ್ಯಂ, ನರಹರಿಯ "ತೊರವೆ ರಾಮಾಯಣ"(ರಾಘವೇಂದ್ರರಾವ್ ವಿ., ೧೯೮೪, ಪು.೯೩-೧೦೩) ಈ ಎಲ್ಲಾ ಕೃತಿಗಳು ವಿಜಯನಗರದ ಕಾಲದ ಸಾಹಿತ್ಯಿಕ ಸಾಮ್ರಾಜ್ಯ ನೋಟ ಎನಿಸಿದರೂ ಕಾಮಲಾಪುರ ಹಂಪಿ ಕ್ಷೇತ್ರದ ಒಳಗಡೆ ಒಳಪಡು ವುದರಿಂದ ಒಟ್ಟಾರೆ ವಿಜಯನಗರ ಕಾಲದ ಸಾಹಿತ್ಯಿಕ ಚಿತ್ರಣ ಇದಾಗಿದೆ.

ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ, ಶಾಸನಗಳು ಒಂದು ಆಕರ. ಕ್ರಿ.ಶ.೧೫೧೮ರಲ್ಲಿ ತಿರುಮಲಾ ದೇವಿಯಮ್ಮ ವಿಜಯನಗರದ ಬಳಿ ಇದ್ದ ಕುಮ್ಮಾರ ಗುಂಟೆ ಎಂಬ ಭೂಮಿಯನ್ನು ವಿಜಯನಗರದ ಕಿರಿಯ ತಿರುವೆಂಗಳನಾಥನಿಗೆ ಭೂ-ದಾನ ನೀಡುತ್ತಾಳೆ. ವಿಠಲೇಶ್ವರ ದೇವರ ಸನ್ನಿಧಿಯಲ್ಲಿ ಈ ದಾನವನ್ನು ಮಾಡಲಾಗಿದೆ.(A.R.I.E, 1992, No.679). ಕ್ರಿ.ಶ.೧೫೨೧ರಲ್ಲಿ ತಿಮ್ಮರಾಜನು ಶ್ರೀರಾಮಚಂದ್ರ ದೇವರ ಭಂಡಾರಕ್ಕೆ ಕೃಷ್ಣರಾಯ ಮಹಾರಾಯನು ರಾಮಚಂದ್ರ ದೇವರ ಅಮೃತ ಪಡಿಯ ಸೇವೆಗಾಗಿ

ದಾನ ಮಾಡಿದನು. ಈ ಶಾಸನದಲ್ಲಿ ದೇವರಿಗೆ ಮಾನ್ಯವಾದ ಮತ್ತು ನೈವೇದ್ಯಕ್ಕಾಗಿ ಮಾಡಬೇಕಾದ ತಿನಿಸುಗಳ ವಿವರಗಳೂ ದಾಖಲಿಸಲ್ಪಟ್ಟಿವೆ.(A.R.S.I.E, 1889, No.21)

ಕ್ರಿ.ಶ.೧೫೨೭ರ ಶಾಸನವು ತಿರುವೆಂಗಳ ದೇವರ ಧೂಪದೀಪ ನೈವೇದ್ಯಕ್ಕಾಗಿ ವಿಠಲದೇವರ ಸನ್ನಿಧಿಯಲ್ಲಿ ಕೃಷ್ಣ ದೇವರಾಯನು ಕೋಟೆಯ ನಡುವೆ ಇದ್ದ ಸ್ಥಳವನ್ನು ದಾನ ನೀಡಿದನು(A.R.I.E, 1989, No.20) ಆದಿ ನಾರಾಯಣ ದೇವರಿಗೆ ಅಂಗಡಿಯನ್ನು ದಾನ ಮಾಡಿದ್ದನ್ನು, ಕ್ರಿ.ಶ.೧೫೨೫ರ ಶಾಸನ ದಾಖಲಿಸುತ್ತದೆ.(V.P.R, 1984-87, No.91) ಕ್ರಿ.ಶ.೧೫೨೯ರ ಶಾಸನ ರಾಮಚಂದ್ರದೇವರಿಗೆ ತೋಟ ಮತ್ತು ಗದ್ದೆಯಲ್ಲಿನ ಉತ್ಪನ್ನದಲ್ಲಿನ ಭಾಗವನ್ನು ಅಮೃತ ಪಡಿಯ ಸೇವೆಗಾಗಿ ನೀಡಿದನು.(V.P.R., 1984-87, No.125) ಕ್ರಿ.ಶ.೧೫೩೧ರ ಶಾಸನವು ಅಚ್ಯುತ ದೇವರಾಯನ ಕಾಲಕ್ಕೆ ಸೇರಿದೆ. ಕೊಂಡಮರಸಯ್ಯನು ಭೂಮಿಯನ್ನು ಲಕ್ಷ್ಮೀ ನರಸಿಂಹ ದೇವರ ದೀಪಾರಾಧನೆಗೆ ದಾನ ಮಾಡಿದನು. (A.R.I.E, 1904, No.22) ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ರಾಮಚಂದ್ರದೇವರ ಸೇವೆಗಾಗಿ ಕುಟುಕನಹಳ್ಳಿ ಮತ್ತು ಜಾಯನೂರು ಗ್ರಾಮಗಳನ್ನು ದಾನ ಮಾಡಿದನು.(A.R.I.E, 1889, No.24) ದಾಖಲಿಸುತ್ತದೆ. ಕ್ರಿ.ಶ.೧೫೩೮ರಲ್ಲಿ ಅಚ್ಯುತರಾಯ ಮಲ್ಪಣ್ಣ ಅಯ್ಯನವರು ರಘುನಾಥ ದೇವರ ಸೇವೆಗಾಗಿ ಭೂ-ದಾನ ನೀಡಿದರು. ವರದಾದೇವಿ ಅಮ್ಮನವರು ಪಟ್ಟಣದಲ್ಲಿನ ರಘುನಾಥ ದೇವರ ಸೇವೆಗಾಗಿ ದೂರವಧಿ ಸೋಮಲಾಪುರದ ಸೀಮೆಯಲ್ಲಿನ ತೋಟದ ಬೆಳೆಗಳ ಹಸಿರು ವಾಣಿ ಸುಂಕವನ್ನು ೧೦೫೦ ಗದ್ಯಾಣಗಳ ಲೆಕ್ಕದಲ್ಲಿ ಕಂದಚಾರಕ್ಕೆ ನೀಡಿದರು.(A.R.I., 1922, No.695) ಕ್ರಿ.ಶ.೧೫೪೦ರಲ್ಲಿ ತಿಮ್ಮರಾಜನು ಪೆನುಗೊಂಡೆ ಬಾಗಿಲ ಬಳಿ ರಘುನಾಥ ದೇವರನ್ನು ಪ್ರತಿಷ್ಠಾಪಿಸಿ ದೇವರ ಅಮೃತಪಡಿಗೆ ದಾನ ಮಾಡಿದನು. ಈ ದಾನವನ್ನು ಮುಮ್ಮಡಿ ದೀಕ್ಷಿತನಿಂದ ಕ್ರಮವಾಗಿ ಪಡೆದು ರಘುನಾಥ ದೇವರಿಗೆ ಒಂದು ಖಂಡುಗ ಗದ್ದೆಯನ್ನು ದಾನ ನೀಡಿದನು. ಈ ಶಾಸನದ ಕೊನೆಯಲ್ಲಿ ರಘುನಾಥ ದೇವರ ಸ್ಥಾನಿಕ ಮುಳುವಾಗಿಲ ಕೇಶವ ದೇವರ ಸ್ಥಾನಿಕರ ಉಲ್ಲೇಖವಿದೆ.(A.R.., 1889, No.16).

ಕ್ರಿ.ಶ.೧೫೪೫ರ ಇನ್ನೊಂದು ಶಾಸನ ಸದಾಶಿವರಾಯನ ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ ತಿಮ್ಮರಾಜನು ಮಾಧವ ದೇವರಿಗೆ ೨೧೫ ಅಂಕಣಗಳ ರಂಗಮಂಟಪವನ್ನು ಕಟ್ಟಿಸಿದನು.(V.P.R., 1889, No.19) ಕ್ರಿ.ಶ.೧೫೪೮ರಲ್ಲಿ ರಘುನಾಥ ದೇವರಿಗೆ ದಾನ ನೀಡಿದುದನ್ನು ಹೇಳಿದೆ(V.P.R., 1984-87, No.65) ಕ್ರಿ.ಶ.೧೫೫೭ರಲ್ಲಿ ದುರುಗುಂಟು ರಘುನಾಥ ದೇವರ ನೀರಿನ ಕೊಳವನ್ನು ಧರ್ಮಕ್ಕಾಗಿ ಕಟ್ಟಿಸಿದನೆಂದಿದೆ.(V.P.R., 1984-87, No.128) ಕ್ರಿ.ಶ.೧೫ ಮತ್ತು ೧೬ನೇ ಶತಮಾನದ ಶಾಸನವೊಂದು ಗೋವಿಂದ ಎಂಬ ಹೆಸರನ್ನು(V.P.R, 1984-87, No.134) ಮತ್ತು ಜನಾರ್ಧನ ದೇವರ ಸೇವಕ ಬರುಲಿ ದೇವಕೊಂಡಯ್ಯನನ್ನು ಹೆಸರಿಸುತ್ತದೆ.(V.P.R., 1984-87, No.96) ಇದೇ ಕಾಲದಲ್ಲಿ ರಾಮಚಂದ್ರದೇವರ

ದೇವಾಲಯದಲ್ಲಿ ಆಳ್ವಾರರ ಮೂರ್ತಿಯನ್ನು ಅರವೀಡು ವೆಂಗಳರಾಜು ಸ್ಥಾಪಿಸಿದನು.(V.P.R., 1983-84, No.67) ಕ್ರಿ.ಶ.೧೬ನೇ ಶತಮಾನಕ್ಕೆ ಸೇರಿದ ಇನ್ನೂ ಕೆಲವು ಶಾಸನಗಳಲ್ಲಿ ರಂಗನಾಥ ದೇವರಿಗೆ ವರ್ತಕ ಸಮುದಾಯದವರು ರಂಗಮಂಟಪವನ್ನು ಕಟ್ಟಿಸಿದ್ದನ್ನು(V.P.R., 1983-84, No.68) ಉಲ್ಲೇಖಿಸುತ್ತದೆ. ನರಸಿಂಹ ದೇವರಿಗೆ ಭೂಮಿ ದಾನ ಸದಾಶಿವರಾಯನು ಮಾಡಿದ್ದನ್ನು(V.P.R., 1984-87, No.95) ಆನೆಸಾಲಿನ ಹತ್ತಿರವಿರುವ ನರಸಿಂಹ ದೇವರಿಗೆ ಕೊನಮರಸಯ್ಯ ಮಾಡಿದ ದಾನವನ್ನು(V.P.R., 1983-84, No.29) ಶಾಸನಗಳಲ್ಲಿ ದಾಖಲಿಸಿದೆ. ಅಣ್ಣಲಾದೇವಿಯ ರಾಮಚಂದ್ರ ದೇವರಿಗೆ ಚಿನ್ನದ ಹರಿವಾಣ ಮತ್ತು ಬಟ್ಟಲನ್ನು ಸಮರ್ಪಿಸಿದಳು.(A.R.S.I.E., 1988-89, No.32) ಕಾಲ ಉಲ್ಲೇಖವಿಲ್ಲದ ಇನ್ನೊಂದು ಶಾಸನ ವಾಸುದೇವನ ಹೆಸರನ್ನು ಹೆಸರಿಸಿದೆ(V.P.R., 1984-87, No.80) ರಾಮಚಂದ್ರದೇವರಿಗೆ ವಂದಿಸಿದ ದಾಖಲೆ ಇದೆ. ಒಟ್ಟಾರೆ ಕಾಮಲಾಪುರ ಗ್ರಾಮದಲ್ಲಿನ ಈ ಶಾಸನಗಳು ಇಲ್ಲಿ ವೈಷ್ಣವ ಧರ್ಮ ಇತ್ತೆಂಬುದರ ಬಗ್ಗೆ ಸಾಕಷ್ಟು ದಾಖಲೆ ಒದಗಿಸಿವೆ. ಶಾಸನಗಳ ಜೊತೆಗೆ ಇಲ್ಲಿನ ಹಜಾರಾಮ ದೇವಾಲಯ, ರಘುನಾಥ ದೇವಾಲಯ, ಅಚ್ಯುತದೇವಾಲಯ, ವೇಣುಗೋಪಾಲ ದೇವಾಲಯ, ರಾಯರ ದೇವಾಲಯ, ಆಂಜನೇಯ ದೇವಾಲಯ, ಪಟ್ಟಾಭಿರಾಮ ದೇವಾಲಯ, ಸರಸ್ವತಿ ದೇವಾಲಯಗಳು ವೈಷ್ಣವ ಪಂಥಕ್ಕೆ ಇನ್ನಷ್ಟು ಪೂರಕ ಸಾಕ್ಷಿ ಒದಗಿಸಿವೆ.

ಮೂರ್ತಿಶಿಲ್ಪಗಳು ಇನ್ನೊಂದು ಆಕರ. ವಿಷ್ಣು, ಗರುಡ, ವೇಣುಗೋಪಾಲ, ಆಂಜನೇಯ, ಲಕ್ಷ್ಮೀನಾರಾಯಣ, ಪದ್ಮಾಸೀನ ಉಗ್ರನರಸಿಂಹ, ಅಂಜಲಿ ಮುದ್ರೆಯಲ್ಲಿ ಗರುಡ, ವೆಂಕಟೇಶ, ಕೃಷ್ಣ, ರಾಮ, ಲಕ್ಷ್ಮಣ, ಸೀತೆಯರ ಮೂರ್ತಿಶಿಲ್ಪಗಳು ಇನ್ನೂ ಹಲವಾರು ಮೂರ್ತಿಶಿಲ್ಪಗಳು ವೈಷ್ಣವ ಮೂರ್ತಿ ಪೂಜೆಗೆ ಉತ್ತಮ ಉದಾಹರಣೆ. ಈ ಮೂರ್ತಿಶಿಲ್ಪಗಳು ದೇವಾಲಯಗಳು ಕಾಮಲಾಪುರ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿಯೇ ಇದ್ದುದರಿಂದ, ವೈಷ್ಣವ ಸಂಪ್ರದಾಯಕ್ಕೆ ಮುಖ್ಯ ಆಕರಗಳಾಗಿವೆ.

ಜೈನ ಧರ್ಮ

ಅಮರಕೀರ್ತಿಯ ಶಿಷ್ಯ ಸಿಂಹನಂದಿ ಇವನ ಶಿಷ್ಯ ಧರ್ಮಭೂಷಣ ಹೀಗೆ ವಂಶಾವಳಿಯನ್ನು ಹೆಸರಿಸುತ್ತದೆ. ಅಲ್ಲದೆ ಇರುಗುಪ್ಪ ದಂಡನಾಯಕನು ಕುಂತಳ ದೇಶದ ವಿಜಯನಗರದಲ್ಲಿ ಕುಂತುನಾಥ ಜಿನಾಲಯವನ್ನು ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ.(A.R.I.E., 1889, No.171) ಪ್ರಸ್ತುತ ಈ ಜಿನಾಲಯ ಕಮಲಾಪುರ ಗ್ರಾಮಕ್ಕೆ ಒಳಪಡುತ್ತದೆ. ಕ್ರಿ.ಶ.೧೪೨೬ರ ಶಾಸನವೊಂದು ದೇವರಾಯನ ಕಾಲಕ್ಕೆ ಸೇರಿದ್ದು, ಬುಕ್ಕ ಇವನ ಮಗ ಹರಿಹರ, ಇವನ ಮಗ ದೇವರಾಯ - ಇವನ ಮಗ ವಿಜಯ, ಇವನ ಮಗ ಅಭಿನವ ದೇವರಾಯ. ಈ ರಾಜ ವಿಜಯನಗರದಲ್ಲಿ ಎಲೆ ಅಡಿಕೆ ಬೀದಿ ಕ್ರಮುಕ ಪರ್ಣಾಪಣಾ ಬೀದಿಯಲ್ಲಿ ಪಾರ್ಶ್ವನಾಥ ಚೈತ್ಯಾಲಯವನ್ನು ನಿರ್ಮಿಸಿದುದ್ದನ್ನು ತಿಳಿಸುತ್ತದೆ.(ಕ.ವಿ.ಶಾ.ಸಂ-

೩, ಪು.೩೪೭) ಪ್ರಸ್ತುತ ಈ ಶಾಸನ ಕಮಲಾಪುರ ಗ್ರಾಮಕ್ಕೆ ಸೇರಿದ್ದು ಪಾರ್ಶ್ವನಾಥ ದೇವಾಲಯ ಹಂಪಿ ಕ್ಷೇತ್ರಕ್ಕೆ ಒಳಪಡುತ್ತದೆ ಎಂಬುದು ಇಲ್ಲಿಯ ವಿಶೇಷತೆ. ಕ್ರಿ.ಶ.೧೫೫೭ರ ಇನ್ನೊಂದು ಶಾಸನ ವೀರ ಸದಾಶಿವರಾಯನ ಆಳ್ವಿಕೆಗೆ ಸೇರಿದ್ದು, ಶ್ರೀರಂಗರಾಜ ರಾಮರಾಜ ಅಯ್ಯನು ಚಿಕ್ಕ ದೇವರ ಬಸದಿಯ ಶಾಂತಿನಾಥ ಸ್ವಾಮಿಗೆ ಅಂಗಡಿಯಿಂದ ಬರುವ ಆದಾಯವನ್ನು ದಾನ ಮಾಡಿದನೆಂದಿದೆ.(A.R., 1889, No.18).

ಶಾಸನಗಳ ಆಧಾರದ ಜೊತೆಗೆ ದೇವಾಲಯಗಳು ಇನ್ನೊಂದು ಆಕರ. ಕಾಮಲಾಪುರ ಗ್ರಾಮದಲ್ಲಿ ಗಾಣಗಿತ್ತಿ ಬಸದಿಗಳು ಹಾಗೂ ಇಲ್ಲಿನ ತೀರ್ಥಕರರ ಮೂರ್ತಿಶಿಲ್ಪಗಳು ಹಾಗೂ ಕನ್ನಡ ವಿಶ್ವವಿದ್ಯಾಲಯದ ಹೊರ ಆವರಣದಲ್ಲಿರುವ ಜೈನ ತೀರ್ಥಕರ ಮೂರ್ತಿಶಿಲ್ಪಗಳು ಇಲ್ಲಿ ಜೈನ ಧರ್ಮ ಪ್ರಚಲಿತ ಇತ್ತು ಎಂಬುದರ ಬಗ್ಗೆ ಉತ್ತಮ ನಿದರ್ಶನಗಳಾಗಿವೆ.

ಇಸ್ಲಾಂ ಧರ್ಮ

ಇಸ್ಲಾಂ ಎಂದರೆ "ದೇವರ ಇಚ್ಛೆಗೆ ಶರಣಾಗುವುದು ಎಂದರ್ಥ. ಕುರಾನಿನಲ್ಲಿ ಈ ಧರ್ಮಕ್ಕೆ ಇಸ್ಲಾಂ ಎಂದು ಕರೆಯಲಾಗಿದೆ. ಇಸ್ಲಾಂ ಎಂದರೆ ಶಾಂತಿಯನ್ನು ಉಂಟು ಮಾಡುವ ಧರ್ಮ ಎಂದರ್ಥ.(ಕುರಾನ್ ಪು.೫) ಈ ಧರ್ಮಕ್ಕೆ ಮಹಮ್ಮದೀಯ ಅಥವಾ ಅಹಮ್ಮದೀಯ ಧರ್ಮವೆಂತಲೂ ಕರೆಯುತ್ತಾರೆ. (ಕರ್ನಾಟಕದ ಧರ್ಮಗಳು, ಪು.೩೫೧) ದಕ್ಷಿಣ ಭಾರತದಲ್ಲಿ ಈ ಧರ್ಮ ಕಾಲಿಟ್ಟದ್ದು ಅಲ್ಲಾಉದ್ದೀನನ ಕಾಲದಲ್ಲಿ. ಪ್ರಸ್ತುತ ಅಧ್ಯಯನ ಕರ್ನಾಟಕದ ಹಂಪೆ ಕ್ಷೇತ್ರ ಕಾಮಲಾಪುರ ಗ್ರಾಮಕ್ಕೆ ಒಳಪಡುವುದರಿಂದ ಇಲ್ಲಿನ ಇಸ್ಲಾಂ ಧರ್ಮದ ಪ್ರಸ್ತಾವನೆಯನ್ನು ಮಾಡಲಾಗಿದೆ.

ಪ್ರಸ್ತುತ ಕಾಮಲಾಪುರ ಗ್ರಾಮದಲ್ಲಿ ಇಸ್ಲಾಂ ಧರ್ಮ ಇತ್ತೆಂಬುದಕ್ಕೆ ಶಾಸನಗಳು ಮುಖ್ಯ ಆಧಾರ. ಕ್ರಿ.ಶ.೧೪೨೦ ಶಾಸನ ಬಸವ ಮತ್ತು ರಾಮನಾಯಕ ಎಂಬುವರು ಮಸೀದಿ, ಗುಮ್ಮಟ ಮತ್ತು ಗೋಡೆಯನ್ನು ಕಟ್ಟಿಸಿದ್ದನ್ನು ಉಲ್ಲೇಖಿಸಿದೆ.(V.P.R., 1984-87, No.118) ಕ್ರಿ.ಶ.೧೪೩೯ರ ಶಾಸನ ಅಹಮ್ಮದ ಖಾನನು ರಾಜನಿಗೆ ಧರ್ಮವಾಗಬೇಕೆಂದು ಧರ್ಮಶಾಲೆ ಮತ್ತು ಬಾವಿಯನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ.(A.R., 1904, No.180) ಕ್ರಿ.ಶ.೧೪೭೭ರ ಶಾಸನ ದಾದನರಾಹುತ ಮಗ ಸಕಲಾಭಿರಾಹುತನು ಗುಮ್ಮಟವನ್ನು ಕಟ್ಟಿಸಿದನೆಂದು ತಿಳಿಸುತ್ತದೆ.(V.P.R, 1984-87, ಪು.೧೨೦) ೧೫ ಮತ್ತು ೧೬ನೇ ಶತಮಾನಕ್ಕೆ ಸೇರಿದ ಶಾಸನವೊಂದರಲ್ಲಿ ಸಕಲಜರಾವುತನು ಗೋರಿಯನ್ನು ಕಟ್ಟಿಸಿದನೆಂದಿದೆ.(V.P.R., 1984-87, No.119) ಶಾಸನಗಳ ಜೊತೆಗೆ ಇಲ್ಲಿನ ಮಸೀದಿಗಳು ಇಸ್ಲಾಂ ಧರ್ಮ ಇತ್ತೆಂಬುದನ್ನು ಸಾಭಿತು ಪಡಿಸುತ್ತವೆ.

ಪ್ರೌಢದೇವರಾಯನ ಕಾಲದಲ್ಲಿ ಅಹಮ್ಮದ್ ಖಾನನ ಧರ್ಮಶಾಲೆ ನಿರ್ಮಾಣಗೊಂಡಿತು.(A.R., 1904, No.180) ಮುಲ್ಲಾರಿ ಬೀದಿಯಲ್ಲಿರುವ ನೂರಾರಿ ಮಸೀದಿ, ಹಿರೇಮಸೀದಿ ಇವು ಮುಖ್ಯವಾಗಿವೆ. ಹಬ್ಬದ ವೇಳೆಯಲ್ಲಿ ಪೀರು ದೇವರನ್ನು ಇಡಲು ಸೀಮಿತ ಮಸೀದಿಗಳೂ ಇಲ್ಲಿವೆ. ಉದಾ : ಮುದುಗಲ್ ಮಸೀದಿ, ನೂರಾರಿ ಮಸೀದಿ, ಹೀರೆ ಮಸೀದಿ, ಮಸ್ತಾಪ ಮಸೀದಿ, ಪಂಜನ ಮಸೀದಿ, ಮಸ್ತಾನವಲಿ ದರ್ಗಾ ಮಸೀದಿ, ಕುಂಟೆ ಮಸೀದಿ ಇತ್ಯಾದಿ ಹೀಗೆ ಇಲ್ಲಿನ ಮಸೀದಿಗಳು ಇಸ್ಲಾಂ ದರ್ಮ ಇತ್ತೆಂಬುದನ್ನು ತಿಳಿಸುವಲ್ಲಿ ಬಹಳ ಮಹತ್ವದ ಪಾತ್ರವಹಿಸಿವೆ.

ಅಧ್ಯಾಯ ೩

ಶಾಸನಗಳ ವೈವಿಧ್ಯತೆ

'ಶಾಸನ' ಎಂಬುದು ಮೂಲತಃ ಸಂಸ್ಕೃತ ಪದ. ರಾಜಾಜ್ಞೆ, ಆದೇಶ ಎಂದರ್ಥ. ಇಂದಿಗೂ ಶಾಸನ ಎಂಬ ಪದಕ್ಕೆ 'ಕಾನೂನು' ಎಂಬ ಅರ್ಥವೂ ಪ್ರಚಲಿತವಿದೆ(ಸಿ.ಪಿ.ಕೆ ೧೯೯೩, ಪು.೩೬) . ಆಂಗ್ಲಭಾಷೆಯಲ್ಲಿ 'inscribe' ಪದಕ್ಕೆ "ಕೆತ್ತು" ಎಂಬ ಅರ್ಥ. ಶಾಸನ ಎಂದರೆ ಯಾವುದಾದರೂ ಪದಾರ್ಥದ ಮೇಲೆ ಕೊರೆದ ಯಾವುದೇ ಬರಹ ಎಂದರ್ಥ. ಈ ಬರಹ ಗಟ್ಟಿಯಾದ ಅಥವಾ ಶಾಶ್ವತವಾದ ವಸ್ತುವಿನ ಮೇಲೆ ಕೊರೆದ ದಾಖಲೆ. ಅವು ಬರೆದವಲ್ಲ(Encyclopidia Britanica Vol-೧೨ ಪು.೩೯೩) ಮೂಲತಃ ರಾಜಾಜ್ಞೆಗಳು ಅಥವಾ ಶಾಸನಗಳು ತಾಮ್ರ ಪತ್ರದ ಮೇಲಿದ್ದರೂ ಅವುಗಳನ್ನು ಶಾಶ್ವತಗೊಳಿಸಲು ತಾಮ್ರಪಟಗಳ ಮೇಲೆ ಶಿಲೆಯ ಮೇಲೆ ಆಜ್ಞೆಗಳ ರೂಪದಲ್ಲಿ ಕೊರೆಯಲಾಯಿತು.(ಸಿ.ಪಿ.ಕೆ ೧೯೯೩, ಪು.೪೦) ಶುಕ್ರ ನೀತಿ ಸಾರದಲ್ಲಿ, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ, ಇನ್ನೂ ಅನೇಕ ಗ್ರಂಥಗಳಲ್ಲಿ ಶಾಸನ ಎಂಬ ಪದ 'ರಾಜಾಜ್ಞೆ' ಎಂಬ ಅರ್ಥದಲ್ಲೆ ಉಪಯೋಗಿಸಲ್ಪಟ್ಟಿವೆ. ಆಂಗ್ಲ ಭಾಷೆಯ Epigraphy ಎಂಬ ಶಬ್ದಕ್ಕೆ 'ರಾಜಾಜ್ಞೆ' ಎಂಬ ಶಬ್ಧ ಸೀಮಿತವಾಗಿರದೆ ಶಾಸನ ಶಬ್ದಕ್ಕಿರುವ ಈ 'ರಾಜಾಜ್ಞೆ' ಮೂಲ ಅರ್ಥದಲ್ಲಿ ಕ್ರಮೇಣ ವಿಸ್ತೃತವಾಗಿರಬೇಕು. ಇವು ರಾಜ ಪಶಸ್ತಿ ಶಾಸನಗಳು. ವೀರಗಲ್ಲುಗಳು, ಮಾಸ್ತಿಗಲ್ಲು ಅಥವಾ ಮಹಸತಿಗಲ್ಲುಗಳು, ನಿಷೇಧಿಗಲ್ಲುಗಳು ಇವೆಲ್ಲವೂ ಮೂಲಾರ್ಥದಲ್ಲಿ ಶಾಸನ ಎಂದೇ ಕರೆಯಲಾಗಿದೆ.

ಪ್ರಸ್ತುತ ಕಾಮಲಾಪುರ ಗ್ರಾಮದಲ್ಲಿ ದೊರೆತ 'ಶಾಸನಗಳ ವೈವಿಧ್ಯತೆ' ಕುರಿತಾದ ಅಧ್ಯಯನವಾದುದರಿಂದ ಈ ಹಿನ್ನೆಲೆಯಲ್ಲಿ ಲಭ್ಯವಾದ ಶಾಸನಗಳ ವಿಧಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ. ಕಾಮಲಾಪುರ ಗ್ರಾಮದಲ್ಲಿ ಲಭ್ಯವಾದ ಶಾಸನಗಳನ್ನು ಪರಿಶೀಲಸಿದಾಗ ಒಟ್ಟಾರಿ ೧೩೯ ಶಾಸನಗಳು ಈವರೆಗೆ ದೊರೆತಿರುವುದು. ೧೩೯ ಶಾಸನಗಳ್ಳಲಿ ದಾನ ಶಾಸನಗಳು ೫೪, ವೀರಗಲ್ಲು ಶಾಸನಗಳು ೪, ನಿಷೀದಿಗಲ್ಲು ಶಾಸನಗಳು ೨ ಮತ್ತು ಮಹಾಸತಿಗಲ್ಲುಗಳು ಉಳಿದ ಶಾಸನಗಳು ೭೯.

ದಾನ ಶಾಸನಗಳು

ದಾನ ಶಾಸನಗಳು ಹೆಚ್ಚಿನ ಮಟ್ಟಿಗೆ ಧಾರ್ಮಿಕ ದತ್ತಿಯನ್ನು ಉದ್ದೇಶವುಳ್ಳ ಶಾಸನಗಳಾಗಿವೆ. ಈ ಶಾಸನಗಳು ಧಾರ್ಮಿಕ ದತ್ತಿಯನ್ನು ಉದ್ದೇಶಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳಿಗೆ ನೀಡಿದ ಲೌಖಿಕ ದಾನಗಳನ್ನು ದಾಖಲು ಮಾಡಿದ ಉದಾಹರಣೆಗಳಿವೆ. ಶಾಸನಗಳ ಅಧ್ಯಯನ ಪುಟಗಳನ್ನು ತಿರುವು ನೋಡಿದರೆ ಹೆಚ್ಚಿನ ಮಟ್ಟಿಗೆ ದಾನ ಶಾಸನಗಳ ಸಂಖ್ಯೆಗಳೇ ಹೆಚ್ಚಾಗಿವೆ.(ಸಿ.ಪಿ.ಕೆ ೧೯೯೩, ಪುಟ.೫೬)

ದಾನ ಧರ್ಮಗಳು ಈ ಶಾಸನಗಳಿಗೆ ಪ್ರೇರಕಶಕ್ತಿ. ಇದರಿಂದಲೇ ದಾನಶಾಸನಗಳ ಸಂಖ್ಯೆಯು ಹೆಚ್ಚಾಯಿತು.(ನರಸಿಂಹಮೂರ್ತಿ.ಎ.ವಿ, ೧೯೭೩ ಪು.೧೮) ಧರ್ಮಶಾಸ್ತ್ರದಲ್ಲಿ ಹದಿನಾರು ರೀತಿಯ ಮಹಾದಾನಗಳನ್ನು ಉಲ್ಲೆಖಿಸಲಾಗಿದೆ. ಪುರಾಣಗಳು ಕೂಡ ದಾನ ಶಾಸನಗಳ ಕುರಿತು ಉಲ್ಲೇಖಿಸುತ್ತವೆ. (ಕಾಣೆ.ಪಿ.ವಿ., ೧೯೩೦, ಪು.೮೬) ಒಟ್ಟಾರೆ ದೇವಾಲಯಗಳಿಗೆ, ಮಠಗಳಿಗೆ, ವಿದ್ವಾಂಸರಿಗೆ ಗುರುಗಳಿಗೆ ಹೊಲವನ್ನು, ಹಣವನ್ನು, ಆದಾಯದ ಭಾಗವನ್ನು, ಬಿಟ್ಟು ಕೊಟ್ಟ ವಿಷಯ ನಿರೂಪಿಸುವುದೇ ಈ ದಾನಶಾಸನಗಳ ಉದ್ದೇಶ.(ಚಿದಾನಂದಮೂರ್ತಿ.ಎ.ವಿ, ೧೯೭೯, ಪು.೭೫)

ಇಂತಹ ದಾನ ಶಾಸನಗಳು ಕಾಮಲಾಪುರ ಗ್ರಾಮದಲ್ಲಿಯೂ ದೊರೆತಿವೆ. ಈವರೆಗೆ ಕಾಮಲಾಪುರ ಗ್ರಾಮದಲ್ಲಿ ದೊರೆತ ಹಲವಾರು ದಾನಶಾಸನಗಳಲ್ಲಿ ಕ್ರಿ.ಶ.೧೦೭೬ರ ಶಾಸನವೇ ಮೊದಲನೆಯದು ಕ್ರಿ.ಶ.೧೦೭೬ರ ಶಾಸನವು ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯ ಪುರಾಣ ವ್ಯಾಖ್ಯಾನ ಮಾಡುವ ಉಪಾಧ್ಯಾಯರಿಗೆ ೮೦ ಲೊಕ್ಕಿ ಗದ್ಯಾಣಗಳನ್ನು ದಾನ ಕೊಟ್ಟನೆಂಬ ವಿಷಯ ಉಲ್ಲೇಖಿಸಿ ಆಕಾಲದಲ್ಲಿ ಲೊಕ್ಕಿ ಗದ್ಯಾಣ ನಾಣ್ಯ ಪ್ರಚಲಿತದಲ್ಲಿತ್ತು ಎಂಬುದರ ಬಗ್ಗೆ ಸ್ಪಷ್ಟಪಡಿಸುತ್ತದೆ. (ARIE, 1975-76, No.95)

ಬಸವೆದಣ್ಣಾಯಕನು ವಿರುಪಾಕ್ಷದೇವರ ಸೇವೆಗಾಗಿ ರಾಮಾಪುರದ ಕೆರೆಯ ಕೆಳಗೆ ಭೂ-ದಾನವನ್ನು ಮಾಡಿದನೆಂಬ ವಿಷಯ ಕ್ರಿ.ಶ.೧೩೩೬ರ ಶಾಸನದಿಂದ ತಿಳಿದುಬರುತ್ತದೆ. ಈ ವೇಳೆಗೆ ವೀರ ಬುಕ್ಕಣ್ಣ ಒಡೆಯನು ಹಸ್ತಿನಾವತಿಯನ್ನು ಆಳುತ್ತಿದ್ದನು.(V.P.R 1984-87, No.89). ಕ್ರಿ.ಶ.೧೩೮೦ರ ಶಾಸನ ವೊಂದು ಹರಿಹರ ರಾಯನು ಆಳುತ್ತಿದ್ದಾಗ ಮಲಿಗೆಯ ನಾಯ್ಕನ ಮಗ ಬಢ್ಢೆಯ ನಾಯಕನು ಬೇಟೆಗಾರರ ಹೆಬ್ಬಾಗಿಲಿನ ಪೂರ್ವದಿಕ್ಕಿನಲ್ಲಿ ಮೈಲಾರ ದೇವರನ್ನು ಪ್ರತಿಷ್ಠಾಪಿಸಿ ಅಲ್ಲಿ ಕೊಳವನ್ನು ಮಾಡಿಸಿದನು.(V.P.R 1984-87, No.105). ಕ್ರಿ.ಶ.೧೪ನೇ ಶತಮಾನದ ಇನ್ನೊಂದು ಶಾಸನ ಹರಿಹರನು ವಿರುಪಾಕ್ಷ ದೇವರಿಗೆ ಗದ್ದೆಯನ್ನು ದಾನವಾಗಿ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಅಲ್ಲದೆ ದೇವಸೆಟಿಯ ಮಗ ತರಸಗಿಂ ವೀರಣನ ಧರ್ಮವನ್ನು ತಿಳಿಸುತ್ತದೆ. ಇದೇ ಸ್ಥಳದಲ್ಲಿ ಇನ್ನೊಂದು ಶಾಸನ ವಿನಾಯಕ ದೇವರಿಗೆ ಭೂ-ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ.(V.P.R 1984-87, No.77,78,124). ಕ್ರಿ.ಶ.೧೪೧೧ರಲ್ಲಿ ದೇವರಾಯನು ಬ್ಯುನಕನ ಬಾವಿಯನ್ನು ಕಟ್ಟಿಸಿದನು.(V.P.R 1984-87, No.115). ಕ್ರಿ.ಶ.೧೪೨೦ರ ಶಾಸನ ಬಸವ ಮತ್ತು ರಾಮನಾಯಕರು ವೀಯರಾವುತ ಎಂಬುವವನಿಗೆ ಪುಣ್ಯವಾಗಲಿಯೆಂದು ಮಸೀದಿ, ಗುಮ್ಮಟ ಮತ್ತು ಗೋಡೆಯನ್ನು ನಿರ್ಮಿಸಿದ ಉಲ್ಲೇಖವಿದೆ.(V.P.R 1984-87, No.118). ಕ್ರಿ.ಶ.೧೪೩೯ರಲ್ಲಿ ಅಹಮ್ಮದಖಾನನು ರಾಜನಿಗೆ ಧರ್ಮವಾಗಬೇಕೆಂದು ಧರ್ಮಶಾಲೆ ಮತ್ತು ಬಾವಿಯನ್ನು ನಿರ್ಮಿಸಿದನು.(A.R, 1904, No.180)

ದಾವಿಯನ ಮಗ ಬರಿಯಮನು ಕ್ರಿ.ಶ.೧೪೪೧ರಲ್ಲಿ ಆರು ವರಹಗಳಿಗೆ ಮನೆಯನ್ನು ಕ್ರಮಮಾಡಿದ ಉಲ್ಲೇಖವಿದೆ. ಮನೆಯ ಮೇರೆಯನ್ನು ಉಲ್ಲೇಖಿಸುವುದರೊಂದಿಗೆ ಆಗಿನ ವರಹ ಪದ್ಧತಿ ನಾಣ್ಯವನ್ನು ಸೂಚಿಸುತ್ತದೆ.(V.P.R, 1983-84, No.62). ಕ್ರಿ.ಶ.೧೫-೧೬ನೇ ಶತಮಾನದಲ್ಲಿ ಕಬಿರುರಾವುತನ ಮಗ ಪಿಲಿಕುಂಚಲಿಕನು ಬುಯಿರಾವುತನಿಗೆ ಬಾವಿಯನ್ನು ದಾನವಾಗಿ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.(V.P.R, 1984-87, No.99). ರುಧಿರೋದ್ಗಾರಿಯ ಶಾಸನ ತಿರುವಿದಿ ಚಿಟಿನಾಗಿ ಸೇನೆಯ ಮಗ ಚಿನ್ನಪ್ಪನಾಯುಂಡು ರಂಗನಾಥ ಬಾವಿಯನ್ನು ನಿರ್ಮಿಸಿದ ಉಲ್ಲೇಖವಿದೆ.(V.P.R, 1984-87, No.110) ಕ್ರಿ.ಶ.೧೫೧೮ರ ಶಾಸನ ಕೃಷ್ಣದೇವರಾಯನ ಪಟ್ಟಾಮಹಾದೇವಿ ತಿರುಮಲಾದೇವಿ ಕುಮ್ಮಾರ ಗುಂಟೆ ಭೂಮಿಯನ್ನು ಅಂಜನಗಿರಿಯ ತಿರುವೆಂಗಳನಾಥನಿಗೆ ಭೂ-ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಭುಮಿಯ ಎಲ್ಲೆ ವಿವರಿಸಿ ದಾನವನ್ನು ವಿಠಲೇಶ್ವರ ದೇವರ ಸನ್ನಿಧಿಯಲ್ಲಿ ಅರ್ಪಿಸಲಾಯಿತು.(V.P.R, 1922, No.629)

ಚಿಕ್ಕ ತಿಮ್ಮಯ್ಯದೇವ ಮಗ ತಿಮ್ಮರಾಜನು ರಾಮಚಂದ್ರದೇವರ ಬಂಢಾರಕ್ಕೆ ೧೫೨೧ರಲ್ಲಿ ದಾನವನ್ನು ನೀಡಿದನು. ಅಲ್ಲಿ ಆಗಮಿಕ ನಾರಾಯಣಭಟ್ಟ, ಸ್ಥಾನಿಕ, ಮಾಧವಯ್ಯ, ಸೇನಭೋವ, ನರಸಯ್ಯ ಇವರು ಕೃಷ್ಣರಾಯ ಮಹಾರಾಯನು ಸಂಡೂರು ಸೀಮೆಯ ತಾಳೂರಿನ ಪಶ್ಚಿಮಕ್ಕಿರುವ ಬೆಂಚೆಯೆಂಬ ಕುಂಟೆಯ ಕೆರೆಗೆ ಒಂದು ಖಂಡುಗಗದ್ದೆಯನ್ನು ಮಾನ್ಯವಾಗಿ ಬಂದಿರುವ ಪಾಲನ್ನು ದೇವರ ಉತ್ಸವ ಕಾರ್ಯಗಳಿಗಾಗಿ ದಾನ ಮಾಡಿದರು.(ARSII, 1889, No.21) ಕ್ರಿ.ಶ.೧೫೨೨ರ ಶಾಸನ ತಿರುವೆಂಗಳನಾಥ ದೇವರ ಧೂಪ-ದೀಪ ನೈವೇದ್ಯ ಕಾರ್ಯಗಳಿಗಾಗಿ ವಿಠಲದೇವರ ಸನ್ನಿಧಿಯಲ್ಲಿ ಸ್ಥಳ ನೀಡಿದ ದಾನವನ್ನು ದಾಖಲಿಸಿದೆ.(A.R, 1889, NO.20). ಕ್ರಿ.ಶ.೧೫೨೫ರ ಶಾಸನವೊಂದು ಆದಿ ನಾರಾಯಣ ದೇವರಿಗೆ ಅಂಗಡಿಯೊಂದನ್ನು ದಾನ ಮಾಡಿದ್ದನ್ನು ಉಲ್ಲೇಖಿಸಿದೆ.(V.P.R, 1984-87, No.91). ಕ್ರಿ.ಶ.೧೫೨೯ರಲ್ಲಿ ಕಂನಿಸೆಟ್ಟಿ, ಪಿಚಾರಿಸೆಟಿ ಮತ್ತು ಅವನ ದಾಯದಿಗಳು ಸೇರಿ ತೋಟ ಮತ್ತು ಗದ್ದೆಯಲ್ಲಿನ ಉತ್ಪನ್ನದಲ್ಲಿ ರಾಮಚಂದ್ರದೇವರಿಗೆ ನೀಡಿ ಉಳಿದದ್ದನ್ನು ವಿರುಪಾಕ್ಷದೇವರ ಅಮೃತ ಪಡಿಗೆ ನೀಡಿದ್ದಾರೆ.(V.P.R, 1984-87, No.125) ಕ್ರಿ.ಶ.೧೫೩೧ರಲ್ಲಿ ಕಳಸಾಪುರ ಮಾಗಣೆಯಲ್ಲಿನ ಒಳಕೋಟೆ ಗ್ರಾಮ ಸಂಡೂರು ಸೀಮೆಯಲ್ಲಿನ ತಾಳೂರು ಗ್ರಾಮದಾರಿಯ ಸೀಮೆಯಲ್ಲಿನ ಇಟ್ಟಿಗೆ ಗ್ರಾಮ ಓಬಳದೇವ ಕಣಿವೆ ಹತ್ತಿರದ ಮುದ್ದಾಪುರ ಕೋಫಣ ಸೀಮೆಯಲ್ಲಿನ ಕುಟುಕನ ಹಳ್ಳಿ, ನಾರಿಯ ಸೀಮೆಯ ಜಾಯನೂರು ಗ್ರಾಮ ಗಳನ್ನು ದಾನ ಮಾಡಿದನು. ಈ ದಾನ ರಾಮಚಂದ್ರದೇವರ ಸೇವೆಗಾಗಿ ಕೃಷ್ಣರಾಯನು ತಂದೆ ನರಸಣ ನಾಯಕನ ಒಡೆಯ ತಾಯಿ ನಾಗಾಜಿ ಅಮ್ಮನವರಿಗೆ ಪುಣ್ಯವಾಗಲೆಂದು ದಾನ ಮಾಡಿದನೆಂದಿದೆ.(A.R., 1889, No.24)

ಕ್ರಿ.ಶ.೧೫೩೧ರಲ್ಲಿ ಕೃಷ್ಣರಾಯನು ತಂದೆ-ತಾಯಿರಿಗೆ ಪುಣ್ಯವಾಗಲೆಂದು ಕನ್ನಕಿಯ ಕಡೆ, ಬಂಕಾಪುರ, ನಾಗಲಾಪುರ ಮತ್ತು ಗೌರಾಜಿಕೆರೆ ತೋಟಗಳನ್ನು ಭೂಮಿಗಳನ್ನು ಪ್ರಸನ್ನ ವಿರೂಪಾಕ್ಷ ದೇವರ ಸೇವೆಗಾಗಿ

ದಾನ ಮಾಡಿದನು.(ARIE, 1908, No.500) ಕ್ರಿ.ಶ.೧೫೩೧ರ ಶಾಸನ ಅಚ್ಯುತದೇವರಾಯನ ಕಾಲಕ್ಕೆ ಸೇರಿದೆ. ಸಾಳುವ ದಂಡನಾಯಕನು ತನ್ನ ಆಡಳಿತದಲ್ಲಿದ್ದ ಕಾಮಲಾಪುರ ಸ್ಥಳದ ಕೊಂಡಮರಸಯ್ಯ ಪಾಳೆಯದ ಭೂಮಿಯನ್ನು ಲಕ್ಷ್ಮಿ ನರಸಿಂಹ ದೇವರ ದೀಪಾರಾಧನೆಗೆ ದಾನ ನೀಡಿದನೆಂದು ಪ್ರಸ್ತಾಪಿಸುತ್ತದೆ.(A.R, 1904, No.22). ಕ್ರಿ.ಶ.೧೫೩೬ರ ಅಚ್ಯುತ ದೇವರಾಯನ ಕಾಲಕ್ಕೆ ಸೇರಿದ ಶಾಸನ ಕೃಷ್ಣರಾಯ ಚಕ್ರವರ್ತಿಗೆ ಕೊಟ್ಟ ದಾನವನ್ನು ದಾಖಲಿಸುತ್ತದೆ. (V.P.R, 1984-87No.127) ಕ್ರಿ.ಶ.೧೫೩೯ರ ಶಾಸನ ಇದೇ ಅರಸನ ಕಾಲದ ಶಾಸನ ಬ್ರಾಹ್ಮಣರಿಗೆ ಆನಂದನಿಧಿಯ ದಾನವನ್ನು ಉಲ್ಲೇಖಿಸುತ್ತದೆ.(A.R, 1904, No.20) ಅಚ್ಯುತರಾಯನ ಮಗ ವೆಂಕಟಾದ್ರಿ ಚಿಕರಾಯನಿಗೆ ಪುಣ್ಯ ವಾಗಲೆಂದು ನೆಲತಿಮ್ಮನ ಜೋಯಿಕೆರೆಯನ್ನು ನಿರ್ಮಿಸಿದ ಕ್ರಿ.ಶ.೧೫೩೯ರ ಶಾಸನ ತಿಳಿಸುತ್ತದೆ.(V.P.R ೧೯೮-೮೭ No.೧೪೫) ಇದೇ ಕಾಲದ ಇನ್ನೊಂದು ಶಾಸನ ಬಾವಿ ಮತ್ತು ತೋಟವನ್ನು ನಂಜೇದೇವರ ನಿರಾಸಿ ಮಠಕ್ಕೆ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ.(V.P.R., 1984-87, No.98)

ಕ್ರಿ.ಶ.೧೫೩೯ರಲ್ಲಿ ಅಚ್ಯುತದೇವರಾಯರ ಕಾಲದಲ್ಲಿ ಅಚ್ಯುತರಾಯ ಮಲ್ಲಪಣ್ಣ, ಅಯ್ಯನವರು ರಘುನಾಥ ದೇವರ ಸೇವೆಗಾಗಿ ಭೂ-ದಾನ ನೀಡಿದ್ದನು ದಾಖಲಿಸಿದೆ.(A.R., 1922, No.695) ಕ್ರಿ.ಶ.೧೫೪೦ರ ಶಾಸನ ರಘುನಾಥ ದೇವರ ಪ್ರತಿಷ್ಠೆ ಮಾಡಿಸಿ ಅಮೃತ ಪಡಿಗಾಗಿಕ ದಾನ ನೀಡಿದ ವಿಷಯ ದಾಖಲಿಸಿದೆ. ಮುಮ್ಮಡಿ ದೀಕ್ಷಿತರಿಗೆ ಕ್ರಯವಾಗಿ ಬಂದ ನೆಲಳ ಹುಣಸೆ ಎಂಬ ಸರ್ವಮಾನ್ಯ ಅಗ್ರಹಾರದ ಎರಡು ವೃತ್ತಿಗಳನ್ನು ತಿಮ್ಮರಾಜ ಮುಮ್ಮಡಿ ದೀಕ್ಷಿತನಿಂದ ಕ್ರಮವಾಗಿ ಪಡೆದು ರಘುನಾಥ ದೇವರಿಗೆ ದಾನನೀಡಿದನು. ದಾನ ಮಾಡಿದ ಗದ್ದೆಯ ಎಲ್ಲೆ, ಉತ್ಪತ್ತಿಯ ಭಾಗ ಮತ್ತು ಕೆಲವು ತೆಂಗಿನ ಮರಗಳನ್ನು ದಾನ ಮಾಡಿದ್ದನ್ನು ಈ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ.(A.R., 1889, No.16)

ಕ್ರಿ.ಶ.೧೫೪೫ರ ಶಾಸನವು ಸದಾಶಿವರಾಯರ ಕಾಲಕ್ಕೆ ಸೇರಿದ್ದು, ವಿದ್ಯಾನಗರದ ರತ್ನ ಸಿಂಹಾಸನದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ತಿಮ್ಮರಾಜನು ದೊಡ್ಡ ಅಂಗಡಿ ಬೀದಿಯ ಪಶ್ಚಿಮಕ್ಕೆ ಇರುವ ಮಾಧವ ದೇವರಿಗೆ ೨೫ ಅಂಕಣಗಳ ರಂಗಮಂಟಪವನ್ನು ನಿರ್ಮಿಸಿದನು.(V.P.R, 1889, No.19) ಸದಾಶಿವರಾಯನ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಗವಿಕೇರಿ ರಘುನಾಥದೇವರಿಗೆ ದಾನ-ಮಾಡಿದ ವಿಷಯವನ್ನು ಉಲ್ಲೇಖಿಸುತ್ತದೆ.(V.P.R, 1983-84, No.65) ಕ್ರಿ.ಶ.೧೫೫೨ರಲ್ಲಿ ದುರುಗುಂಟು ರಘುನಾಥ ದೇವರ ನೀರಿನ ಕೊಳವನ್ನು ಓಬಯನು ಧರ್ಮಕ್ಕಾಗಿ ಕಟ್ಟಿಸಿದನು.(V.P.R., 1984-87, No.128). ಕ್ರಿ.ಶ.೧೫೫೪ರ ಇನ್ನೊಂದು ಶಾಸನದಲ್ಲಿ, ತಿರುಮಲ ರಾಜನ ಮಗ ರಘುನಾಥರಾಜನು ಕಥಾಲ ಪಾಲ್ಯಂನಲ್ಲಿ ಅಲಮೇಲ ಮಂಗಮ್ಮನ ದೇವಾಲಯವನ್ನು ನಿರ್ಮಿಸಿ ಧೂಪ-ದೀಪಾರಾಧನೆಗಾಗಿ ದಾನ ನೀಡಿದನು.(V.P.R, 1983-84, No.64) ಸದಾಶಿವರಾಯನ ಕಾಲದಲ್ಲಿ ಶ್ರೀರಂಗರಾಮರಾಜ ಅಯ್ಯನು ಶಾಂತಿನಾಥ ಬಸದಿಗೆ ಅಂಗಡಿ

ಯಿಂದ ಬರುವ ಆದಾಯವನ್ನು ದಾನ ಮಾಡಿದನೆಂದೂ ಚಿರವೀರ ನರಸಣ್ಣನು ೭ ಅಂಕಣದ ಮಾಳಿಗೆಯನ್ನು ನಿರ್ಮಿಸಿ ದಾನವನ್ನು ನೀಡಿದ್ದನ್ನು ಕ್ರಿ.ಶ.೧೫೫೭ರ ಶಾಸನವೊಂದು ದಾಖಲಿಸುತ್ತದೆ.(A.R., 1889, No.18). ಕಾಲ ನಮೂದಿತವಿಲ್ಲದ ಎರಡು ಶಾಸನಗಳಲ್ಲಿ ರಾಮರಾಜ ತಿರುಮಲರಾಜನು ತನ್ನ ತಂದೆಗೆ ಪುಣ್ಯವಾಗಲೆಂದು ದಾನ ಮಾಡಿದ್ದನು.(V.P.R., 1983-84, No.66). ವಿರುಪಾಕ್ಷ ದೇವರಿಗೆ ಸೂರದೇವಯ್ಯ ಎಂಬುವನು ದಾನಕೊಟ್ಟಿದ್ದನ್ನು ದಾಖಲಿಸಲ್ಪಟ್ಟಿವೆ.(V.P.R., 1984-87No.126) ಚಿಕ್ಕರಾಮಯ್ಯನು ದೇವರಿಗೆ ತೋಟವನ್ನು ದಾನ ಮಾಡಿದ್ದನ್ನು ಸಿನರಾಮ ಒಡೆಯನಿಗೆ ಕೊಡಲಾಯಿತು. ಲಿಪಿದೃಷ್ಟಿಯಿಂದ ಇದರ ಕಾಲ ೧೫-೧೬ನೇ ಶತಮಾನ(V.P.R., 1983-84,No.42). ಮಲ್ಲಿಕಾರ್ಜುನ ದೇವರಿಗೆ ದೀಪವನ್ನು ಉರಿಸುವುದಕ್ಕಾಗಿ ಅಂದು ಅಂಗಡಿಮನೆಯೊಂದನ್ನು ದಾನಮಾಡಿದುದಕ್ಕಾಗಿ ಕ್ರಿ.ಶ.೧೬ನೇ ಶತಮಾನದ ಶಾಸನದಲ್ಲಿ ಉಲ್ಲೇಖವಿದೆ.(V.P.R., 1983-84, No.43). ಅಣ್ಣಲದೇವಿಯ ರಾಮಚಂದ್ರ ದೇವರಿಗೆ ಚಿನ್ನದ ಹರಿವಾಣ ಮತ್ತು ಬಟ್ಟಲನ್ನು ಸಮರ್ಪಿಸಿದಳು. (A.R.S.I.E., 1889, No.22)

ಆನೆಸಾಲಿನ ಇನ್ನೊಂದು ಶಾಸನ ನರಸಿಂಹ ದೇವರಿಗೆ ಕೋನಮರಸಯ್ಯನು ಮಾಡಿದ ದಾನವನ್ನು ದಾಖಲಿಸುತ್ತದೆ. ರಾಮಯ್ಯನ ನಾಯಕನ ಮಗ ನಾಗಯ್ಯನು ವೀರನೊಡೆಯನಿಗೆ ದಾನ ಮಾಡದ್ದನ್ನು ದಾಖಲಿಸುತ್ತದೆ. ಇದರ ಕಾಲ ಕ್ರಿ.ಶ.೧೫ ಮತ್ತು ೧೬ನೇ ಶತಮಾನ.(V.P.R., 1984-87, No.122). ಕ್ರಿ.ಶ.೧೫ ಮತ್ತು ೧೬ನೇ ಶತಮಾನದ ಇನ್ನೊಂದು ಶಾಸನ ಗಂಗಾಧರ ದೇವರ ಮಾನ್ಯದ ಬಗ್ಗೆ ಉಲ್ಲೇಖಿಸುತ್ತದೆ.(V.P.R., 1984-87, No.132). ವೆಂಕಟರಾಯನ ತೋಟವನ್ನು ಮತ್ತು ಬುರೆನಾಯಗಿಯ ಧರ್ಮವನ್ನು ಕ್ರಿ.ಶ.೧೬ನೇ ಶತಮಾನದ ಇನ್ನೊಂದು ಶಾಸನ ದಾಖಲಿಸುತ್ತದೆ.(V.P.R., 1984-87, No.103) ವಿರೂಪಣ್ಣನು ಭೂಮಿದಾನ ಮಾಡಿದುದನ್ನು ಕ್ರಿ.ಶ.೧೬ನೇ ಶತಮಾನದ ಇನ್ನೊಂದು ಶಾಸನ ದಾಖಲಿಸುತ್ತದೆ. (V.P.R., 1984-87, No.140). ಓಬುಲಮ ಎಂಬುವಳು ಪೆರುಮಾಳ ದೇವರಿಗೆ ತಿರುವಪ ಸೇವೆ ಮಾಡಿದಳು. ಲಿಪಿದೃಷ್ಟಿಯಿಂದ ಈ ಶಾಸನದ ಕಾಲ ೧೬ನೇ ಶತಮಾನ(V.P.R., 1984-87, No.94). ಸದಾಶಿವರಾಯನು ನರಸಿಂಹ ದೇವರಿಗೆ ಭೂಮಿದಾನ ಮಾಡಿದ ಶಾಸನದ ಕಾಲ ಕ್ರಿ.ಶ.೧೬ನೇ ಶತಮಾನ. (V.P.R., 1984-87, No.85). ಸಕಲಜರಾವುತನು ಗುಮ್ಮಟವನ್ನು ಕಟ್ಟಿಸಿದನು. ಇದರ ಉದ್ದೇಶ ಚಿಕರಾಯನಿಗೆ ಪುಣ್ಯವಾಗಬೇಕೆಂದು ಈ ಶಾಸನ ಕಾಲದೃಷ್ಟಿಯಿಂದ ಕ್ರಿ.ಶ.೧೬ನೇ ಶತಮಾನ. (V.P.R., 1984-87, No.119). ಕ್ರಿ.ಶ.೧೬ನೇ ಶತಮಾನದ ತಿಮ್ಮರಾಜನು ತಂದೆ-ತಾಯಿಗಳಿಗೆ ಪುಣ್ಯವಾಗಲೆಂದು ಮಂಪಟವನ್ನು ಕಟ್ಟಿಸಿದನು. (ARSIE, 1889, No.22, SII.IV, No.251). ರಘುನಾಥ ದೇವರಿಗೆಂದು ಮಂಟಪವನ್ನು ವರ್ತಕ ಸಮುದಾಯದವರು ನಿರ್ಮಿಸಿದರು. ಲಿಪಿ

ದೃಷ್ಟಿಯಿಂದ ಈ ಶಾಸನದ ಕಾಲ ೧೬ನೇ ಶತಮಾನ.(V.P.R., 1983-84, NO.68). ಕ್ರಿ.ಶ.೧೬ನೇ ಶತಮಾನದ ಇನ್ನೊಂದು ಶಾಸನದಲ್ಲಿ ನರಸಿಂಹ ದೇವರಿಗೆ ಭೂಮಿದಾನ ಮಾಡಲು ಸದಾಶಿವರಾಯನಿಗೆ ಪುಣ್ಯವಾಗಲೆಂದಿದೆ.(V.P.R, 1983-84, No.92).

ಈ ಮೇಲೆ ಹೇಳಿದ ದಾನ ಶಾಸನಗಳು ಕಾಮಲಾಪುರ ಗ್ರಾಮದಲ್ಲಿ ಲಭ್ಯವಾದ ಕಿರುನೋಟ ಚಿತ್ರಣ ಮಾತ್ರ. ಕಾಮಲಾಪುರ ಗ್ರಾಮವಲ್ಲದೇ ಕಾಮಲಾಪುರ ಗ್ರಾಮದ ಸುತ್ತಮುತ್ತಲಿನಲ್ಲೂ ಇಂತಹ ದಾನ ಶಾಸನಗಳು ಸಾಕಷ್ಟಿವೆ. ಈ ಶಾಸನಗಳನ್ನು ಹಾಕಿಸುವ ಉದ್ದೇಶ ಮೊದಲನೆಯದಾಗಿ ದಾನವನ್ನು ಕೊಡುವ ವ್ಯಕ್ತಿಯ ಉದಾರದೃಷ್ಟಿ. ದಾನವನ್ನು ಸ್ವೀಕರಿಸುವವನ ಮಕ್ಕಳು, ಮೊಮ್ಮಕ್ಕಳು ಅನುಭವಿಸಿಕೊಂಡು ಬರಬೇಕು ಎಂಬುದು ಇದರ ಮೂಲ ಉದ್ದೇಶ(B.K.I., Vol.I, No.92).

ಕಾಮಲಾಪುರ ಗ್ರಾಮದಲ್ಲಿ ದೊರೆತ ಮೇಲ್ಕಂಡ ದಾನ-ಶಾಸನಗಳು ದೇವಾಲಯದಲ್ಲಿ ನಡೆಯುವ ಪೂಜೆ-ಪುನಸ್ಕಾರಗಳಿಗಾಗಿ ಲೋಕೋಪಯೋಗಿ ಕಾರ್ಯಗಳಿಗಾಗಿ. ದಾನದ ರೂಪ ಹೆಚ್ಚಿನ ಮಟ್ಟಿಗೆ ಹಣ ಮತ್ತು ಭೂಮಿಯಾಗಿದೆ. ಈ ಶಾಸನಗಳು ಧಾರ್ಮಿಕ ಶುಭ-ಸೂಚಕಗಳು. ಒಟ್ಟಾರೆ ಒಂದು ತುಲನ್ಮಾಕ ಅಧ್ಯಯನ ಮಾಡಿ ನೋಡಿದಲ್ಲಿ ಹೆಚ್ಚಿನ ದಾನ ಶಾಸನಗಳು ವೈಷ್ಣವ ಪಂಥಕ್ಕೆ ಸೇರಿವೆ. ಆದರೆ ಶೈವ ಪಂಥವನ್ನು ಕಡೆಗಣಿಸಿಲ್ಲ ಎಂಬುದು ಇಲ್ಲಿ ಗಮನಾರ್ಹ ಅಂಶ.

ವೀರಗಲ್ಲು ಶಾಸನಗಳು : ದಾನ ಶಾಸನಕ್ಕೆ ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ವೀರಗಲ್ಲು ಶಾಸನಗಳು ದ್ವಿತೀಯ ಸ್ಥಾನ ಪಡೆಯುತ್ತವೆ. ದಾನ ಶಾಸನಗಳು ಯಾವುದೇ ಉದ್ದೇಶಕ್ಕಾಗಿ ತ್ಯಾಗವನ್ನು ತಿಳಿಸಿದರೆ ವೀರಗಲ್ಲು ಶಾಸನಗಳು ದೇಹ ಮತ್ತು ಪ್ರಾಣಗಳನ್ನು ತ್ಯಾಗ ಮಾಡಿದ ವಿಷಯವನ್ನು ಸಾರುತ್ತವೆ. ಗತಿಸಿದ ಮಾನವನ ಸಮಾಧಿಮಾಡಿ, ಮಡಿದವನ ಸ್ಮರಣೆ ಬರುವಂತೆ, ಸಂಕೇತಕ್ಕಾಗಿ ನಿಲ್ಲಿಸಿದ ಶಿಲೆಯೇ ವೀರಗಲ್ಲುಶಾಸನ.(ಪಂಚಮುಖಿ.ಆರ್.ಎಸ್.೧೯೬೭, ಪು.೭೦-೭೧)

ಸಂಕೇತಕ್ಕಾಗಿ ನಿಲ್ಲಿಸಿದ ಶಿಲೆ ಅವನ ಜೀವನ ವಿಧಾನವನ್ನು ಆತನ ಧೋರಣೆಯನ್ನು ಅಂದಿನ ನಾಗರಿಕತೆಯನ್ನು ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ನಿಧನ ಹೊಂದಿದ ವ್ಯಕ್ತಿಯ ನೆನಪನ್ನು ಅಭಿವ್ಯಕ್ತಿಗೊಳಿಸುವ ಸಾಧನ ಇದೆಂದು ಹೇಳಬಹುದು. ವೇದಗಳಲ್ಲಿ ಶತಪಥ ಬ್ರಾಹ್ಮಣದಲ್ಲಿ ಇಂತಹ ಸ್ಮಾರಕಗಳ ಉಲ್ಲೇಖವಿದೆ. (ಶೇಷಶಾಸ್ತ್ರಿ.ಆರ್., ೧೯೮೨, ಪು.೧೧) ಕರ್ನಾಟಕ ಅದರಲ್ಲೂ ಹೆಚ್ಚಾಗಿ ಹಂಪಿ ಕ್ಷೇತ್ರದಲ್ಲಿ ಇಂತಹ ವೀರಗಲ್ಲು ಶಾಸನಗಳು ಸಾಕಷ್ಟಿವೆ.

ವೀರಗಲ್ಲು ಎಂಬ ಪದ ಮೂಲತಃ ಸಂಸ್ಕೃತ ಭಾಷೆ. ಈ ಪದ ವ್ಯಕ್ತಿಯ ಪರಾಕ್ರಮ. ಶಕ್ತಿ ಮುಂತಾದ ದೈಹಿಕ ಗುಣಗಳನ್ನು ಸೂಚಿಸುವ ಪದ(ಶೇಷಾಶಾಸ್ತ್ರಿ.ಆರ್, ೧೯೮೨ ಪು.೧೯-೨೦) ಆಂಗ್ಲ ಭಾಷೆಯ

ಸಾಮಾನಾರ್ಥಪದ 'Hero' ಎಂಬುದು ರೂಢಿಗತ. ವೀರ, ವೀರತ್ವ ಇದು ವ್ಯಕ್ತಿಯ ಸ್ವಾಭಿಮಾನ, ಮಹಾತ್ವಾಕಾಂಕ್ಷೆಯನ್ನು ಶೌರ್ಯ, ಪರಾಕ್ರಮವನ್ನು ಪ್ರತಿಬಿಂಬಿಸುವ ಪದ. ವೀರಗಲ್ಲನ್ನು ನೆಡಿಸುವ ಅಥವಾ ನಿಲ್ಲಿಸುವ ಉದ್ದೇಶ ೨ ರೀತಿಯದು.

೧. **ಲೌಕಿಕ ಉದ್ದೇಶ :** ವೀರರ ಪರಾಕ್ರಮವನ್ನು ಮೆಚ್ಚಿಲೋಕಕ್ಕೆ ತಿಳಿಯಲೆಂದು ನಿಲ್ಲಿಸುವುದು.

೨. **ಪಾರಮಾರ್ಥಿಕ ಉದ್ದೇಶ :** ವೀರಗಲ್ಲು ನಿಲ್ಲಿಸುವುದರ ಮೂಲಕ ಆತನಿಗೆ ವೀರ ಸ್ವರ್ಗ ಪ್ರಾಪ್ತವಾಗಲೆಂದು ನಿಲ್ಲಿಸುವುದು.(ಶೇಷಶಾಸ್ತ್ರಿ.ಆರ್, ೧೯೮೨, ಪು.೭೧)

ಒಟ್ಟಾರೆ ಯಾವುದೇ ಹೋರಾಟದಲ್ಲಿ ಮಡಿದ ವೀರರ ದ್ಯೋತಕವಾಗಿ ನಿಲ್ಲಿಸಿದ ಈ ಶಿಲೆಯೇ ವೀರಗಲ್ಲು. ಸಾಮಾನ್ಯವಾಗಿ ವೀರಗಲ್ಲಿನಲ್ಲಿ ಮೂರು ಹಂಥಗಳಿರುತ್ತದೆ. ಕೆಳಗಿನ ಹಂತದಲ್ಲಿ ವೀರ ತನ್ನ ಶತ್ರುಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧದಲ್ಲಿ ಮಡಿದ ಅವನನ್ನು ಅಪ್ಸರೆಯರು ಒಯ್ಯುತ್ತಿರುವಂತೆಯೂ, ಮೇಲಿನ ಹಂತದಲ್ಲಿ ಆತನು ಭಗವಂತನ ಸಾನಿಧ್ಯವನ್ನು ಪಡೆದು ಭಗವಂತನ ಪೂಜೆಯ ಮಾಡುವಂತೆ ತೋರಿಸಲಾಗಿರುತ್ತದೆ. ಕೆಲವು ಕಲ್ಲುಗಳ ಮೇಲೆ ೪-೫-೬ ಹಂತಗಳೂ ದೊರಕುತ್ತವೆ. ಯಾವುದೇ ಹಂತವಿರದೆ ಕುದುರೆಸವಾರಿ ಮಾಡುತ್ತಿರುವ ಅಥವಾ ಯುದ್ಧ ಮಾಡುತ್ತಿರುವ ಅಥವಾ ಬಿಲ್ಲನ್ನು ಖಡ್ಗವನ್ನೋ ಹಿಡಿದು ನಿಂತಿರುವ ಯುದ್ಧವನ್ನೋ, ರಣಾಂಗವನ್ನೋ ಸೂಚಿಸುತ್ತಿರುವ ಚಿತ್ರವನ್ನು ವೀರಗಲ್ಲು ಎಂದು ಕರೆಯಬಹುದು.(ಚಿದಾನಂದ ಮೂರ್ತಿ.ಎಂ ೧೯೮೪, ಪು.೪-೭)

ಈ ವೀರಗಲ್ಲುಗಳ ಮಧ್ಯ ಪಟ್ಟಿಕೆಯಲ್ಲಿ ವೀರಗಲ್ಲನ್ನು ನಿಲ್ಲಿಸಿದ ಉದ್ದೇಶ ಯಾರ ಸ್ಮರಣಾರ್ಥಕವಾಗಿ ನಿಲ್ಲಿಸಿದೆ ಹಾಗೂ ಸ್ಮರಣಾರ್ಥಕವಾಗಿ ನಿಲ್ಲಿಸಿದವನ ಹೆಸರು ಬರೆದಿಡಲ್ಪಟ್ಟಿರುತ್ತದೆ. ಪ್ರಸ್ತುತ ಅಧ್ಯಯನ ಹಂಪಿ ಕ್ಷೇತ್ರದ ಕಾಮಲಾಪುರ ಗ್ರಾಮದಲ್ಲಿ ವೀರಗಲ್ಲುಗಳ ಪ್ರಸ್ತಾವನೆ ಇಲ್ಲಿದೆ. ಕ್ರಿ.ಶ.೧೩ನೇ ಶತಮಾನಕ್ಕೆ ಸೇರಿದ ವೀರಗಲ್ಲು ಒಂದು ವ್ಯಕ್ತಿಯ ಮರಣದ ಉಲ್ಲೇಖವನ್ನು ಹೇಳುತ್ತದೆ. ಹೆಸರು ಅಸ್ಪಷ್ಟ.(A.R.I.E, 1955-56, No.B.333). ಕ್ರಿ.ಶ.೧೪ನೇ ಶತಮಾನಕ್ಕೆ ಸೇರಿದ ವೀರಗಲ್ಲಿನಲ್ಲಿ ಕೇಸರಿ ಎಂಬ ಹೆಸರು ಉಲ್ಲೇಖಿತವಾಗಿದೆ. ಬಹುಶಃ ವೀರನ ಹೆಸರು ನಮೂದಿತವಾಗಿರಲು ಸಾಕು.(A.R.I.E., 1955-56, No.B.338). ಕ್ರಿ.ಶ.೧೫ನೇ ಶತಮಾನಕ್ಕೆ ಸೇರಿದ ಪೀಠ ಒಂದರಲ್ಲಿ ಅಕ್ಷರಗಳು ನಮೂದಿತವಾಗಿದ್ದರೂ ಇವುಗಳ ಸ್ಪಷ್ಟ ಚಿತ್ರಣವಿಲ್ಲ.(A.R.I.E., 1980-81, No.B.113). ಕ್ರಿ.ಶ.೧೬ನೇ ಶತಮಾನದ ವೀರಗಲ್ಲು ಒಂದರಲ್ಲಿ ಚಿಕ್ಕ ತಾರೆಯರ ಪಟ್ಟಣಶೆಟ್ಟಿ ಮತ್ತು ಮಲ್ಲಶೆಟ್ಟಿಯರ ಹೆಸರಿದೆ. (A.R.I.E., 1955-56, No.B.334)

ಒಟ್ಟಾರೆ ಶಾಸನಗಳಲ್ಲಿ ಲಭ್ಯವಾದ ಮಾಹಿತಿಯನ್ನು ಆಧರಿಸಿದರೆ ವೈವಿಧ್ಯತೆಯನ್ನು ನೋಡಿದರೆ, ವೀರಗಲ್ಲುಗಳ ಶಾಸನಗಳ ಸಂಖ್ಯೆ ಕಡಿಮೆ. ಇನ್ನೂ ಹಲವಾರು ವೀರಗಲ್ಲು ಶಾಸನಗಳು ಕಾಮಲಾಪುರದ

ರಾಜ್ಯ ಪುರಾತತ್ವ ಇಲಾಖೆಯ ಹೊರಭಾಗದಲ್ಲಿ, ಭಾರತೀಯ ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯದಲ್ಲಿ, ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದಲ್ಲಿ ಇಡಲ್ಪಟ್ಟಿವೆ. ಈ ವೀರಗಲ್ಲುಗಳಲ್ಲಿ ಶಾಸನಗಳು ನಶಿಸಿಹೋದರೂ ವೀರತ್ವವನ್ನು ಎತ್ತಿ ಸೂಚಿಸುವ ಶಿಲ್ಪಗಳು ಇವೆ. ಈ ಶಿಲ್ಪಗಳು ಕಲೆಯ ದೃಷ್ಟಿಯಿಂದಲೂ ಅಧ್ಯಯನಕೊಂದು ಮಾದರಿಯಾಗಿದೆ.

ಮಾಸ್ತಿಗಲ್ಲು

'ಮಾಸ್ತಿ' ಎಂಬುದು ಸಂಸ್ಕೃತದ 'ಮಹಾಸತಿ' ಎಂಬುದರ ಸಂಕ್ಷೇಪ್ತರೂಪ.(ಚಿದಾನಂದ ಮೂರ್ತಿ.ಎಂ, ೧೯೮೪, ಪು.೧೫) ಪತಿ ಸತ್ತ ಹೋದವಳಿಗೆ ಸಮಾಜದಲ್ಲಿ ಹೆಚ್ಚಿನ ಗೌರವವಿರಲಿಲ್ಲ. ಕಾರಣ ಅನಿವಾರ್ಯವಾಗಿ ಗಂಡ ಸತ್ತ ಮೇಲೆ ಆತನ ಜೊತೆ ಪ್ರಾಣ ತ್ಯಾಗ ಮಾಡುವ ಪದ್ಧತಿ ಇತ್ತು. (ಪರಮಶಿವಮೂರ್ತಿ ಡಿ.ವಿ., ೧೯೯೯, ಪು.೧೩೪) ಪ್ರಾಣ ತ್ಯಾಗ ಮಾಡುವ ಪದ್ಧತಿ ಎರಡು ಬಗೆಯದು

೧. ಸಹಗಮನ, ೨. ಅನುಗಮನ

ಪತಿಯು ಮಡಿದಾಗ ಆತನ ಶವದ ಜೊತೆಯಲ್ಲೇ ಚಿತೆಗೆ ಬಿದ್ದು ಪ್ರಾಣತ್ಯಾಗ ಮಾಡುವುದು ಸಹಗಮನ ಪದ್ಧತಿ. ತನ್ನ ಪತಿ ಮಡಿದ ಸುದ್ಧಿಯನ್ನು ಕೇಳಿ ಸ್ವತಃ ಚಿತೆಯನ್ನು ನಿರ್ಮಿಸಿ ಚಿತಾ ಪ್ರವೇಶ ಮಾಡುವುದು ಅನುಗಮನ ಪದ್ಧತಿ. ಒಟ್ಟಾರೆ ಅಗ್ನಿ ಪ್ರವೇಶವನ್ನು ಮಾಡಿ ತ್ಯಾಗವನ್ನು ನಿರೂಪಿಸಿದ ಮಹಿಳೆಯರ ಈ ಸ್ಮಾರಕಗಳೇ ಮಹಾಸತಿಗಲ್ಲುಗಳು. ವೀರಗಲ್ಲುಗಳಂತೆ ಮಹಾಸತಿಗಲ್ಲುಗಳಲ್ಲೂ ಮೂರು-ನಾಲ್ಕು ಚಿತ್ರಣಗಳಿರುತ್ತವೆ. ಬರಿಯ ಸ್ತ್ರೀ ವಿಗ್ರಹವೂ ಇರಬಹುದು.

ಕೆಲವು ಮಹಾಸತಿಗಲ್ಲುಗಳ ಮೇಲೆ ಒಂದು ಕಂಬ ಮತ್ತು ಅದರ ಬಲಭಾಗದಿಂದ ಹೊರಟಿರುವ ಒಂದು ಕೈ ಇರುತ್ತದೆ. ಇದನ್ನು ಒಂಟಿ ಮಾಸ್ತಿಗಲ್ಲು ಎಂದು ಕರೆಯುತ್ತಾರೆ. ಕಂಬದಿಂದ ಎರಡು ಕೈಗಳು ಹೊರಟಿದ್ದರೆ ಇಕ್ಕೈ ಮಾಸ್ತಿಗಲ್ಲು ಎಂದು ಹೆಸರಿಸುತ್ತಾರೆ.(ಚಿದಾನಂದ ಮೂರ್ತಿ, ೧೯೮೪, ಪು.೧೬) ಕೆಲವೊಮ್ಮೆ ಮಹಾಸತಿಯ ಕೈಯಲ್ಲಿ ನಿಂಬೆಹಣ್ಣು ತಲೆಯ ಹಿಂದೆ ಪ್ರಭಾವಳಿಯಂತೆ ಕಾಣುವ ಜ್ವಾಲೆ ಸಂಕೇತವಾಗಿರುತ್ತದೆ. ಕೆಲವೊಮ್ಮೆ ಮಹಾಸತಿಯನ್ನು ವೀರನೊಡನೆ ಒಬ್ಬರಿಗಿಂತ ಹೆಚ್ಚು ಮಂದಿ ಸಹಗಮನ ಮಾಡಿದ್ದರೆ ಅಷ್ಟು ಜನ ಸ್ತ್ರೀ ತನ್ನ ಗಂಡನ ಬಲಗಡೆ ನಿಂತು ಎಡಗೈಯನ್ನು ಎತ್ತಿಸಿರುವ ಚಿತ್ರವನ್ನು ಖಂಡಿರಿಸಿರುತ್ತಾರೆ. ಒಟ್ಟಾರೆ ಮಾಸ್ತಿಗಲ್ಲುಗಳು ಮಹಿಳೆಯರ ಜೀವನದ ಮೌಲ್ಯಗಳಿಗೆ ಪಣ ತೊಟ್ಟು ಬದ್ದರಾಗಿದ್ದರೆಂಬುದನ್ನು ಪ್ರತಿಬಿಂಬಿಸುತ್ತವೆ.

ಈ ಒಂದು ಹಿನ್ನೆಲೆಯಲ್ಲಿ ಹಂಪಿ ಕ್ಷೇತ್ರದ ಕಾಮಲಾಪುರ ಗ್ರಾಮದಲ್ಲಿ ಇಂತಹ ಮಹಾಸತಿಗಲ್ಲುಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾಲಯದ ವಸ್ತು ಸಂಗ್ರಹಾಲಯದಲ್ಲಿ, ರಾಜ್ಯ ಕರ್ನಾಟಕ ಪುರಾತತ್ವ

ನಿರ್ದೇಶನಾಲಯ ಕಛೇರಿ ಕಾಮಲಾಪುರದಲ್ಲಿ. ಕನ್ನಡ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದಲ್ಲೂ ಮತ್ತು ಕಾಮಲಾಪುರ ಪರಿಸರದ ಸುತ್ತಮುತ್ತಲಿನಲ್ಲಿಯೂ ಪಸರಿಸಿವೆ.

ಇಲ್ಲಿ ದೊರೆತಿರುವ ಮಹಾಸತಿಗಲ್ಲುಗಳೆಲ್ಲ ವಿಜಯನಗರ ಕಾಲಕ್ಕೆ ಸಂಬಂಧಿಸಿದವು. ಈ ಮಹಾಸತಿ ಗಲ್ಲುಗಳು ಗ್ರಾನೈಟ್ ಶಿಲೆಯಿಂದ ಖಂಡರಿಸಲ್ಪಟ್ಟಿವೆ. ಇಲ್ಲಿ ದೊರೆತ ಮಹಾಸತಿಗಲ್ಲುಗಳಲ್ಲಿ ಬಲಗೈಯಲ್ಲಿ ಕಮಲವನ್ನು ಓಡಿದು, ಕೆಲವೊಮ್ಮೆ ಎಡಕ್ಕೆ ಎತ್ತಿ, ಬಲಗೈಯಲ್ಲಿ ಹಣ್ಣು ಓಡಿದಂತೆ, ಎಡಗೈಯಲ್ಲಿ ಕನ್ನಡಿ ಓಡಿದಂತೆ, ಕೆಲವೊಂದೆಡೆ ಕೈಮುಗಿದಂತೆ ನಿಂತಿರುವ ಸತಿಯ ಪಕ್ಕದಲ್ಲಿ ತೋಳು ಕೈಕಂಬ ಎನ್ನುವ ಮಾಸ್ತಿ ಅಥವಾ ಮಹಾಸತಿಯ ಕೆತ್ತನೆಯ ಶಿಲ್ಪಗಳು ಕಾಮಲಾಪುರ ಗ್ರಾಮದ ಮಹಾಸತಿ ಆಚರಣೆಯ ಪದ್ಧತಿಯನ್ನು ಇಂದು ಸಾರಿ ಹೇಳುವಂತಿದೆ. ಇಂದು ನಮಗೆ ಇದು ನಿಕೃಷ್ಟವೆನಿಸಿದರೂ ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದೇ ಇದರ ಉದ್ದೇಶ.

ನಿಷೀಧಿಗಲ್ಲುಗಳು

ವೀರಗಲ್ಲುಗಳು ವೀರನ ಸ್ಮಾರಕವಾಗಿ ನಿಲ್ಲಿಸಲ್ಪಟ್ಟರೆ, ನಿಷೀಧಿಗಲ್ಲುಗಳು ಸನ್ಯಾಸದ ವಿಧಿಯಿಂದ ಮಡಿದವರ ಸ್ಮರಣಾರ್ಥವಾಗಿ ನಿಲ್ಲಿಸಲ್ಪಟ್ಟಿವೆ. ಬದುಕಿನಲ್ಲಿ ನಿರಂತರವಾಗಿ ಧರ್ಮವನ್ನು ಆಚರಿಸಿ ಸಾಯುವಾಗಲೂ ಇದೇ ಭಾವನೆಯಲ್ಲಿ ಸತ್ತರೆ ಮೋಕ್ಷವನ್ನು ಹೊಂದುತ್ತಾರೆಂದು ಜೈನಧರ್ಮದಲ್ಲಿ ಹೇಳಿದೆ. ಶ್ರಾವಕನು ತನ್ನ ಅಂತಿಮ ಕಾಲದಲ್ಲಿ ಈ ಮತದ ಶ್ರೇಷ್ಠ ವ್ರತವಾದ ಸಲ್ಲೇಖನಾ ವ್ರತವನ್ನು ಆಚರಿಸಿ ಜಿನಧ್ಯಾನದಲ್ಲಿ ನಿರತವಾಗಿ ದೇಹತ್ಯಾಗ ಮಾಡಿ ಮೋಕ್ಷವನ್ನು ಗಳಿಸುತ್ತಾನೆ. ಹೀಗೆ ಮೋಕ್ಷವನ್ನು ಸಾಧಿಸಿದ ಶ್ರೇಷ್ಠ ಸಾಧಕರ ಸ್ಮಾರಕವೇ ನಿಷೀಧಿಗಲ್ಲು(ವಸಂತಲಕ್ಷ್ಮಿ.ಕೆ ೧೯೯೪, ಪು.೮೧)

ಈ ನಿಷೇಧಿಗಲ್ಲು ನಿಷಧಿಗೆ (M.A.R, 1942, P.207)

ನಿಷೇಧೀಗೆ	(B.K.I.I, 52)
ನಿಷಿಧಿ	(E.C.IX C.G.56)
ನಿಷೀದಿಕಾ	(E.C.VI K.P.3)
ನಿಶಿಧಿಗೆ	(E.C.Vol-II 117)
ನಿಷಿಧ್ಯಾಲಯ	(E.C.Vol-II 66)

ಸಂಸ್ಕೃತದಲ್ಲಿ "ನಿಷೇದಿಕಾ", ಪ್ರಾಕೃತದಲ್ಲಿ "ನಿಸಿಹಿಯಾ" ಕರ್ನಾಟಕದಲ್ಲಿ ಅದರಲ್ಲೂ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ "ನಿಷಿದ್ಧಿ" ಎಂಬ ಹೆಸರಿನಿಂದಲೂ ಕರೆಯುತ್ತಾರೆ.(ಚಿದಾನಂದಮೂರ್ತಿ ೧೯೭೯,

ಪು.೯೮) ನಿಷೇಧಿಗಲ್ಲು ಸನ್ಯಾಸ ಸ್ವೀಕರಿಸಿದ ವ್ಯಕ್ತಿಯನ್ನು ಹೆಸರಿಸುತ್ತದೆ. ಹೆಚ್ಚಿನ ಮಟ್ಟಿಗೆ ಇವು ಬಸದಿಯ ಕಂಬಗಳ ಮೇಲೆ ನೆಟ್ಟ ಶಿಲೆಗಳ ಮೇಲೆ, ಬಂಡೆಗಳ ಮೇಲೆ ಕಾಣಿಸಿಕೊಳ್ಳುತ್ತವೆ. ಸನ್ಯಾಸ ವ್ರತವನ್ನು ಬಸದಿಯಲ್ಲಾದರೂ (B.K.I, No.2) ಅಥವಾ ಊರಹೊರಗೆ (E.C- IX.C.G, 46) ಆಚರಿಸಬಹುದಾಗಿತ್ತು. 'ನಿಷಿಧಿಯಂ ನಿಲ್ಲಿಸಿ, ನಿಷಿಧಿಯಂ ಮಾಡಿಸಿ, ನಿಷಿಧಿಕಾಕೃತ' ಎಂಬ ಶಬ್ದಗಳು ಶಾಸನಗಳಲ್ಲಿ ಬರುವುದರಿಂದ ಇಲ್ಲಿ ಯಾವ ರೀತಿಯ ಕಟ್ಟಡವೂ ಇರಲೇಬೇಕಾಗಿಲ್ಲ. ಪಿ.ಕೆ.ಆಚಾರ್ಯರ ಪ್ರಕಾರ A house of rest a tomb a monument (ಮಾನಸಾರ Volum-7, ಪು.೨೮೪)

ಹೆಚ್ಚಿನ ಮಟ್ಟಿಗೆ ವೀರಗಲ್ಲುಗಳಲ್ಲಿ ಪಟ್ಟಿಕೆಗಳಿರುವಂತೆ ನಿಷೇಧಿಗಲ್ಲುಗಳಲ್ಲೂ ೨-೩ ಪಟ್ಟಿಕೆಗಳು ಇರುತ್ತವೆ. ಗುರುವಿನ ಸಮೀಪದಲ್ಲಿ, ಪುಸ್ತಕವಿರುವ ವ್ಯಾಸ ಪೀಠ, ಜಿನಸ್ತೋತ್ರವನ್ನು ಹೇಳುತ್ತಿರುವ ಗುರು, ವ್ರತಧಾರಿಯಾಗಿ ಜಿನಸ್ತೋತ್ರವನ್ನು ಕೇಳುತ್ತಿರುವ ಶಿಷ್ಯ ಅಥವಾ ವ್ಯಕ್ತಿಯ ಚಿತ್ರಣಗಳಿರುತ್ತವೆ. ನಿಷೀಧಿಗಲ್ಲುಗಳ ಮೇಲೆ ಸಾಮಾನ್ಯವಾಗಿ ಮುಕ್ಕೊಡೆ ಇರುವ ಜಿನನ ಚಿತ್ರಣಗಳಿರುತ್ತವೆ.(J.I.S.I No.26) ಒಟ್ಟಾರೆ ಈ ನಿಷೇಧಿಗಲ್ಲುಗಳು ಇರುವ ಸ್ಥಳ ತೀರ್ಥಕ್ಷೇತ್ರಗಳಂತೆ ಪವಿತ್ರ ತಾಣ. ಈ ಒಂದು ಹಿನ್ನಲೆಯಲ್ಲಿ ಹಂಪಿ ಕ್ಷೇತ್ರ ಕಾಮಲಾಪುರ ಗ್ರಾಮದಲ್ಲಿ ದೊರೆತ ವಿವಿಧ ನಿಷೇಧಿಗಲ್ಲುಗಳ ಕಿರುನೋಟ ಚಿತ್ರಣ ಇಲ್ಲಿದೆ.

೧೧ನೇ ಶತಮಾನದ ಶಾಸನವೊಂದರಲ್ಲಿ ಜೈನ ಸನ್ಯಸಿಗಳ ಗುರು ಪರಂಪರೆಯ ವಿವರಣೆಯಿದೆ. ಗೊಲ್ಲಾಚಾರ್ಯ ಆತನ ಶಿಷ್ಯಾ ಗುಣಚಂದ್ರ ಮತ್ತು ಗುಣಚಂದ್ರನ ಶಿಷ್ಯೆ ಇಂದ್ರ, ನಂದಿಯರ ಸ್ತುತಿ ಇದೆ. ನಂದಿಮುನಿ ಮತ್ತು ಕಂತಿಯರ ಉಲ್ಲೇಖವಿದೆ. ಉಳಿದ ವಿವಿರ ಸ್ಪಷ್ಟವಿಲ್ಲ.(ARIE, 1952-53, No.222). ೧೪-೧೫ನೇ ಶತಮಾನದ ಸರಸ್ವತಿ ಗಚ್ಚ, ಬಲತ್ಕಾರ ಗಣ ಮತ್ತು ಮೂಲ ಸಂಘದ ಜೈನ ಗುರುವಿನ ಬಗ್ಗೆ ತಿಳಿಸುತ್ತದೆ. ಉಳಿದ ವಿವರ ಸ್ಪಷ್ಟವಿಲ್ಲ.(ARIE, 1980-81, No.B.117)

ಇತರೆ ಶಾಸನಗಳು

ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ವೀರಗಲ್ಲುಗಳು, ನಿಷೇಧಿಗಲ್ಲುಗಳು, ಮಹಾಸತಿಗಲ್ಲುಗಳು, ದಾನ ಶಾಸನಗಳಿಗಿಂತ ಇತರೇ ಶಾಸನಗಳು ಹೆಚ್ಚಿನ ಪಾಲಿನವು. ಇತರೆ ಶಾಸನಗಳು ಮೇಲೆ ಹೇಳಿದ ಶಾಸನಗಳ ಅಡಿಯಲ್ಲಿ ಸೇರಿದ್ದುದರಿಂದ ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಇತರೆ ಶಾಸನಗಳ ವ್ಯಾಪ್ತಿಗೆ ಸೇರಿಸಿದೆ. ಇವು ವ್ಯಕ್ತಿಗಳ ಹೆಸರಿರಬಹುದು, ಅಥವಾ ಕೊತ್ತಲಗಳ ನಿರ್ಮಾಣ ಇರಬಹುದು. ಒಟ್ಟಾರೆ ಲಭ್ಯವಾದ ಇತರೆ ಶಾಸನಗಳ ಪ್ರಸ್ತಾವನೆ ಇಲ್ಲಿ ಮಾಡಲಾಗಿದೆ.

ಕ್ರಿ.ಶ.೧೪ನೇ ಶತಮಾನದ ಶಾಸನವೊಂದು ನಾಗಪ್ಪನ ತಿರುವೊಕ್ಕಳ ತಂಳಪನು ಹಾದಿಯನ್ನು ಕಟ್ಟಿಸಿದ ನೆಂದು ದಾಖಲಿಸುತ್ತದೆ.(V.P.R., 1983-87, No.76) ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನ

ಮಂಗಳದಾಯಕವಾಗಲೆಂದು ವಿಜಯನಗರದ ಪಟ್ಟಣದಲ್ಲಿ ಸಿಂಗಾರದ ಬಾಗಿಲಿನ ಉತ್ತರಕ್ಕೆ ಬಂಡೆಯ ಮೇಲಿರುವ ಆನೆಗೊಂದಿಯ ಕೊತ್ತಳಕ್ಕೆ ವೀರಬುಕ್ಕರಾಯನು ಶುಭ ಹಾರೈಸಿದನೆಂದಿದೆ.(V.P.R., 1983-84, No.2) ಜಡೆಯ ಶಂಕರ ದೇವರ ದಿಡ್ಡಿಯ ಬಾಗಿಲು ಶಾಸನದಲ್ಲಿ ನಮೂದಿತವಾಗಿದೆ.(V.P.R, 1983-84, No.4). ವಿಜಯನಗರದ ಪಟ್ಟಣದ ಪೂರ್ವಕ್ಕೆ ಸೋಮವಾರದ ಬಾಗಿಲಿನ ಉತ್ತರಕ್ಕೆ ಸೋಮದೇವರ ಕೊತ್ತಲವನ್ನು ದಾಖಲಿಸಿದೆ. ಇದು ವೀರಬುಕ್ಕರಾಯನ ಕಾಲಕ್ಕೆ ಸೇರಿದ್ದು, ಇದರ ಕಾಲ ಲಿಪಿ ದೃಷ್ಟಿಯಿಂದ ಕ್ರಿ.ಶ.೧೪ನೇ ಶತಮಾನದ್ದು(V.P.R., 1983-84, No.3). ಸಂಕುರ ದೇವರ ಕೊತ್ತಳ ಎಂಬುದಾಗಿ ಕ್ರಿ.ಶ.೧೪ನೇ ಶತಮಾನದ ಶಾಸನದಲ್ಲಿದೆ(V.P.R, 1983-84, No.8). ಮದನ ಹೆಸರಿನ ಕೊತ್ತಳ (V.P.R, 1983-84, No.6). ಮಾತಂಗ ದೇವರ ಕೊತ್ತಳ (V.P.R., 1983-84, No.9). ಹಂಪಾದೇವಿಯ ಹೆಸರಿನ ದಿಡ್ಡಿ(ಬಾಗಿಲು) (V.P.R., 1983-84, No.5). ಪ್ರತಾಪ ಕೊತ್ತಳ (V.P.R, 1983-84, No.10). ಶ್ರೀ ವೀರಹರಿಹರರಾಯ (V.P.R., 1984-87, No.74). ಹೀಗೆ ಕೊತ್ತಳಗಳ ಮತ್ತು ವ್ಯಕ್ತಿಯ ಹೆಸರು ಕ್ರಿ.ಶ.೧೪ನೇ ಶತಮಾನದ ಶಾಸನಗಳಲ್ಲಿ ಸೂಚಿತವಾಗಿವೆ.

ಇದೇ ಕಾಲಕ್ಕೆ ಸೇರಿದ ಇನ್ನೊಂದು ಶಾಸನದಲ್ಲಿ ಭೋಜನನ್ನು ವಾಣಿ, ವತ್ಸರಾಜನನ್ನು, ತ್ರಿಪುರಾಂಬ, ಕಾಳಿ ವಿಕ್ರಮನನ್ನು ಆಶೀರ್ವದಿಸಿದಂತೆ ಪಂಪಾದೇವಿಯು ದೇವರಾಯನನ್ನು ಆಶೀರ್ವದಿಸಲಿ ಎಂಬುದಾಗಿ ದಾಖಲಿಸಲ್ಪಟ್ಟಿದೆ. (A.R.I.E, 1889, No.230) ಕ್ರಿ.ಶ. ೧೪೨೬ರ ಶಾಸನವೊಂದು ಬುಕ್ಕ ಹರಿಹರ ಇವನ ಮಗ ದೇವರಾಯ ಇವನ ಮಗ ವಿಜಯ ಇವನ ಮಗ ದೇವರಾಯ ಅಥವಾ ಅಭಿನವ ದೇವರಾಯ ಅಥವಾ ವೀರದೇವರಾಯನ ವಂಶಾವಳಿಯನ್ನು ಸೂಚಿಸುತ್ತದೆ. ಅಲ್ಲದೇ ದೇವರಾಯನು ವಿಜಯನಗರದಲ್ಲಿ ಎಲೆ ಅಡಿಕೆ ಬೀದಿ(ಪಾನ್ ಸುಪಾರಿ ಬಜಾರ್) ಕ್ರಮುಕ ಪರ್ಣಾಪಣ ಬೀದಿಯಲ್ಲಿನ ಕಲ್ಲಿಗ ಪಾರ್ಶ್ವ ಚೈತ್ಯಾಲಯವನ್ನು ನಿರ್ಮಿಸಿದನು.(ವಿ.ಶಾ.ಸಂ-೩, ೧೯೯೬, ಸಂ.೩೪೭) ಗುಂಡನ್ನು ಒಡೆದು ಅರಸನ ಆಜ್ಞೆಯ ಮೇರೆಗೆ ಬಸವಣ್ಣ ಅಣ್ಣನು ಕಾಲುವೆ ನಿರ್ಮಿಸಿದ ವಿಷಯ(V.P.R, 1984-87, No.73) ಮಹಾ ಮಂಡಲೇಶ್ವರ ಚಿಕ್ಕ ತಿಮ್ಮರಾಜ ಕೊಂಡಯ್ಯ ದೇವರ ಹೆಸರು(V.P.R., 1984-87, No.143) ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಕ್ರಿ.ಶ.೧೫೫೪ರ ಶಾಸನವೊಂದು ಸೋಮನಾಯಕನ ಮಗ ಬುಳಪ ಪತ್ನಿ ಭಯರಾಯಿಯ ಸುಗನ ಹಳ್ಳಿಯ ಜಂಗಮನಾದ ಸೋಮಯ್ಯ ದೇವ ಅಯ್ಯನಿಗೆ ಬಾಗಿಲ ಒಳಗಡೆ ನಿವೇಶನವನ್ನು ನೀಡಿದ್ದನ್ನು ದಾಖಲಿಸಿದೆ.(V.P.R., 1984-87, No. 138).

ಕಟ್ಟೆನಾಗಯ್ಯನ ಮೊಮ್ಮಗ ಮಲ್ಲಯ್ಯ(V.P.R 1984-87 No.79) ಕೃಷ್ಣರಾಯ ಕೆರೆ, ದೇವರ ತೋಟದ ಉಲ್ಲೇಖ(V.P.R 1984-87 No.129) ಅನಾಮಲ್ಲಪ್ಪನ ತೋಟ ಮತ್ತು ತಿಮರಾವುತನ ಹೆಸರು(VP.R 1984-87 No.4) ಶ್ರೀ ಮುಕುಟ ರಾಯನ ನಿರ್ಮಲ ತೀರ್ಥದ ಹೆಸರು (V.P.R 1984-

87 No.109) ಕೇವಲ ಲಿಂಗಬಾವಿ(V.P.R 1984-87 No.108) ಸದಾಶಿವ ಮಹಾಯೋಗಿ ಕರಿಯ ಬಸವನ್ನೊಡೆಯನ ಮಗ ಸದಾಶಿವ ಆತನ ಶಿಷ್ಯ ಕಾಮಯ್ಯ ಪೆದ್ದಿ(V.P.R 1984-84 No.55) ಸ್ವಾಮಿ ದ್ರೋಹದ ಗಂಡನಕೊತ್ತಳ(V.P.R 1984-87 No.86) ಮಳಲ ವಿನಾಯನ ಕೊತ್ತಳ (V.P.R 1984-87 No.87) ಶ್ರೀವಿದ ಎಂಬ ಹೆಸರು(V.P.R 1984-87 No.146) ಚೆನ್ನಮಲಂ ಮಳ ಎಂಬ ಸ್ತ್ರೀ ಹೆಸರು (V.P.R 1984-87 No.136) ಕಳಸಾಪುರ ಗ್ರಾಮದ ಹೆಸರು(V.P.R 1984-87 No.161) ಅನಂತಾಪುರ ಗ್ರಾಮದ ಹೆಸರು(V.P.R 1984-87 No.162) ಚೆನ್ನಸೋಮದೇವನ ಮಾನ್ಯ(V.P.R 1984-87 No.130) ಚೆನ್ನ ಎಂಬ ವ್ಯಕ್ತಿಯ ಹೆಸರು (V.P.R 1984-87 No.100) ಕ್ರಿ.ಶ.15 ಮತ್ತು 16ನೇ ಶತಮಾನಗಳ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. (ವಿ.ಶಾ.ಸ.ಸಂ, ನಂ.೨೯೮) ಶಿವ ಸದನ ನರಸಿಂಗಯ್ಯನ ಪಾಲು(V.P.R 1983-84 No.27) ಗಿಂಡಿ ತಿಮ್ಮಪ್ಪಯ್ಯ ಪಾಲು (V.P.R 1983-84 No.25) ಜಾನಸಾಲ ಸೂರಪ್ಪನ ಪಾಲು (V.P.R 1983-84 No.24) ಅಜೆನಾಯಕನ ಗಿಡ್ಡ ಬಾಗಿಲು (V.P.R 1983-84 No.28) ಕ್ರಿ.ಶ.16ನೇ ಶತಮಾನದ ಶಾಸನಗಳಲ್ಲಿ ದಾಖಲಿಸ್ಪಟ್ಟಿತು. ಚಮ್ಮಿ ಶೆಟ್ಟಿಯ ಮರಣದ ಉಲ್ಲೇಖ ಇದನ್ನು ಬರೆಯಿಸಿದ ಸಾಯಿ ಶೆಟ್ಟಿ(V.P.R 1984-87 No.75) ತಿರುಮಲಾದೇವಿ ಪಟ್ಟಣದ ಉಲ್ಲೇಖ(V.P.R., 1984-87, No.139) ಸಂಗಿ ದೇವನ ಮಗ ಕನ್ನಗ ಹೆಸರು (ಪಾಟೀಲ್ ಸಿ.ಎಸ್. ೨೦೦೦, ಸಂ-೩, ಶಾ.ಸ.೨೯೦) ವೀರರಸನ ಮಗನ ಹೆಸರು (ಕ.ವಿ.ಶ.ಸಂ-೩, ನಂ.೨೬೯) ದಮ್ಮೂರ ಘನಪ್ಪನ ಹೆಸರು (ಕ.ವಿ.ಶ.ಸಂ-೩, ನಂ.೩೮೦) ವರಿವರೋಮನವಲು (ಕ.ವಿ.ಶ.ಸಂ- ೩, ನಂ.೨೮೦) ಮನುಗಾಲನ ಹೆಸರು (ಕ.ವಿ.ಶ.ಸಂ-೩, ನಂ.೨೬೬) ಅಚ್ಯುತಾಪುರದ ಊರಿನ ಹೆಸರು (V.P.R., 1984-87, No.41) ನರಸಿಂಗಯ್ಯನ (V.P.R, 1983-84, No.27) ಗಿಂಡಿ ತಿಮ್ಮಯ್ಯನ (V.P.R., 1983-84, No.279) ಶ್ರೀ ರಾಮಮುಡ್ಲಪ್ಪ (ಕ.ವಿ.ಶಾ.ಸ-೩, ೨೦೦೦, ನಂ.೨೬೨) ಹೆಸರುಗಳು ತಿಪ್ಪಯ್ಯನ (ಕ.ವಿ.ಶಾ.ಸ-೩, ೨೦೦೦, ನಂ..೨೮೧) ಮಲ್ಲಪ್ಪನ (ಕ.ವಿ.ಶಾ.ಸ-೩, ೨೦೦೦, ನಂ.೨೮೦)ದೊರೆಯ ಪದವಿ (ಕ.ವಿ.ಶಾ.ಸ-೩, ನಂ.೨೬೪) ಅಮಗ, ಮಚಡಿ (ಕ.ವಿ.ಶಾ.ಸ-೩, ನಂ.೨೮೧) ಇವು ಕ್ರಿ.ಶ.೧೬ ಮತ್ತು ೧೭ನೇಯ ಶತಮಾನದ ಶಾಸನಗಳಲ್ಲೂ ದಾಖಲಿಸಲ್ಪಟ್ಟಿವೆ.

ಒಟ್ಟಾರೆ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದಾಗ ದಾನ ಶಾಸನಗಳು ದಾನ-ದತ್ತಿಯನ್ನು ಬಿಟ್ಟರೆ ವೀರಗಲ್ಲು ಶಾಸನಗಳು ವೀರರ ಸ್ಮಾರಕವಾಗಿ ನಿಲ್ಲಿಸಲ್ಪಟ್ಟಿದ್ದರೆ ಮಹಾಸತಿಗಲ್ಲುಗಳು ತ್ಯಾಗವನ್ನು ನಿರೂಪಿಸುವಂತಿದ್ದರೆ ನಿಷಧಿಗಲ್ಲುಗಳು ಸಲ್ಲೇಖನ ವ್ರತವನ್ನು ಹೇಳುವಂತಿದ್ದರೆ ಇತರೇ ಶಾಸನಗಳ ವಿಷಯವನ್ನು ನಿರೂಪಿಸುವಲ್ಲಿ ಅಷ್ಟೇ ಮಹತ್ವವನ್ನು ಪಡೆದಿವೆ. ಒಟ್ಟಾರೆ ಹೆಚ್ಚಿನ ಮಟ್ಟಿಗೆ ಇತರೆ ಶಾಸನಗಳಲ್ಲಿ ಕೊತ್ತಳ ಹೆಸರು ವ್ಯಕ್ತಿಯ ಹೆಸರುಗಳು ಸೂಚಿತವಾಗಿವೆ. ಇತರೆ ಶಾಸನಗಳಲ್ಲಿ ಹೆಚ್ಚಿನ

ಶಾಸನಗಳ ಕಾಲ ನಮೂದಿತವಲ್ಲದಿದ್ದರೂ ಲಿಪಿದೃಷ್ಟಿಯಿಂದ ವಿಜಯನಗರ, ವಿಜಯನಗರೋತ್ತರದ ಕಾಲವೆಂದು ಸ್ಪಷ್ಟವಾಗಿ ಹೇಳಬಹುದು. ಒಟ್ಟಿನಲ್ಲಿ ಕಾಮಲಾಪುರ ಗ್ರಾಮದಲ್ಲಿ ದೊರೆತ ಶಾಸನಗಳ ವೈವಿಧ್ಯತೆಯನ್ನು ಪರಿಶೀಲಿಸಿದರೆ ದಾನಶಾಸನಗಳು ಸಂಖ್ಯೆಯ ದೃಷ್ಟಿಯಿಂದ ಅತೀ ಹೆಚ್ಚು.

ದಾನ ಶಾಸನಗಳ ನಂತರ ದ್ವಿತೀಯ ಸ್ಥಾನದಲ್ಲಿ ಇತರೆ ಶಾಸನಗಳು ಮಹತ್ತರ ಪಾಲನ್ನು ವಹಿಸಿವೆ. ವೀರಗಲ್ಲು ಶಾಸನಗಳು ಕಡಿಮೆ ಇದ್ದರೂ ವೀರ ಘನತೆಯನ್ನು ಸ್ಪಷ್ಟೀಕರಿಸುತ್ತವೆ. ಲಭ್ಯವಿದ್ದ ಮಹಸತಿಗಲ್ಲುಗಳು ಪ್ರಾಣ ತ್ಯಾಗ ಮನೋಭಾವನೆಯನ್ನು ಸೂಚಿಸುತ್ತವೆ. ಇದು ಇಂದು ನಮಗೆ ನಿಕೃಷ್ಟವೆನಿಸಿದರೂ ಅಂದಿನ ಸಂಪ್ರದಾಯದ ಕುರುಹು ಇದಾಗಿವೆ. ಶಾಸನವಿಲ್ಲದ ನಿಷೇಧಿಗಲ್ಲುಗಳೂ ಸಾಕಷ್ಟಿವೆ. ಈ ನಿಷೇಧಿಗಲ್ಲುಗಳ ಅಂದಿನ ಸಂಪ್ರದಾಯದ ಪರಂಪರೆಯನ್ನು ತಿಳಿಸುವುದರೊಂದಿಗೆ ಕಲಾ ದೃಷ್ಟಿಯಿಂದ ಮಹತ್ವಪೂರ್ಣ ಕೊಡುಗೆ ಎಂದೆನಿಸದೆ ಇರಲಾರದು.

ಅಧ್ಯಾಯ ೪

ವಾಸ್ತುಕಲೆ

ವಾಸ್ತುಶಿಲ್ಪ

ದೇವಾಲಯ : ದೇವಾಲಯ ಎಂದರೆ ಇದು ದೇವರ ಆಲಯ. ಆಲಯ ಎಂದರೆ ಕಟ್ಟಡವೆಂದರ್ಥ. ದೇವರು ಇರತಕ್ಕ ಸ್ಥಾನ, ಎಡೆ, ಜಾಗ ಎಂದರ್ಥ(ರಾಮಚಂದ್ರರಾವ್ ಎಸ್.ಕೆ., ೧೯೯೪, ಪು.೧). ದೇವಾಲಯಗಳು ಧಾರ್ಮಿಕ ಶ್ರದ್ಧೆಯ ಪ್ರಮುಖ ಅಂಶ. ಇದಕ್ಕಿ ತನ್ನದೇ ಆದ ಸಂಸ್ಕೃತಿ ಭವ್ಯ ಪರಂಪರೆ ಇದೆ. ನಾಡಿನ ನಾಡಿಯನ್ನು ಹಿಡಿದು ನಡೆಸುತ್ತಿದ್ದ ಸಾಂಸ್ಕೃತಿಕ ಕೇಂದ್ರ ಇದು. ದೇವಾಲಯಗಳು ಜನರ ಭಕ್ತಿ ಮತ್ತು ನಿಷ್ಠೆಗಳ ಪ್ರತೀಕ(ಚಿದನಾಂದಮೂರ್ತಿ ಎಂ., ೧೯೭೯, ಪು.೧೭೫-೭೬). ಪ್ರತಿಮೆಗಳ ಕಲ್ಪನೆ ಹುಟ್ಟಿದಾಗ ಪ್ರತಿಮೆಗೆ ರಕ್ಷಣೆ ನೀಡಿದ ಆಲಯ ಇದು(ಗೋಪಾಲರಾವ್ ಎಚ್.ಎಸ್., ೧೯೯೩, ಪು.೨೯). ದೇವಾಲಯದ 'ವಾಸ್ತುಕೃತಿ' ಅಥವಾ 'ಆರ್ಕಿಟೆಕ್ಚರ್' ಎಂಬ ಶಬ್ದ ಸಂಕುಚಿತ ಅರ್ಥದಲ್ಲಿ ಗಾತ್ರದ ದೃಷ್ಟಿಯಿಂದ ಸಣ್ಣವೂ ಇರಬಹುದು. ದೊಡ್ಡವೂ ಇರಬಹುದು. ಕಲ್ಲಿನಿಂದ ಮರಮಟ್ಟಿನಿಂದ ನಿರ್ಮಿತಿಯೂ ಆಗಿರಬಹುದು. ಒಟ್ಟಾರೆ ಇದು ವಾಸ್ತು ಕೃತಿ(ಶಿವರಾಮಕಾರಂತ, ೧೯೭೫, ಪು.೨೯) ವಾಸ್ತು ರಚನೆಯಲ್ಲಿ ಅಂದು ಇಂದು ಉಳಿದಿರುವುದು ಗುಡಿ ಗೋಪುರಗಳೇ. ಇದು ಸಾಂಸ್ಕೃತಿಕ ಸಂಪತ್ತು. ವಾಸ್ತು ಗ್ರಂಥಗಳಲ್ಲಿ ದೇವಾಲಯದ ರಚನೆಯೇ ವಾಸ್ತುಶಾಸ್ತ್ರವೆನಿಸಿದೆ. ಇದೇ ವಾಸ್ತು ವಿದ್ಯೆ (ಪ್ರಭಾಕರ್ ಎಂ.ಎನ್., ೨೦೦೦, ಪು.೩) .

ದೇವಾಲಯಗಳ ವರ್ಗೀಕರಣದಲ್ಲಿ ಕರ್ನಾಟಕದಪಾತ್ರ ಬಲು ದೊಡ್ಡದು. ದೇವಾಲಯಗಳ ವಾಸ್ತುಶೈಲಿಗಳಲ್ಲಿ ಪ್ರಮುಖವಾಗಿ ಮೂರು ವಿಧಗಳನ್ನು ಕಾಣುತ್ತೇವೆ. ದ್ರಾವಿಡ, ನಾಗರ ಮತ್ತು ವೇಸರ. ಈ ಮಾತನ್ನು ಕರ್ನಾಟಕದಲ್ಲಿ ದೊರೆತ ಶಾಸನಗಳು ಪುಷ್ಠೀಕರಿಸುತ್ತವೆ(ರೈಸ್ ಬಿ.ಎಲ್., ೧೯೦೨, ಪು.೧೨೪). ದ್ರಾವಿಡ ಎಂಬ ಪದ ದಾಕ್ಷಿಣಾತ್ಯ. ನಾಗರ ಎಂಬ ಪದ ಔತ್ತರೇಯ ಸಂಪ್ರದಾಯಗಳಿಗೆ ಖಚಿತವಾದ ದಿಕ್ಕನ್ನು ತೋರಿಸುವಂತಿದೆ. ಅಂದರೆ ದಕ್ಷಿಣ ಭಾರತದ ದೇವಾಲಯ ಹೆಚ್ಚಿನ ಮಟ್ಟಿಗೆ ದ್ರಾವಿಡ ಶೈಲಿ. ಉತ್ತರ ಭಾರತದ ದೇವಾಲಯಗಳು ಹೆಚ್ಚಿನ ಮಟ್ಟಿಗೆ ನಾಗರ ಶೈಲಿಯಲ್ಲಿವೆ. 'ದಿಕ್ಕಿಗೆ' ಸಂಬಂಧಿಸಿದಂತೆ ಇದಕ್ಕೆ ಅಪವಾದವೂ ಉಂಟು. ಉದಾಹರಣೆಗಾಗಿ ಐಹೊಳೆಯಲ್ಲಿ ದ್ರಾವಿಡ ನಾಗರ ಮತ್ತು ವೇಸರ ಶೈಲಿಯ ಮೂರು ಪ್ರಕಾರದ ದೇವಾಲಯಗಳನ್ನು ಕಾಣಬಹುದು. ಅದಕ್ಕೆ "ಐಹೊಳೆಯನ್ನು ದೇವಾಲಯಗಳ ತೊಟ್ಟಿಲು" ಎಂದು ಕರೆಯಲಾಗಿದೆ. ವೇಸರ ಶೈಲಿ ಎಂಬುದು ಉತ್ತರ ಮತ್ತು ದಕ್ಷಿಣ ಭಾರತದ ಮಿಶ್ರಿತ ರಚನೆ. ದ್ರಾವಿಡ ಶೈಲಿಯ ಶಿಖರಗಳು ಅಷ್ಟಕೋನಾಕೃತಿ ಅಥವಾ ಆರು ಕೋನಾಕೃತಿಯಲ್ಲಿದ್ದರೆ ನಾಗರ ಶೈಲಿ ಚಚ್ಚೌಕೋನ ಅಥವಾ ಆಯತಾಕೋನಾಕೃತಿಯಾಗಿರುವುದು ವೇಸರ

[illegible]

ಶೈಲಿ ಎಂಬುದು ಇವೆರಡರ ಮಿಶ್ರಿತ ಶೈಲಿ ಅಥವಾ ಇದರ ಆಕೃತಿ ವೃತ್ತಾಯತ ಅಥವಾ ಗಜಪುಷ್ಪ.

ವರ್ಗೀಕರಣವನ್ನು ಮಾಡುವಾಗ ತಳವಿನ್ಯಾವೇ ಮುಖ್ಯವಾಗಿದ್ದರೂ ಇಲ್ಲಿ ಶಿಖರ ವಿನ್ಯಾಸವೇ ಪ್ರಧಾನ. ದ್ರಾವಿಡ, ನಾಗರ, ವೇಸರ ಶೈಲಿಯ ಹೊರತಾಗಿ ಉಳಿದ ಶೈಲಿಗಳು ಇನ್ನೂ ಕೆಲವು ಶೈಲಿಗಳು ಹುಟ್ಟಿಕೊಂಡವು. ಉದಾಹರಣೆ ಭೂಮಿಜ ಶೈಲಿ. ಈ ಶೈಲಿಯ ದೇವಾಲಯವನ್ನು ಕರ್ನಾಟಕದ ನುಗ್ಗಿಹಳ್ಳಿಯಲ್ಲಿ ಕಾಣಬಹುದು. ಹೀಗೆ ಕೆಲವೊಂದು ಪ್ರದೇಶಗಳಲ್ಲಿ ಪ್ರಾದೇಶಿ ಲಕ್ಷಣಗಳನ್ನು ಮೈಗೂಡಿಸಿಕೊಂಡು ದೇವಾಲಯಗಳ ರಚನೆಯಾಯಿತು. ಹೀಗಾಗಿ ದೇವಾಲಯಗಳ ರಚನೆಗಳಲ್ಲಿ ಪ್ರಾದೇಶಿಕತೆಯ ಪ್ರಭಾವವನ್ನೂ ನಾವು ಕಾಣುತ್ತೇವೆ. ಹೀಗೆ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ವಿವಿಧ ದೇವಾಲಯಗಳ ರಚನೆಯಾಯಿತು. ಒಂದೊಂದು ಪ್ರಮುಖ ರಾಜವಂಶದ ದೇವಾಲಯಗಳು ಒಂದೊಂದು ಪ್ರದೇಶದಲ್ಲಿ ಕೇಂದ್ರೀಕೃತಗೊಂಡವು. ಉದಾ.ಕದಂಬರ ಕಾಲದ ದೇವಾಲಯಗಳು, ಬನವಾಸಿಯಲ್ಲಿ, ಹಾಸನದ ಹಲ್ಮಿಡಿಯಲ್ಲಿ, ಬಾದಾಮಿ ಚಾಲುಕ್ಯರ ದೇವಾಲಯಗಳು ಐಹೊಳೆ ಬಾದಾಮಿ ಪಟ್ಟದ ಕಲ್ಲುಗಳಲ್ಲಿ, ರಾಷ್ಟ್ರಕೂಟರ ದೇವಾಲಯಗಳು, ಎಲ್ಲೋರ, ಕುಕ್ಕನೂರು, ಶಿರ್ವಾಳಗಳಲ್ಲಿ, ಕಲ್ಯಾಣ ಚಾಲುಕ್ಯರ ದೇವಾಲಯಗಳು, ಗದಗ, ಲಕ್ಕುಂಡಿ, ಕುರುವತ್ತಿಗಳಲ್ಲಿ, ಹೊಯ್ಸಳರ ಕಾಲದ ದೇವಾಲಯಗಳು ಬೇಲೂರು, ಹಳೇಬೀಡು, ಸೋಮನಾಥಪುರಗಳಲ್ಲಿ, ನೊಳಂಬರ ಕಾಲದದೇವಾಲಯಗಳನ್ನು ಹೇಮಾವತಿಯಲ್ಲಿ ವಿಜಯನಗರ ಕಾಲದ ದೇವಾಲಯಗಳು ಹಂಪೆಯಲ್ಲಿ ಮುಖ್ಯವಾಗಿ ಕಾಣಬಹುದು. ಹೀಗೆ ಬೇರೆ ಬೇರೆ ಕಾಲದ ದೇವಾಲಯಗಳನ್ನು ಬಿಡಿ ಬಿಡಿಯಾಗಿ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಕಾಣುತ್ತೇವೆ. ದೇವಾಲಯದ ರಚನೆ ಕಾಲದಿಂದ ಕಾಲಕ್ಕೆ ರಚನಾತ್ಮಕವಾಗಿ ನಿರ್ದಿಷ್ಟಗೊಳ್ಳುತ್ತಾ ತನ್ನದೇ ಆದ ಶೈಲಿ ಪ್ರಭೇದಗಳನ್ನು ಪ್ರಕಟಗೊಳಿಸುತ್ತಾ ನಡೆದು ಪ್ರತಿಯೊಂದು ಪ್ರದೇಶದ ದೇವಾಲಯಗಳು ಕರ್ನಾಟಕದ ವಾಸ್ತು ಶಿಲ್ಪಕ್ಕೆ ವೈಶಿಷ್ಟ್ಯಪೂರ್ಣವಾದ ಕೊಡುಗೆಯನ್ನು ನೀಡಿವೆ(ಕೂ.ಸ.ಅಪರ್ಣ, ೧೯೯೯, ಪು.೧೦). ಈ ಒಂದು ಹಿನ್ನೆಲೆಯನ್ನು ಆಧರಿಸಿ ಹಂಪಿ ಕ್ಷೇತ್ರದಲ್ಲಿನ ಕಾಮಲಾಪುರ ಗ್ರಾಮದ ದೇವಾಲಯಗಳ ವಾಸ್ತುಶೈಲಿಯ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ. ಕಾಮಲಾಪುರದಲ್ಲಿ ದೊರೆತ ಪುರಾತತ್ವ ಅವಶೇಷಗಳನ್ನು ಅವಲೋಕಿಸಿದಲ್ಲಿ ಇಲ್ಲಿನ ಪ್ರಾದೇಶಿಕ ವಾಸ್ತುಶೈಲಿಯನ್ನು ಈ ಕೆಳಗಿನಂತೆ ವಿಭಾಗಿಸಬಹುದು.

೧. ಲೌಖಿಕ ವಾಸ್ತುಶೈಲಿ

೨. ಸೈನಿಕ ವಾಸ್ತುಶೈಲಿ

೩. ಅರಮನೆಗಳು

೪. ದೇವಾಲಯಗಳು

[illegible]

[illegible]

೧. ಲೌಖಿಕ ವಾಸ್ತುಶೈಲಿ : ಕೋಟೆ-ಕೊತ್ತಲಗಳು ಕೋಟೆ ಎಂಬುದು ರಕ್ಷಾವರಣ. ರಕ್ಷಣೆಗೆ ಮುಡುಪಾಗಿರುವ ಸ್ಥಳವೇ ಕೋಟೆ. ಪ್ರಾಚೀನ ಕಾಲದ ಜನರು ತಮ್ಮನ್ನು ಹಾಗೂ ತಾನು ಸಂಪಾದಿಸಿದ ಧನವನ್ನು ರಕ್ಷಿಸಿಕೊಳ್ಳಲು ದರೋಡೆ ಕೋರರಿಂದ ಶತ್ರುಗಳಿಂದ ಕಾಡು ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಕೋಟೆಯನ್ನು ಕಟ್ಟಲು ಪ್ರಾರಂಭಿಸಿದರು. ಊರುಗಳು ಬೆಳೆದು ಹಲವಾರು ಊರುಗಳು ಒಟ್ಟುಗೂಡಿ ರಾಜ್ಯ ಸ್ಥಾಪನೆಯಾದ ಮೇಲೆ ರಾಜ್ಯವನ್ನು ಸಂರಕ್ಷಿಸಿಕೊಳ್ಳಲು ಗಡಿ ಪ್ರದೇಶಗಳಲ್ಲಿ ಬಲವಾದ ಕೋಟೆಗಳನ್ನು ಕಟ್ಟಿಸಿದರು. ಏಕೆಂದರೆ ಹೊರಗಿನಿಂದ ಆಕ್ರಮಣ ಬಂದಾಗ ಆ ಆಕ್ರಮಣ ತಡೆಯಲು ಕೋಟೆ ಕಟ್ಟಿಕೊಳ್ಳುವುದು ಅವಶ್ಯಕವಾಯಿತು. ರಾಜ್ಯದ ಅತ್ಯಾವಶ್ಯಕವಾದ ಸಪ್ತಾಂಗಗಳಲ್ಲಿ ಕೋಟೆ ಅಥವಾ ದುರ್ಗವೂ ಒಂದು ಎಂದು ರಾಜನೀತಿ ಹೇಳುತ್ತದೆ. (ಪಾಟೀಲ್ ಸಿ.ಎಸ್., ೧೯೯೯, ಪು.೧) ಕೋಟೆ ಇಲ್ಲದ ರಾಜ ಬಿರುಗಾಳಿಗೆ ಸಿಕ್ಕಿದ ಮೋಡಕ್ಕೆ ಸಮಾನ. ಬಿಲ್ಲುಗಾರ ಅಥವಾ ಸೈನಿಕನು ಕೋಟೆಯ ಗೋಡೆಗೆ ಹಿಂದೆ ರಕ್ಷಣೆ ಪಡೆದು ವೈರಿ ಪಡೆಯ ನೂರಾರು ಜನರೊಂದಿಗೆ ಹೋರಾಡಬಹುದು. ಕೋಟೆಗೆ ಸಂಬಂಧಿಸಿದಂತೆ ಉಲ್ಲೇಖವನ್ನೀಯುವ ಮೊದಲ ಶಾಸನ ಬಾದಾಮಿ ಚಾಲುಕ್ಯರ ಒಂದನೇ ಪುಲಕೇಶಿಯ ಶಾಸನ. ಕೋಟೆಗೆ ಸಂಬಂಧಿಸಿದಂತೆ ವಿವಿಧ ಪ್ರಕಾರಗಳನ್ನು ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಶುಕ್ರನೀತಿಸಾರ, ಮಾನಸಾರ, ದುರ್ಗಸಿಂಹನ ಪಂಚತಂತ್ರ ಸೋಮೇಶನ ಮಾನಸೋಲ್ಲಾಸ ಮುಂತಾದ ಗ್ರಂಥಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ(ಪಾಟೀಲ ಸಿ.ಎಸ್., ೧೯೯೯, ಪು.೨-೪).

"ಕೋಟೆ ಇಲ್ಲದ ರಾಜನನ್ನು ವಿಷ ರಹಿತ ಹಾವಿನಂತೆ ಅಥವಾ ಮದರಹಿತವಾದ ಆನೆಯಂತೆ" ಎಂಬುದಾಗಿ ಶಿವತತ್ವ ರತ್ನಾಕರದಲ್ಲೂ ಹೇಳಲಾಗಿದೆ. ಒಟ್ಟಾರೆ ಕೋಟೆಯ ವಾಖ್ಯೆ ಮತ್ತು ಕೋಟೆಯ ಮಹತ್ವವನ್ನು ಕುರಿತಂತೆ ಸಾಹಿತ್ಯಿಕ ಆಕರಗಳ ಜೊತೆಗೆ ಶಾಸನಗಳೂ ಈ ಮಾತನ್ನು ಪುಷ್ಟೀಕರಿಸುತ್ತವೆ. ಪ್ರಸ್ತುತ ಕೋಟೆಗಳ ಅಧ್ಯಯನ ಕಾಮಲಾಪುರ ಗ್ರಾಮಕ್ಕೆ ಸೀಮಿತವಾಗಿದ್ದರಿಂದ ಕಾಮಲಾಪುರ ಕೋಟೆಯ ಪ್ರಸ್ತಾವನೆಯನ್ನು ಮಾತ್ರ ಇಲ್ಲಿ ಮಾಡಲಾಗಿದೆ.

ಕಾಮಲಾಪುರ ಮತ್ತು ಹಂಪೆ ಇವೆರಡನ್ನೂ ಬೇರ್ಪಡಿಸುವುದು ಕಷ್ಟಸಾಧ್ಯ. ಕ್ಷೇತ್ರ ಹಂಪೆಯಾದರೂ ಇದರ ವಿಸ್ತೀರ್ಣ ದೊಡ್ಡದಾದ್ದರಿಂದ ಕಮಲಾಪುರವೂ ಹಂಪಿ ಕ್ಷೇತ್ರಕ್ಕೆ ಒಳಪಡುತ್ತದೆ. ವಿಜಯನಗರ ಪತನವಾದರೂ ವಿಜಯನಗರದ ಅಂದಿನ ವೈಭವದ ಹಂಪಿಯು ಇಂದಿಗೂ ಪುಣ್ಯಕ್ಷೇತ್ರವಾಗಿ ಮುಂದುವರಿ ಯುತ್ತಲೇ ಇದೆ. ಹಂಪಿಯ ತುಂಗಭದ್ರಾ ನದಿಯ ದಡದ ಮೇಲೆ ಪಟ್ಟಣವನ್ನು ಹಸ್ತಿನಾವತಿಯೆಂದು ಕರೆಯುತ್ತಿದ್ದರು. ಮೊದಲನೆ ಬುಕ್ಕನು ವಿಜಯನಗರ ಪಟ್ಟಮದಲ್ಲಿ ಕೋಟೆಯನ್ನು ಕಟ್ಟಿಸಿ ರಾಜಧಾನಿಯನ್ನು ಆನೆಗೊಂದಿಯಿಂದ ವಿಜಯನಗರಕ್ಕೆ ಸ್ಥಳಾಂತರಿಸಿದನು. ಚಿಕ್ಕದಾಗಿದ್ದ ಪಟ್ಟಣದ ಸುತ್ತ ಕಟ್ಟಿಸಿದ್ದಕೋಟೆ ಈಗ ಒಳ ಕೋಟೆಯಾಗಿದೆ. ಈ ಕೋಟೆ ಪ್ರಸ್ತುತ ಕಾಮಲಾಪುರ ಗ್ರಾಮದ ಮಹಾನವಮಿ ದಿಬ್ಬದ

ಅರಮನೆಯ ಪ್ರದೇಶ. ರಾಣಿಸ್ನಾನಗೃಹ, ಆನೆಸಾಲಿನ ಹಿಂದಿನ ಜೈನದೇವಾಲಯ, ಭೂಮಿಯ ಕೆಳಮಟ್ಟದ ದೇವಾಲಯದ ಪ್ರದೇಶವನ್ನು ಆವರಿಸಿದೆ. ಈ ಕೋಟೆಯನ್ನು ಪುಷ್ಟೀಕರಿಸುವ ಈ ಶಾಸನ ವೀರಬುಕ್ಕರಾಯನ ವಿಜಯನಗರ ಪಟ್ಟಣದ ಮೂಡಣ ಸಿಂಗಾರದ ಹೆಬ್ಬಾಗಿಲ ಬಡಗಣ ಮೂಲೆಯ ಹರೆಯ ಮೇಲಣ ಆನೆಗೊಂದಿಯ ಕೊತ್ತಳಕ್ಕೆ ಮಂಗಳ ಮಹಾಶ್ರೀ ಎಂದಿದೆ.(V.P.R. 1983-84, No.2)

ಪೋರ್ಚ್‌ಗೀಸ್ ಪ್ರವಾಸೀ ಡಾಮಿಂಗೋ ಫಯಾಜ್ ಕ್ರಿ.ಶ.೧೫೨೦ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೆಳಮಟ್ಟದ ಭೂಮಿಯಲ್ಲಿ ಎದೆಮಟ್ಟದ ಚೂಪಾದ ಕಲ್ಲುಗಳನ್ನು ನೆಟ್ಟಿದ್ದರು. ಇವು ಗುಡ್ಡ ಪ್ರದೇಶವನ್ನು ತಲುಪುವವರೆಗೆ ಮುಂದುವರೆದಿದ್ದವು. ಇಂತಹ ಕಲ್ಲುಗಳನ್ನು ಕುದರೆ ಮತ್ತು ಮನುಷ್ಯರ ಚಲನೆಯನ್ನು ತಡೆಯಲು ನೆಟ್ಟಿದ್ದುದನ್ನು ಅಬ್ದುಲ್ ರಜಾಕ್ ಸಹ ದಾಖಲಿಸಿದ್ದಾನೆ. ಇಂತಹ ಕುದುರೆ ಕಲ್ಲುಗಳು ನಮಗೆ ಈಗ ತೋಚುವುದು ಕುಮ್ಮಟದುರ್ಗದಲ್ಲಿ ಮಾತ್ರ(ಪಾಟೀಲ್ ಸಿ.ಎಸ್., ೧೯೯೯, ಪು.೯೪). ಕೋಟೆ ಗೋಡೆಗಳು ಬಹಳ ದಪ್ಪವಾಗಿದ್ದು ಹೊರಮ್ಮೈಗೆ ದಪ್ಪಕಲ್ಲುಗಳಿದ್ದು ಒಳ ಮೈಗೆ ಮಣ್ಣಿನ ಇಳಿ ಓರೆ ಇದೆ. ಹೊರಭಾಗದಲ್ಲಿ ದೊಡ್ಡ ಕಲ್ಲುಗಳು ಮಧ್ಯದಲ್ಲಿ ಒಂದು ಕಲ್ಲು ಮತ್ತೊಂದು ಕಲ್ಲು ಜೊತೆಗೆ ಸರಿಯಾಗಿ ಹೊಂದಿಕೊಳ್ಳುವಂತೆ ಸಂದುಗಳಿಲ್ಲದೆ ಕಟ್ಟಲಾಗಿದೆ. ಕಲ್ಲುಗಳನ್ನು ಮೇಲಕ್ಕೆ ಎತ್ತುವಾಗ ಭಾರವನ್ನು ಕಡಿಮೆ ಮಾಡುವುದಕ್ಕಾಗಿ ಬೆಣೆಯಾಕಾರದ ಕಲ್ಲುಗಳನ್ನು ಮಾಡಿರುವುದು ಈ ಕೋಟೆಯ ಇನ್ನೊಂದು ವಿಶೇಷತೆ. ಕೋಟೆ ಗೋಡೆಯ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಚೌಕಾಕರದ ಕೊತ್ತಲಗಳನ್ನು ಮಾಡಲಾಗಿದೆ. ಸೈನಿಕರು ನಿಲ್ಲಲೂ ಇದು ಉಪಯೋಗವಾಗುತ್ತದೆ. ಕೋಟೆಯ ಪಕ್ಕದಲ್ಲಿದ್ದ ಕಂದಕ ಈಗ ಮುಚ್ಚಲ್ಪಟ್ಟಿದೆ. ಪ್ರಾಮುಖ್ಯತೆ ಮತ್ತು ಗಾತ್ರವನ್ನು ಗಮನದಲ್ಲಿಟ್ಟು ಕೊಂಡು ಬಾಗಿಲು, ಹೆಬ್ಬಾಗಿಲು, ದಿಡ್ಡಿಗಳೆಂದು ವಿಂಗಡಿಸಿದರೆಂದು ಶಾಸನಗಳು ವ್ಯಕ್ತಪಡಿಸುತ್ತವೆ. ತಾಂತ್ರಿಕತೆಯ ದೃಷ್ಟಿಯಿಂದ ಪ್ರವೇಶದ್ವಾರವನ್ನು ಮಧ್ಯದಲ್ಲಿ ಮೋರೆ ಮಾಡಿ ಕಟ್ಟಲಾಗಿದೆ. ಕೆಲವು ಬಾಗಿಲುಗಳ ರಚನೆಯಲ್ಲಿ ಮುಸ್ಲಿಂ ಶೈಲಿಯ ಪ್ರಭಾವ ಕಾಣುತ್ತದೆ. ಒಟ್ಟಾರೆ ಶಾಸನಗಳ ಆಧಾರವನ್ನು ಹಿಡಿದು ಪರಿಶೀಲಿಸಿದಲ್ಲಿ ಕೋಟೆ ಕೊತ್ತಲಗಳಿಗೆ, ಬಾಗಿಲುಗಳಿಗೆ ಅವುಗಳನ್ನು ಗುರುತಿಸಲು ಅನುಕೂಲವಾಗು ವಂತೆ ಹೆಸರನ್ನು ಇಡಲಾಗಿದೆ. ಕಾಮಲಾಪುರ ಗ್ರಾಮದಲ್ಲಿ ಲಭ್ಯವಾದ ಶಾಸನಗಳು ಕೋಟೆ ಮತ್ತು ಕೋಟೆಗಳ ಹೆಬ್ಬಾಗಿಲಿನ ಹೆಸರುಗಳು, ಕೊತ್ತಳಗಳ ಹೆಸರುಗಳನ್ನು ದಾಖಲಿಸಿವೆ. ಕ್ರಿ.ಶ. ೧೩೮೦ರ ಶಾಸನದಲ್ಲಿ ಹರಿಹರ ರಾಯನ ಆಳ್ವಿಕೆಯ ಕಾಲದಲ್ಲಿ ಮಲಿಗೆಯ ನಾಯ್ಕನ ಮಗ ಬಥ್ಯೆಯನಾಯ್ಕನ ಬೇಟೆಗಾರರ ಹೆಬ್ಬಾಗಿಲಿನ ಪೂರ್ವದಿಕ್ಕಿನಲ್ಲಿ ಒರತೆಯ ಮೈಲಾರ ದೇವರನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ(V.P.R.1984-87, No.105).

ಕ್ರಿ.ಶ.೧೪ನೇ ಶತಮಾನದ ಶಾಸವು ವೀರಬುಕ್ಕರಾಯನು ವಿಜನಯಗರದ ಪಟ್ಟಣದ ಪೂರ್ವಕ್ಕಿರುವ ಸೋಮವಾರದ ಬಾಗಿಲ ಉತ್ತಕ್ಕಿರುವ ಸೋಮದೇವರ ಕೊತ್ತಲವನ್ನು ಉಲ್ಲೇಖಿಸುತ್ತದೆ(V.P.R.1983-

84, No.3). ಇದೇ ಶತಮಾನಕ್ಕೆ ಸೇರಿದ ಇನ್ನೊಂದು ಶಾಸನ ವೀರಬುಕ್ಕರಾಯನ ಕಾಲದಲ್ಲಿ ಸಿಂಘಾರದ ಹೆಬ್ಬಾಗಿಲಿನ ಉತ್ತರಕ್ಕೆ ಮೂಲೆಯ ಬಂಡೆಯ ಮೇಲಿರುವ ಆನೆಗೊಂದಿಯ ಕೊತ್ತಳಕ್ಕೆ ಮಂಗಳದಾಯಕ ವಾಗಲೆಂದು ತಿಳಿಸುತ್ತದೆ(V.P.R.1983-84, No.2). ಇದೇ ಕಾಲಕ್ಕೆ ಸೇರಿದ ಮತ್ತೊಂದು ಶಾಸನ ಜಡೆಯಶಂಕರ ದೇವರ ಹೆಸರಿನ ದಿಡ್ಡಿಯ ಬಾಗಲಿನ್ನು ಹೆಸರಿಸುತ್ತದೆ(V.P.R.1983-84, No.4). ಹಂಪಾದೇವಿಯ ಹೆಸರಿನ ದಿಡ್ಡಿ(ಬಾಗಿಲ) ಕೂಡ ಶಾಸನದಲ್ಲಿದೆ(V.P.R.1983-84, No.5). ಕ್ರಿ.ಶ.೧೪ನೇ ಶತಮಾನದ ಮತ್ತೊಂದು ಶಾಸನದಲ್ಲಿ ಮಾತಂಗದೇವರ ಕೊತ್ತಳ ಎಂದು ಬರೆದಿದೆ (V.P.R.1983-84, No.9). ಕ್ರಿ.ಶ.೧೪ನೇ ಶತಮಾನದಲ್ಲಿ ಕೊತ್ತಳವನ್ನು ಪ್ರತಾಪ ಕೊತ್ತಳವೆಂದು ಕರೆಯಲಾಗಿದೆ(V.P.R.1983-84, No.10). ಮದನದ ಹೆಸರಿನ ಕೊತ್ತಳವನ್ನು ಇದೇ ಕಾಲದ ಶಾಸನ ಉಲ್ಲೇಖಿಸುತ್ತದೆ(V.P.R. 1983-84, No.6). ಸಂಖರ ದೇವರ ಕೊತ್ತಳ ಎಂದು ಇದೇ ಕಾಲದ ಮೊತ್ತೊಂದು ಶಾಸನದಲ್ಲಿ ಬರೆದಿದೆ(V.P.R.1983-84, No.8). ಮೀಸರ ಗಂಡನ ಹೆಸರಿನ ಕೊತ್ತಳದ ಉಲ್ಲೇಖವು ೧೪ನೇ ಶತಮಾನದ ಶಾಸನದಲ್ಲಿ ಕಂಡುಬಂದಿದೆ(V.P.R. 1983-84, No.7). ಕ್ರಿ.ಶ.೧೪ನೇ ಶತಮಾನದ ಶಾಸನದಲ್ಲಿ ಹರಿಹರ ರಾಯನು ಹೊಡೆಯ ಬಾಗಿಲಿನ ವಿನಾಯಕ ದೇವರಿಗೆ ಭೂದಾನ ನೀಡಿದ ಉಲ್ಲೇಖವಿದೆ(V.P.R.1984-87, No.124). ಕ್ರಿ.ಶ.೧೫೩೧ರ ಶಾಸನವು ವೋಳ ಕೋಟೆ ಎಂಬ ಹೆಸರಿನ ಗ್ರಾಮದ ಉಲ್ಲೇಖವಿದ್ದ ಶಾಸನವಾಗಿದೆ(A.R.1889, No.24).

ಕ್ರಿ.ಶ.೧೫ ೧೬ನೇ ಶತಮಾನದ ಶಾಸನದಲ್ಲಿ ಕೋಟಿ ಶಂಕರದೇವರ ಬಾಗಿಲು ಎಂಬ ಉಲ್ಲೇಖವಿದೆ (V.P.R. 1984-87, No.83). ೧೫-೧೬ನೇ ಶತಮಾನದ ಮತ್ತೊಂದು ಶಾಸನದಲ್ಲಿ ಇದೇ ಕೋಟಿ ಶಂಕರ ದೇವರ ಬಾಗಿಲು ಎಂದು ಬರೆದಿದೆ(V.P.R. 1984-87, No.84). ಇದೇ ಶತಮಾನದ ಮತ್ತೊಂದು ಶಾಸನ ಸ್ವಾಮಿ ದ್ರೋಹರ ಗಂಡನ ಕೊತ್ತಳವೆಂದು ಕೊತ್ತಳವನ್ನು ಕರೆದ ಉಲ್ಲೇವಿದೆ(V.P.R. 1984-87, No.86). ಈ ಕಾಲದ ಮತ್ತೊಂದು ಶಾಸನದಲ್ಲಿ ಮಳಲ ವಿನಾಯಕ ಕೊತ್ತಳ ಎಂದು ಬರೆದಿದೆ (V.P.R. 1984-87, No.87). ಕ್ರಿ.ಶ. ೧೫ನೇ ಶತಮಾನದ ಮತ್ತೊಂದು ಶಾಸನ ವೊಳಕೋಟೆಯ ರೆಮ್ಮುದಿಡ್ಡಿ ಎಂಬ ಹೆಸರನ್ನು ಉಲ್ಲೇಖಿಸುತ್ತದೆ(V.P.R. 1984-87, No.125). ಇದೇ ಕಾಲದ ೧೫೨೯ರ ಶಾಸನದಲ್ಲಿ ವರದರಾಜಮ್ಮನ ಪಟ್ಟಣಕ್ಕೆ ಪೂರ್ವ ಪೆನುಗೊಂಡೆ ಬಾಗಿಲ ಬಳಿ ಎಂಬ ಪದದ ಉಲ್ಲೇಖವನ್ನು ಗುರುತಿಸಲಾಗಿದೆ(A.R. 1889, No.16).

ಹೀಗೆ ಹಲವಾರು ಶಾಸನಗಳು ಇಲ್ಲಿನ ಕೋಟೆ-ಕೊತ್ತಲಗಳನ್ನು ಹಾಗೂ ಕೋಟೆಯ ಬಾಗಿಲುಗಳನ್ನು ಹೆಸರಿಸಿವೆ. ಪ್ರಸ್ತುತ ವಿಜಯನಗರ ಕಾಲಕ್ಕೆ ಸೇರಿದ ಕಾಮಲಾಪುರದ ಕೋಟೆ ಈಗ ಪಾಳುಬಿದ್ದಿದೆ. ಸುಮಾರು ೨೦-೨೫ ಎಕರೆ ಪ್ರದೇಶದಲ್ಲಿ ಈ ಕೋಟೆಯ ವಿಸ್ತೀರ್ಣವಿದೆ. ಮಧ್ಯಮ ಗಾತ್ರದ ಗ್ರಾನೈಟ್

ಶಿಲೆಯಿಂದ ಕಟ್ಟಿದ ಕೋಟೆ ಈಗ ಗೋಚರ. ಕೋಟೆಯ ಮೇಲ್ಭಾಗದಲ್ಲಿ ಕೈಪಿಡಿ ಇದೆ. ಉತ್ತರ ದಿಕ್ಕಿನ ಗೋಡೆಯ ಮಧ್ಯದಲ್ಲಿ ದೊಡ್ಡ ಬಾಗಿಲು ಇದೆ. ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಳಗಳಿವೆ. ಉತ್ತರ ದಿಕ್ಕಿನ ಬಾಗಿಲಿನ ಮೇಲಿನ ಕೈಪಿಡಿಗಳಲ್ಲಿ ಚಿಕ್ಕ ಚಿಕ್ಕ ರಂಧ್ರಗಳಿದ್ದು ಭಿತ್ತಿಯ ಮೇಲೆ ಮೊಸಳೆ ಮೀನು, ನವಿಲು ಹಂಸಗಳ ಚಿತ್ರಣಗಳಿವೆ. ಪೂರ್ವ-ಪಶ್ಚಿಮ ದಿಕ್ಕಿಗೆ ವೃತ್ತಾಕಾರದ ಕೊತ್ತಳಗಳು ಇರುವುದು ಇದರ ಇನ್ನೊಂದು ವಿಶೇಷತೆ. ಪ್ರವೇಶದ ದ್ವಾರದ ಒಳಭಾಗದಲ್ಲಿ ನಗರೇಶ್ವರ ದೇವಾಲಯ ಗರ್ಭಗೃಹದಲ್ಲಿ ಶಿವಲಿಂಗವೂ ಇದೆ. ಇಲ್ಲಿನ ಮಧ್ಯಭಾಗದಲ್ಲಿನ ಕೊತ್ತಲ ೬೦ ಅಡಿ ಎತ್ತರ ೧೨೫ ಅಡಿ ಸುತ್ತಳತೆಯನ್ನು ಹೊಂದಿದೆ. ಪಶ್ಚಿಮ ದಿಕ್ಕಿಗೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಕೋಟೆಯ ಬಾಗಿಲಿನ ಸಮೀಪ ಗೂಡೊಂದನ್ನು ನಿರ್ಮಿಸಲಾಗಿದ್ದು, ಗೂಡಿನಲ್ಲಿದ್ದ ಗುಂಡನ್ನು "ತಾಯಮ್ಮ" ಎಂದು ಹೆಸರಿಸಿ ಪೂಜಿಸುತ್ತಿರುವುದು ಇತ್ತೀಚಿನವರೆಗೂ ನಡೆದುಬಂದಿದೆ. ಕೈಫಿಯತ್ತನ್ನು ಆಧಾರವನ್ನಾಗಿ ಇಟ್ಟುಕೊಂಡಲ್ಲಿ ಕ್ರಿ.ಶ.೧೭೦೩ರಲ್ಲಿ ಕುರುಗೋಡನ್ನು ಆಳುತ್ತಿದ್ದ ಚೆನ್ನರಾಯನು ಕಾಮಲಾಪುರದ ಕೋಟೆಯನ್ನು ಕಟ್ಟಿಸಿದನೆಂದಿದೆ. ಬಹುಶಃ ವಿಜಯನಗರ ಕಾಲದಲ್ಲೇ ನಿರ್ಮಾಣವಾದರೂ ತದನಂತರ ಜೀರ್ಣೋದ್ಧಾರವಾಗಿರಬೇಕು. ಜೀರ್ಣೋದ್ಧಾರವಾದರೂ ಅಳಿದು ಉಳಿದ ಈಗಿನ ತುಣುಕು ಕೋಟೆಯ ಮೇಲ್ಮೆ ಲಕ್ಷಣವನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ. ಇದು ಗ್ರಾಮ ರಕ್ಷಣೆಗಾಗಿ ನಿರ್ಮಾಣ ಮಾಡಿದಂತಿದೆ. ಕಾಮಲಾಪುರ ಗ್ರಾಮದಲ್ಲಿ ಲಭ್ಯವಾದ ಹಲವಾರು ಶಾಸನಗಳು ಹಂಪಿ ಕ್ಷೇತ್ರದ ಹಲವಾರು ಕೋಟೆ-ಕೊತ್ತಲಗಳನ್ನು ಉಲ್ಲೇಖಿಸುತ್ತಿರುವುದು ಇಲ್ಲಿನ ಕೋಟೆಯ ನಿರ್ಮಾಣಕ್ಕೆ ಪುಷ್ಟಿಯನ್ನು ನೀಡುವಂತಿದೆ.

ಅರಮನೆಗಳು : ಅಂದು ಅಳಿದು ಇಂದು ಉಳಿದ ದೇವಾಲಯಗಳು, ಅರಮನೆಗಳು, ನೆಲಗಟ್ಟುಗಳು, ಮಂಟಪಗಳು ಹಾಗೂ ಇತರೆ ಸ್ಮಾರಕಗಳು ಇಂದು ಅಂದಿನ ಗತವೈಭವವನ್ನು ಸಾರಿ ಹೇಳುವ ಜೀವಂತ ಸಾಕ್ಷಿಗಳು. ಕ್ರಿ.ಶ.೧೪೪೩ರಲ್ಲಿ ಅಬ್ದುಲ್ ರಝಾಕನೆಂಬ ರಾಯಭಾರಿ ಈ ಪಟ್ಟಣವನ್ನು ಕಣ್ಣುಗಳು ಕಂಡರಿಯದ ಕಿವಿಗಳು ಕೇಳಿ ತಿಳಿಯದಂತಹ ವೈಭವಯುಕ್ತ ನಗರವೆಂದು ಕೊಂಡಾಡಿದ್ದಾನೆ. ಪ್ರಸ್ತುತ ಕಾಮಲಾಪುರದ ಅರಮನೆಗಳ ಕುರಿತು ಲಭ್ಯವಾಗುವ ಆಕರಗಳು ನಾಲ್ಕು ವಿಧದಲ್ಲಿವೆ.

೧. ಈಗ ಕಾಣಸಿಗುವ ಅರಮನೆಗಳು, ಮಹಲುಗಳು ಇತ್ಯಾದಿ

೨. ಉತ್ಖನನದ ಸಮಯದಲ್ಲಿ ಬೆಳಕಿಗೆ ಬಂದ ಅರಮನೆಗಳು ಮಂಟಪಗಳು, ಮತ್ತು ನೆಲಗಟ್ಟುಗಳು

೩. ವಿದೇಶಿ ಪ್ರವಾಸಿಗರ ಪ್ರವಾಸಿ ಕಥನದಲ್ಲಿ ಕಾಣಸಿಗುವ ವೈಭವ

೪. ಕನ್ನಡ ಸಾಹಿತ್ಯದಲ್ಲಿ ವರ್ಣಿತವಾದ ವಿವರಣೆ

ಕ್ರಿ.ಶ.೧೯೭೫-೭೬ರಲ್ಲಿ ಮಧ್ಯಕಾಲೀನ ಹಂಪಿ ನಿವೇಶನವನ್ನು ರಾಷ್ಟ್ರೀಯ ಯೋಜನೆಗಳ ಅನ್ವಯ ವಿಸ್ತೃತ ಉತ್ಖನನಕ್ಕಾಗಿ ಆಯ್ಕೆ ಮಾಡಲಾಯಿತು. ಈ ಯೋಜನೆ ಅಂಗವಾಗಿ ಉತ್ಖನನ ೧೯೭೬ರಲ್ಲಿ

ಪ್ರಾರಂಭವಾಯಿತು. ಮಧ್ಯಕಾಲೀನ ಇತಿಹಾಸವನ್ನು ಪುನರ್ ರಚಿಸುವುದು ಈ ಉತ್ಖನದ ಉದ್ದೇಶ. ಮೇಲೆ ಹೇಳಲಾದ ಅರಮನೆಗಳು ಮಹಲುಗಳ ವಾಸ್ತು ಶೈಲಿಯನ್ನು ಆಧರಿಸಿದಲ್ಲಿ, ಅವು ೧೬-೧೭ನೇ ಶತಮಾನಕ್ಕೆ ಸೇರಿದ್ದವೆಂಬುದು ಸ್ಪಷ್ಟವಾಗುತ್ತದೆ. ಈಕಟ್ಟಡಗಳೆಲ್ಲವೂ ಹೆಚ್ಚಿನ ಮಟ್ಟಿಗೆ ಗುಡ್ಡ ಕಾಡು ಮೇಡು ಪ್ರದೇಶಗಳಿಗೆ ಹೊಂದಿಕೊಂಡಂತೆ ನಿರ್ಮಿತವಾಗಿವೆ. ಈ ಆವರಣದಲ್ಲಿಯೇ ದೇವಮಂದಿರ ಧಾರ್ಮಿಕ ಕಟ್ಟೆಗಳು ಮಂಟಪಗಳು ಕಂಡುಬಂದಿವೆ. ನೀರಿನ ಸೌಕರ್ಯ ವ್ಯವಸ್ಥೆಗಾಗಿ ಬಾವಿ, ಕೊಳ, ಕಾಲುವೆ, ಕೆರೆ, ಕಟ್ಟಡಗಳನ್ನು ನಿರ್ಮಿಸಲಾಗುತ್ತಿತ್ತು. ರಾಜ ಮತ್ತು ಆತನ ಪರಿವಾರದವರೆಗೆ, ಗಣ್ಯರಿಗೆ, ಉಪ್ಪರಿಗೆಯ ಮಹಲುಗಳು, ಮಂಟಪಗಳು, ಉಪವನಗಳು, ಕ್ರೀಡಾಕೊಳಗಳು ನಿರ್ಮಿತಗೊಂಡಿವೆ. ಇಲ್ಲಿನ ಕಟ್ಟಡಗಳ ಆಕರ, ಚೌಕಾಕಾರ, ಆಯತಾಕಾರ. ಉಪ್ಪರಿಗೆಯಿಂದ ಮೇಲೇರಲು ಅನುಕೂಲವಾಗುವಂತೆ ಮೆಟ್ಟಿಲುಗಳು ಇರುತ್ತಿದ್ದವು. ಇವುಗಳ ನಿರ್ಮಾಣಕ್ಕಾಗಿ ಕಲ್ಲುಬಂಡೆಗಳು ಇಟ್ಟಿಗೆ ನಯವಾಗಿ ಸೋಸಿದ ಮಣ್ಣು, ಸುಣ್ಣ ಮಿಶ್ರಿತ ಗಾರೆಯನ್ನು ಬಳಸಲಾಗಿದೆ. ಇಲ್ಲಿ ಕಾಣಬರುವ ವಾಸ್ತುಶೈಲಿ ನಂತರ ರಾಜರ ಆಳ್ವಿಕೆ ಕಾಲದಲ್ಲೂ ಉದಾಹರಣೆ ತಾಂಜಾವೂರು, ಮಧುರೈ ಮೊದಲಾದವುಗಳಲ್ಲಿ ಅಸ್ತಿತ್ವಕ್ಕೆ ಬಂದ ಅರಮನೆಗಳಕಟ್ಟಡಗಳ ಮೇಲೂ ಪ್ರಭಾವವನ್ನು ಕಾಣಬಹುದು.

ಕಾಮಲಾಪುರದಲ್ಲಿ ಕೈಗೊಳ್ಳಲಾದ ಉತ್ಖನನದ ಪರಿಣಾಮವಾಗಿ ಒಟ್ಟು ೩೨ ಅರಮನೆಯ ನಿವೇಶನಗಳನ್ನು ಗುರುತಿಸಲಾಗಿದೆ(ಪಾಟೀಲ ಸಿ.ಎಸ್. ೧೯೯೫, ಪು.೧೧೯-೧೩೫). ಇಲ್ಲಿ ಉತ್ಖತನವಾದ ಅರಮನೆಗಳು, ಕೋಟೆಯ ಆರವಣದಲ್ಲಿ ನಿರ್ಮಿತವಾಗಿವೆ. ಇಂದು ಕಟ್ಟಡಗಳು ಕಾಣದಿದ್ದರೂ ಅವುಗಳ ನೆಲಗಟ್ಟುಗಳು ಮಾತ್ರ ಉಳಿದಿವೆ. ಎರಡು ಮೂರು ಕಟ್ಟಡಗಳಿಗೆ ಸೇರಿ ಒಂದು ಭದ್ರವಾದ ಪ್ರಕಾರವನ್ನು ನಿರ್ಮಿಸುವುದು. ಇಲ್ಲಿನ ಇನ್ನೊಂದು ವಿಶೇಷತೆ. ಇಲ್ಲಿ ಕಂಡುಬಂದ ಅಧಿಷ್ಠಾನಗಳು ನುಣಪಾದ ಕಲ್ಲಿನಲ್ಲಿ ನಿರ್ಮಿತವಾಗಿವೆ. ಈವರೆಗೆ ಕಂಡುಬಂದ ನೆಲಗಟ್ಟುಗಳು ಮುಂದಿನ ಪ್ರವೇಶದ್ವಾರದಿಂದ ಆರಂಭಿಸಿ ಒಳಗೆ ಹೋಗುತ್ತಾ ಎರಡು-ಮೂರು ಎತ್ತರದ ಹಂತಗಳಲ್ಲಿ ಆರೋಹಣ ಪದ್ಧತಿಯಲ್ಲಿ ನಿರ್ಮಿತವಾಗಿವೆ. ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಹೋಗಲು ಸೋಪಾನ ಮತ್ತು ಕಟಾಂಜನಗಳೂ ಇವೆ(ಕೊಟ್ರಯ್ಯ ಸಿ.ಟಿ.ಎಂ., ೧೯೯೯, ಪು.೩೪). ಮಹಾನವಮಿ ದಿಬ್ಬದ ಎಡಭಾಗದಲ್ಲಿ ಶೋಧಿಸಲ್ಪಟ್ಟ ಕಲ್ಯಾಣಿ ವಿಜಯನಗರ ಕಾಲದ ಒಂದು ಉತ್ತಮವಾದ ಉದಾಹರಣೆ. ೨೨ x ೨೫ ಮೀಟರ್ ಚಚ್ಚೌಕಾರ, ಇದರ ಆಳ ೭ ಮೀಟರ್ ಸಮಾನಾಕರಾದ ಫಲಕಗಳಿಂದ ಕಟ್ಟಲ್ಪಟ್ಟಿದೆ. ಕ್ರಮೇಣ ಕಿರಿದಾಗುತ್ತಾ ಮೆಟ್ಟಿಲುಗಳ ರಚನೆ ಇಲ್ಲಿದೆ. ಫಲಕಗಳ ಕೆಳಭಾಗ ಸ್ವಲ್ಪ ಮುಂಚಾಚಿದೆ. ತಲವಿನ್ಯಾಸದಲ್ಲಿ ನಾಲ್ಕು ವಿಧದ ಪ್ರಮಾಣದ ಚಚ್ಚೌಕಗಳನ್ನಾಗಿ ವಿಭಜಿಸುತ್ತದೆ. ಒಂದೊಂದು ಚೌಕ ಭಾಗದಲ್ಲಿ ಅಲಂಕೃತ ಸೋಪಾನ ಇರುವುದು ಮತ್ತೊಂದು ವಿಶೇಷತೆ. ಕಲ್ಯಾಣಿಯ ಮಧ್ಯದ ಕುಳಿ ೨.೪೫ ಮೀಟರ್ ಆಳವಿದೆ.

ಕುಳಿಯ ತಲ ಗ್ರಾನೈಟ್ ಶಿಲೆಯ ಆಯತಕಾರದ ಫಲಕದ ನೆಲಗಟ್ಟನ್ನು ಒಳಗೊಂಡಿದೆ. ಈ ಕಲ್ಯಾಣಿಯ ದಕ್ಷಿಣ ಭಾಗದಲ್ಲಿ ಎತ್ತರವಾದ ವೇದಿಕೆಯಿದ್ದು ಬಹುಶಃ ಇದು ರಾಜಾಂಗಣದಲ್ಲಿ ವಾಸಿಸುತ್ತಿದ್ದ ಸ್ವಂತ ಉಪಯೋಗಕ್ಕೆ ನಿರ್ಮಿತಿ ಇರಬಹುದು(ದೀಕ್ಷಿತ ಜಿ.ಎಸ್., ೧೯೯೧, ಪು.೨೧೩).

ವಿದೇಶಿ ಪ್ರವಾಸಿಗರು ಕಂಡಂತೆ : ಪರ್ಶಿಯಾ ದೇಶದ ರಾಯಭಾರಿ ಅಬ್ದುಲ್ ರಜಾಕ್ ಹೇಳಿದಂತೆ ಈ ನಗರದ ಕುರಿತಂತೆ ಏಳೂ ದುರ್ಗಗಳೂ ಏಳು ಕೋಟೆಗಳೂ ಒಂದನೊಂದು ಆವರಿಸಿಕೊಂಡಿವೆ. ಇಲ್ಲಿ ರಾಜನು ವಾಸ ಮಾಡುವ ಅರಮನೆ ಇದೆ. ಉತ್ತರದಲ್ಲಿ ರಾಯನ ಅರಮನೆ ಇದೆ. ರಾಯನ ಅರಮನೆಯಲ್ಲಿರುವ ಸಭಾಮಂಟಪ ಎಲ್ಲಕ್ಕಿಂತ ಎತ್ತರವಾಗಿದೆ. ಅರಮನೆಯಲ್ಲಿ ಕಲ್ಲಿನಿಂದ ನಿರ್ಮಿಸಿದ ಕಾಲುವೆಗಳು ಹರಿಯುವ ನೀರಿನ ಝುರಿಯನ್ನು ನೋಡಬಹುದು. ರಾಜನಿರುವ ಅರಮನೆಯನ್ನು ಮುಟ್ಟುವ ಮುನ್ನ ಏಳು ಬಾಗಿಲುಗಳನ್ನು ದಾಟಿ ಹೋಗಬೇಕು. ನಾನು ಅರಮನೆಗೆ ಹೋದಾಗ ನನ್ನನ್ನು ನಾಲ್ಕು ಮಂಟಪಗಳ ಬಳಿಗೆ ಕರೆದೊಯ್ದರು. ಇವುಗಳ ಮೇಲ್ಭಾವಣೆಯನ್ನು ಗೋಡೆಯನ್ನು ಚಿನ್ನದ ತಗಡುಗಳಿಂದ ಹೊಡೆಸಿ ವಜ್ರಗಳಿಂದ ಅಲಂಕರಿಸಿದ್ದರು(ನಾಗೇಗೌಡ ಎಚ್.ಎಲ್., ೧೯೭೬, ಪು.೧೫೨-೧೫೬). ಧೂ ಅರ್ತೆಯ ಭರ್ಭೋಸ ತನ್ನ ಪ್ರವಾಸೀ ಕಥನದಲ್ಲಿ ಅರಮನೆಯ ಕುರಿತು ವಿವರಿಸಿದ್ದಾರೆ. ಅರಮನೆಗಳಲ್ಲಿ ಅಂಗಳಗಳಿವೆ. ಅಂಗಳಗಳಲ್ಲಿ ದಿಬ್ಬಗಳು ಕೊಳಗಳು ಹೂ ಗಿಡಗಳಿವೆ. ಅರಮನೆಯ ಎಲ್ಲಾ ಕೆಲಸಗಳು ಸ್ತ್ರೀಯರಿಂದ ನಡೆಯಬೇಕಾದ್ದರಿಂದ ಅರಮನೆಯ ಒಳಗೆ ವಾಸಕ್ಕೆ ಮನೆಗಳನ್ನು ಕಟ್ಟಲಾಗಿತ್ತು. ಕೊಳಗಳಲ್ಲಿ ಸ್ತ್ರೀಯರು ನಿತ್ಯವೂ ಸ್ನಾನ ಮಾಡಿ ವಾದ್ಯ ಬಾರಿಸಿ ಹಾಡಿ ನಲಿಯುತ್ತಾರೆ. ಅರಮನೆಯ ಪಾಕ ಗೃಹಗಳು ದೊಡ್ಡದಾಗಿವೆ(ನಾಗೇಗೌಡ ಎಚ್.ಎಲ್., ೧೯೯೬, ಪು.೨೯೦-೨೯೩). ಡಾಮಿಂಗೋ ಫಯಾಜ್ ಅರಮನೆ ಕುರಿತು ಪ್ರವಾಸೀ ಕಥನದಲ್ಲಿ ಉಲ್ಲೇಖಿಸಿದ್ದಾನೆ. ಅರಮನೆಯ ಆವರಣವನ್ನು ಪ್ರವೇಶಿಸಲು ಎರಡು ಬಾಗಿಲುಗಳಿವೆ..... ಬಾಗಿಲುಗಳ ಮಧ್ಯೆ ದೊಡ್ಡ ಅಂಗಳವಿದೆ. ಇದರ ಸುತ್ತಲು ಪಡಶಾಲೆ ಇದೆ.....ಅರಮನೆಯ ಆವರಣದಲ್ಲಿ ಮೂವರು ಪಟ್ಟ ಮಹಷಿಯರ ಬಳಿಯಲ್ಲಿ ಸಮಾನ ಸಂಖ್ಯೆಯಲ್ಲಿ ಊಳಿಗದವರಿದ್ದಾರೆ. ರಾಜನು ಸ್ನಾನ ಮಾಡಿದ ನಂತರ ಅರಮನೆಯೊಳಗೆ ಇರುವ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡುತ್ತಾನೆ........ರಾಜ ಬೀದಿಯನ್ನು ಹಿಡಿದು ಹೊರಟರೆ ಅರಮನೆಯ ಮುಂದಿನ ಮೈದಾನ ಊರಿನ ಮಧ್ಯ ಇರುವುದರಿಂದ ಎಲ್ಲರಿಗೂ ಬೇಕಾದ ಸ್ಥಳ....ಅನಂತರ ನೃತ್ಯ ಶಾಲೆ ನೋಡಿದೆವು ಬಲು ಉದ್ದವಾಗಿದೆ. ಈ ನೃತ್ಯ ಶಾಲೆಯ ಕೊನೆಯಲ್ಲಿ ಚಿತ್ರಿತವಾದ ನೃತ್ಯಶಾಲೆ ಇದೆ(ನಾಗೇಗೌಡ ಎಚ್.ಎಲ್., ೧೯೯೬, ಪು.೩೬೨-೩೬೩). ಫೆರ್‌ನೋವಾ ನ್ಯೂನಿಜ್ ಎಂಬ ಇನ್ನೊಬ್ಬ ವಿದೇಶಿ ಪ್ರವಾಸಿಗ ತನ್ನ ಪ್ರವಾಸೀ ಕಥನದಲ್ಲಿ ಈ ಅರಮನೆ ಕುರಿತಂತೆ ದಾಖಲಿಸಿದ್ದಾನೆ. ಮಂತ್ರಿ ತಿಮ್ಮರಸನು ಅರಮನೆಗೆ ಸೇರಿದಂತೆ ದೊಡ್ಡದಾದ ಗೋಪುರ ಕಟ್ಟಿಸಿ ಅದರಲ್ಲಿ ಚಿನ್ನಾದೇವಿಯನ್ನು

[illegible]

ಇಟ್ಟನು. ಅರಮನೆಯು ದೊಡ್ಡದಾಗಿದ್ದು ಅಲ್ಲಿ ವಿಶಾಲವಾದ ಕೋಣೆಗಳಿವೆ......ಅಡುಗೆ ಮನೆಯಲ್ಲಿ ಸುಮಾರು ೨೦೦ ಜನ ಉಸ್ತುವರಿ ನೋಡುವವರಿದ್ದಾರೆ(ನಾಗೇಗೌಡ ಎಚ್.ಎಲ್., ೧೯೯೬, ಪು.೪೧೦-೪೧೬). ಪ್ರವಾಸೀ ಕಥನದ ಜೊತೆಗೆ ಸಾಹಿತ್ಯಿಕ ಗ್ರಂಥಗಳೂ ಒಂದು ಆಕರವಾಗಿದೆ. ಚಾಮರಸ, ತಿಮ್ಮಣ್ಣ ಕವಿ, ವಿರೂಪಾಕ್ಷಪಂಡಿತ, ಮುಕ್ಕ ತಿಮ್ಮಯ್ಯ, ಮಲ್ಲಯ್ಯ ಮುಂತಾದ ಕವಿಗಳು ಕೇಳಿ ತಿಳಿದು ಸಂಗ್ರಹಿಸಿದ ಸಂಗತಿಗಳೂ ಇಲ್ಲಿವೆ.

ರಾಜನ ವಾಸಸ್ಥಳ, ರಾಜಾಲಯ, ರಾಜಭವನ ಎಂದು ಕರೆಯಲಾಗುತ್ತಿತ್ತು. ಲಕ್ಷ್ಮೀಶಕವಿ ರಾಜನ ಅರಮನೆಯನ್ನು ಚೆಲುವಿನ ನಾರಿಯಂತಿರ್ದ. ಆಮಹಾನಗರದ ಮುಖಾಂಭುಜವೆಂದು ವರ್ಣಿಸುತ್ತಾನೆ (ಜೈಮಿನಿ ಭಾರತ ಸಂ.೧೭, ಪ.೮). ಗೋವಿಂದ ವೈದ್ಯನು ರಾಜನ ಅರಮನೆಯ ಸಂಕೀರ್ಣವು ಒಂದು ಭದ್ರವಾದ ಒಳಕೋಟೆ ವಜ್ರಕೋಟೆ ಇತ್ತೆಂದು ಹೇಳುತ್ತಾನೆ. ಇದನ್ನು ಲಕ್ಷ್ಮೀ ಬಿಡಾರವೆಂತಲೂ ಹೊಗಳಿದ್ದಾನೆ(ಕ.ವಿ.ಸಂ.೭, ಪು.೨೩).

ಅರಮನೆಯ ಬೀದಿಗಳು : ಅರಮನೆಯ ಸಂಕೀರ್ಣವನ್ನು ಕೇಂದ್ರವಾಗಿರಿಸಿಕೊಂಡು ನೇರವಾದ ಬೀದಿಗಳು ದಿಕ್ಕುದಿಕ್ಕಿನಲ್ಲಿ ಹರಡಿಕೊಂಡಿದ್ದವು. ಅವುಗಳನ್ನು ಸೋಮಬೀದಿ, ಸೂರ್ಯಬೀದಿ ಎಂದು ಕರೆಯಲಾಗಿದೆ (ವಿ.ಚ.ಸಂ.೧, ಪು.೭೮). ರಾಜನ ಅರಮನೆಯ ಮುಂದಿನಿಂದ ಹೋಗುತ್ತಿದ್ದ ಬೀದಿ ರಾಜ ಬೀದಿ (ಕಂ.ವಿ.ಸಂ.೭, ಪು.೬೮) ರಾಜಾಲಯದ ಅಂತರಂಗದಲ್ಲಿ ವಿವಿಧೋಪಯೋಗಿ ಸೌಧಗಳು ಕಾಣಬರುತ್ತಿದ್ದವು. (ಚ.ಪು.ಸಂ.೧೧, ಪು.೪೯) ರಾಜ್ಯದಾಡಳಿತಕ್ಕೆ ಸಂಬಂಧಿಸಿದ ಕಾರ್ಯಾಲಯ ಸಂಕೀರ್ಣದಲ್ಲಿಯೇ ಕಾಣಬರುತ್ತಿತ್ತು. ರಾಜನ ಉಪಯೋಗಕ್ಕಾಗಿ ಸಂಕೀರ್ಣದಲ್ಲಿಯೇ ಭೋಜನ ಶಾಲೆ, ಪಾಕಶಾಲೆ, ರಾಜಭಂಡಾರ, ಉಗ್ರಾಣ, ಆಯುಧ ಶಾಲೆ, ಗರಡೀಯ ಮನೆ, ಅರಮನೆಯ ಒಳಗಡೆ ಹರಿಯುವ ನೀರಿನ ಕಾಲುವೆ, ವಿಧ ವಿಧ ಹೂಗಳಿಂದ ಕಂಗೊಳಿಸುತ್ತಿದ್ದ ಶೃಂಗಾರೋದ್ಯಾನವೂ ಕಾಣಬರುತ್ತಿತ್ತು (ಕಂ.ವಿ.ಸಂ.೭, ಪು.೪೭-೪೯) ರಾಜ ಸೌಧಾವಳಿಯ ಹತ್ತಿರವೇ ಸರ್ವವಿನಿಯೋಗದರಿಪ್ಪ ಚಾವಡಿಗಳೂ ಇದ್ದವು.ಪರಿವಾರದ ವಿನೋದ ವಿಹಾರಗಳಿಗಾಗಿ ರಾಜೋಧ್ಯಾನ ವನವೂ ಸನಿಹದಲ್ಲಿತ್ತು(ಚ.ಪು.ಸಂ.೫, ಪು.೫೦). ಕವಿ ಕನಕದಾಸರೂ ರಾಜ್ಯೋದ್ಯಾನ ಕುರಿತು ಉಲ್ಲೇಖಿಸಿದ ವಿಷಯಗಳೂ ಇವೆ. ಅರಮನೆಯೊಳಗೆ ಹೊಂದಿಕೊಂಡು ರಾಜ್ಯೋದ್ಯಾನವಿದೆ. ಸುಂದರವಾದ ಗಿಡ-ಮರ-ಬಳ್ಳಿ-ಕ್ರೀಡಾ ಕೊಂಡಗಳೂ ನಿರ್ಮಿತವಾಗಿದ್ದವು......(ಮೊ.ತ.ಸಂ.೧೪, ಪು.೨೮, ೩೨, ೩೫). ರಾಣಿವಾಸದ ಭಾಗಗಳಿಗೆ ಸಂಬಂಧಿಸಿದಂತೆ ರಾಣಿಗಳಿಗಾಗಿಯೇ ೧೨೦ ಗೃಹಗಳು ಇದ್ದುದಾಗಿ ಕವಿಯೊಬ್ಬನ ಹೇಳಿಕೆ ಇದೆ(ಪ್ರೌ.ಕ.ಸಂ.೨೧ ಪದ್ಯ ೯) ರಾಣಿಯರ ಉಪಯೋಗಕ್ಕಾಗಿ ಒಲಗಶಾಲೆ, ಮಂತಣಶಾಲೆ, ನಾಟಕ ಶಾಲೆ, ಬಿನಗ ಶಾಲೆ, ಚಂದ್ರನ ಶಾಲೆ, ಸುಚಿತ್ರ ಶಾಲೆ, ಮೋಹನ ಮಂಟಪ ಲಕ್ಷ್ಮೀ ಮಂಟಪಗಳಿದ್ದವು(ರ.ಚ.ಸಂ.೩೩, ಪ.೪೧-೪೩).

ಇದರಂತೆ ರಾಜಮಾತೆಯರ ಮನೆ, ಭೂಗತ ಮನೆ, ಉಪ್ಪರಿಗೆಯ ಮನೆ, ವಾಸ್ತುಶಾಸ್ತ್ರಜ್ಞ ಅವಲೋಕನ ಶಾಲೆ, ಪೂಜಾಗೃಹ, ಬಹುಜನಶಾಲೆ, ಶೃಂಗಾರ ತೋಟ, ಜಲಕ್ರೀಡಾ, ಸರೋವರಗಳ ಕುರಿತು ಸಾಹಿತ್ಯಿಕ ಆಕರಗಳು ಬಹಳೇ ಪುರಾವೆಗಳನ್ನು ಒದಗಿಸಿವೆ(ಕೊಟ್ರಯ್ಯ ಸಿ.ಟಿ.ಎಂ., ೧೯೯೯, ಸಂ.೪, ಪು.೩೨ ೪೯).

ಸಾಹಿತ್ಯಿಕ ಮತ್ತು ಶಾಸನಗಳ ಆಕರಗಳು ಕೋಟೆ ಕೊತ್ತಲ ಮತ್ತು ಅರಮನೆಯ ಕುರಿತು ಸಾಕಷ್ಟು ಮಾಹಿತಿಯನ್ನು ನೀಡುತ್ತವೆ. ಪ್ರಸ್ತುತ ಶಾಸನಗಳ ಆಕರಗಳ ಜೊತೆಗೆ ಕಾಮಲಾಪುರ ಗ್ರಾಮಕ್ಕೆ ಒಳಪಡುವ ಲೌಖಿಕ ವಾಸ್ತು ಶೈಲಿಯ ಸ್ಮಾರಕಗಳ ಪ್ರಸ್ತಾವನೆಯು ಅಷ್ಟೇ ಮಹತ್ವದ್ದು. ಕಾಮಲಾಪುರ ಗ್ರಾಮಕ್ಕೆ ಒಳಪಡುವ ರಾಣಿಯರ ಸ್ನಾನಗೃಹ, ಕಮಲಮಹಲ್, ಮಹಾನವಮಿ ದಿಬ್ಬ, ಪುಷ್ಕರಣಿ ಮತ್ತು ಗಜ ಶಾಲೆಯ ವಾಸ್ತು ವೈಶಿಷ್ಟ್ಯ ಹೀಗಿದೆ.

ರಾಣಿಯರ ಸ್ನಾನ ಗೃಹ : ಇದು ಕಮಲಾಪುರದಿಂದ ಹಂಪಿಗೆ ಹೋಗುವ ಮಾರ್ಗದಲ್ಲಿ ಸುಮಾರು ಒಂದು ಕಿ.ಮೀ. ಅಂತರದಲ್ಲಿದೆ. ರಾಣಿಯರಿಗಾಗಿಯೇ ೧೭೦ ಗೃಹಗಳು ಇದ್ದುದಾಗಿ ಕವಿಯೊಬ್ಬನ ಹೇಳಿಕೆ (ಪ್ರೌಢದೇವರಾಯನ ಕಾವ್ಯ ಸಂ.೨೧, ಪದ್ಯ.೯) ರಾಣಿಯೊರ್ವಳ ಸ್ನಾನಗೃಹ ಚಿನ್ನಮಯವಾಗಿದ್ದು ಅದರಮಧ್ಯದಲ್ಲಿ ನುಣುಪಾದಮತ್ತು ಹೊಳೆಯುತ್ತಿದ್ದ ಅಮೃತ ಶಿಲೆಯ ಬಂಡೆಗಲ್ಲುಗಳು ನಿರ್ಮಿಸಿದ್ದ ಚೌಕಾಕಾರದ ತೊಟ್ಟಿ ಇತ್ತು ಮತ್ತು ಸ್ನಾನದ ಸಮಯದಲ್ಲಿ ಉಪಯೋಗಿಸುತ್ತಿದ್ದ ಬಂಗಾರದಿಂದ ಮಾಡಿದ ನೀರಿನ ಪಾತ್ರೆಗಳನ್ನು, ಕುಂಭಗಳನ್ನು ಒದಗಿಸಿಟ್ಟಿದ್ದರು(ಧರ್ಮನಾಥಪುರಾಣ ಸಂ.೬, ವಚನ ಪದ್ಯ.೧೦). ರಾಣಿಯರ ಶೃಂಗಾರ ಗೃಹವು ಸನಿಹದಲ್ಲಿಯೇ ಇದ್ದಿರಬೇಕು. ರಾಣಿಯೋರ್ವಳು ಸ್ನಾನ ಮಾಡಿದ ನಂತರ ಶೃಂಗಾರ ಗೃಹಕ್ಕೆ ತೆರಳಿ ಅಲ್ಲಿ ಉಡಿಗೆ ತೊಡಿಗೆಗಳ ಅಲಂಕಾರ ಮಾಡಿಕೊಳ್ಳುವುದಕ್ಕೆ ನಿರತರಳಾಗಿರುತ್ತಾಳೆ(ಧರ್ಮನಾಥ ಪುರಾಣ ಸಂ.೬, ವಚನ ಪು.೧೦೫ ೧೧೭). ಇದು ಸಾಹಿತ್ಯಿಕಾಕರ ಮಾತ್ರ.

ಪ್ರಸ್ತುತ ಕಾಮಲಾಪುರ ಗ್ರಾಮದಲ್ಲಿನ ರಾಣಿಯರ ಸ್ನಾನಗೃಹ ದಕ್ಷಿಣಾಭಿಮುಖವಾಗಿದ್ದು ಚೌಕಾಕಾರದ ಸ್ಮಾರಕವಾಗಿದೆ. ಇದರ ಸುತ್ತಲೂ ಎತ್ತರ ಭೀತ್ತಿ. ನಾಲ್ಕು ದಿಕ್ಕಿಗೆ ಮೊಗಸಾಲೆಗಳಿದ್ದು ಮಧ್ಯೆ ೧೫ ಚ.ದ.ಕಿ.ಮೀ. x ೧.೮ ಚ.ದ.ಕಿ.ಮೀ ಉದ್ದ x ಅಗಲ ೧.೮ ಮೀಟರ್ ಆಳದ ಈಜುಕೊಳವಿದೆ. ಈ ಈಜು ಕೊಳಕ್ಕೆ ಬಾವಿಗಳಿಂದ ಹಾಗೂ ಕಾಲುವೆಗಳ ಮೂಲಕ ನೀರನ್ನು ಬಿಡಲಾಗುತ್ತಿತ್ತು. ಮಲಿನ ನೀರು ಹೋರಗೆ ಹೋಗುವ ವ್ಯವಸ್ಥೆಯನ್ನೂ ಮಾಡಲಾಗಿತ್ತು(ದೇವಕುಂಜರಿ, ೧೯೮೩, ಪು.೨೨-೨೩). ಇತ್ತೀಚಿಗೆ ಪುರಾತತ್ವ ಅನ್ವೇಷಣಾ ಇಲಾಖೆಯಿಂದ ಉತ್ಖನನವನ್ನು ಮಾಡಿದಾಗ ಗಾರೆ ಮಣ್ಣಿನಿಂದ ಮಾಡಿದ ಕೊಳವೆಯೂ ಕಂಡುಬಂದಿದೆ. ಮಲಿನ ನೀರು ಹೊರಗೆ ಹೋಗುವ ವ್ಯವಸ್ಥೆಯನ್ನು ಮಾಡಿದ್ದಕ್ಕೆ ಶೋಧಿತ ಈ ಕೊಳುವೆ ಪುಷ್ಠಿಯನ್ನು ನೀಡುವಂತಿದೆ. ಈ ಸ್ಮಾರಕ ವಿಜಯನಗರ ಕಾಲಕ್ಕೆ ಸೇರಿದ್ದು ಇಲ್ಲಿ ಕಮಾನು

ಮುಸ್ಲಿಂ ಶೈಲಿಯ ಪ್ರಭಾವವಿದೆ. ನಾಲ್ಕು ದಿಕ್ಕಿನಲ್ಲಿರುವ ಮೊಗಸಾಲೆಗಳು ಮುಂದಕ್ಕೆ ಚಾಚಿವೆ. ಎರೆಡೆರಡು ಮೊಗಸಾಲೆಗಳ ನಡುವೆ ಜಾಲಾಂಧ್ರಗಳಿವೆ. ಇವುಗಳ ಮೇಲಿನ ಭಾಗ ಗಾರೆಯಿಂದ ರಚಿತವಾಗಿದೆ. ಪ್ರತಿ ಅಂಕಣದ ಛಾವಣಿ ಗುಮ್ಮಟಾಕಾರದಲ್ಲಿದೆ. ಜ್ಯಾಮಿತಿ ಹಾಗೂ ಲತಾಬಳ್ಳಿ ಪಕ್ಷಿಗಳಚಿತ್ರಣಗಳಿಂದ ಅಲಂಕೃತವಾಗಿರುವುದು ಈ ಸ್ಮಾರಕದ ಮತ್ತೊಂದು ವಿಶೇಷತೆ. ನೀರಿನಲ್ಲಿ ಇಳಿಯಲು ಸೋಪಾನಗಳ ವ್ಯವಸ್ಥೆ ಕೊಳಕ್ಕೂ ಭಿತ್ತಿಗೂ ಇರುವ ಪೌಳಿಯಲ್ಲಿ ಸ್ತಂಭಗಳ ಮಧ್ಯೆ ಅಲ್ಲಲ್ಲಿ ಕಮಾನುಗಳಿಂದ ಕೂಡಿದ ಜಲಂಧ್ರ ಇವೆಲ್ಲವೂ ಈ ಸ್ಮಾರಕದ ವೈಶಿಷ್ಟ್ಯಗಳು. ಈ ಸ್ಮಾರಕದ ಮೇಲ್ಛಾವಣಿ ಶಿಥಿಲವಾದರೂ ಕೇಂದ್ರೀಯ ಪುರಾತತ್ವ ಸಂರಕ್ಷಣಾ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿದೆ. ಒಟ್ಟಾರೆ ಕೊರೆದ ಕಮಾನುಗಳು ಅವುಗಳ ಮಧ್ಯೆ ಗಚ್ಚು ಗಾರೆಗಳಿಂದ ಕೊರೆದ ಕಮಾನು, ಗಾರೆಯಿಂದ ಮಾಡಿದ ಹೂಬಳ್ಳಿ ವೈಶಿಷ್ಟ್ಯಪೂರ್ಣವಾಗಿದೆ (ವಸುಂಧರ ಫಿಲಿಯೋಜ, ೧೯೮೨, ಪು.೫೨-೫೩). ಈ ಸ್ಮಾರಕ ಇಂಡೋ ಇಸ್ಲಾಂಮಿಕ್ ಶೈಲಿಗೆ ಉತ್ತಮ ಉದಾಹರಣೆ.

ಕಮಲಮಹಲ್: ಇದರ ಇನ್ನೊಂದು ಹೆಸರು 'ಚಿತ್ತರಂಗಿಮಹಲ್' ಎಂದೂ ಕರೆಯುವುದುಂಟು. ಕಮಲದ ಆಕಾರದ ಹೋಲಿಕೆಯಿರುವುದರಿಂದ 'ಕಮಲಮಹಲ್' ಎಂಬ ಹೆಸರೇ ಹೆಚ್ಚು ಪ್ರಚಲಿತ. ಇಟ್ಟಿಗೆ ಗಾರೆಗಳಿಂದ ನಿರ್ಮಿತವಾದ ಈ ವಿಹಾರ ಮಂಟಪ. ಎರಡು ಅಂತಸ್ತುಗಳ ಒಂದು ಅಲಂಕಾರ ಮಂಟಪ (ಬಸವರಾಜ ಮಲಶೆಟ್ಟಿ, ೧೯೮೧, ಪು.೧೮-೧೯). ಈ ಸ್ಮಾರಕ ಭೂಮಿಯ ಸಮತಲದಿಂದ ಕೆಳಗಿದ್ದು ಮೂರು ಪಾವಟಿಗೆಗಳ ಸಹಾಯದಿಂದ ಮೇಲೇರಿದಾಗ ಮೇಲ್ಮನೆಯಲ್ಲೂ ರೂಪಗಳಿವೆ. ಸಣ್ಣಸಣ್ಣ ಮುಸ್ಲಿಮ್ ಶೈಲಿಯ ಕಮಾನುಗಳಿರುವ ಮಾಟವಾದ ಗೋಡೆಗಳಿಂದಾವೃತ್ತವಾದ ಈ ಮಹಡಿಯ ಮಧ್ಯಭಾಗ ಗುಮ್ಮಟದಂತೆ ಎತ್ತರ ನೋಡಲು ನಿಜಕ್ಕೂ ಸುಂದರ (ಬಸವರಾಜ ಮಲಶೆಟ್ಟಿ, ೧೯೮೧, ಪು.೧೮-೧೯). ಇದು ವಾಸ್ತವವಾಗಿ ಚೌಕಾಕಾರದ ತಳಪಾಯ ಹೊಂದಿದೆ. ಕಲ್ಲಿನ ಅಧಿಕೃತ ಅಧಿಷ್ಠಾನದ ಮೇಲೆ ಚೌಕಾಕಾರದ ೨೪ ಸ್ತಂಭಗಳಿದ್ದು ಪತ್ರ ವಿನ್ಯಾಸದ ಕಮಾನುಗಳು ಅವುಗಳನ್ನು ಆಧರಿಸಿವೆ. ಮೊದಲನೆಯ ಅಂತಸ್ತಿನ ಕಪೋತದಲ್ಲಿ ತುಸು ಬಾಗಿದ ಪುಷ್ಪ ವಿನ್ಯಾಸ ಹಾಗೂ ಹೊರಮೂಲೆಗಳಲ್ಲಿ ಯಾಳಿಗಳಿದ್ದು ಈಗ ಅವುಗಳಲ್ಲಿ ಒಂದು ಮಾತ್ರ ಉಳಿದಿದೆ. ಒಳಭಾಗದಲ್ಲಿ ಯಾವ ಅಲಂಕಾರವೂ ಕಂಡುಬರದೇ ಮೂಲ ರೂಪದಲ್ಲಿರುವುದು ಒಂದು ವಿಶೇಷತೆ. ಸ್ತಂಭಗಳನ್ನು ಅಲಂಕೃತ ಕಮಾನುಗಳು ಕೂಡಿಸಿವೆ. ಮೂಲೆಗಳಲ್ಲಿನ ಕೆಳಭಾಗದ ಅಡ್ಡ ಕಮಾನುಗಳು ವೈಶಿಷ್ಟ್ಯಪೂರ್ಣವಾಗಿವೆ. ಮೇಲ್ಛಾವಣಿಯ ಚಿತ್ರಣ ಮಾಳಿಗೆ ಮೇಲೆ ಹತ್ತಲು ಸೋಪಾನಗಳಿರುವುದು ಒಂದು ವೈಶಿಷ್ಟ್ಯ. ಮಧ್ಯಕಮಲದ ಮೊಗ್ಗು ಕೆಳಮುಖವಾಗಿದ್ದು ಸುತ್ತಲೂ ಗುಮ್ಮಟಗಳನ್ನು ಉಚಿತ ಪರಿಮಾಣಗಳಲ್ಲಿ ಕೂಡಿಸಲಾಗಿದೆ. ಕಟ್ಟಡದ ಉತ್ತರ ಭಾಗದಲ್ಲಿ ಮೇಲಿನ ಅಂತಸ್ತಿಗೆ ಹೋಗಲು ಮೆಟ್ಟಿಲುಗಳಿವೆ. ಅಲ್ಲಿ

ಗಾರೆಯ ಕಮಾನುಗಳು, ಲತಾ ವಿನ್ಯಾಸಗಳು, ಪುಷ್ಪ ಬೋದಿಗೆಗಳು ಮತ್ತು ವಿಗ್ರಹಗಳನ್ನಿಡಲು ಗೂಡುಗಳಿವೆ. ಮಧ್ಯದಲ್ಲಿ ಕೆಳಮುಖವಾದ ಕಮಲದ ಗುಮ್ಮಟವಿದ್ದು,ಕಟ್ಟಡದ ಮೇಲೆ ಪಿರಮಿಡ್ಡಿನಾಕಾರದ ಭಿನ್ನ ಗಾತ್ರದ ಒಂಭತ್ತು ಶಿಖರಗಳಿವೆ. ಇವು ಒಂದೊಂದು ತುಸು ಬಾಗಿದ ಕಪೋತಗಳಾಗಿ ಒಂದರ ಮೇಲೊಂದು ಕಿರಿದಾಗುತ್ತಾ ಹೋಗಿ ಸ್ಮಾರಕಕ್ಕೆ ಮೆರಗನ್ನು ನೀಡಿವೆ. ಒಟ್ಟಿನಲ್ಲಿ ಈ ಸ್ಮಾರಕ ಯಾವ ದಿಕ್ಕಿನಲ್ಲಿ ವೀಕ್ಷಿಸಿದರೂ ವೈವಿಧ್ಯತೆ ಇಲ್ಲದೆ ಒಂದೇ ರೀತಿಯಲ್ಲಿ ಕಾಣಿಸುತ್ತದೆ(ದೇವಕುಂಜರಿ ಡಿ. ೧೯೭೦ ಪು.೩೪-೩೫). ಈ ಸ್ಮಾರಕವನ್ನು ಪದ್ಮಮಹಲ್ ಎಂದೂ ಪಂಚಮಹಲ್ ಎಂದೂ ಕರೆಯುತ್ತಾರೆ. ಈ ಸ್ಮಾರಕ ಹಿಂದೂ ಮುಸ್ಲಿಂ ಶೈಲಿಗೆ ಒಂದು ಉತ್ತಮ ಉದಾಹರಣೆ. ಸುತ್ತಲೂ ತೆರೆದ ಕಮಾನುಗಳು ಮುಸ್ಲಿಂ ಶೈಲಿಯಲ್ಲಿಯಾದರೆ ಇದರ ಮುಂಚಾಚು ದ್ವಿಭಂಗಿ ಸೂರು ಅದಕ್ಕೆ ಬೆಂಬಲ ಕೊಡುವ ಚಾಚು ಪೀಠಗಳು ಕಟ್ಟಡದ ಮೇಲಿನ ಗೋಪುರಗಳು ಹಿಂದೂ ವಾಸ್ತುಶೈಲಿಯ ವೈಶಿಷ್ಟ್ಯತೆಯಾಗಿದೆ.

ಗಜಶಾಲೆ : ವಿಜಯನಗರ ಕಾಲದಲ್ಲಿ ಆನೆಗಳನ್ನು ಯುದ್ಧ, ದೇವಾಲಯಗಳ ಉತ್ಸವ, ರಾಜಪರಿವಾದರವರ ಉತ್ಸವ ಬೇಟೆ ಮುಂತಾದ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದು ಅಂತಹ ಆನೆಗಳ ಸಾಲಿನ ಶಿಲ್ಪಗಳನ್ನು ರಾಮಚಂದ್ರ ದೇವಾಲಯದ ಭಿತ್ತಿಯ ಮೇಲೆ ಕಾಣಬಹುದು. ದೇವಾಲಯದ ಮೆಟ್ಟಿಲುಗಳ ಬದಿಯಲ್ಲಿ ಮತ್ತು ಅರಮನೆ ಕಟ್ಟಡಗಳ ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಕೆಲವೊಮ್ಮೆ ಆನೆಯ ಪೂರ್ಣ ಆಕಾರದ ಶಿಲ್ಪಗಳನ್ನು ಅಥವಾ ಆನೆಯ ಸೊಂಡಿಲು ಭಾಗದ ಶಿಲ್ಪಗಳನ್ನು ಕಾಣಬಹುದಾಗಿದೆ.

ವಿಜಯನಗರ ಪಟ್ಟಣದ ಉಪನಗರವಾದ ಕಾಮಲಾಪುರ ಗ್ರಾಮದಲ್ಲಿನ ಪಟ್ಟದಾನೆಗಳನ್ನು ಕಟ್ಟಲು ನಿರ್ಮಾಣಗೊಂಡ ಈ ಆನೆ ಲಾಯದ ಕಟ್ಟಡವು ಹಿಂದೂ ಮುಸ್ಲಿಂ ಮಿಶ್ರಶೈಲಿಯ ಅಪರೂಪದ ರಚನೆ. ಈ ಗಜಶಾಲೆಯಲ್ಲಿರುವ ಸ್ಥಳಾವಕಾಶವು ಕೇವಲ ಹನ್ನೊಂದು ಕೊಠಡಿಗಳಿದ್ದು ಹನ್ನೊಂದು ಆನೆಗಳನ್ನು ಕಟ್ಟಲು ಸ್ಥಳಾವಕಾಶವು ಮಾತ್ರ ಇರುವುದನ್ನು ಕಾಣಬಹುದಾಗಿದೆ(Longhurst A.H., 1982, P.17-18). ಈ ಆನೆಗಳುರಾಜ ಪರಿವಾರದವರಿಗೆ ಮೀಸಲಾಗಿದ್ದವೆಂದು ತೋರುತ್ತದೆ. ಈ ಕೊಠಡಿಗಳ ಶಿಖರ ಗುಮ್ಮಟಾಕಾರ ಅಷ್ಟಕೋನಾಕಾರದಲ್ಲಿವೆ. ಛಾವಣಿಗೆ ಕಟ್ಟಿಗೆಗಳ ಆಧಾರವಿದೆ. ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಹೋಗಲು ಮಧ್ಯ ಸಣ್ಣ ಕಿಂಡಿಗಳಿವೆ. ಪ್ರತಿಯೊಂದು ಕೊಠಡಿಯಲ್ಲಿ ಒಂದೊಂದೇ ಆನೆಯನ್ನು ಕಟ್ಟಬಹುದಾಗಿದ್ದು, ಕೊಠಡಿಯ ಛಾವಣಿಯ ಮೇಲಿಂದ ಕಬ್ಬಿಣದ ಸರಪಳಿಗಳನ್ನು ತೂಗಿಬಿಟ್ಟು ಅದರಿಂದ ಆನೆಗಳನ್ನು ಕಟ್ಟುತ್ತಿದ್ದರೆಂಬ ರಜಾಕನ ಹೇಳಿಕೆಯನ್ನು ಗಮನಿಸಿದರೆ ಇದು ಗಜಶಾಲೆಯೇ ಇರಬೇಕೆನಿಸುತ್ತದೆ. ಪ್ರತಿಯೊಂದು ಕೊಠಡಿಯ ಮುಖ್ಯ ದ್ವಾರ ದೊಡ್ಡದಾದ ಕಮಾನಿನಿಂದ ಕೂಡಿ ಭವ್ಯವಾಗಿದೆ. ಮಧ್ಯಕ್ಕಿರುವ ಕೊಠಡಿಗೆ ಎರಡು ಅಂತಸ್ತಿನ ಚೌಕಾಕಾರದ ಗೋಪುರವಿದೆ. ಇದರ ಮೇಲ್ಛಾವಣಿಗೆ ಹೋಗಲು ಮೆಟ್ಟಿಲುಗಳಿವೆ. ಮೇಲ್ಮಾಳಿಗೆಗೆ ಹೋದಾಗ ಎಲ್ಲಾ ಮಾಳಿಗೆಗಳಲ್ಲಿನ

ಸ್ವರೂಪತೆಯನ್ನು ಕಾಣಬಹುದು. ಎರಡೂ ತುದಿಗಳಲ್ಲಿ ಮೊದಲಿನವು ದುಂಡಗಿದ್ದರೆ ಎರಡನೆಯವೂ ಮತ್ತು ನಾಲ್ಕನೆಯವು ದೇವಾಲಯದ ಶಿಖರದಂತಿವೆ. ಮೂರನೆಯವು ನೆಲ್ಲಿಕಾಯಿಯಂತೆ ಏಣು ಏಣುಳ್ಳ ಮೇಲು ಹೊದಿಕೆ ಹೊಂದಿದ್ದರೆ ಕೊನೆಯವೆರಡು ದುಂಡಾಗಿವೆ(ವಸುಂಧರ ಫಿಲಿಯೋಜ, ೧೯೮೨, ಪು.೪೬-೪೭). ಇತ್ತೀಚಿಗೆ ಉತ್ಖನನ ನಡೆದಾಗ ಈ ಸ್ಮಾರಕದ ಸಮೀಪ ದೊಡ್ಡದಾದ ಸರಪಳಿ ದೊರಕಿರುವುದರಿಂದ ವಿದೇಶಿ ಪ್ರವಾಸಿಗರ ಕಥನದಂತೆ ಇದು ಆನೆ ಸಾಲು (ಲಾಯ) ಎಂಬುದಕ್ಕೆ ಪುಷ್ಠಿಯಾದಂತಿವೆ.

ಉತ್ಖನನದ ವರದಿಯಲ್ಲಿ ಆನೆಯ ಅಸ್ಥಿಪಂಜರ ಹಾಗೂ ಗೋದಲಿ ಮಾನವರ ೨೮ ಅಸ್ಥಿಪಂಜರದ ಭಾಗಗಳು, ದ್ವಾರಬಾಗಿಲು, ಕಪ್ಪುಬೂದಿ ಮಣ್ಣು, ನೀರಿನ ತೊಟ್ಟಿಗಳು ಮತ್ತು ಕಲ್ಲಿನ ದೀಪಸ್ತಂಭ ಮುಂತಾದ ಅವಶೇಷಗಳ ಶೋಧಿತ ವಿವರಗಳಿವೆ(ದೇವರಾಜ್ ಡಿ.ವಿ. ಮತ್ತು ಚೆನ್ನಬಸಪ್ಪಪಾಟೀಲ ಎಸ್., ೧೯೯೬, ಪು.೯-೧೧).

ಮಹಾನವಮಿ ದಿಬ್ಬ : ಇದು ಅರಮನೆಯ ಪ್ರದೇಶದಲ್ಲಿ ಈಶಾನ್ಯ ಮೂಲೆಯಲ್ಲಿದ್ದು, ಸುಮಾರು ೧೨ ಕಿ.ಮೀ. ಎತ್ತರದ ದೊಡ್ಡ ವೇದಿಕೆ ಇದು. ಈ ಎತ್ತರದ ಸಭಾಪೀಠವನ್ನು ಕೃಷ್ಣದೇವರಾಯನು ಉದಯಗಿರಿಯ ದಿಗ್ವಿಜಯದ ಸ್ಮರಣಾರ್ಥವಾಗಿ ಕ್ರಿ.ಶ.೧೫೩೧ರಲ್ಲಿ ನಿರ್ಮಿಸಿದನು. ಈ ಸ್ಮಾರಕವನ್ನು ಮಹಾನವಮಿದಿಬ್ಬ ಅಥವಾ ದಸರಾ ದಿಬ್ಬ ಎಂದು ಕರೆಯಲಾಗುತ್ತದೆ. ಹಾಗೂ ವಿಜಯನಗರದ ಭವನ ಎಂದು ಫಯಾಜ್ ಕರೆದಿದ್ದಾನೆ(ದೇವಕುಂಜರಿ ಡಿ., ೧೯೮೩, ಪು.೨೩). ವಾಸ್ತವವಾಗಿ ಈ ವೇದಿಕೆಯ ಮೇಲೆ ವರ್ಣರಂಜಿತವಾದ ಅಲಂಕೃತವಾಗಿದ್ದ ಕಂಬಸಾಲುಳ್ಳ ಹಜಾರವಿತ್ತು. ಮಹಾನವಮಿ ಅಥವಾ ಒಂಭತ್ತು ದಿನಗಳ ಹಬ್ಬವು ಇಲ್ಲಿ ವಿಜೃಂಭಣೆಯಿಂದ ನಡೆಯುತ್ತಿತ್ತು. ಈ ದಿಬ್ಬದ ಮೇಲೆ ಮಹಾನವಮಿಯ ದಿನ ಚಕ್ರವರ್ತಿ ಸಾಮಂತ, ಮಾಂಡಲಿಕ, ರಾಜಪರಿವಾರದೊನೆ ಕುಳಿತು ಎದುರುಗಡೆ ನಡೆಯುತ್ತಿದ್ದ ಕುಸ್ತಿ, ನಾಟ್ಯ ಆನೆಗಳ ಕಾಳಗ ಮುಂತಾದ ಕ್ರೀಡೆ ಉತ್ಸವಗಳನ್ನು ನೋಡುತ್ತಿದ್ದನು. (ಡಾ.ಬಸವರಾಜ ಮಲಶೆಟ್ಟಿ, ೧೯೮೧, ಪು.೨೦). ಇದು ಮೂರು ಸ್ತರಗಳ ವಿಶಾಲವಾದ ವೇದಿಕೆ. ಒಂದೊಂದು ಸ್ತರದ ಅಂಚಿನಲ್ಲಿ ಗ್ರ್ಯಾನೈಟ್ ಕಲ್ಲನ್ನು ಅಳವಡಿಸಿದ್ದು, ಈ ಕಲ್ಲುಗಳಲ್ಲಿ ಮಾಂಡಲೀಕರು ಮತ್ತು ವಿದೇಶಿ ರಾಯಭಾರಿಗಳು ಕಾಣಿಕೆ ಸಲ್ಲಿಸುತ್ತಿರುವ ದೃಶ್ಯ, ಆನೆ, ಕುದುರೆ ಮತ್ತು ಕಾಲ್ದಳಗಳ ಮೆರವಣಿಗೆಯ ಚಿತ್ರಗಳು ಚಿತ್ರಿತವಾಗಿವೆ.

ವೇದಿಕೆಯ ಪಶ್ಚಿಮ ಭಾಗದಲ್ಲಿಸೂಕ್ಷ್ಮ ಶಿಲ್ಪಗಳ ಫಲಕಗಳಿವೆ. ಇವುಗಳಲ್ಲಿ ನೃತ್ಯಗಾರರ, ಸಂಗೀತಗಾರರ, ಶಿಲ್ಪಗಳಿವೆ. ಪೂರ್ವ ಭಾಗದಲ್ಲಿ ಸಣ್ಣ ಕೊಠಡಿ ಇದ್ದು ವೇದಿಕೆ ಏರಲು ಮತ್ತು ಇಳಿಯಲು ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಮೆಟ್ಟಿಲುಗಳಿವೆ. ಒಳಗಿನ ಭಿತ್ತಿಯ ಮೇಲೆ ಶಂಕವಿನಕಾರದ ಟೋಫಿಗಳನ್ನು

[illegible]

ಧರಿಸಿದಂತೆ ಚಿತ್ರಿತವಾದ ಶಿಲ್ಪಗಳು ಚೀನಾ ದೇಶದ ರಾಯಭಾರಿಗಳು. ಇದರ ಹೊರ ಮಗ್ಗಲು ೮-೧೦ ಸಾಲುಗಳಲ್ಲಿ ಪ್ರಾಣಿ ಪಕ್ಷಿ, ನೃತ್ಯಗಾರ್ತಿಯರ ದೇವಾಲಯ, ಕ್ರೀಡೆ ಮುಂತಾದವುಗಳನ್ನು ಸುಂದರವಾಗಿ ಕಲಾತ್ಮಕವಾಗಿ ಕೆತ್ತಲಾಗಿದೆ. ವೇದಿಕೆಯ ತಳಭಾಗ ಸುಮಾರು ೪೦ ಚ.ಮೀಟರಾಗಿದ್ದು,ಮೇಲಿನ ಸ್ತರ ೨೪ ಚ.ಮೀಟರ್ ವಿಸ್ತೀರ್ಣವನ್ನು ಹೊಂದಿದೆ.

ಪುಷ್ಕರಣಿ : ಮಹಾನವಮಿ ದಿಬ್ಬದ ಹತ್ತಿರದಲ್ಲಿರುವ ಮೆಟ್ಟಿಲು ಪುಷ್ಕರಣಿ. ಪರಿಪೂರ್ಣ, ಪ್ರಮಾಣಬದ್ದ ಸುಂದರವಾದ ಸ್ಮಾರಕ. ಈ ಮೆಟ್ಟಿಲು ಪುಷ್ಕರಣಿಯು ನೆಲಮಟ್ಟಕ್ಕಿಂತ ಕೆಳಗೆ ಇದು ಪುಷ್ಕರಣಿಯು ಐದು ಹಂತಗಳಲ್ಲಿದ್ದು ಪ್ರತಿ ಮೇಲಿನ ಹಂತವು ಕೆಳಗಿನ ಹಂತಕ್ಕಿಂತ ಹೆಚ್ಚು ವಿಸ್ತಾರವಾಗಿದೆ. ಪ್ರತಿಹಂತವೂ ಚೌಕಾಕಾರವಾಗಿದೆ.

ಮೊದಲನೆಯ ಹಂತವು ೬.೯೦ x ೬.೯೦ ಮೀ. ಇದ್ದು, ಆಳವು ೨.೪೫ ಮೀ. ಇದೆ. ಇದರ ನಾಲ್ಕು ದಿಕ್ಕಿನಲ್ಲಿ ೧೧ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳ ಅಗಲ ಮಾತ್ರ ಹೆಚ್ಚಾಗುತ್ತಾ ಕೊಳದ ಆಳಕ್ಕೆ ಪಕ್ಕಕ್ಕೆ ಚಲಿಸುತ್ತಾ ಇಳಿಯಬೇಕಾಗುತ್ತದೆ. ಎರಡನೆಯ, ಮೂರನೆಯ, ನಾಲ್ಕನೆಯ, ಐದನೆಯ ಹಂತಗಳು ೯.೨೦ ಮತ್ತು ೯.೨೦ ಮೀ. ಮತ್ತು ೧೨.೬೫ x ೧೨.೬೫ ಮೀ. ೧೬.೧೦ x ೧೬.೧೦ ಮೀ ಮತ್ತು ೨೦.೭೦ x ೨೦.೭೦ ಮೀಟರ್ ಕ್ರಮವಾಗಿ ಇದೆ. ಪ್ರತಿಹಂತದಲ್ಲೂ ಪಿರಮಿಡ್ ಆಕಾರದ ೬ ಮೆಟ್ಟಿಲುಗಳಿವೆ. ಇವುಗ ಅಗಲದಲ್ಲಿ ಮತ್ತು ಉದ್ದದಲ್ಲಿ ಹೆಚ್ಚಾಗುತ್ತಾ ಪಕ್ಕಕ್ಕೂ ಮತ್ತು ಮುಂದಕ್ಕೂ ಚಲಿಸಲು ಅನುವು ಮಾಡಿಕೊಡುತ್ತವೆ.

ಎರಡನೇ ಹಂತದಲ್ಲಿ ಪ್ರತಿ ದಿಕ್ಕಿನಲ್ಲೂ ಮೂರು ಪಿರಮಿಡ್ ಆಕಾರದ ಮೆಟ್ಟಿಲುಗಳಿವೆ. ಮೂರನೇ, ನಾಲ್ಕನೇ ಮತ್ತು ಐದನೇ ಹಂತದ ಪ್ರತಿ ದಿಕ್ಕಿನಲ್ಲಿ ಐದು ಏಳು ಮತ್ತು ಒಂಭತ್ತು ಪಿರಮಿಡ್ ಆಕರದ ಮೆಟ್ಟಿಲುಗಳಿವೆ. ಮೆಟ್ಟಿಲು ಪುಷ್ಕರಣಿಯ ಪ್ರತಿ ಹಂತದ ಆಳವು ಸುಮಾರು ೧.೦೫ಮೀಟರ್ ಇದ್ದು ಒಟ್ಟು ಆಳವು ೬.೬೫ ಮೀಟರ್ ಇದೆ. ಪುಷ್ಕರಣಿಯ ತಳಭಾಗದಲ್ಲಿ ಕಲ್ಲುಗಳನ್ನು ಹಾಸಿದ್ದು, ಅದರ ಕೆಳಗಡೆ ಮರಗಳನ್ನು ಒದಗಿಸಲಾಗಿದೆ. ಮರಳಿನ ಕವಚದಿಂದ ತಿಳಿನೀರು ಮಾತ್ರ ಕೊಳದೊಳಗೆ ಬರಲು ಸಹಕಾರಿಯಾಗಿದೆ. ಮೆಟ್ಟಿಲು ಪುಷ್ಕರಣಿಯು ಪೂರ್ವನಿಯೋಜಿತ ಕಟ್ಟಡವಾಗಿದ್ದು, ಇದಕ್ಕೆ ಸಂಬಂಧಿಸಿ ಕಲ್ಲುಗಳನ್ನು ಮಾದಲೇ ಸಿದ್ದಪಡಿಸಲಾಗಿತ್ತೆಂದು ಕಂಡುಬರುತ್ತದೆ. ಪ್ರತಿಯೊಂದು ಕಲ್ಲಿನ ಮೇಲೆ ಸಂಖ್ಯೆ, ಚಿಹ್ನೆ ಮತ್ತು ಅಕ್ಷರಗಳು ಇವೆ.

ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳನ್ನು ಆಯಾ ದಿಕ್ಕಿನ ಮೊದಲ ಅಕ್ಷರವನ್ನು ಬರೆದು ಸೂಚಿಸಲಾಗಿದೆ. ಅವು ಕ್ರಮವಾಗಿ ಉ, ದ, ಪು ಮತ್ತು ಪ ಎಂದು ಸೂಚಿಸಲಾಗಿದೆ. ಐದು ಹಂತಗಳಲ್ಲಿ ಒಟ್ಟು ೩೬ ಮೆಟ್ಟಿಲುಗಳಿವೆ. ಪ್ರತಿಮೆಟ್ಟಿಲಿಗೂ ಒಂದು ಕನ್ನಡದ ವರ್ಣಮಾಲೆಯನ್ನು

ಬಳಸಲಾಗಿದೆ. ಐದನೇ ಹಂತದ ಮೇಲೆ ಸುತ್ತಲೂ ಸಣ್ಣ ಒರಗು ದಿಂಬಿನಾಕಾರದ ಕಲ್ಲುಗಳಿವೆ. ಇದಕ್ಕೆ "ಠ" ಅಕ್ಷರವನ್ನು ಬಳಸಲಾಗಿದೆ.

ಚಿಹ್ನೆಗಳು : ಈಗಾಗಲೇ ಪುಷ್ಕರಣಿಯು ಐದು ಹಂತಗಳಲ್ಲಿ ಇರುವುದರಿಂದ ಪ್ರತಿ ಹಂತದ ಶಿಲೆಯ ಮೇಲೂ ವಿವಿಧ ಚಿಹ್ನೆಗಳಿವೆ. ಇವೂ ಕೂಡ ಒಂದೊಂದು ದಿಕ್ಕಿಗೆ ಮತ್ತು ಹಂತಕ್ಕೆ ಬೇರೆ ಬೇರೆಯಾಗಿವೆ. ಮೂರನೇ ಹಂತದಲ್ಲಿ ಶಂಖ, ನಕ್ಷತ್ರ ಮತ್ತು ಸ್ವಸ್ತಿಕ ಚಿಹ್ನೆಗಳಿವೆ. ನಾಲ್ಕನೇ ಹಂತದಲ್ಲಿ ವೃತ್ತದವಿವಿಧ ರೂಪಗಳಾಗಿ ವೃತ್ತ. ಅರ್ಧವೃತ್ತ, ಹೊರಗಡೆ ಸರಳರೇಖೆ ಇರುವ ವೃತ್ತ ಮತ್ತು ಪರಸ್ಪರ ಲಂಬಗಳನ್ನುಳ್ಳ ವೃತ್ತಗಳು ಇವೆ. ಐದನೇ ಹಂತದಲ್ಲಿ ಸರಳ ರೇಖೆಯ ವಿವಿಧ ರೂಪಗಳಾಗಿ ಎರಡು ಸಮಾನಾಂತರ ಸರಳರೇಖೆಗಳು ಎರಡು ಸಮಾನಾಂತರ ರೇಖೆಗಳನ್ನು ವಿಭಜಿಸಿದ ಅಡ್ಡರೇಖೆ ಪರಸ್ಪರ ಲಂಭವಾಗಿರುವ ಎರಡು ರೇಖೆಗಳು ಮತ್ತು ತ್ರಿಕೋಣಾಕರಾದ ಚಿಹ್ನೆಗಳಿವೆ.

ಪಿರಮಿಡ್ ಆಕರದ ಮೆಟ್ಟಿಲುಗಳು : ಪುಷ್ಕರಣಿಯಲ್ಲಿ ಪಿರಮಿಡ್ ಆಕಾರದ ನೂರು ಮೆಟ್ಟಿಲುಗಳ ಸಮೂಹವಿದೆ. ಪ್ರತಿ ಸಮೂಹದಲ್ಲಿ ಆರು ಮೆಟ್ಟಿಲುಗಳು ಮತ್ತು ಪ್ರತ್ಯೇಕ ಗುರುತಿನ ಸಂಖ್ಯೆ ಇದೆ. ಎರಡನೇ ಹಂತದಲ್ಲಿ ಮೂರು ಪಿರಮಿಡ್ ಆಕಾರದ ಮೆಟ್ಟಿಲುಗಳ ಸಮೂಹವಿದ್ದು, ಎಡದಿಂದ ಬಲಕ್ಕೆ ಅವುಗಳಸಂಖ್ಯೆಯನ್ನು ನೀಡಲಾಗಿದೆ. ಈ ಕ್ರಮವನ್ನು ೩, ೪, ೫ನೇ ಹಂತದ ಮೆಟ್ಟಿಲುಗಳ ಸಮೂಹಕ್ಕೆ ಅಳವಡಿಸಲಾಗಿದೆ.

ನೂರು ಮೀಟರ್ ಆಕಾರದ ಮೆಟ್ಟಿಲುಗಳಲ್ಲಿ ನಾಲ್ಕು ದಿಕ್ಕಿನ ಮಧ್ಯದ ಮೆಟ್ಟಿಲುಗಳ ಸಮೂಹ ಹೆಚ್ಚು ಅಲಂಕಾರಿಕವಾಗಿದೆ. ಇವು ಪಕ್ಕದ ಮೆಟ್ಟಿಲುಗಳ ಸಮೂಹಕ್ಕೆ ಹೋಲಿಸಿದಾಗ ಸ್ವಲ್ಪ ಅಗಲದಲ್ಲಿಯೂ ಮತ್ತು ಉದ್ದದಲ್ಲಿಯೂ ಹೆಚ್ಚು ಅಳತೆ ಹೊಂದಿದೆ. ಪ್ರತಿ ಮೆಟ್ಟಲಿನ ಮೂಲೆಯ ಸ್ವಲ್ಪ ಒಳಬಂದಂತಿದೆ. ಮೆಟ್ಟಿಲು ಒಂದೇ ಕಲ್ಲಿನಿಂದ ಕೂಡಿದ್ದರೆ ಅದರ ಸಂಖ್ಯೆಯನ್ನು ಒಂದು ಎಂದು ಹೇಳಲಾಗಿದೆ. ಮೂರು, ನಾಲ್ಕು, ಐದನೇ ಮೆಟ್ಟಿಲುಗಳ ಅಗಲ ಜಾಸ್ತಿ ಇದ್ದು ಇವು ೨-೩ ಕಲ್ಲುಗಳಿಂದ ಕೂಡಿರುತ್ತದೆ.

ನಿರ್ಮಾಣ ತಾಂತ್ರಿಕತೆ : ಸಂಪೂರ್ಣ ತಾಂತ್ರಿಕ ವಿವರಗಳನ್ನುಳ್ಳ ಸುಂದರ ಮೆಟ್ಟಿಲು ಪುಷ್ಕರಣಿ ಇದಾಗಿದೆ. ಪ್ರತಿ ದಿಕ್ಕು ಹಂತ ಮೆಟ್ಟಿಲುಗಳಿಗೆ ಅಕ್ಷರ ಚಿಹ್ನೆ ಮತ್ತು ಸಂಖ್ಯೆಗಳನ್ನು ಬಳಸಲಾಗಿದೆ. ಹಂಪಿಯ ವಿಜಯನಗರಕಾಲದ ಈ ಪುಷ್ಕರಣಿಯ ದಕ್ಷಿಣ ದಿಕ್ಕಿಗೆ ಒಂದು ದೇವಾಲಯವಿದೆ. ಯಾವುದೆಂಬುದು ತಿಳಿದಿಲ್ಲ. ಈ ಪುಷ್ಕರಣಿಯನ್ನು ನಿರ್ಮಿಸಿದ ನಂತರ ಕಲ್ಲಿನ ತೊಟ್ಟಿಲು ಕಾಲುವೆಗಳ ಮೂಲಕ ನೀರು ಪೂರೈಕೆಯಾಗುತ್ತಿತ್ತು. ಈ ಪುಷ್ಕರಣಿ ವರ್ಷಪೂರ್ತಿ ಬಳಕೆಯಲ್ಲಿತ್ತೆಂದು ತೋರುತ್ತದೆ. ಋತುಮಾನಕ್ಕೆ ಅನುಸಾರವಾಗಿ ನೀರಿನ ಮಟ್ಟ ಕಡಿಮೆಯಾದಾಗ ಈ ಮೆಟ್ಟಿಲುಗಳು ನೀರಿನ ಹಂತವನ್ನು ತಲುಪಲು ಸಹಾಯಕವಾಗಿದ್ದವು. ನೆಲಮಟ್ಟದಲ್ಲಿ ಒರಗು ದಿಂಬು ಕಲ್ಲು ಇರುವುದು. ಈ ಪುಷ್ಕರಣಿಯಲ್ಲಿ ದೇವರ

ತಪೋತ್ಸವ ಇತ್ಯಾದಿ ಆಚರಣೆಗಳನ್ನು ವೀಕ್ಷಿಸಲು ಮಾಡಿದ ಅನುಕೂಲವಿರಬಹುದೆಂದು ಊಹಿಸಬಹುದು. (ಜಗದೀಶ, ೨೦೦೧, ಪು.೧೨೪-೧೩೧)

ದೇವಾಲಯ ಒಂದು ಸಾಮಾಜಿಕ ಮತ್ತು ಧಾರ್ಮಿಕ ಸಂಘ ಸಂಸ್ಥೆಯಾಗಿ

ದೇವಾಲಯ ಇದು ದೇವರ ಆಲಯ. ಅಂದರೆ ಮೂಲತಃ ಇದು ಪೂಜಾಗೃಹವಾದರೂ ಹಲವಾರು ರೀತಿಯ ಪೂಜೆ, ಪುನಸ್ಕಾರಗಳು, ಹಬ್ಬಗಳು, ಜಾತ್ರೆಗಳು, ಸಮಾಜದ ಜನಸಾಮಾನ್ಯರ ಮೇಲೆ ಪ್ರಭಾವವನ್ನು ಬೀರಿದೆ. ದೇವಾಲಯಗಳು ಜನರ ರಾಜಕೀಯ, ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಬಹಳ ಮಹತ್ವದ ಪಾತ್ರವಹಿಸಿವೆ(ಮಹಾಲಿಂಗಮ್ ಟಿ.ವಿ., ೧೯೬೫, ಪು.೩೬೨). ದೇವಾಲಯಗಳ ಜೀರ್ಣೋದ್ಧಾರ ನಿರ್ಮಾಣ, ನಿರ್ವಹಣೆಗೆ ಕುರಿತಂತೆ ಲಭ್ಯವಾದ ಶಾಸನಾಧಾರಗಳು, ಮಹತ್ವದ ಬೆಳಕನ್ನು ಚೆಲ್ಲಿವೆ. ಅಂದಿನ ಸಂಪ್ರದಾಯ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದು ಇಂದಿನ ಸಮಾಜದ ಕರ್ತವ್ಯವೂ ಹೌದು. ಹಿಂದೊಮ್ಮೆ ದಾನ ನೀಡುವುದು ಬದುಕಿನ ಪರಮಧ್ಯೇಯವಾಗಿ ಪರಿಗಣಿಸಲಾಗಿತ್ತು. ಸಮಾಜದಲ್ಲಿ ದಾನಕ್ಕೆ ಮೊದಲಿನಿಂದಲೂ ವಿಶೇಷವಾದ ಮಾನ್ಯತೆ ಇದೆ. ಅನ್ನದಾನ, ವಿದ್ಯಾದಾನ, ಭೂದಾನ, ವಸ್ತ್ರದಾನ, ಉದಕದಾನ, ಗೋದಾನ ಇತ್ಯಾದಿ ದಾನಗಳು ಬಹಳ ಮುಖ್ಯವಾದವು. ಈಗಲೂ ಕೂಡ ಹಲವಾರು ದೇವಾಲಯಗಳು, ಮಠಗಳು ಉದಾ. ಧರ್ಮಸ್ಥಳದ ಮಂಜುನಾಥ ದೇವಾಲಯ, ಶೃಂಗೇರಿಯ ಶಾರದಾಂಬ ದೇವಾಲಯ, ಸಿದ್ಧಗಂಗಾಮಠ, ಸುತ್ತೂರು ಮಠಗಳು ಇಂತಹ ಸಮಾಜ ಕಾರ್ಯಗಳನ್ನು ಈಗಲೂ ಮಾಡುತ್ತಲೇ ಇವೆ.

ಪ್ರಾರಂಭ ಹಂತದಲ್ಲಿ ನಿರ್ಮಿಸಿದ ದೇವಾಲಯಗಳು ಈಗ ಉಳಿದಿಲ್ಲವಾದರೂ ಅಂದು ರಾಜರು ಅಥವಾ ಅರಸರುಗಳು ಬಿಟ್ಟ ದಾನದ ವಿಷಯಗಳನ್ನು ಶಾಸನಗಳು ತಿಳಿಸುತ್ತವೆ. ದೇವಾಲಯಗಳು ಜನರ ಭಕ್ತಿ ಮತ್ತು ನಿಷ್ಠೆಯ ಪ್ರತೀಕಗಳು. ಕೆಲವೊಮ್ಮೆ ವ್ಯಕ್ತಿಯ ಹೆಸರನ್ನು ಉದಾ. ಈಶ್ವರ ಎಂಬ ಪದ ಭಟ್ಟಾರಕ ಎಂಬ ಪದ ಸೇರಿಸಿ ದೇವರನ್ನು ಪ್ರತಿಷ್ಠಾಪಿಸಿದ ಸಂಗಯೂ ಶಾಸನದಲ್ಲಿವೆ(K.I.Volume I, P.47). ವ್ಯಕ್ತಿಯ ಹೆಸರಿನಲ್ಲಿ ಕಟ್ಟಿಸಿದ ದೇವಾಲಯ ಉಳಿದರೂ ದೇವತೆಗಳ ಹೆಸರು ಮಾತ್ರ ಮಾರ್ಪಾಟಾದವು(ಚಿದಾನಂದಮೂರ್ತಿ ಎಂ., ೧೯೭೯, ಪು.೧೭). ಒಬ್ಬ ವ್ಯಕ್ತಿ ದೇವಾಲಯವೊಂದನ್ನು ನಿರ್ಮಿಸಬೇಕೆಂದು ಬಯಕೆ ಮಾಡಿ ದೇವಾಲಯವೊಂದನ್ನು ಕಟ್ಟಿಸಿದರೆ ಸಾಲದು. ಅದರ ಪೂಜೆ-ಪುನಸ್ಕಾರಗಳು ನಡೆಯುತ್ತಾ ಊರ್ಜಿತವಾಗಬೇಕಾಗುತ್ತದೆ. ಆದ ಕಾರಣ ದೇವಾಲಯವನ್ನು ಕಟ್ಟಿಸಿದ ವ್ಯಕ್ತಿಯೇ ಸಂಮೃದ್ಧವಾಗಿ ದಾನವನ್ನು ಬಿಡುತ್ತಿದ್ದನು. ಒಂದು ದೇವಾಲಯ ನಿರ್ಮಾಣವಾದ ಮೇಲೆ ಅಲ್ಲಿ ಹತ್ತಾರು ಜನರು ಸೇರಿ ಹತ್ತಾರು ಗ್ರಾಮಗಳು ಸೇರಿ ದತ್ತಿ ಬಿಡುತ್ತಿದ್ದರು. ದೇವಾಲಯದ ಈ ಆಸ್ತಿಯೇ ದೇವಭೋಗ ಇಂತಹ ದಾನವನ್ನು ಬಿಡುವಾಗ ದಾನದ ಉದ್ದೇಶವು ಶಾಸನಗಳಲ್ಲಿ ಬರೆಯ

ಲ್ಪಡುತ್ತಿತ್ತು (EC.9, No.1, P.60). ಉದಾಹರಣೆಗಾಗಿ ಧೂಪ-ದೀಪ, ಗಂಧ-ನೈವೇದ್ಯ, ಗೀತ, ನೃತ್ಯೋಪಹಾರ ಖಂಡಸ್ಫುಟಿತ ಜೀರ್ಣೋದ್ಧಾರಾದಿಯತೇನಾಂ ವಿದ್ಯಾರ್ಥಿನಾ, ಚಾಸತ್ರ ನಿಮಿತ್ತಂ(B.K.I, Volume-I, No.85).

ಈ ಒಂದು ಹಿನ್ನೆಲೆಯನ್ನು ಆಧರಿಸಿ ಕಾಮಲಾಪುರ ಗ್ರಾಮದ ದೇವಾಲಯಗಳ ಮಧ್ಯಕಾಲೀನ ಇತಿಹಾಸದಲ್ಲಿ ಯಾವ ರೀತಿಯಲ್ಲಿ ದೇವಾಲಯ ಸಾಮಾಜಿಕ ಸಂಸ್ಥೆಯಾಗಿ ಮೆರೆದವು ಎಂಬುದರ ಚಿತ್ರಣವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ದೇವಾಲಯಗಳು ಬ್ಯಾಂಕ್ ಆಗಿ ಕಾರ್ಯವನ್ನು ನಿರ್ವಹಿಸುತ್ತಿತ್ತು. ಲಭ್ಯವಾದ ಹಲವಾರು ಶಾಸನಗಳು ದೇವಾಲಯಕ್ಕೆ ಬಿಟ್ಟ ದಾನ ಶಾಸನಗಳು ಇದಕ್ಕೆ ಪೂರಕ ಮಾಹಿತಿಯನ್ನು ನೀಡುತ್ತವೆ.

ಈ ಕೆಳಗಿನ ಶಾಸನಗಳು ದೇವಾಲಯಕ್ಕೆ ದೇವರಿಗೆ ನೀಡಿದ (ಕೊಟ್ಟ) ದಾನವನ್ನು ದಾಖಲೆ ಮಾಡಿ ಅದರ ಬಡ್ಡಿಯಿಂದ ಬಂದ ಹಣವನ್ನು ದೇವಾಲಯದ ಸೇವೆಗಾಗಿ ಉಪಯೋಗಿಸಲಾಗುತ್ತಿತ್ತು ಎಂದಿದೆ. ಕ್ರಿ.ಶ.೧೩೩೬ರ ಶಾಸನವು ಬಸವೆ ದಣ್ಣಯಕನು ವಿರುಪಾಕ್ಷ ದೇವರ ಸೇವೆಗಾಗಿ ರಾಮಾಪುರದ ಕೆರೆಯ ಕೆಳಗೆ ಭೂದಾನವನ್ನು ಮಾಡಿದನೆಂಬ ವಿಷಯವನ್ನು ತಿಳಿಸುತ್ತದೆ(V.P.R., 1984-87, ಸಂ.89). ೧೪ನೇ ಶತಮಾನದ ಇನ್ನೊಂದು ಶಾಸನ ಹರಿಹರನು ವಿರುಪಾಕ್ಷ ದೇವರಿಗೆ ಗದ್ದೆಯನ್ನು ದಾನವಾಗಿ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಅಲ್ಲದೆ ವಿನಾಯಕ ದೇವರಿಗೆ ಭೂದಾನ ಮಾಡಿದ ವಿಷಯವನ್ನು ತಿಳಿಸುತ್ತದೆ(V.P.R., 1984-87, ಸಂ.77, 78, 124). ಕ್ರಿ.ಶ.೧೫೧೮ರಲ್ಲಿನ ಶಾಸನ ಕೃಷ್ಣದೇವರಾಯನ ಪಟ್ಟಮಹಾದೇವಿ, ತಿರುಮಲಾದೇವಿ ಕಮ್ಮಾರಗುಂಟೆ ಭೂಮಿಯನ್ನು ಅಂಜನಗಿರಿಯ ತಿರುವೆಂಗಳನಾಥನಿಗೆ ಭೂದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ವಿಠಲೇಶ್ವರ ದೇವರ ಸನ್ನಿಧಿಯಲ್ಲಿ ಇದನ್ನು ಅರ್ಪಿಸಲಾಯಿತು(A.R., 1922, No.679). ಚಿಕ್ಕತಿಮ್ಮಯ್ಯ ದೇವನ ಮಗ ತಿಮ್ಮರಾಜನು ರಾಮಚಂದ್ರ ದೇವರ ಭಂಡಾರಕ್ಕೆ ಕ್ರಿ.ಶ.೧೫೨೧ರಲ್ಲಿ ದಾನವನ್ನು ನೀಡಿದನು. ಸಂಡೂರು ಸೀಮೆಯ ತಾಳೂರಿನ ಪಶ್ಚಿಮಕ್ಕಿರುವ ಬೆಂಚೆಯೆಂಬ ಕುಂಟೆಯ ಕೆರೆಗೆ ಒಂದು ಖಂಡುಗ ಗದ್ದೆಯನ್ನು, ಮಾನ್ಯವಾಗಿ ಬಂದಿರುವ ಪಾಲನ್ನು ದೇವರ ದೇವಾಲಯದ ಉತ್ಸವ ಕಾರ್ಯಗಳಿಗಾಗಿ ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ (ARSIE, 1989, No.21). ಕ್ರಿ.ಶ.೫೨೫ರ ಶಾಸನವೊಂದು ಆದಿನಾರಾಯಣ ದೇವರಿಗೆ ಅಂಗಡಿಯೊಂದನ್ನು ದಾನ ಮಾಡಿದ್ದನ್ನು ಉಲ್ಲೇಖಿಸಿದೆ(V.P.R., 1984-87, ಸಂ.91). ಕ್ರಿ.ಶ. ೧೫೪೯ರಲ್ಲಿ ಕಂನಿಸೆಟಿ ಮತ್ತು ಪಿಚಾರಿಸೆಟಿ ಮತ್ತು ಅವನ ದಾಯದಿಗಳು ಸೇರಿ ತೋಟ ಮುತ್ತುಗದ್ದೆಯಲ್ಲಿನ ಉತ್ಪನ್ನದಲ್ಲಿ ರಾಮಚಂದ್ರ ದೇವರಿಗೆ ನೀಡಿ ಉಳಿದದ್ದನ್ನು ವಿರುಪಾಕ್ಷ ದೇವರ ಅಮೃತಪಡಿಗೆ ನೀಡಿದ್ದಾರೆ(V.P.R., 1984-87, No.125). ಕ್ರಿ.ಶ.೧೫೩೧ರಲ್ಲಿ ಕೃಷ್ಣರಾಯನು ತಂದೆ ತಾಯಿಯರಿಗೆ ಪುಣ್ಯವಾಗಲೆಂದು ಕನ್ನಕಿಯಕಚೆ

ಬಂಕಾಪುರ, ನಾಗಲಾಪುರ ಮತ್ತು ಗೌರಾಜಿಕೆರೆ ತೋಟಗಳನ್ನು ಭೂಮಿಗಳನ್ನು ಪ್ರಸನ್ನ ವಿರುಪಾಕ್ಷದೇವರ ಸೇವೆಗಾಗಿ ದಾನ ಮಾಡಿದನು(ARSIE, 1908, No.500). ಕ್ರಿ.ಶ.೧೫೩೧ರ ಶಾಸನವು ಲಕ್ಷ್ಮಿನರಸಿಂಹ ದೇವರ ದೀಪಾರಾಧನೆ ದಾನ ನೀಡಿದನೆಂದು ಪ್ರಸ್ತಾಪಿಸುತ್ತದೆ(A.R., 1904, No.22). ಕ್ರಿ.ಶ. ೧೫೩೯ರಲ್ಲಿ ಅಚ್ಯುತದೇವರಾಯರ ಕಾಲದಲ್ಲಿ ಅಚ್ಯುತರಾಯ ಮಲ್ಲಪಣ್ಣ ಅಯ್ಯನವರು ರಘುನಾಥ ದೇವರಸೇವೆಗಾಗಿ ಭೂದಾನ ನೀಡಿದನು(A.R., 1922, No.695) ಕ್ರಿ.ಶ. ೧೫೪೦ರಶಾಸನ ರಘುನಾಥದೇವರ ಪ್ರತಿಷ್ಠೆ ಮಾಡಿಸಿ ಅಮೃತಪಡಿಗಾಗಿ ದಾನ ನೀಡಿದ ವಿಷಯ ಗದ್ದೆಯ ಎಲ್ಲೆ, ಉತ್ಪತ್ತಿಯ ಭಾಗಮತ್ತು ಕೆಲವು ತೆಂಗಿನ ಮರಗಳನ್ನು ದಾನ ಮಾಡಿದ್ದನ್ನು ಈ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ(A.R., 1889, ಸಂ.16). ಕ್ರಿ.ಶ.೧೫೫೪ರ ಶಾಸನದ ಪ್ರಕಾರ ರಘುನಾಥ ರಾಜನು, ಕಥಾಲ ಪಾಲ್ಯಂನಲ್ಲಿ ಅಲಮೇಲ ಮಂಗಮ್ಮನ ದೇವಾಲಯವನ್ನು ನಿರ್ಮಿಸಿ ಧೂಪ ದೀಪಾರಾಧನೆಗಾಗಿ ದಾನ ನೀಡಿದನು(V.P.R., 1983-84, No.64). ೧೬ನೇ ಶತಮಾನದ ಶಾಸನ ಮಲ್ಲಿಕಾರ್ಜುನ ದೇವರಿಗೆ ದೀಪವನ್ನು ಉರಿಸುವುದಕ್ಕಾಗಿ ಅಂದು ಅಂಗಡಿ ಮನೆಯೊಂದನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ(V.P.R., 1983-84, No.43). ಅಣ್ಣಲದೇವಿಯು ರಾಮಚಂದ್ರ ದೇವರಿಗೆ ಚಿನ್ನದ ಹರಿವಾಣ ಮತ್ತು ಬಟ್ಟಲನ್ನು ಸಮರ್ಪಿಸಿದಳು(A.R.S.I.E., 1889, No.22). ಕ್ರಿ.ಶ.೧೬ನೇ ಶತಮಾನ ರಘುನಾಥ ದೇವರಿಗೆಂದು ಮಂಟಪವನ್ನು ವರ್ತಕ ಸಮುದಾಯದವರು ನಿರ್ಮಿಸಿದರು(V.P.R., 1983-84, No.68). ಕ್ರಿ.ಶ.೧೬ನೇ ಶತಮಾನದ ಇನ್ನೊಂದು ಶಾಸನ ನರಸಂಹ ದೇವರಿಗೆ ಭೂಮಿದಾನ ಮಾಡಲು ಸದಾಶಿವರಾಯನಿಗೆ ಪಣ್ಯವಾಗಲೆಂದಿದೆ(V.P.R., 1983-84, No.92). ಹೀಗೆ ಸಾಮಾಜಿಕ ಕಾರ್ಯಗಳಿಗಾಗಿ ಈ ದಾನ ಉಪಯೋಗಿಸಲ್ಪಡುತ್ತಿತ್ತು ಎಂಬುದು ಇಲ್ಲಿ ಗಣನೀಯ ಅಂಶ.

ವ್ಯವಸಾಯಕ್ಕೆ ದೇವಾಲಯ ಹಿತವನ್ನು ಸಂರಕ್ಷಿಸುತ್ತಿತ್ತು. ದೇವಾಲಯದಿಂದ ಭೂಮಿಯನ್ನು ಸಾಗುವಳಿಯನ್ನು ಮಾಡುಲಾಗುತ್ತಿತ್ತು. ನೀರಾವರಿಯ ಉಪಯೋಗ ಯಾವ ರೀತಿಯಲ್ಲಿತ್ತು ಎಂಬುದಕ್ಕೆ ಕಾಮಲಾಪುರ ಗ್ರಾಮದಲ್ಲಿ ಉತ್ಖನನ ಪ್ರದೇಶದಲ್ಲಿ ಇಡಲ್ಪಟ್ಟ ಗ್ರಾನೈಟ್ ಕಲ್ಲಿನಿಂದ ಮಾಡಲ್ಪಟ್ಟ ತೂಬು ಇದಕ್ಕೆ ಉತ್ತಮ ಉದಾಹರಣೆ. ದೇವಾಲಯಗಳು ನಾನಾ ರೀತಿಯ ಸ್ಥಳೀಯ ಆಡಳಿತದಲ್ಲಿ ಭೂಮಾಲೀಕ, ಬ್ಯಾಂಕ್ ಆಗಿ, ವಿದ್ಯೆಗೆ ಪ್ರೋತ್ಸಾಹಿಸಿ ಇದು ಕೇಂದ್ರ ಸ್ಥಳವಾಗಿ ಪ್ರಮುಖ ಪಾತ್ರವಹಿಸಿತ್ತು (ವೆಂಕಟರತ್ನಂ ಎ.ವಿ., ೧೯೭೪, ಪು.೧೯೬). ದೇವಾಲಯಗಳು ವಿದ್ಯಾಕೇಂದ್ರಗಳೂ ಹೌದು. ಮೊದಮೊದಲು ಮಠಗಳೇ ವಿದ್ಯಾಕೇಂದ್ರಗಳಾಗಿದ್ದವು.

ವಿದ್ಯೆಯನ್ನು ಕಲಿಯಲು ಪ್ರಾರಂಭ ಹಂತದಲ್ಲಿ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳು ಹೆಚ್ಚು ಮಹತ್ವವನ್ನು ಪಡೆದಿವೆ. ದೇವಾಲಯಗಳು ಬೆಳೆಯುತ್ತಾ ಮಠದ ಜೊತೆಗೆ ಸೇರಿ ವಿದ್ಯಾದಾನಕ್ಕೆ ಆದ್ಯತೆ

ನೀಡ ತೊಡಗಿತು. ಈ ದಿಸೆಯಲ್ಲಿ ಕರ್ನಾಟಕದ ಪ್ರಮುಖ ವಿದ್ಯಾಕೇಂದ್ರಗಳಾದ ಬಳ್ಳಿಗಾವೆ, ನಾಗಾವೆ, ಬಳ್ಳಾರಿ ಜಿಲ್ಲೆಯ ಸಾಲೋಟಗಿ ಪ್ರಮುಖ ಕೇಂದ್ರಗಳಾಗಿದ್ದವು ಎಂಬುದನ್ನು ಇಲ್ಲಿ ಉದಾಹರಿಸಬಹುದು. ಒಟ್ಟಾರೆ ದೇವಾಲಯದ ಹಣ ದೇವಾಗಾರಕ್ಕೆ ಪ್ರಜೆಗಳಿಗೆ ಸದ್ವಿನಿಯೋಗವಾಗಬೇಕು "ಉಪೇಕ್ಷೆಗೈಯದವ ತಾವೇ ಮಾಡಿದ ದಂತಾರಪ್ಪ್‌ರ್" ಎಂಬ ಹೊಣೆಯನ್ನು ಉಪೇಕ್ಷೆ ಮಾಡದವರೇ ನಿಜವಾದ ದಾನಿಗಳಾಗಿದ್ದಾರೆ ಎಂಬ ಮಾತು ಶಾಸನದಲ್ಲೂ ಉಲ್ಲೇಖಿತವಾಗಿದೆ(B.K.I., In, 63). ಇಲ್ಲಿ ದೊರೆತ ಶಾಸನಗಳಲ್ಲಿ ಬರುವ ದಾನಪಾಲನಯೋ ಮಧ್ಯೆ........ಪಾಲನಾ ಅಚ್ಯುತಂ ಪದಮ್(ರಮೇಶ ಕೆ.ವಿ., ೧೯೯೪, ಪು.೯) ಜೀವನದ ಎಲ್ಲಾ ಹಂತಗಳಲ್ಲೂ ನಮ್ಮ ಸಂಸ್ಕೃತಿಗಳೆಲ್ಲವನ್ನು ಸಂಗೋಪಾಂಗವಾಗಿ ನಡೆಸಿಕೊಂಡು ಬಂದಿದ್ದಕ್ಕೆ ಕಾಮಲಾಪುರದಲ್ಲಿ ದೊರೆತ ಶಾಸನಗಳು, ದೇವಾಲಯಗಳು, ಕೆರೆ, ಕಟ್ಟೆಗಳು ಸಾಮಾಜಿಕ ಕಾರ್ಯಗಳಿಗೆ ಉತ್ತಮ ಉದಾಹರಣೆಯಾಗಿವೆ.

ದೇವಾಲಯಗಳು ನ್ಯಾಯಸ್ಥಾನವೂ ಹೌದು. ಏಕೆಂದರೆ ದೇವರ ಎದುರಿನಲ್ಲಿ ನಿಂತು ಮಾತನ್ನು ನುಡಿದರೆ ಅದನ್ನು ಪರಿಪಾಲಿಸಬೇಕಾಗುತ್ತದೆ. ಇದಕ್ಕೊಂದು ನಿರ್ಬಂಧವಿರುತ್ತದೆ. ಹೀಗಾಗಿ ದೇವಾಲಯಗಳು ನ್ಯಾಯವಾಗಿ ಒಂದಲ್ಲ ಒಂದು ರೀತಿಯಿಂದ ಮಹತ್ವವನ್ನು ಪಡೆದಿವೆ. ದೇವಾಲಯದ ಆಡಳಿತದಲ್ಲಿ ಸ್ಥಳೀಯರ ಪಾತ್ರ ಅತಿ ಮಹತ್ವ. ದೇವಾಲಯದ ಆಡಳಿತ ನೋಡಿಕೊಳ್ಳಲು ಈಗಲೂ ಸಮಿತಿಗಳಿರುತ್ತವೆ.

ಇಂದು ಹಂಪಿ ವಿರುಪಾಕ್ಷ ದೇವಾಲಯ ಕರ್ನಾಟಕದ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬಂದರೂ ಅದರ ನಿರ್ವಹಣೆಗಾಗಿ ಸಮಿತಿಯೊಂದು ಕೆಲಸವನ್ನು ನಿರ್ವಹಿಸುತ್ತಲಿದೆ. ಇತ್ತೀಚೆಗೆ ಪ್ರಾಧಿಕಾರ ಸಮಿತಿಯೂ ಅಸ್ತಿತ್ವಕ್ಕೆ ಬಂದಿದೆ. ಹೀಗೆ ಈ ದೃಷ್ಟಿಯಿಂದ ದೇವಾಲಯ ಉದ್ಯೋಗ ಸಂಸ್ಥೆಯಾಗಿ ನಿರ್ವಹಿಸುತ್ತದೆ. ಒಟ್ಟಾರೆ ಕಮಲಾಪುರ ಗ್ರಾಮದ ದೇವಾಲಯಗಳು ಒಂದು ಸಾಮಾಜಿಕ ಸಂಸ್ಥೆಯಾಗಿ ಮಧ್ಯಕಾಲೀನ ಇತಿಹಾಸದಲ್ಲಿ ಮಹತ್ತರ ಪಾತ್ರವನ್ನು ವಹಿಸಿವೆ.

[illegible]

ಶೈವ ಪಂಥ ದೇವಾಲಯಗಳು

ಹೆಸರು	:	ಚಂದ್ರಶೇಖರ ದೇವಾಲಯ
ಸ್ಥಳ	:	ರಾಣಿಯರ ಸ್ನಾನಗೃಹದಿಂದ ಸ್ವಲ್ಪ ಅಂತರದಲ್ಲಿ ಕಾಮಲಾಪುರ ಹೊಸಪೇಟೆ ತಾ.
ಕಾಲ	:	೧೫ ೧೬ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ವಸುಂಧರ ಫಿಲಿಯೋಜ, ೧೯೮೨, ಪು.೫೧)

ಕಾಮಲಾಪುರದಿಂದ ಉತ್ತರದಿಕ್ಕಿಗೆ ೧ ಕಿ.ಮೀ. ಅಂತರದಲ್ಲಿದೆ. ದೇವಾಲಯದ ಒಳಭಾಗ ಗರ್ಭಗೃಹ ಅಂತರಾಳ, ಸಭಾಮಂಟಪವನ್ನು ಒಳಗೊಂಡಿದೆ. ಗುಡಿಯ ಪೌಳಿಯಲ್ಲಿ ಜೋಡು ಗರ್ಭಗೃಹದ ದೇವಮಂದಿರವಿದೆ. ಮುಖ್ಯ ಗರ್ಭಗೃಹ ಪೂರ್ವಾಭಿಮುಖವಾಗಿದ್ದು, ರಂಗಮಂಟಪದ ಉತ್ತರಕ್ಕೆ ದಕ್ಷಿಣಾಭಿಮುಖವಾದ ಇನ್ನೊಂದು ಗರ್ಭಗೃಹ ಇದೆ. ಗರ್ಭಗುಡಿಯ ಮೇಲ್ಛಾವಣಿ ಅಷ್ಟಕೋನಾಕೃತಿಯನ್ನು ಒಳಗೊಂಡಿದೆ. ಗರ್ಭಗೃಹದ ಎರಡೂ ಬಾಗಿಲು ಬದಿಗೆ ದ್ವಾರಪಾಲಕರಿದ್ದಾರೆ. ಮೇಲ್ಭಾಗದ ಲಲಾಟಬಿಂಬ ಸಪಾಟಾಗಿ ಮೂಲರೂಪದಲ್ಲಿದೆ. ರಂಗಮಂಟಪಕ್ಕೆ ಹತ್ತಿಕೊಂಡೇ ತೆರೆದ ಮಂಟಪವಿದೆ. ಸ್ತಂಭಗಳು ಚಚ್ಚೌಕವಾಗಿದ್ದು ಈ ಸ್ತಂಭಗಳ ಮೇಲೆ ಶೈವ ಮತ್ತು ವೈಷ್ಣವ ಚಿತ್ರಗಳು ಕಾಣಸಿಗುತ್ತವೆ. ನವರಂಗ ಅಥವಾ ಸಬಾಮಂಟಪ ಹತ್ತು ಸ್ತಂಭಗಳಿಂದ ಒಳಗೊಂಡಿದ್ದು ಪ್ರತಿಯೊಂದು ಸ್ತಂಭದ ಮೇಲೆ ಪುಷ್ಪ ಬೋದಿಗೆಗಳಿವೆ. ಸ್ತಂಭಗಳು ಚೌಕಕಾರವಾಗಿದ್ದು, ಚಂದ್ರ, ಲಿಂಗ, ಸಿಂಹ, ನರ್ತನದ ವಿವಿಧ ಭಂಗಿಗಳು, ನವಿಲು, ಕಾಮಧೇನು ಲಿಂಗಕ್ಕೆ ಹಾಲೆರೆಯುವ ಚಿತ್ರ, ಶಿವಪಾರ್ವತಿ, ಶಂಖ ಊದುವ ಮಹಿಳೆ, ಪದ್ಮ, ಚಕ್ರ, ನಂದಿ, ಹಸು ಕರುವಿಗೆ ಹಾಲುಣಿಸುವ ಚಿತ್ರ, ಆಂಜನೆಯ ಪರ್ವತವನ್ನು ಹಿಡಿದು ಎತ್ತುತ್ತಿರುವುದು, ಶೈವ ಮೂರ್ತಿಶಿಲ್ಪ, ಶೈವ ಲೀಲೆಗಳ ವರ್ಣನೆ, ಈ ಸ್ತಂಭಗಳಲ್ಲಿ ಚಿತ್ರಿತವಾಗಿದೆ. ನವರಂಗದ ಮಧ್ಯೆ ಮೇಲ್ಛಾವಣಿ ಅಷ್ಟಕೋನಾಕೃತಿ ಮಧ್ಯದಲ್ಲಿ ಅರಳಿದ ಕಮಲ ಈ ರಂಗಮಂಟಪಕ್ಕೆ ಮತ್ತಷ್ಟು ಮೆರಗನ್ನು ನೀಡಿದೆ. ರಂಗಮಂಟಪಕ್ಕೆ ಪೂರ್ವ ಪಶ್ಚಿಮಕ್ಕೆ ಪ್ರವೇಶದ್ವಾರಗಳಿದ್ದು, ಪ್ರವೇಶದ್ವಾರದ ಎರಡೂ ಕಡೆಗಳಲ್ಲಿ ದ್ವಾರಪಾಲಕರ ಚಿತ್ರಗಳಿವೆ. ಮುಖಮಂಟಪದ ಗೋಡೆಯ ಭಿತ್ತಿ ಕುಡ್ಯಸ್ತಂಭಗಳನ್ನು

ಒಳಗೊಂಡಿದೆ. ಹೊರಭಾಗ ಅಧಿಷ್ಠಾನ, ಭಿತ್ತಿ, ಕಪೋತ, ಶಿಖರವನ್ನು ಒಳಗೊಂಡಿದೆ. ಶಿಖರದ ಸುತ್ತಮುತ್ತಲೂ ಭಕ್ತರ ಮತ್ತು ನರ್ತನದ ಶಿಲ್ಪ ಮೂರ್ತಿಗಳು ಗಾರೆ ಶಿಲ್ಪಗಳಿಂದ ಆವೃತ್ತವಾಗಿವೆ. ಸುಖನಾಸಿಯಲ್ಲಿರುವ ಶಿಖರದ ಚಿತ್ರಣದಲ್ಲಿ ಇರುವ ಚಿತ್ರ ಬಹುಶಃ ಚಂದ್ರಶೇಖರನಿರಬೇಕು(?). ಸ್ತೂಪಿಯ ಮೇಲ್ಭಾಗ ಈಗ ಹಾಳಾಗಿದೆ. ಪ್ರವೇಶದ್ವಾರದ ಗೋಪುರದ ಸುತ್ತಲೂ ಅನೇಕ ಗಾರೆ ಮೂರ್ತಿಶಿಲ್ಪಗಳಿವೆ. ಈ ಗೋಪುರ ಮೂರು ಹಂತಗಳನ್ನು ಒಳಗೊಂಡಿದೆ. ಗೋಪುರದ ಮಧ್ಯ ಭಾಗ ಈಗ ಶಿಥಿಲವಾಗಿದೆ. ಶಿಖರದ ಮೇಲ್ಭಾಗದಲ್ಲಿ ಉತ್ತರ ದಿಕ್ಕಿಗೆ ಸಿಂಹಮುಖದ ಪ್ರಣಾಳಿಕೆ ಶಿಖರದ ಮೇಲ್ಭಾಗ ಕೀರ್ತಿಮುಖವನ್ನು ಒಳಗೊಂಡಿದೆ. ದೇವಾಲಯದ ಭಿತ್ತಿ ವಿಸ್ತೃತಕಾರದಲ್ಲಿ ಹಾಸಲ್ಪಟ್ಟಿದೆ ಹೊರ ಭಿತ್ತಿಗೆ ಕುಡ್ಯಸ್ತಂಭ ಮಧ್ಯದಲ್ಲಿ ಗೂಡುಗಳಿದ್ದರೂ ಪ್ರಸ್ತುತ ಯಾವುದೇ ಮೂರ್ತಿಶಿಲ್ಪವಿಲ್ಲ. ಪಶ್ಚಿಮದ ಗೋಡೆ ಶಿಥಿಲವಾಗಿದ್ದು, ಇಚ್ಚೀಚೆಗೆ ಭಾರತೀಯ ಪುರಾತತ್ವ ಅನ್ವೇಷಣಾ ಇಲಾಖೆಯಿಂದ ಜೀರ್ಣೋದ್ಧಾರ ಮಾಡಲಾಗಿದೆ.

ಹೆಸರು	:	ವೀರಭದ್ರದೇವಾಲಯ
ಸ್ಥಳ	:	ಆರ್.ಕೆ.ಎಚ್.ಇ.ಪಿ.ಶಾಲೆ, ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫-೧೬ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯವು ೧೮.೩೫ ಮೀ ಉದ್ದ ಮತ್ತು ಅಗಲ ೮.೨ ಮೀ ಹೊಂದಿದೆ. ವೀರಭದ್ರ ದೇವಾಲಯದ ಒಳಭಾಗ ಗರ್ಭಗೃಹ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ, ಮೇಲ್ಛಾವಣೆ ಯಾವುದೇ ಅಲಂಕಣೆ ಇಲ್ಲ ಗರ್ಭಗೃಹದ ಒಳಭಾಗ ನವೀಕರಿಸಲ್ಪಟ್ಟಿದ್ದರೂ ಇಲ್ಲಿರುವ ವೀರಭದ್ರಮೂರ್ತಿ ಶಿಲ್ಪ ವಿಜಯನಗರ ಕಾಲದ್ದು. ಬಲಭಾಗದಲ್ಲಿ ಗಣಪತಿ, ಶಿವಲಿಂಗ, ಮತ್ತು ಎಡಭಾಗದಲ್ಲಿ ಪಾರ್ವತಿ ಮೂರ್ತಿಶಿಲ್ಪವಿದೆ. ಗರ್ಭಗೃಹದ ಬಾಗಿಲುವಾಡದ ಎರಡೂ ಕಡೆಗೆ ಶೈವ ದ್ವಾರಪಾಲಕರಿದ್ದಾರೆ. ಹೂ-ಬಳ್ಳಿಗಳ ಕೆತ್ತನೆ ಬಾಗಿಲುವಾಡದ ಇನ್ನೊಂದು ವಿಶೇಷತೆ. ಈ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಪದ್ಮಾಸೀನಳಾಗಿದ್ದಾಳೆ. ಎರಡು ಆನೆಗಳು ಸೊಂಡಿಲಿನಲ್ಲಿ ನೀರನ್ನಿತ್ತು ಗಜಲಕ್ಷ್ಮಿಯ ತಲೆಯ ಮೇಲೆ ನೀರನ್ನು ಎರಚುವಂತಿರುವ ಚಿತ್ರ ನಿಜಕ್ಕೂ ಸುಂದರ. ನವರಂಗದಲ್ಲಿ ನಂದಿ ವೀರಭದ್ರನಿಗೆ ಮುಖವಾಗಿ ಕುಳಿತಿದೆ. ಇಲ್ಲಿ ಎಂಟು ಸ್ತಂಭಗಳು ಚೌಕಾಕಾರವಾಗಿದ್ದು, ಮೇಲೆ ಚೌಕಾಕಾರದ ಬೋಧಿಗೆಯನ್ನು ಒಳಗೊಂಡಿದೆ. ವಿಷ್ಣುಚಿಹ್ನೆ, ಪುಷ್ಪ, ಸಿಂಹ, ನವಿಲು, ನಂದಿಪುರುಷ, ಗರುಡ ಈ ಉಬ್ಬು ಮೂರ್ತಿ ಶಿಲ್ಪಗಳ ಸ್ತಂಭಗಳಲ್ಲಿ ಚಿತ್ರಿತವಾಗಿದೆ. ನವರಂಗದ

[illegible]

[illegible]

[illegible]

ಮೇಲ್ಛಾವಣಿ ಆರು ಅಂಕಣಗಳನ್ನು ಒಳಗೊಂಡಿದೆ. ಇದು ಜೀರ್ಣೋದ್ಧಾರದಲ್ಲಿ ಮಾಡಿದ ಬದಲಾವಣೆ. ಮುಖಮಂಟಪದ ಮುಂಭಾಗ ನಾಲ್ಕು ಸ್ತಂಬಗಳನ್ನು ಒಳಗೊಂಡಿದ್ದು ಚೌಕಾಕಾರದ ಪುಷ್ಪಬೋದಿಗೆಗಳನ್ನು ಒಳಗೊಂಡಿದೆ. ಮಧ್ಯದ ಮೇಲ್ಛಾವಣಿ ಅರಳಿದ ಕಮಲದಿಂದ ಅಲಂಕೃತವಾಗಿದೆ. ಹೊರಭಾಗದಲ್ಲಿನ ಸ್ತಂಬಗಳ ಮೇಲೆ ವೀರಾಂಜನೇಯ, ಚಕ್ರ, ಪುಷ್ಪ, ಶಂಖ, ವಿಷ್ಣು, ವಂದನಾರ್ಪಣ ಭಕ್ತೆ, ಗಣಪ, ಬಾಲಕೃಷ್ಣ, ದಂಪತಿ, ಆಮೆ, ನಿಂತ ಗರುಡ, ನರ್ತಿಸುತ್ತಿರುವ ಬಾಲಕೃಷ್ಣ ಅಭಯ ಮುದ್ರೆಯ ಬಾಲಕೃಷ್ಣ, ಬೆಣ್ಣೆ ಬಾಲಕೃಷ್ಣ ಮುಂತಾದ ಮೂರ್ತಿಶಿಲ್ಪಗಳು ಈ ಸ್ತಂಭಗಳ ಮೇಲೆ ಚಿತ್ರಿತವಾಗಿದೆ. ಸುತ್ತಲಿನ ಪ್ರಕಾರದ ಗೋಡೆ ಇತ್ತೀಚೆಗೆ ನವೀಕರಿಸಿದೆ. ಮುಖ ಮಂಟಪದ ಮೇಲ್ಛಾವಣೆಯಲ್ಲಿ ಚಾಚಿದ ಕಪೋತ ಹೊಂದಿದೆ. ಮೇಲಿನ ಸುಖನಾಸಿಯಲ್ಲಿ ಪಾರ್ವತಿ, ಪರಮೇಶ್ವರ, ಗಣಪತಿ, ಮುಂದೆ ನಂದಿಯ ಉಬ್ಬು ಶಿಲ್ಪದ ಚಿತ್ರಣವಿದೆ. ಇವೆಲ್ಲವುಗಳಿಗೂ ಬಣ್ಣ ಲೇಪಿಸಿದ್ದರಿಂದ ಇದು ಇತ್ತೀಚಿನ ಕಾಲದೆಂದು ತೋರ್ಪಡುತ್ತದೆ. ಗರ್ಭಗುಡಿಯ ಗೋಪುರ ಸ್ತೂಪಿಯನ್ನು ಒಳಗೊಂಡಿದೆ. ಆದಿಶೇಷನ ಮೇಲೆ ಕುಳಿತ ವಿಷ್ಣು, ಪಕ್ಕದಲ್ಲಿ ದ್ವಾರಪಾಲಕರು, ಪಾರ್ವತಿ, ಪರಮೇಶ್ವರ, ಮಧ್ಯೆ ವೀರಭದ್ರ, ಬ್ರಹ್ಮ, ವಿಷ್ಣು, ಮಹೇಶ್ವರ, ಮೂರ್ತಿಶಿಲ್ಪಗಳಿಂದ ಶಿಖರ ಅಲಂಕೃತಗೊಂಡಿದೆ.

ಹೆಸರು	:	ನಗರೇಶ್ವರ ದೇವಾಲಯ
ಸ್ಥಳ	:	ಕೋಟೆಯ ಮಧ್ಯೆ, ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫-೧೬ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ಮಹಾದೇವ ಸಿ. ೨೦೦೨, ಪು.೧೩೧)

ಈ ದೇವಾಲಯದ ಉದ್ದ ೨೦ಮೀ ಅಗಲ ೩೧ ಮೀ ೫೦.ಸೆಂ.ಮೀ ಇದೆ ಈ ನಗರೇಶ್ವರ ದೇವಾಲಯದ ಒಳಭಾಗ ಗರ್ಭಗೃಹ ಮತ್ತು ಮಂಟಪವನ್ನು ಒಳಗೊಂಡಿದೆ. ಮೂಲತಃ ಈ ಕಟ್ಟಡ ವಿಜಯನಗರೋತ್ತರ ಕಾಲಕ್ಕೆ ಸೇರಿದೆ. ಆದರೆ ಗರ್ಭಗೃಹದಲ್ಲಿನ ಮೂರ್ತಿಶಿಲ್ಪ ಮತ್ತು ಮಂಟಪದಲ್ಲಿನ ಸ್ತಂಭರಚನೆ ವಿಜಯನಗರ ಕಾಲಕ್ಕೆ ಸೇರಿದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹದ ಮೇಲ್ಛಾವಣಿ ೧೬ ಕೋನಾಕೃತಿಯ, ಚೌಕಾಕಾರದ ಮಧ್ಯದಲ್ಲಿ ಅರಳಿದ ಕಮಲದಿಂದ ಅಲಂಕೃತಗೊಂಡಿದೆ. ಗರ್ಭಗೃಹದ ಪ್ರವೇಶದ್ವಾರದ ಮೇಲೆ ಲಲಾಟಬಿಂಬದಲ್ಲಿ ಹೂವಿನ ಚಿತ್ರಣವಿದೆ. ಪ್ರವೇಶದ್ವಾರದ ಇಕ್ಕೆಲುಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಇದು ವೈಷ್ಣವ ದೇವಾಲಯವಿರಬಹುದೇ(?), ಮಂಟಪದ ನೆಲಸ್ಥರವನ್ನು ಪೂರ್ತಿಯಾಗಿ ನವೀಕರಣ ಮಾಡಲಾಗಿದೆ. ಮಧ್ಯದಲ್ಲಿರುವ ನಂದಿ ಶಿವಲಿಂಗಕ್ಕೆ

ಮುಖವಾಗಿದೆ. ಸ್ತಂಭ ಚೌಕಾಕೃತಿಯಲ್ಲಿದ್ದು, ಪ್ರತಿಯೊಂದು ಸ್ತಂಭವೂ ಎರಡು ಪುಷ್ಪ ಬೋದಿಗೆಗಳನ್ನು ಒಳಗೊಂಡಿದೆ. ಕಾಮಧೇನು, ಗಣೇಶ ಸಿಂಹಮುಖ, ತಪಸ್ವಿ, ಸ್ತ್ರೀಯರ ವಿವಿಧ ನೃತ್ಯದ ಭಂಗಿ, ಕುಳಿತಿರುವ ಭಂಗಿ ಮುಂತಾದ ಶಿಲ್ಪಗಳು ಈ ಸ್ತಂಭಗಳಲ್ಲಿ ರಚನೆಯಾಗಿರುವುದು ಇದೊಂದು ವೈಶಿಷ್ಟ್ಯತೆ. ಪ್ರವೇಶ ಮಂಟಪದಲ್ಲಿ ನಾಲ್ಕು ಸ್ತಂಭಗಳಿದ್ದು ಮುಂದಿನ ಎರಡು ಸ್ತಂಭಗಳು ನಾಲ್ಕು ಪುಷ್ಪಬೋದಿಗೆಗಳನ್ನು ಒಳಗೊಂಡಿದೆ. ಕೆಳಭಾಗ ಚೌಕಾಕಾರ ಪೋಡಾಶ್ರಪಟ್ಟಿಕೆ. ಆ ಮಾಲಕಗಳನ್ನು ಒಳಗೊಂಡಿದೆ. ಪ್ರವೇಶದ್ವಾರದ ಬಲಕ್ಕೆ ಗಣೇಶ ಮತ್ತು ನವಗ್ರಹಗಳಿವೆ. ಈ ಪ್ರವೇಶದ್ವಾರದ ಇಕ್ಕೆಲುಗಳಲ್ಲಿ ಕೀರ್ತಿಮುಖಗಳು ಎಡಬಲಕ್ಕೆ ಆಮೆಗಳಿಂದ ಅಲಂಕರಣಗೊಂಡಿದೆ. ಜಾಲಂದ್ರಗಳು, ಹೂ-ಬಳ್ಳಿಗಳ ಕೆತ್ತನೆ, ಗದೆ, ಈಟಿ, ತ್ರಿಶೂಲವನ್ನು ಹಿಡಿದ, ಸ್ತ್ರೀ ಮತ್ತು ಪುರುಷರ ಕೆತ್ತನೆ ಈ ದ್ವಾರದ ಇಕ್ಕೆಲುಗಳಲ್ಲಿವೆ. ದೇವಾಲಯದ ಎದುರಿನ ಚಿಕ್ಕ ಮಂಟಪದಲ್ಲಿ ನಂದಿ, ಮೂರ್ತಿಶಿಲ್ಪ, ಜೊತೆಯಲ್ಲಿ ದೀಪಸ್ತಂಭವಿದೆ. ನಗರೇಶ್ವರ ದ್ವಾರದ ಪೂರ್ವದಿಕ್ಕಿಗೆ ಹಿಂಬದಿಯಲ್ಲಿ ದೇವಿ ಮಂಟಪವಿದೆ. ಕೀರ್ತಿಮುಖದ ಪ್ರಭಾವಳಿಯು ಇಲ್ಲಿದೆ. ಈ ಗರ್ಭಗೃಹದ ಪ್ರವೇಶದ್ವಾರದಲ್ಲಿ ಎರಡೂ ಕಡೆ ಶೈವ ದ್ವಾರಪಾಲಕರಿದ್ದಾರೆ. ಅಧಿಷ್ಠಾನ, ಭಿತ್ತಿ, ಮೇಲ್ಭಾಗ ಕಪೋತವಿರದೆ ಚೌಕಪಟ್ಟಿಗೆಯಂತಿದೆ. ಅಧಿಷ್ಠಾನ ಮಂಚಬಂಧ ಮಾದರಿಯಲ್ಲಿದೆ. ಈ ಚೌಕಾಕಾರದ ಪಟ್ಟಿಗೆ ಕಪೋತವನ್ನು ಆದರಿಸಿದೆ. ಭಿತ್ತಿಗೆ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದೆ. ಭಿತ್ತಿಯ ಮೇಲೆ ವರಹ, ಸಿಂಹ ಚಂದ್ರ ಮತ್ತು ಹಿಂಬದಿಯಲ್ಲಿ ಐದು ಆಮೆಗಳ ಚಿತ್ರಣವಿದೆ. ಹೆಡೆ ಬಿಚ್ಚಿದ ನಾಗಸರ್ಪ ಜೋಡುಮುಖವಾಗಿ ನಿಂತ ಆನೆಗಳ ಚಿತ್ರಣವನ್ನು ಈ ಭಿತ್ತಿಯಲ್ಲಿ ಕಾಣಬಹುದು. ಪ್ರವೇಶ ಮೇಲ್ಭಾಗದ ಎರಡು ಭಾಗಗಳಲ್ಲಿ ಭಿತ್ತಿಯ ಮೇಲೆ ಗಂಡಬೇರುಂಡ ಪಕ್ಷಿ, ಆಮೆಯ ಕಾಲುಗಳ ಕೆಳಗೆ ಆನೆಗಳ ಶಿಲ್ಪಗಳು, ಸಾಲು ಸಾಲಾಗಿರುವ ಕೋಲಾಟದ ಸ್ತ್ರೀಯರು ಆನೆಗಳ ಶಿಲ್ಪ, ಅಶ್ವಾರೋಹಿಗಳು ಮೂರ್ತಿಶಿಲ್ಪ, ರಾಮ-ಲಕ್ಷಣ-ಸೀತೆ ಮತ್ತು ಆಂಜನೇಯರ ಮೂರ್ತಿಶಿಲ್ಪವೂ ಇಲ್ಲಿದೆ. ಸೂಕ್ಷ್ಮ ಮತ್ತು ಅಂದನೆಯ ಕೆತ್ತನೆಯಿಂದ ಕೂಡಿದ ಕಾಷ್ಠಶಿಲ್ಪ ಇಲ್ಲಿನ ಮತ್ತೊಂದು ವಿಶೇಷತೆ.

ಹೆಸರು	:	ವೀರಭದ್ರ ದೇವಾಲಯ
ಸ್ಥಳ	:	ನಗರೇಶ್ವರ ದೇವಾಲಯದ ಆವರಣ ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫-೧೬ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರ
ದಿಕ್ಕು	:	ಪೂರ್ವಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯದ ಒಳಭಾಗ ಗರ್ಭಗುಡಿ ಮತ್ತು ಅರ್ಧಮಂಟಪ ನವರಂಗವನ್ನು ಒಳಗೊಂಡಿದೆ. ಗರ್ಭಗುಡಿಯ ಮೇಲ್ಭಾವಣೆ ಅಷ್ಟಕೋನಾಕಕೃತಿ ಅದರ ಮಧ್ಯದಲ್ಲಿ ಅರಳಿದ ಕಮಲವೊಂದು

ಅಲಂಕೃತವಾಗಿದೆ. ಪೀಠದಲ್ಲಿ ವೀರಭದ್ರ ನಿಂತಭಂಗಿಯಲ್ಲಿದೆ. ಅರ್ಧಮಂಟಪ ಇದು ತೆರೆದ ಮಂಟಪ. ಯಾವುದೇ ಅಲಂಕರಣೆ ಇಲ್ಲದೆ ಸರಳವಾಗಿದೆ. ಸಭಾ ಮಂಟಪದ ನಾಲ್ಕು ಸ್ತಂಭಗಳು ಚೌಕಾಕಾರವಾಗಿದ್ದು, ಬೋದಿಗೆಗಳನ್ನು ಒಳಗೊಂಡಿದೆ. ನವರಂಗದ ಮೇಲ್ಛಾವಣಿ ಅಷ್ಟಕೋನಾಕೃತಿಯ ಭುವನೇಶ್ವರಿಯನ್ನು ಒಳಗೊಂಡಿದೆ. ಇದರ ಪ್ರವೇಶದ್ವಾರದ ಇಕ್ಕೆಲುಗಳಲ್ಲಿ ದ್ವಾರಪಾಲಕರು, ಲಲಾಟ ಬಿಂಬದಲ್ಲಿ ಹೂವಿನ ಚಿತ್ರಣವಿದೆ. ಹೊರಭಾಗ ಸಣ್ಣ ಅಧಿಷ್ಠಾನ(ಪ್ರಸ್ತುತ ಮುಚ್ಚಿದೆ) ಸಪಾಟಾದ ಭಿತ್ತಿ ಮತ್ತು ಸಪಾಟಾದ(ಸರಳವಾದ) ಮೇಲ್ಛಾವಣಿ ಇದೆ. ಇಲ್ಲಿ ಭಿತ್ತಿಗೆ ಕಲ್ಲನ್ನು ವಿಸ್ತೃತವಾಗಿ ಹಾಸಲಾಗಿದೆ.

ಹೆಸರು	:	ಮಲ್ಲಿಕಾರ್ಜುನ ದೇವಾಲಯ
ಸ್ಥಳ	:	ಸೀತಾರಾಂ ತಾಂಡದ ಪಶ್ಚಿಮ ದಿಕ್ಕು ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೪-೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ಮಂಜುನಾಥಯ್ಯ ಟಿ.ಎಂ., ೧೯೯೬, ಪು.೪೪)

ಈ ದೇವಾಲಯದ ಉದ್ದ ೧೫.ಮೀ, ೧೦.ಸೆಂ.ಮೀ ಮತ್ತು ಅಗಲ ೮.ಮೀ ೯೦.ಸೆಂ.ಮೀ ವಿಸ್ತೀರ್ಣ ಹೊಂದಿದೆ. ಕಾಮಲಾಪುರದಿಂದ ನಾಲ್ಕು ಕಿ.ಮೀ ಅಂತರದಲ್ಲಿ ಕಾಮಲಾಪುರದಿಂದ ನಲ್ಲಾಪುರಕ್ಕೆ ಹೋಗುವ ಮಾರ್ಗದಲ್ಲಿ ಈ ದೇವಾಲಯವಿದೆ. ವಿಜಯನಗರ ಕಾಲದಲ್ಲಿ ಈ ಪ್ರದೇಶವನ್ನು ಅನಂತಾಪುರ ಎಂದು ಕರೆಯಲಾಗಿದೆ. ಈ ದೇವಾಲಯದ ಸುತ್ತಲೂ ಪ್ರಕಾರದ ಭಿತ್ತಿ ಆವರಿಸಿದ್ದು, ಪೂರ್ವ-ಉತ್ತರ-ದಕ್ಷಿಣಕ್ಕೆ ಬಾಗಿಲು ದ್ವಾರಗಳಿದ್ದರೂ ಪ್ರಸ್ತುತ ಇದು ಶಿಥಿಲವಾಗಿದೆ. ದೇವಾಲಯದ ಒಳಭಾಗ ನವರಂಗ, ಅಂತರಾಳ, ಗರ್ಭಗೃಹವನ್ನು ಒಳಗೊಂಡಿದೆ. ನವರಂಗದ ಮೂರು ದ್ವಾರಗಳ ಎದುರಿಗೆ ಮಂಟಪಗಳಿವೆ. ಪೂರ್ವ-ಉತ್ತರ-ದಕ್ಷಿಣ ದಿಕ್ಕುಗಳ ಬಾಗಿಲು ದ್ವಾರದ ಇಕ್ಕೆಲುಗಳಲ್ಲಿ ಶೈವ ದ್ವಾರಪಾಲಕರಿದ್ದಾರೆ. ಗರ್ಭಗೃಹದ ಮೇಲ್ಛಾವಣಿ ಅಷ್ಟಕೋನಾಕೃತಿ ಮಧ್ಯದಲ್ಲಿ ಅರಳಿದ ಕಮಲವೊಂದಿದೆ. ಗರ್ಭಗೃಹದಲ್ಲಿ ಪ್ರಸ್ತುತ ಪಾಣಿ ಪೀಠವಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಪದ್ಮಾಸೀನಳಾಗಿದ್ದಾಳೆ.

ಅಂತರಾಳದ ಬಾಗಿಲು ವಾಡದಲ್ಲೂ ಶೈವದ್ವಾರಪಾಲಕರಿದ್ದಾರೆ. ನವರಂಗ ದ ಮೇಲ್ಛಾವಣಿ ಅಷ್ಟಕೋನಾಕೃತಿಯ ಮಧ್ಯ ಭುವನೇಶ್ವರಿ ಇದೆ. ನವರಂಗದ ಮಧ್ಯದಲ್ಲಿ ನಾಲ್ಕು ಸ್ತಂಭಗಳು ಕೆಳಭಾಗ ಚೌಕ ಷೋಡಾಶ್ರ. ಅಷ್ಟ ಪಟ್ಟಿಯನ್ನು ಒಳಗೊಂಡಿದೆ. ಮೇಲ್ಭಾಗ ಚೌಕಾಕಾರ ಮತ್ತು ಅಮಾಲಕವನ್ನು

ಒಳಗೊಂಡಿದೆ. ಈ ಸ್ತಂಭಗಳಲ್ಲಿ ಯೋಗಿ, ಆನೆ, ಪೂರ್ಣಕುಂಬ, ಮತ್ಸೇಂದ್ರನಾಥ ಆಮೆ, ಮಹಿಳೆಯ ನೃತ್ಯಭಂಗಿ, ಡೋಲುಧಾರಿ, ಗಣಪತಿ, ಆಯುಧ ಹೊತ್ತ ಮನುಷ್ಯ, ಚಾಮರಧಾರಿ, ಬಿಂದಿಗೆ ಹೊತ್ತ ಮಹಿಳೆ, ಮಂಗ ಹಣ್ಣು ತಿನ್ನುತ್ತಿರುವುದು, ಶಿವಲಿಂಗ, ಚಕ್ರ, ಪುಷ್ಪ, ವೀರಭದ್ರ, ಗಧಾಪಾಣಿ ಮಹಿಳೆ, ನಿಂತಸಿಂಹ, ಆಯುಧಧಾರಿ, ಸಿಂಹಮುಖ, ಗಡ್ಡಧಾರಿ, ಕಾಳಿಂಗಮರ್ದನ ಕೃಷ್ಣ, ಬಾಲಕೃಷ್ಣ, ಬೆಣ್ಣೆ ಕೃಷ್ಣ, ಅಂಜಲಿ ಮುದ್ರೆಯಲ್ಲಿದ್ದ ಹನುಮಂತ, ಈಟಿಧಾರಿ ಪುರುಷ, ನವಿಲು, ಶಂಖ, ಕೀರ್ತಿ ಮುಖ, ಮುಂತಾದ ಚಿತ್ರಣಗಳನ್ನು ಸ್ತಂಭಗಳಲ್ಲಿ ಕಾಣಬಹುದು. ಮೇಲ್ಛಾವಣಿ ಭುವನೇಶ್ವರಿಯನ್ನು ಒಳಗೊಂಡಿದೆ. ಮೇಲ್ಛಾವಣಿ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದೆ. ಮುಖ ಮಂಟಪದಲ್ಲಿ ೮ ಸ್ತಂಭಗಳಿದ್ದು ಸ್ತಂಭಗಳು ಚೌಕಾಕಾರವಾಗಿದ್ದು, ಮೇಲೆ ಬೋದಿಗೆಗಳನ್ನು ಒಳಗೊಂಡಿದೆ. ಮುಖಮಂಟಪದ ಮೇಲೆ ನಿರ್ಮಿತವಾದ ಸುಖನಾಸಿ ಮಾತ್ರ ಇದೆ. ಗರ್ಭಗುಡಿಯ ಮೇಲ್ಛಾವಣಿ ಗೋಪುರ ಇಟ್ಟಿಗೆ-ಗಾರೆಯಿಂದ ನಿರ್ಮಿತವಾಗಿದೆ. ಮುಂಭಾಗದಲ್ಲಿ ಎರಡು ಸುಖನಾಸಿಗಳು ಇವೆ. ಆದರೆ ಯಾವುದೇ ಮೂರ್ತಿಶಿಲ್ಪವಿಲ್ಲ. ಈ ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ ಮತ್ತು ಶಿಖರವನ್ನೊಳಗೊಂಡಿದೆ. ಅಧಿಷ್ಠಾನ ಈಗ ಮುಚ್ಚಲ್ಪಟ್ಟಿದೆ. ದೇವಾಲಯದ ಹೊರ ಭಿತ್ತಿಯಲ್ಲಿ ದೇವಕೋಷ್ಠಕಗಳಿವೆ. ಭಿತ್ತಿಯ ಮೇಲೆ ಹನುಮಂತ, ಉಗ್ರನರಸಿಂಹ, ಮೀನಿನ ಮೇಲೆ ನಿಂತು ಕರ ಜೋಡಿಸಿದ ಸ್ತ್ರೀ, ಅನಂತಶಯನ, ಬಾಲಕೃಷ್ಣ, ನವಿಲು, ಕಮಂಡಲಧಾರಿ ಸ್ತ್ರೀ, ಆಮೆ, ಮೀನು, ಸಂಜೀವಿನಿ ಹನುಮಂತ, ಕಾಳಿಂಗ ಮರ್ಧನಕೃಷ್ಣ, ಗಜಾರೋಹಿಶಿಲ್ಪ ಮುಂತಾದ ಮೂರ್ತಿ ಶಿಲ್ಪಗಳು ಭಿತ್ತಿಯ ಸುತ್ತಲೂ ತೋರ್ಪಡುತ್ತಿರುವುದು ಈ ದೇವಾಲಯದ ಮತ್ತೊಂದು ವೈಶಿಷ್ಟ್ಯ.

ಹೆಸರು	:	ಶೈವ ದೇವಾಲಯ
ಸ್ಥಳ	:	ಗಜಶಾಲೆಯ ದಿಂಬದಿ, ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫-೧೬ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ದಕ್ಷಿಣದಿಕ್ಕು
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ವಸುಂಧರಾ ಫಿಲಿಯೋಜಾ, ೧೯೮೨, ಪು.೪೭)

ಈ ದೇವಾಲಯದ ಉದ್ದ ೧೦ಮೀ ೧೦.ಸೆಂ.ಮೀ ಮತ್ತು ೯.ಮೀ ೭೦.ಸೆಂ.ಮೀ ವಿಸ್ತೀರ್ಣ ಹೊಂದಿದೆ. ಪ್ರಸ್ತುತ ಈ ದೇವಾಲಯ ಶಿಥಿಲವಾಗಿದ್ದು ದಕ್ಷಿಣ ದಿಕ್ಕಿಗೆ ಮುಖವಾಗಿದೆ. ಇದರ ಇನ್ನೊಂದು ವಿಶೇಷತೆ ದೇವಾಲಯದ ಒಳಭಾಗ ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದ ಮೇಲ್ಛಾವಣಿ ಅಷ್ಟಕೋನಾಕೃತಿಯನ್ನು ಒಳಗೊಂಡಿದೆ. ಅಂತರಾಳದ

[illegible]

ಬಾಗಿಲುದ್ವಾರ ಕೆತ್ತನೆಯಿಂದ ಒಳಗೊಂಡಿದ್ದರೂ, ಲಲಾಟಬಿಂಬದಲ್ಲಿನ ಮೂರ್ತಿಶಿಲ್ಪ ಈಗ ಹಾಳಾಗಿದೆ. ಪ್ರವೇಶದ್ವಾರದ ಇಕ್ಕೆಲುಗಳಲ್ಲಿ ಶೈವ ದ್ವಾರಪಾಲಕರು ಇದ್ದಾರೆ. ಬಾಗಿಲುವಾಡದ ಸ್ತಂಭ ಪಟ್ಟಿಕೆಯ ಮೇಲ್ಭಾಗದಲ್ಲಿ ಹೂವಿನ ಸಿಂಹದ ಚಿತ್ರಣವಿದೆ. ಮುಖ ಮಂಟಪ ೮ ಸ್ತಂಭಗಳನ್ನು ಒಳಗೊಂಡಿದ್ದು ಈ ಸ್ತಂಭಗಳು ಚೌಕಾಕಾರ, ಅಷ್ಟಕೋನಾಕೃತಿ ಮತ್ತೆ ಚೌಕಾಕಾರದ ಮೇಲೆ ಬೋದಿಗೆಯನ್ನು ಒಳಗೊಂಡಿವೆ. ಈಶ್ವರ, ನಕ್ಷತ್ರ, ತಪಸ್ವಿನಿ, ವೀರಭದ್ರ, ಸಿಂಹ, ಗಣಪತಿ, ನಂದಿ, ಹೂ, ವಾಮನ, ಆಯುಧಧಾರಿ, ಗಂಡಬೇರುಂಡ ಮುಂತಾದ ಮೂರ್ತಿಶಿಲ್ಪಗಳು ಸ್ತಂಭಗಳ ಮೇಲೆ ಕೆತ್ತಲ್ಪಟ್ಟಿರುವುದು ಇದು ಈ ದೇವಾಲಯದ ವೈಶಿಷ್ಟ್ಯವಾಗಿದೆ. ಹೊರಭಾಗ ಅಧಿಷ್ಠಾನ, ಭಿತ್ತಿ, ಕಪೋತವನ್ನು ಒಳಗೊಂಡಿದ್ದು, ಮೇಲ್ಭಾಗಕ್ಕೆ ಇಟ್ಟಿಗೆ, ಗಾರೆಗಳನ್ನು ಬಳಸಿರುವುದು ಗೋಚರ. ಭಿತ್ತಿಗೆ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದೆ.

ಹೆಸರು	:	ಈಶ್ವರ ದೇವಾಲಯ
ಸ್ಥಳ	:	ಪ್ರಾಥಮಿಕ ಶಾಲೆಯ ೭ನೇ ವಾರ್ಡ್ ಹತ್ತಿರ, ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫-೧೬ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯದ ಉದ್ದ ೨೬ಮೀ ೬೦.ಸೆಂ.ಮೀ ಅಗಲ ೮ಮೀ ವಿಸ್ತೀರ್ಣವಿದೆ. ಪ್ರಸ್ತುತ ಈ ದೇವಾಲಯ ಜೀರ್ಣೋದ್ಧಾರವಾಗಿದೆ. ಗರ್ಭಗೃಹ ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಬಾಗಿಲುದ್ವಾರ ಉತ್ತರಕ್ಕೆ, ದಕ್ಷಿಣಕ್ಕೆ ಮತ್ತು ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿದ್ದ ಈಶ್ವರಲಿಂಗ ಇತ್ತೀಚಿನದು. ಅಂತರಾಳದ ಬಾಗಿಲು ದ್ವಾರದ ಮೇಲ್ಭಾಗದ ಗಜಲಕ್ಷ್ಮಿ ಪದ್ಮಾಸೀನಳಾಗಿದ್ದಾಳೆ. ಇದರ ಬಾಗಿಲು ದ್ವಾರದಲ್ಲಿ ವೈಷ್ಣವ ದ್ವಾರಪಾಲಕರಿದ್ದು, ಬಹುಶಃ ಇದು ವೈಷ್ಣವ ಗುಡಿ ಎಂಬುದನ್ನು ಸೂಚಿಸುತ್ತದೆ. ಅಥವಾ ಬಾಗಿಲುವಾಡವನ್ನು ಬೇರೆಡೆಯಿಂದ ಜೋಡಿಸಿರಬೇಕು. ಪ್ರವೇಶದ್ವಾರದಲ್ಲಿ ಸ್ತ್ರೀಯರ ಶಿಲ್ಪಗಳು ಹಾಗೂ ಲತಾ ಕೆತ್ತಲ್ಪಟ್ಟಿವೆ. ಹೊಸ್ತಲಿನ ಮುಖಭಾಗ ಹನುಮಂತ ಸಂಜೀವಿನ ಪರ್ವತವನ್ನು ಕೈಯಲ್ಲಿ ಹಿಡಿದಂತಿದೆ. ಅಂತರಾಳ ಮತ್ತು ಗರ್ಭಗೃಹಗಳಲ್ಲಿ ಮೇಲ್ಛಾವಣಿಗೆ ಕಲ್ಲು ಉದ್ದವಾಗಿ ಹಾಸಲ್ಪಟ್ಟಿದೆ. ಅಂತರಾಳದ ಪ್ರವೇಶದ ಬಾಗಿಲುವಾಡದಲ್ಲಿ ಹನುಮಂತ, ಮೂರು ಭಕ್ತರು ಅಂಜಲಿ ಮುದ್ರೆಯಲ್ಲಿದ್ದು, ರಾಮ, ಲಕ್ಷ್ಮಣ, ಸೀತೆ, ಭಕ್ತರ ಶಿಲ್ಪಗಳೂ ಇಲ್ಲಿ ಮೂಡಲ್ಪಟ್ಟಿದೆ. ಗರ್ಭಗೃಹದಲ್ಲಿ ಪೀಠದ ಭಾಗ ಸಿಂಹಮುಖದ ಪ್ರಣಾಳಿಕೆಯನ್ನು ಒಳಗೊಂಡಿದೆ. ನವರಂಗ ಎರಡು

[illegible]

ಸ್ತಂಭಗಳನ್ನು ಒಳಗೊಂಡಿದ್ದು, ಸ್ತಂಭಗಳು, ಚೌಕಾಕಾರ, ನಾಸಿ, ಚೌಕಾಕಾರ ಭೋದಿಗೆಗಳನ್ನು ಒಳಗೊಂಡಿದೆ. ಸ್ತ್ರೀ, ಮೃದಂಗವಾದಕ, ಯೋಗಿ, ನವಿಲು ಸರ್ಪವನ್ನು ಕೊಕ್ಕಿನಲ್ಲಿ ಹಿಡಿದುಕೊಂಡಿರುವುದು, ಕಮಲ, ಮಂಗ ತನ್ನ ಮರಿಯನ್ನು ಕೈಯಲ್ಲಿ ಹಿಡಿದು ಕೊಂಡಿರುವುದು, ಹುಲಿಯ ಮೇಲೆ ಆಸೀನಳಾದ ದೇವಿ, ಹಂಸ ಇವು ಸ್ತಂಭಗಳಲ್ಲಿ ಚಿತ್ರಿತವಾಗಿದೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ ಶಿಖರವನ್ನು ಒಳಗೊಂಡಿದೆ. ಪ್ರಸ್ತುತ ಅಧಿಷ್ಠಾನ ಮಣ್ಣಿನಲ್ಲಿ ಮುಚ್ಚಿದೆ. ಹೊರಭಾಗದ ಭಿತ್ತಿಯಾವುದೇ ಅಲಂಕರಣೆಗೆ ಒಳಗೊಳ್ಳದೇ ಸಪಾಟಾಗಿ ಮೂಲ ರೂಪದಲ್ಲಿರುವುದೇ ಒಂದು ವಿಶೇಷತೆ. ಭಿತ್ತಿಯ ಮೇಲ್ಭಾಗ ಕೂಡ ಒಳಗೊಂಡಿದೆ. ಶಿಖರ ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲ್ಪಟ್ಟಿದ್ದು, ವಿಜಯನಗರದ ವೈಶಿಷ್ಟ್ಯತೆಗಳಲ್ಲಿ ಒಂದಾಗಿದೆ. ಶಿಖರದ ಮುಂಭಾಗ ಸುಖನಾಸಿಯನ್ನು ಒಳಗೊಂಡಿದೆ. ಗೋಪುರವು ೮ ತಲಗಳನ್ನು ಒಳಗೊಂಡಿದ್ದು ಕದಂಬರ ನಾಗರಶೈಲಿಯನ್ನು ಹೋಲುವಂತಿದೆ. ಸ್ತೂಪಿಯು ದೇವಕೋಷ್ಠಕಗಳ ರಚನೆಯಿಂದ ಆವೃತ್ತವಾಗಿದೆ. ಭಿತ್ತಿಯ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದೆ. ದೇವಾಲಯದ ಮುಖ್ಯದ್ವಾರದ ಎದುರಿನ ಮಂಟಪದಲ್ಲಿ ದೇವಿವಿಗ್ರಹ, ನೀಳವಾದ ಲಿಂಗ ಮತ್ತು ನಾಗರ ಮೂರ್ತಿಶಿಲ್ಪಗಳಿವೆ. ದಕ್ಷಿಣ ಉತ್ತರ ದಿಕ್ಕಿನ ಮಂಟಪದಲ್ಲಿ ಭೈರವ ಮೂರ್ತಿಯಿದೆ. ದಿಕ್ಕನಲ್ಲಿಯೂ ಮಂಟಪವಿದ್ದು ಪ್ರಸ್ತುತ ಕಲ್ಲು ಮಣ್ಣುಗಳಿಂದ ಮುಚ್ಚಲ್ಪಟ್ಟಿದೆ.

ಹೆಸರು	:	ಪ್ರಸನ್ನ ವಿರುಪಾಕ್ಷ ದೇವಾಲಯ
ಸ್ಥಳ	:	ಮಹಾನವಮಿ ದಿಬ್ಬದ ಮತ್ತು ಪ್ರಸ್ತುತ ಉತ್ಖನದ ಸಮೀಪ ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ಬಸವರಾಜ ಮಲಶೆಟ್ಟಿ, ೧೯೮೧, ಪು.೧೮)

ನೆಲಮಟ್ಟಕ್ಕಿಂತ ಈ ದೇವಾಲಯ ಕೆಳಭಾಗದಲ್ಲಿ ಇರುವುದರಿಂದ ಇದನ್ನು ನೆಲಮಾಳಿಗೆ ದೇವಾಲಯ, ಪಾತಾಳೇಶ್ವರ ದೇವಾಲಯ, "under ground temple" ಎಂದು ಕರೆಯಲಾಗುತ್ತಿದೆ. ಪೂರ್ವದಲ್ಲಿ ಪ್ರವೇಶದ್ವಾರವೊಂದಿದೆ. ಪ್ರವೇಶದ್ವಾರ, ಅಧಿಷ್ಠಾನ, ಭಿತ್ತಿ, ಸಣ್ಣ ಕಪೋತವನ್ನ ಒಳಗೊಂಡಿದೆ. ಅಧಿಷ್ಠಾನ ಉಪಾನ, ಕುಮುದ, ಕಪೋತವನ್ನು ಒಳಗೊಂಡಿದೆ. ಭಿತ್ತಿಯ ಸುತ್ತ ೩ ಪಟ್ಟಿಕೆಗಳನ್ನು ಮಾಡಿ ಪಟ್ಟಿಕೆಗೆಯ ಮೇಲೆ ಕುಂಭ ಪಂಜರವಿರುವುದು ವಿಶೇಷ ಲಕ್ಷಣಗಳಲ್ಲಿ ಒಂದು. ಕಪೋತ ಸ್ವಲ್ಪ ಭಾಗಿದ್ದು ಮೇಲ್ಭಾಗದ ಶಿಖರ ಈಗ ಇಲ್ಲದಾಗಿದೆ.

ದೇವಾಲಯದ ಒಳಭಾಗ ಗರ್ಭಗೃಹ ಅಂತರಾಳ ನವರಂಗವನ್ನು ಒಳಗೊಂಡಿದೆ. ದೇವಾಲಯದ ಪಕ್ಕದಲ್ಲೇ ಹಾಯ್ದು ಹೋಗಿರುವ ನೀರಾವರಿ ಯೋಜನೆಯ ಕಾಲುವೆ ಇದ್ದ ಪ್ರಯುಕ್ತ ಕಾಲುವೆಯಲ್ಲೂ ಈಗಲೂ ನೀರು ನಿಂತಿರುತ್ತವೆ ಎಂಬುದು ಗೋಚರವಾಗುತ್ತದೆ. ಗರ್ಭಗೃಹ, ಸುಖನಾಸಿ, ರಂಗಮಂಟಪಗಳು, ಚಾಲುಕ್ಯ ಶೈಲಿಯಲ್ಲಿವೆ. ದೇವಾಲಯದಲ್ಲಿರುವ ಶಿಲಾ ಶಾಸನದ ಪ್ರಕಾರ ಇದು ಪ್ರಸನ್ನ ವಿರುಪಾಕ್ಷ ದೇವಾಲಯ. ಕೃಷ್ಣದೇವರಾಯ ಕ್ರಿ.ಶ.೧೫೩೧ರಲ್ಲಿ ಅನೇಕ ದೇವಾಲಯಗಳಿಗೆ ಕೊಟ್ಟ ದಾನಗಳಲ್ಲಿ ಇದು ಒಂದು. ಗರ್ಭಗೃಹದಲ್ಲಿ ಪ್ರಸ್ತುತ ಶಿವಲಿಂಗವಿಲ್ಲ. ಗರ್ಭಗೃಹವು ಯಾವಾಗಲೂ ನೀರಿನಿಂದ ಕೂಡಿರುತ್ತದೆ. ಗರ್ಭಗೃಹ ಬಾಗಿಲು ವಾಡದ ಲಲಾಟ ಬಿಂಬದಲ್ಲಿ ಯಾವುದೇ ಅಲಂಕಾರತೆ ಇಲ್ಲದೇ ಮೂಲರೂಪಕ್ಕೆ ಪ್ರಾಧ್ಯಾನ್ಯತೆ ನೀಡಲಾಗಿದೆ. ದೇವಾಲಯದ ಸುತ್ತ-ಮುತ್ತ ಮಂಟಪಗಳಿವೆ. ಪ್ರದಕ್ಷಿಣ ಪಥವಿರುವುದು ಇಲ್ಲಿಯ ಮತ್ತೊಂದು ವಿಶೇಷತೆ.

ನವರಂಗದಲ್ಲಿ ನಂದಿ ಗರ್ಭಗೃಹಕ್ಕೆ ಮುಖಮಾಡಿ ಕುಳಿತಿದೆ. ಮಧ್ಯ ನಾಲ್ಕು ಸ್ತಂಭಗಳಿವೆ. ಇದರ ಮೇಲ್ಛಾವಣಿ ಷಟ್ ಕೋನಾಕೃತಿಯಲ್ಲಿದ್ದು, ಮಧ್ಯ ಅರಳಿದ ಕಮಲ ವೈಶಿಷ್ಟ್ಯಪೂರ್ಣವಾಗಿದೆ. ಸ್ತಂಭಗಳು ಚೌಕಾಕಾರವಾಗಿದ್ದು, ಮೇಲೆ ಬೋದಿಗೆಗಳು ಇವೆ. ಸ್ತ್ರೀಯರ ವಿವಿಧ ಭಂಗಿ, ನವಿಲು, ಶಂಖ, ಹೂವಿನ ಚಿತ್ರಗಳು ಕಂಡುಬರುತ್ತವೆ. ನವರಂಗದ ಮುಂದಿನ ಭಾಗದಲ್ಲಿ ಎರಡು ಮಂಟಪಗಳಿದ್ದು, ಪ್ರತ್ಯೇಕ ಪ್ರವೇಶದ್ವಾರವಿದೆ. ಪ್ರವೇಶದ್ವಾರದ ಬಾಗಿಲುವಾಡದಲ್ಲಿ ಶೈವದ್ವಾರಪಾಲಕರು ತ್ರಿಶೂಲ, ಡಮರುಗ, ಗಧೆ ಹಿಡಿದು ಅಭಯವನ್ನು ನೀಡುತ್ತಿದ್ದಾರೆ. ನವರಂಗದಲ್ಲಿ ಏಳುಸಾಲಿನ ಏಳುಸ್ತಂಭಗಳು ಚಾಲುಕ್ಯ ಶೈಲಿಯ ವೃತ್ತಕಾರದ ಸ್ತಂಭಗಳಂತಿವೆ.(Watheturned pillars) ನಂದಿ, ಶಂಖ, ಕಹಳೆ ಊದುವ ಚಿತ್ರ ನರ್ತಕಿಯರ ವಿವಿಧ ಭಂಗಿಗಳು, ಕಾಮಧೇನು, ಈಶ್ವರ ಲಿಂಗಕ್ಕೆ ಹಾಲೆರೆಯುತ್ತಿರುವ ಹಸು, ದೇವಿ, ಗಣಪತಿ, ಶಿವ ಈಟಿಧಾರಿ, ಲತಾಸುರುಳಿ ಮುಂತಾದ ಮೂರ್ತಿ ಶಿಲ್ಪಗಳನ್ನು ಸ್ತಂಭಗಳ ಮೇಲೆ ಕಡೆಯಲಾಗಿದೆ. ಮೇಲ್ಛಾವಣಿಯಲ್ಲಿ ಭುವನೇಶ್ವರಿ ಇದೆ. ಪ್ರವೇಶದ್ವಾರದ ಸ್ತಂಭಗಳಲ್ಲಿ ಪುಷ್ಪ ಬೋದಿಗೆಗಳು ಇವೆ. ಪಶ್ಚಿಮದಿಕ್ಕಿನಲ್ಲಿ ಎತ್ತರವಾದ ಧ್ವಜಸ್ತಂಭವಿದೆ. ಇದು ಛಾವಣಿಯ ಮಧ್ಯದಿಂದ ಬಂದಿದೆ. ಧ್ವಜ ಸ್ತಂಭಗಳ ಮುಂದೆ ಬಲಿಪೀಠವಿದೆ. ಬಲಿಪೀಠದ ಮುಂಭಾಗದಲ್ಲಿ ಮಂಟಪಗಳಿದ್ದು, ಇಲ್ಲಿನ ಸ್ತಂಭಗಳು, ಅಷ್ಟಕೋನಾಕೃತಿ, ಮೇಲ್ಭಾಗದಲ್ಲಿ ಬೋದಿಗೆಗಳಿವೆ. ಪ್ರವೇಶದ್ವಾರದ ಎರಡೂ ಕಡೆಗೆ ಎರಡು ಅಂತಸ್ತಿನ ಮಂಟಪಗಳಿವೆ. ಆಯತಾಕಾರದಲ್ಲಿವೆ. ಸ್ತಂಭಗಳು ಚೌಕಾಕಾರವಾಗಿ, ಎರೆಡೆರಡು ಬೋದಿಗೆಗಳನ್ನು ಒಳಗೊಂಡಿದೆ. ಮುಖಮಂಟಪದಲ್ಲಿನ ದ್ವಾರದ ಇಕ್ಕೆಲುಗಳಲ್ಲಿ ದ್ವಾರಪಾಲಕರಿದ್ದಾರೆ. ಬಾಗಿಲಿನ ತೋರಣ ಸೂಕ್ಷ್ಮ ಕೆತ್ತನೆಯ ಹೂಬಳ್ಳಿಗಳಿಂದ ರಚಿತವಾಗಿದೆ. ಈ ದೇವಾಲಯದ ಹೊರಭಾಗ, ಅಧಿಷ್ಠಾನ, ಭಿತ್ತಿ, ಕಪೋತವನ್ನು ಒಳಗೊಂಡಿದೆ. ಗರ್ಭಗೃಹ ಮತ್ತು ಅಂತರಾಳದ ಸುತ್ತ ಪ್ರಕಾರವಿರುವುದು ವಿಶೇಷ. ಶಿಖರ ಕದಂಬರ ನಾಗರ ಶೈಲಿಯಲ್ಲಿದೆ. ಶಿಖರ ಆರು ಹಂತಗಳನ್ನು

ಒಳಗೊಂಡಿದೆ. ಮುಂಭಾಗದಲ್ಲಿ ಸುಖನಾಸಿಯೂ ಇದೆ. ವಾಯುವ್ಯದಲ್ಲಿರುವ ಅಮ್ಮನ ಗುಡಿ ಪ್ರಸ್ತುತ ಶಿಥಿಲವಾಗಿದೆ. ನೈರುತ್ಯ ದಿಕ್ಕಿನಲ್ಲಿರುವ ಕಲ್ಯಾಣ ಮಂಟಪ ನಿಜಕ್ಕೂ ಸುಂದರ. ಇದರ ಪ್ರವೇಶ ಮಂಟಪದಲ್ಲಿ ಎಂಟು ಸ್ತಂಭಗಳಿದ್ದು, ಪುಷ್ಪ ಬೋದಿಗೆಗಳನ್ನು ಒಳಗೊಂಡಿದೆ. ಸ್ತಂಭಗಳಲ್ಲಿ ದೇವತೆಗಳು ಕೀರ್ತಿಮುಖ, ಲಿಂಗ, ಕಾಮಧೇನು, ಭಕ್ತ, ಲಿಂಗಕ್ಕೆ ಆನೆ ವಂದಿಸುತ್ತಿರುವ ಚಿತ್ರ, ಸರ್ಪಾಧಾರಿತ ಶಿವಲಿಂಗ, ಲಿಂಗಕ್ಕೆ ಕೈಮುಗಿಯುತ್ತಿರುವುದು, ಪ್ರಾಣಿ, ಮನುಷ್ಯ, ನಂದಿ, ಕಮಂಡಲಧಾರಿ ನಿಂತ ಸಿಂಹ, ವಿವಿಧ ರೀತಿಯ ಪುಷ್ಪಗಳು, ಶಂಖ ಊದುತ್ತಿರುವ ಸ್ತ್ರೀ, ಕೈಯಲ್ಲಿ ಕೋಲು ಹಿಡಿದು ನರ್ತಿಸುವ ಶಿಲ್ಪ, ರುದ್ರಾಕ್ಷಧಾರಿ ಧರಿಸಿದಲಿಂಗ ಮುಂತಾದ ಮೂರ್ತಿಶಿಲ್ಪಗಳಿವೆ. ಈ ಕಲ್ಯಾಣ ಮಂಟಪ ಎತ್ತರದಲ್ಲಿದ್ದು, ನಾಲ್ಕು ಸ್ತಂಭಗಳಿವೆ. ಮೇಲ್ಛಾವಣಿಯಲ್ಲಿ ಅರಳಿದ ಕಮಲ ಅಲಂಕೃತವಾಗಿದೆ. ಸುತ್ತಲೂ ನರ್ತಿಸುವ ಸ್ತ್ರೀಯರ ಚಿತ್ರಣ ಇಲ್ಲಿಯ ಇನ್ನೊಂದು ವಿಶೇಷತೆ. ನಾಲ್ಕು ಸ್ತಂಭಗಳಲ್ಲೂ ಹೂವಿನ ಚಿತ್ರಣವಿದೆ. ಈ ಸ್ತಂಭಗಳು ಚೌಕಾಕಾರವಾಗಿದ್ದು, ಮಧ್ಯ ಪಟ್ಟಿಕೆಗಳನ್ನು ಒಳಗೊಂಡಿದೆ. ಸಿಂಹ, ನವಿಲು ವಾಹನ ಮಾಡಿಕೊಂಡ ಷಣ್ಮುಖ, ನಾಗಕನ್ಯೆ, ಗಣಪತಿ, ವಿವಿಧ ಭಂಗಿಗಳ ಸ್ತ್ರೀ, ರುದ್ರಾಕ್ಷಿ, ಸರ್ಪಧಾರಿ ಲಿಂಗ, ವಾಮದೇವ, ಸೂರ್ಯನಮಸ್ಕಾರ, ಆನೆ, ಆನೆಯ ಸೊಂಡಿಲು, ಲಿಂಗದ ಮೂಲಕ ಶಿವ ಸಾನಿಧ್ಯ ಮುಂತಾದ ಚಿತ್ರಣಗಳಿವೆ. ವೇದಿಕೆ ಮುಂಭಾಗದಲ್ಲಿ ನಾಲ್ಕು ಸ್ತಂಭಗಳಲ್ಲಿ ಸ್ತ್ರೀಯರ ವಿವಿಧ ಭಂಗಿಗಳು, ಲತಾ ನೃತ್ಯಗಾರ್ತಿಯರು, ಶಿವಲಿಂಗವನ್ನು ಆಲಂಗಿಸುವ ವಿವಿಧ ಪಕ್ಷಿಗಳು, ಕಾಮಧೇನು, ದೇವ-ದೇವತೆಗಳು ಈ ಸ್ತಂಭಗಳಲ್ಲಿ ಮಾಡಲ್ಪಟ್ಟಿವೆ. ಒಟ್ಟಾರೆ ಮಂಟಪಗಳ ಸಾಲು, ಕಲ್ಯಾಣ ಚಾಲುಕ್ಯರ ಸ್ತಂಭಗಳ ಮಾದರಿ, ವೈಶಿಷ್ಟ್ಯ ಪೂರ್ಣವಾಗಿದೆ.

ಶಕ್ತಿ ಪಂಥ ದೇವಾಲಯಗಳು

ಹೆಸರು	:	ಅಮ್ಮನವರ ದೇವಾಲಯ
ಸ್ಥಳ	:	ಹಜಾರಾಮ ದೇವಾಲಯದ ಆವರಣ, ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟನಾ	:	(ಮಹಾದೇವ ಸಿ., ೨೦೦೨, ಪು.೧೨೭)

ಈ ದೇವಾಲಯದ ಒಳಭಾಗ ಗರ್ಭಗೃಹ ಅಂತರಾಳ ನವರಂಗವನ್ನು ಒಳಗೊಂಡಿದೆ. ಗರ್ಭಗುಡಿಯ ಮೇಲ್ಭಾವಣೆ ಅಷ್ಟಕೋನಾಕೃತಿ ಅರಳಿದ ಕಮಲದಿಂದ ಅಲಂಕೃತವಾಗಿದೆ. ಗರ್ಭಗುಡಿಯ ಪ್ರವೇಶದ್ವಾರ ಹೂ-ಬಳ್ಳಿಯ ಕೆತ್ತನೆಯನ್ನೊಳಗೊಂಡಿದೆ. ಅಕ್ಕ-ಪಕ್ಕ ಕುಂಭ ಪಂಜರ ಕುಡ್ಯ ಸ್ತಂಭ, ಅರ್ಧಕಂಬಗಳು ಅಲಂಕೃತಿಯಿಂದೊಳಗೂಡಿದೆ. ಇಲ್ಲಿನ ಭಿತ್ತಿಯ ಮೇಲೆ ಕಪೋತ, ಪಂಜರಗಳಿವೆ. ನವರಂಗದಲ್ಲಿ ಹನ್ನೆರಡು ಸ್ತಂಭಗಳಿದ್ದು, ಈ ಸ್ತಂಭಗಳಲ್ಲಿ ಕಹಳೆ ಊದುವವ ಸಿಂಹ, ಆನೆ, ತ್ರಿನಾಮ, ಶಂಖ, ಪುಷ್ಪ ಒಬ್ಬನ ಮೇಲೆ ಮತ್ತೊಬ್ಬನ ಆರೋಹಣ ಶಿಲ್ಪ. ನವಿಲು ಹಾವನ್ನು ಹಿಡಿದಿರುವ ಚಿತ್ರಣ ಪದ್ಮ ಮುಂತಾದ ಉಬ್ಬುಶಿಲ್ಪಗಳಿವೆ. ಗುಡಿಯ ಹೊರಭಾಗ ಅಧಿಷ್ಠಾನ, ಭಿತ್ತಿ ಶಿಖರವನ್ನು ಒಳಗೊಂಡಿದೆ. ಶಿಖರ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿತವಾಗಿದೆ. ಇದೊಂದು ವಿಜಯನಗರ ವೈಶಿಷ್ಟ್ಯತೆ. ಮೇಲ್ಭಾಗ ಕಳಸವಿರದೇ ಪ್ರಸ್ತುತ ಶಿಥಿಲವಾಗಿದೆ.

ಹೆಸರು	:	ಪಟ್ಟಣದ ಎಲ್ಲಮ್ಮ
ಸ್ಥಳ	:	ಹಜರಾಮ ದೇವಾಲಯ ಮತ್ತು ರಾಣಿ ಪರಿವಾರದ ಒಳಾಂಗಣದ ಮಧ್ಯೆ, ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ದಕ್ಷಿಣಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ತಳವಾರ ಎಚ್.ಟಿ., ೨೦೦, ಪು.೧೧೪)

ಈ ದೇವಾಯದ ವಿಸ್ತೀರ್ಣ ೧೬ಮೀ. ೪೦ ಸೆಂ.ಮೀ. ಉದ್ದ, ೭ ಮೀ. ೪೦ ಮೀ. ಅಗಲಹೊಂದಿದೆ ಪಟ್ಟಣದ ಎಲ್ಲಮ್ಮ ನಗರದ ರಕ್ಷಣಾ ದೇವತೆ. ವಿಜಯನಗರದ ಅರಸರು ಬೇರೆ ಬೇರೆ ರಾಜರೊಡನೆ ಯುದ್ಧಕ್ಕೆ ಹೊರಡುವ ಮುನ್ನ ಈ ದೇವತೆಯನ್ನು ಪೂಜಿಸುತ್ತಿದ್ದರು. ಈ ಎಲ್ಲಮ್ಮನಿಗೆ ಕೈಮುಗಿದು ನಂತರ ದೊರೆಗಳು ವಿರುಪಾಕ್ಷ ದೇವಸ್ಥಾನಕ್ಕೆ ಹೋಗುತ್ತಿದ್ದರೆಂಬ ಪ್ರತೀತಿ ಇದೆ. ಸಾಮಾನ್ಯವಾಗಿ ಮಂಗಳವಾರ ಮತ್ತು ಶುಕ್ರವಾರ ಈ ದೇವಿಗೆ ವಿಶೇಷ ಆರಾಧನೆ ನಡೆಯುತ್ತದೆ. ಈ ದೇವಿಗೆ ಅಮವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ ಸಲ್ಲಿಸುತ್ತಾರೆ. ಸಾಮಾನ್ಯವಾಗಿ ಭಕ್ತರು ಈ ದಿವಸಗಳಲ್ಲಿ ಹರಕೆ ಮತ್ತು ಕಾಣಿಕೆ ಅರ್ಪಿಸುವ ಪದ್ಧತಿ ಇಂದಿಗೂ ಇದೆ. ಎಲ್ಲಮ್ಮ ಪಟ್ಟಣದ ಎಲ್ಲಮ್ಮನಾಗಿರಬೇಕು. ಎಲ್ಲೆ ಅಥವಾ ಗಡಿ ಎಂಬುದು ಎಲ್ಲಮ್ಮ ಎಂಬ ಹೆಸರು ಬರಲಿಕ್ಕೆ ಕಾರಣವಿರಬೇಕು. ಅಂದರೆ ಬೇಡಿ ಬಂದ ಭಕ್ತರಿಗೆ ರಕ್ಷಣೆಗಾಗಿ ಎಲ್ಲರ ಅಮ್ಮ ಎಲ್ಲಮ್ಮ ಆಗಿದ್ದಾಳೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಪ್ರವಾಸಿಗರಾದ ನ್ಯೂನಿಜ್ ಮತ್ತು ಫ್ರೇಜ್‌ರವರು ತಮ್ಮ ಪ್ರವಾಸಿ ಕಥನದಲ್ಲೂ ಉಲ್ಲೇಖಿಸಿದ್ದಾರೆ. ನವರಾತ್ರಿ ಉತ್ಸವದಂದು ನವರಾತ್ರಿಯ ಕೊನೆಯ ದಿನ ಬನ್ನಿ ಮುಡಿಯುವ ಸಲುವಾಗಿ ವಿಜಯೋತ್ಸವ ಆಚರಣೆಗಾಗಿ ಪಲ್ಲಕ್ಕಿಯಲ್ಲಿ ಉತ್ಸವ ಹೋಗುವುದು ವರ್ಷಕ್ಕೊಮ್ಮೆ ನಡೆಸಲಾಗುತ್ತಿತ್ತು.

ಪ್ರಸ್ತುತ, ಈ ದೇವಾಲಯ ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ದುರ್ಗಿ ವಿಗ್ರಹವಿದೆ. ಗರ್ಭಗೃಹದ ಮೇಲ್ಛಾವಣಿ ಅಷ್ಟಕೋನಾಕೃತಿಯಿಂದ ಅಲಂಕೃತವಾಗಿದೆ. ಗರ್ಭಗೃಹದ ಹೊಸ್ತಿಲಿನ ಮೇಲೆ ಹೂವಿನ ಚಿತ್ರಣವಿದೆ. ಸಭಾ ಮಂಟಪದಲ್ಲಿ ಎಂಟು ಸ್ತಂಭಗಳಿದ್ದು, ಈ ಸ್ತಂಭಗಳು ಬೋದಿಗೆಗಳನ್ನು ಒಳಗೊಂಡಿದೆ. ಸ್ತಂಭಗಳ ಮೇಲೆ ಶಂಖ, ಚಕ್ರ, ಗುರಾಣಿ ಆನೆ, ಸಿಂಹ, ನಂದಿ, ಹಂಸ, ಯಾಳಿ, ಪುರುಷ-ಸ್ತ್ರೀಯರ ಚಿತ್ರ, ಬಿಲ್ಲು ಹಿಡಿದಿರುವ ಭಂಗಿ ತಮಟೆ ನುಡಿಸುತ್ತಿರುವುದು, ಋಷಿಗಳು, ಶಿವಲಿಂಗ, ಸರ್ಪಾಧಾರಿ ಲಿಂಗ, ಲಿಂಗಕ್ಕೆ ಹಾಲೆರೆಯುತ್ತಿರುವ ಹಸು, ನರ್ತಕಿ, ಕಮಂಡಲಧಾರಿ ಆಂಜನೇಯ ಕಹಳೆ ಊದುತ್ತಿರುವ ದೃಶ್ಯ, ಹಾವನ್ನು ಹಿಡಿದಿರುವ ನವಿಲು, ಮುಂತಾದ ಚಿತ್ರಗಳು ಚಿತ್ರಿತವಾಗಿವೆ. ಬಾಗಿಲು ದ್ವಾರದಲ್ಲಿ ತ್ರಿಶೂಲ-ಶಂಖ ಹಿಡಿದ ದ್ವಾರಪಾಲಕರಿದ್ದಾರೆ. ಗರ್ಭಗೃಹದ ಹೊರಭಾಗ ಅಧಿಷ್ಠಾನ ಭಿತ್ತಿ ಕಪೋತವನ್ನು ಒಳಗೊಂಡಿದೆ. ಅಧಿಷ್ಠಾನ ಮಂಚ ಬಂಧ ಮಾದರಿಯಲ್ಲಿದೆ. ಭಿತ್ತಿಗೆ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದ್ದು, ಕಪೋತ ಮುಂಚಾಚಿದ್ದು, ಮುಂಭಾಗ ಇಟ್ಟಿಗೆ, ಗಾರೆಯಿಂದ ನಿರ್ಮಿತವಾಗಿದೆ. ಪ್ರಸ್ತುತ ಮೇಲ್ಭಾಗ ಪೂರ್ತಿಯಾಗಿ ಶಿಥಿಲವಾಗಿದೆ. ದೇವಾಲಯದ ಹೊರಭಾಗದಲ್ಲಿ ಯಾವುದೇ ಅಲಂಕರಣೆಗೆ ಪ್ರಾಧ್ಯನ್ಯತೆ ನೀಡದೇ ಮೂಲ ರೂಪದಲ್ಲಿಯರುವುದು ಇಲ್ಲಿಯ ವಿಶೇಷತೆ.

ಹೆಸರು	:	ಕಾಳಿಕಾ ದೇವಿ ದೇವಾಲಯ
ಸ್ಥಳ	:	ಜೀರು ದೊಡ್ಡ ಹನುಮಂತಪ್ಪ ಮನೆಯ ಹತ್ತಿರ, ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೬-೧೭ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಯಲಯ ೯'.೬'' x ೯'.೬''ಚೌಕಾರದ ಆಳತೆಹೊಂದಿದೆ. ಈ ದೇವಾಲಯ ಗರ್ಭಗೃಹ ಮತ್ತು ಮಂಟಪವನ್ನು ಒಳಗೊಂಡಿದೆ. ಪ್ರಸ್ತುತ ಇದೆ ಪೂರ್ಣ ಜೀರ್ಣೋದ್ಧಾರವಾಗಿದೆ. ಗರ್ಭಗೃಹದ ಮೇಲ್ಛಾವಣೆ ಅಷ್ಟಕೋನಾಕೃತಿಯಲ್ಲಿದ್ದು, ಅರಳಿದ ಕಮಲವಿರುವುದು ಇಲ್ಲಿಯ ವೈಶಿಷ್ಟ್ಯತೆ. ಗರ್ಭಗೃಹದಲ್ಲಿ ಇರುವ ಕಾಳಿಕಾದೇವಿ ಅಧಿದೇವತೆ, ಗರ್ಭಗುಡಿಯ ಪ್ರವೇಶದ್ವಾರದಲ್ಲಿ ಇಬ್ಬರು ಚಾಮರಧಾರಣಿಯರು ನಿಂತ ಭಂಗಿಯಲ್ಲಿದ್ದಾರೆ. ಲಲಾಟ ಬಿಂಬದಲ್ಲಿ ಹೂವಿನ ಶಿಲ್ಪವಿದೆ. ಹೊರಮಂಟಪ ಮೂರು ಅಂಕಣಗಳಿಂದ ಕೂಡಿದೆ. ಒಟ್ಟು ಆರು ಸ್ತಂಭಗಳಿವೆ. ಮುಂಭಾಗದಲ್ಲಿಯ ನಾಲ್ಕು ಸ್ತಂಭಗಳು ಚೌಕಾಕಾರವಾಗಿದ್ದು, ಮೇಲ್ಭಾಗ ಆ ಮೂಲಕ ಬೋದಿಗೆಯನ್ನು ಒಳಗೊಂಡಿದೆ. ಸ್ತಂಭದ ಮಧ್ಯೆ ಇರುವ ಜಾಲಾಂಧ್ರ ಇತ್ತೀಚಿನದ್ದು, ಮಹಿಳೆ ಕಮಂಡಲನಿಂದ ನೀರು ಹಾಕುತ್ತಿರುವುದು. ಆರು ಕೈಗಳುಳ್ಳ ಮಹಿಷಮರ್ಧಿನಿ, ಚಾಮರ ಬೀಸುವ ಸ್ತ್ರೀ, ಗಂಡಬೇರುಂಡ, ನಂದಿ ಇವು ಚಿತ್ರಿತವಾಗಿದೆ. ಮುಖಮಂಟಪದ ಎದುರು ಲೋಹದ ದೀಪಸ್ತಂಭವಿದೆ. ದೀಪಸ್ತಂಭದ ಕೆಳಬದಿಯಲ್ಲಿ ಪಾದ ಪೀಠವಿದೆ. ಹೊರಭಾಗ ಅಧಿಷ್ಠಾನ ಭಿತ್ತಿಯನ್ನು ಒಳಗೊಂಡಿದೆ. ಪ್ರಸ್ತುತ ಬಣ್ಣದಿಂದ ಅಲಂಕೃತವಾಗಿದೆ. ಮುಖ ಮಂಟಪದ ಮುಂದೆ ಬನ್ನಿ ವೃಕ್ಷದ ಕೆಳಗಡೆ ಅನ್ನಪೂರ್ಣೇಶ್ವರಿ, ದುರ್ಗಾಮೂರ್ತಿ ಶಿಲ್ಪವಿದೆ. ಎಡಗಡೆ ನವಗ್ರಹ ಮಂಟಪವಿದೆ. ದೇವಾಲಯದ ಸುತ್ತಲೂ ನಾಗಬಂಧ, ನಾಗದೇವತೆಯ ಶಿಲ್ಪಗಳು ಪಸರಿಸಿವೆ.

ವೈಷ್ಣವ ಪಂಥ ದೇವಾಲಯಗಳು

ಹೆಸರು	:	ವಿಷ್ಣು ದೇವಾಲಯ
ಸ್ಥಳ	:	ಸೀತಾರಾಮ ತಾಂಡ ನಲ್ಲಾಪುರ ರಸ್ತೆಗೆ ಹೋಗುವ ಎಡಭಾಗ
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಇದೊಂದು ದೊಡ್ಡದಾದ ಸಂಕೀರ್ಣ, ಪ್ರಸ್ತುತ ಪಾಳುಬಿದ್ದಿದೆ. ಈ ದೇವಾಲಯ ಗರ್ಭಗೃಹ, ಅಂತರಾಳ, ಅರ್ಧಮಂಟಪ ಮತ್ತು ನವರಂಗ ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಮೂರ್ತಿಶಿಲ್ಪವಿರದಿದ್ದರೂ ಈಗ ಪಾಣಿಪೀಠ ಉಳಿದಿದೆ. ಪಾಣಿ ಪೀಠಕ್ಕೆ ತಾಗಿ ಪ್ರಣಾಳಿಕೆಯೂ ಇದೆ. ಅಂತಾರಳದ ಪ್ರವೇಶದ್ವಾರದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಪುಷ್ಪವೊಂದು ಚಿತ್ರಿತವಾಗಿದೆ. ಅರ್ಧಮಂಟಪದಲ್ಲಿ ಮೇಲ್ಛಾವಣಿ ಉದ್ದವಾಗಿ ಕಲ್ಲು ಹಾಸಲ್ಪಟ್ಟಿದೆ. ನವರಂಗದಲ್ಲಿಯ ನಾಲ್ಕು ಸ್ತಂಭಗಳು ಮೇಲ್ಛಾವಣಿಯಲ್ಲಿ ಅರಳಿದ ಕಮಲವಿದೆ. ಸ್ತಂಭಗಳು ಚೌಕಾಕಾರವಾಗಿದ್ದು, ಮೇಲಿನ ಬೋದಿಗೆಗಳು ಪುಷ್ಪಾಲಂಕೃತವಾಗಿದೆ. ಈ ಸ್ಯಂಭಗಳಲ್ಲಿ ಅಂಜಲಿ ಮುದ್ರೆಯಲ್ಲಿದ್ದ ಗರುಡ, ವಿಷ್ಣು, ಹನುಮಂತ, ಶಂಖ, ಹಾವನ್ನು ಹಿಡಿದ ವಿಷ್ಣು, ಹಣ್ಣು ತಿನ್ನುವ ಮಂಗ, ಧನುರಾಧಾರಿ, ಸ್ತ್ರೀಯರ ವಿವಿಧ ಭಂಗಿಗಳು, ಶ್ರೀ ವೈಷ್ಣವ ಚಿಹ್ನೆಗಳು, ಇಲ್ಲಿನ ಸ್ತಂಭಗಳಲ್ಲಿ ಚಿತ್ರಿತವಾಗಿರುವುದು ವೈಶಿಷ್ಟ್ಯ. ನವರಂಗದಲ್ಲಿ ಪೂರ್ವ-ಉತ್ತರ-ದಕ್ಷಿಣ ದಿಕ್ಕಿಗೆ ಪ್ರವೇಶದ್ವಾರವಿದ್ದು ದ್ವಾರದ ಇಕ್ಕೆಲುಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಮುಖಮಂಟಪ ಶಿಖರವನ್ನು ಒಳಗೊಂಡಿದ್ದು, ಮುಂದಿನ ಸುಖನಾಸಿಯಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಅನೇಕ ಕೋಷ್ಟಕಗಳು, ಸ್ತಂಭಗಳಿಂದ ರಚಿತವಾದ ಮಂಟಪವಿದೆ. ಸ್ತಂಭಗಳ ಮುಂಭಾಗದಲ್ಲಿ ಮಂಟಪದಲ್ಲಿನ ಸ್ತಂಭಗಳಲ್ಲಿ ವಿಷ್ಣುವಿನ ಅವತಾರಗಳು, ಸಿಂಹತಲೆ, ಪ್ರವೇಶದ್ವಾರದ ಇಕ್ಕೆಲುಗಳಲ್ಲಿ ವೈಷ್ಣವ ದ್ವಾರಪಾಲಕರು, ಮಹಿಳೆಯರ ಮೂರ್ತಿಶಿಲ್ಪವಿದೆ. ಹೊರಭಾಗ ಅಧಿಷ್ಠಾನ, ಭಿತ್ತಿ, ಶಿಖರವನ್ನು, ಕಪೋತವನ್ನು ಒಳಗೊಂಡಿದೆ. ಎತ್ತರವಾದ ಅಧಿಷ್ಠಾನದ ಮೇಲೆ ಭಿತ್ತಿಯು ರಚನೆಯಾಗಿದೆ. ಭಿತ್ತಿಯ ಸುತ್ತಲೂ ಪುಷ್ಪಕುಂಭಗಳು, ಕೋಷ್ಠಕಗಳು ಇವೆ. ಕಪೋತ ಸಪಾಟಾಗಿದ್ದು ಮೇಲ್ಭಾಗದ ಶಿಖರ ಇಟ್ಟಿಗೆ ಗಾರೆಗಳಿಂದ ನಿರ್ಮಿಣವಾಗಿದ್ದು, ಪ್ರಸ್ತುತ ಪಾಳುಬಿದ್ದಿದೆ. ಈ ದೇವಾಲಯದ ಸುತ್ತಲೂ ಪ್ರಕಾರವಿದ್ದು, ಪೂರ್ವಪ್ರವೇಶದ ಇಕ್ಕೆಲುಗಳಲ್ಲಿ

[illegible]

[illegible]

[illegible]

ಎರಡು ತೆರೆದ ಮಂಟಪಗಳಿವೆ. ಇಲ್ಲಿನ ಸ್ತಂಭಗಳಲ್ಲಿ ಬುಡಭಾಗ ಚೌಕಾಕಾರ, ಮಧ್ಯಭಾಗ ಷೋಡಾಶ್ರ ಪಟ್ಟಿಕೆಗಳ ರಚನೆ ಅಮಾಲಕ ಮತ್ತು ಬೋದಿಗೆಗಳ ರಚನೆಯನ್ನು ಒಳಗೊಂಡಿದೆ. ಮುಖಮಂಟಪದ ಬಲಗಡೆ ಇನ್ನೊಂದು ಪಾಳುಬಿದ್ದ ದೇವಾಲಯವಿದ್ದು, ಗರ್ಭಗೃಹ, ಅಂತರಾಳ ಮತ್ತು ಮುಖಮಂಟಪ ಹೊಂದಿದೆ. ಇಲ್ಲಿ ಹನ್ನೆರಡು ಸ್ತಂಭಗಳು ಚೌಕಾಕಾರವಾಗಿದ್ದು, ಯಾವುದೇ ಅಲಂಕಾರಕ್ಕೆ ಪ್ರಾಧಾನ್ಯತೆ ಇರದೇ ಮೂಲ ರೂಪಕ್ಕೆ ಪ್ರಾಧಾನ್ಯತೆ ಕೊಟ್ಟಂತಿದೆ. ಇಲ್ಲಿನ ಗೋಪುರ ಇಟ್ಟಿಗೆ, ಗಾರೆಯಿಂದ ರಚಿತವಾಗಿದ್ದು, ಇದೂ ಕೂಡ ದ್ರಾವಿಡ ಮಾದರಿಯಲ್ಲಿದೆ. ಅಧಿಷ್ಠಾನ ಎತ್ತರದಲ್ಲಿದ್ದು, ಇದರ ಮೇಲೆ ಭಿತ್ತಿ ರಚನೆಯಾಗಿ ಇದರ ಸುತ್ತಲೂ ಗೂಡು ಮತ್ತು ಕುಂಭಪಂಜರಗಳಿವೆ.

ಹೆಸರು	:	ಪಟ್ಟಭಿರಾಮ ದೇವಾಲಯ
ಸ್ಥಳ	:	ಕಾಮಲಾಪುರದಿಂದ ಪೂರ್ವಕ್ಕೆ ೦.೮.ಕಿ.ಮೀ. ಹೊಸಪೇಟೆ ತಾ.
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರ ಇಮ್ಮಡಿ ಬುಕ್ಕ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ಬಸವರಾಜ ಮಲಶೆಟ್ಟಿ, ೧೯೮೧, ಪು.೨೧)

ಇದರ ನಿಜವಾದ ಹೆಸರು ರಘುನಾಥ ದೇವಾಲಯ. ಇಲ್ಲಿರುವ ಶಿಲಾಶಾಸನದಿಂದ ಅಚ್ಯುತರಾಯನ ಪತ್ನಿ ವರದರಾಜಮ್ಮ ಹೆಸರಿನಲ್ಲಿ ಪಟ್ಟಣವನ್ನು ನಿರ್ಮಿಸಿದನೆಂದು ಉಲ್ಲೇಖಿಸುತ್ತದೆ. ಈ ಪಟ್ಟಣ ವಿಜಯನಗರಕ್ಕೆ ಒಳಪಟ್ಟಿದೆ. ಇಲ್ಲಿರುವ ಶಾಸನದ ಆಧಾರದಲ್ಲಿ ಕ್ರಿ.ಶ.೧೫೩೪ರ ಮೊದಲ ಈ ದೇವಾಲಯ ಇತ್ತೆಂಬುದಂತೂ ಸ್ಪಷ್ಟ. ಈ ಪಟ್ಟಾಭಿರಾಮ ದೇವಾಲಯದ ಆವರಣ ದೊಡ್ಡದಾಗಿದ್ದು, ಆಯತಾಕಾರದಲ್ಲಿದೆ. ಇದು ಕಲ್ಯಾಣಮಂಟಪ ಮತ್ತು ಮಹಾಮಂಟಪವನ್ನು ಒಳಗೊಂಡಿದೆ. ಈ ದೇವಾಲಯ ಎತ್ತರವಾದ ಜಗತಿಯ ಮೇಲೆ ನಿರ್ಮಾಣವಾಗಿದ್ದು, ಈ ದೇವಾಲಯ ಗರ್ಭಗೃಹ, ಅಂತರಾಳ, ತೆರೆದ ಮಂಟಪ, ಸಭಾಮಂಟಪ ಮತ್ತು ಮಹಾಮಂಟಪಗಳಿಂದ ಕೂಡಿದೆ. ಪೂರ್ವಾಭಿಮುಖ ವಾಗಿರುವ ಈ ದೇವಾಲಯ ತ್ರಿತಳ ವಿಮಾನಗಳಿಂದ ಒಳಗೊಂಡಿದೆ. ಗರ್ಭಗುಡಿಯ ಮೇಲ್ಛಾವಣಿಯು ಅಷ್ಟಕೋನಾಕೃತಿಯಿಂದ ಅಲಂಕೃತವಾಗಿದೆ. ಗರ್ಭಗುಡಿಯ ಪ್ರವೇಶದ್ವಾರಗಳು ಚೌಕಾಕಾರದ ಪಟ್ಟಿಕೆಗಳನ್ನು ಒಳಗೊಂಡಿದೆ. ಪ್ರವೇಶದ್ವಾರದಲ್ಲಿ ದ್ವಾರ ಪಾಲಕರಿದ್ದಾರೆ. ಅಲ್ಲದೆ ಅಕ್ಕ-ಪಕ್ಕ ಭಿತ್ತಿಯ ಮೇಲೆ ಕುಂಭ ಪಂಜರಗಳಿವೆ. ಅಂತರಾಳ ಮತ್ತು ಅರ್ಧಮಂಟಪದಲ್ಲಿ ಪ್ರವೇಶದ್ವಾರದಲ್ಲಿ ಎರಡು ಸ್ತಂಭಗಳಿದ್ದು ಈ ಸ್ತಂಭಗಳ ಮೇಲೆ ನವಿಲು, ಕಾಳಿಂಗ ಮರ್ಧನ ಕೃಷ್ಣ, ಪದ್ಮ, ಚಕ್ರ, ಹನುಮಂತ, ಉಗ್ರನರಸಿಂಹ,

[illegible]

[illegible]

[illegible]

ಇನ್ನೂ ಮುಂತಾದ ಚಿತ್ರಣಗಳಿವೆ. ಮತ್ತೊಂದು ಸ್ತಂಭದ ಮೇಲೆ ಮೀನಿನ ಮೇಲೆ ಕುಳಿತು ಅಂಜಲಿ ಮುದ್ರೆಯಲ್ಲಿದ್ದ ಮನುಷ್ಯ ಸ್ತ್ರೀಯರ ವಿವಿಧ ಭಂಗಿಗಳು ಚಿತ್ರಿತವಾಗಿವೆ. ಸಭಾಮಂಟಪದಲ್ಲಿ ಒಟ್ಟು ಇಪ್ಪತ್ತಾರು ಸ್ತಂಭಗಳು ಇದ್ದು, ಈ ಸ್ತಂಭಗಳಲ್ಲಿ ವಿವಿಧ ಪುಷ್ಪಗಳ ಶಿಲ್ಪ, ಶಂಖ, ಚಕ್ರ, ಪದ್ಮ, ಗಣೇಶ, ಸ್ತ್ರೀಯರ ವಿವಿಧ ಭಂಗಿಗಳು, ಹನುಮಂತ, ಧನುರ್ಧಾರಿ, ಬಿಂದಿಗೆ ಹೊತ್ತ ಮಹಿಳೆ, ಶಂಖ ಹಂಸ ಪಕ್ಷಿ ಚಿತ್ರಣಗಳಿವೆ. ನವರಂಗದ ಬಾಗಿಲು ದ್ವಾರದ ಲಲಾಟ ಬಿಂಬವಿದ್ದು, ದಕ್ಷಿಣ-ಉತ್ತರ-ದ್ವಾರಗಳ ಪ್ರವೇಶಿಸುವಾಗ ಸೋಪಾನುಗಳು ಇಕ್ಕೆಲುಗಳಲ್ಲಿ ಸುರುಳಿ ಸುತ್ತಿಕೊಂಡ ಯಾಳಿಗಳಿವೆ. ಸಭಾಮಂಟಪದ ಮೇಲ್ಛಾವಣಿ ಭುವನೇಶ್ವರಿಯನ್ನು ಒಳಗೊಂಡಿದೆ. ತೆರೆದ ಮಹಾಮಂಟಪದಲ್ಲಿ ೫೮ ಸ್ತಂಭಗಳಿದ್ದು, ಚೌಕಾಕೃತಿಯಲ್ಲಿದೆ. ಇದರಲ್ಲಿ ಏಳು ಸಾಲಿನ ಸ್ತಂಭಗಳು ತುಂಬಾ ಕಲಾತ್ಮಕವಾಗಿವೆ. ಈ ಸ್ತಂಭಗಳ ಮೇಲೆ ಲತಾ ಸ್ತ್ರೀಯರ ವಿವಿಧ ಭಂಗಿ ಅಂಜಲಿ ಮುದ್ರೆ, ಶಂಖ, ಪದ್ಮ, ಚಕ್ರ, ಶಂಖ ಊದುತ್ತಿರುವ ಮಹಿಳೆ ಉಗ್ರನರಸಿಂಹ, ನರ್ತಕಿಯರ ವಿವಿಧ ಭಂಗಿ, ಧನುರ್ ಧಾರಿ, ವಿಷ್ಣು ಶಿವಲಿಂಗಕ್ಕೆ ಹಾಲೆರೆಯುತ್ತಿರುವಕಾಮದೇನು ಶ್ರೀ ವೈಷ್ಣವ ಚಿಹ್ನೆ, ಗರುಡ, ವಿವಿಧ ಭಂಗಿಗಳಲ್ಲಿ ಸಿಂಹ ಹೀಗೆ ಅನೇಕ ಮೂರ್ತಿಶಿಲ್ಪಗಳು ಚಿತ್ರಿತವಾಗಿವೆ. ಮುಖಮಂಟಪದ ಮೇಲ್ಛಾವಣೆಯ ಮಧ್ಯದಲ್ಲಿ ಕಮಲದ ಹೂವಿನಿಂದ ಆವೃತ್ತವಾಗಿದೆ. ಪ್ರತಿಯೊಂದು ಸ್ತಂಭದ ಮೇಲ್ಭಾಗದಲ್ಲಿ ಎರಡು ಪುಷ್ಪ ಬೋದಿಗೆಗಳಿವೆ. ಮಕರ ಸಿಂಹಗಳ ಹೊತ್ತುನಿಂತ ಉಪಸ್ತಂಭಗಳ ಚಿತ್ರಣ ನೋಡಲು ಆಕರ್ಷಣೀಯ, ಮುಖಮಂಟಪದಲ್ಲಿನ ದ್ವಾರಸ್ತಂಭಗಳು ಕೀರ್ತಿಮುಖ, ಆನೆಯ ಕೋರೆಹಲ್ಲು, ಸೊಂಡಿಲುಗಳು ಇರುವ ಕಾಲ್ಪನಿಕ ಪ್ರಾಣಿ ಚಿತ್ರ, ಕೆಳಭಾಗ, ಹೂ-ಬಳ್ಳಿಯಿಂದ ಅಲಂಕೃತವಾಗಿದೆ. ದೇವಾಲಯದ ಭಿತ್ತಿ ಕುಡ್ಯಸ್ತಂಭವನ್ನು ಒಳಗೊಂಡಿದೆ. ಗರ್ಭಗೃಹದ ಶಿಖರ ದ್ರಾವಿಡ ಮಾದರಿಯದು. ವಿಜಯನಗರದ ಮುಖ್ಯ ಲಕ್ಷಣಗಳುಳ್ಳ ಇಟ್ಟಿಗೆ ಗಾರೆಗಳಿಂದ ನಿರ್ಮಿತವಾಗದ್ದು, ಕರ್ಣಕೂಟಗಳು, ಪಂಜರಗಳು ಶಿಖರದ ಮೆರಗನನ್ನು ಇನ್ನೂ ಹೆಚ್ಚಿಸಿವೆ. ಪಟ್ಟಾಭಿರಾಮದ ಪಕ್ಕದಲ್ಲಿರುವುದೇ ಅಮ್ಮನವರ ಗುಡಿ. ಇದು ದ್ವಿತಲ ವಿಮಾನವನ್ನು ಹೊಂದಿದ್ದು ಚೌಕಾಕಾರದ ಸ್ತಂಭಗಳಿಂದ ಆವೃತ್ತವಾಗಿದೆ. ಪೂರ್ವ-ದಕ್ಷಿಣ-ಉತ್ತರ ದಿಕ್ಕುಗಳಲ್ಲಿ ಗೋಪುರಗಳಿವೆ. ಮೂರು ಗೋಪುರಗಳಿಗೆ ರಕ್ಷಣೆ ಮಾಡಿದ್ದು, ಕಲ್ಯಾಣ ಮಂಟಪ, ಮಹಾಮಂಟಪಗಳಿದ್ದು, ಅವುಗಳ ಆಗ್ನೇಯ ದಿಕ್ಕಿಗಿರುವ ಕಲ್ಯಾಣ ಮಂಟಪಕ್ಕೆ ಎರಡು ಒತ್ತು ಗೋಡೆಗಳನ್ನು ನಿರ್ಮಿಸಿದ್ದಾರೆ. ಆವರಣದ ಪ್ರಕಾರದ ಭಿತ್ತಿಗಳು ೭.೬ಮೀ ಎತ್ತರವಿದ್ದು, ಒಟ್ಟಾರೆ ಆವರಣದ ವಾಸ್ತು ಶೈಲಿಯನ್ನು ಗಮನಿಸಿದರೆ. ವಿಠಲ ದೇವಾಲಯದ ಮಾದರಿಯನ್ನೇ ಹೋಲುತ್ತದೆ.

ಹೆಸರು	:	ವಿಷ್ಣು ದೇವಾಲಯ
ಸ್ಥಳ	:	ಪಾಪಿನಾಯಕನಹಳ್ಳಿಯ ರಸ್ತೆಯ ಸಿದ್ದೇಶ್ವರ ಗದ್ದೆಯಲ್ಲಿ
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ ಇಮ್ಮಡಿ ಬುಕ್ಕ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯದ ಉದ್ದ ೧೫ಮೀ ೨೦ಸೆಂ.ಮೀ, ಅಗಲ ೯ಮೀ ೨೦ಸೆಂ.ಮೀ ವಿಸ್ತೀರ್ಣ ಇದೆ. ಪ್ರಸ್ತುತ ದೇವಾಲಯ ಶಿಥಿಲವಾಗಿದೆ. ಈ ದೇವಾಲಯದ ಗರ್ಭಗೃಹ ಅಂತರಾಳ, ನವರಂಗ ಮತ್ತು ಮುಖ ಮಂಟಪವನ್ನು ಒಳಗೊಂಡಿದೆ. ಗರ್ಭಗೃಹದ ಬಾಗಿಲುವಾಡದ ಲಲಾಟಬಿಂಬದಲ್ಲಿ ಗರುಡನ ಶಿಲ್ಪವಿದೆ. ಅಂತರಾಳದ ಎರಡು ಬಾಗಿಲ ಬಳಿಗೆ ವೈಷ್ಣವ ದ್ವಾರಪಾಲಕರಿದ್ದಾರೆ. ದ್ವಾರದ ಸುತ್ತ ಲತೆಗಳ ಚಿತ್ರಣವಿದೆ. ಮೇಲ್ಭಾಗದ ಪಟ್ಟಿಕೆಯಲ್ಲಿ ಗಜಲಕ್ಷ್ಮಿ ಪದ್ಮಾಸೀನಳಾಗಿದ್ದಾಳೆ. ನವರಂಗ ಮಂಟಪದ ಮೇಲ್ಚಾವಣೆ ಅಷ್ಟಕೋನಾಕೃತಿಯಿಂದ ಅಲಂಕೃತವಾಗಿದೆ. ಇಲ್ಲಿ ಭುವನೇಶ್ವರಿ ಇರುವುದು ಸಾಮಾನ್ಯ ಲಕ್ಷಣಗಳಲ್ಲಿ ಒಂದು. ಮಧ್ಯ ನಾಲ್ಕು ಸ್ತಂಭಗಳಿದ್ದು, ಈ ಸ್ತಂಭಗಳು ಚೌಕಾಕಾರವಾಗಿವೆ. ಚೌಕಾಕಾರ ಅಷ್ಟಕೋನಾಕೃತಿ, ಚೌಕಘಟ, ಅಮಾಲಕ ಮತ್ತು ಮೇಲೆ ಚೌಕಾಕಾರದ ಬೋದಿಗೆಗಳನ್ನು ಒಳಗೊಂಡಿದೆ. ಈ ಸ್ತಂಭಗಳ ಮೇಲೆ ವಿಷ್ಣುವಿನ ಅವತಾರ ಉಗ್ರನರಸಿಂಹ ಕೂರ್ಮಾವತಾರ ವಿಷ್ಣು, ಧನುರ್ಧಾರಿ ಪುರುಷ, ಸ್ತ್ರೀಯರ ನೃತ್ಯಭಂಗಿ, ಬ್ರಹ್ಮ, ಗಣಪ, ಕಾಮದೇನು, ಕುಳಿತ ವಿಷ್ಣು, ಕಾಳಿಂಗ ಮರ್ಧನ ಕೃಷ್ಣ, ಹನುಮಂತ, ದಶಾವತಾರಗಳು ಚಿತ್ರಿತವಾಗಿವೆ. ಮುಖಮಂಟಪದಲ್ಲಿ ನಾಲ್ಕು ಸ್ತಂಭಗಳಿದ್ದು ಚೌಕಾಕಾರವಾಗಿದ್ದು, ಸಂಜೀವಿನಿ ಪರ್ವತವನ್ನು ಹಿಡಿದ ಹನುಮಂತ, ವಿಷ್ಣುವಿನ ದಶಾವತಾರ, ಚಕ್ರ, ಶಂಖು, ಪದ್ಮ, ತಪಸ್ವಿನಿ, ತ್ರಿನಾಮ, ನವಿಲು, ಉಗ್ರನರಸಿಂಹ ಮುಂತಾದ ಮೂರ್ತಿಶಿಲ್ಪಗಳು ಇಲ್ಲಿ ಚಿತ್ರಿತವಾಗಿದ್ದು ಇಲ್ಲಿಯ ಕಲಾತ್ಮತೆಗೆ ಮೆರಗನ್ನು ನೀಡಿದೆ.

ದೇವಾಲಯದ ಹೊರಭಾಗ ಅಧಿಷ್ಠಾನ ಭಿತ್ತಿ ಕಪೋತವನ್ನು ಒಳಗೊಂಡಿದೆ. ಅಧಿಷ್ಠಾನ ಕಲ್ಲು ಮುಳ್ಳುಗಳಿಂದ ಆವೃತ್ತವಾಗಿದ್ದರೂ ಮಂಚ ಬಂಧ ಮಾದರಿ ಎಂಬುದಂತೂ ಸ್ಪಷ್ಟ. ಭಿತ್ತಿಯಲ್ಲಿನ ಕಲ್ಲುಗಳು ವಿಸ್ರುತವಾಗಿ ಹಾಸಲ್ಪಟ್ಟಿದೆ. ಭಿತ್ತಿಯ ಮೇಲಿನ ಕಪೋತ ಸ್ವಲ್ಪ ಮುಂಚಾಚಿದ್ದು ಇದರ ಮೇಲ್ಭಾಗ ಗಾರೆಯಿಂದ ರಚಿತವಾಗಿ ಪ್ರಸ್ತುತ ಹುಲ್ಲಿನಿಂದ ಆವೃತವಾಗಿದೆ.

ಹೆಸರು	:	ಹಜಾರರಾಮ ದೇವಾಲಯ
ಸ್ಥಳ	:	ಮಹಾನವಮಿ ದಿಬ್ಬದ ವಾಯುವ್ಯ ಭಾಗದಲ್ಲಿ ರಾಮಲಾಪುರ
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ವಸುಂಧರ ಫಿಲಿಯೋಜ, ೧೯೮೨, ಪು.೪೧)

ಈ ದೇವಾಲಯದ ಹೆಸರಿನ ಬಗ್ಗೆ ವಿವಾದಾಸ್ಪದಗಳಿವೆ. ಅರಮನೆಯ ಹಜಾರಾದ ಸಮೀಪದಲ್ಲಿದ್ದುದರಿಂದ ಈ ಹೆಸರು ಬಂದಿತೆಂಬ ಅಭಿಪ್ರಾಯವಿದೆ. ವಿಷ್ಣುವಿನ ಅವತಾರಗಳಲ್ಲಿ ಒಂದಾದ ರಾಮನಿಗೆ ಸಂಬಂಧಸಿದ್ದರಿಂದ ರಾಮನ ಶಿಲ್ಪಗಳೊಂದಿಗೆ ರಾಮಾಯಣ ಮಹಾಕಾವ್ಯವನ್ನು ಪ್ರತಿಬಿಂಬಿಸುವ ಅನೇಕ ಚಿತ್ರಣಗಳು ಇಲ್ಲಿರುವುದರಿಂದ ಹಜಾರರಾಮ ದೇವಾಲಯ ಎಂಬ ಹೆಸರು ಬಂದಿತೆಂಬ ಪ್ರತೀತಿಯೂ ಇದೆ. ಹಜಾರ ಎಂದರೆ ಸಾವಿರ ರಾಮ ವಿಷ್ಣುವಿನ ಅವತಾರಗಳಲ್ಲಿ ಒಂದು. ಈ ಶಬ್ದ ಸಾವಿರ ರಾಮರು ಎಂಬ ಅರ್ಥವನ್ನು ನೀಡಿದರೂ ಬಹುಶಃ ರಾಮನ ಶಿಲ್ಪವನ್ನು ಚಿತ್ರಿಸುವ ಹಲವಾರು ಶಿಲ್ಪಗಳು ಇಲ್ಲಿರುವುದರಿಂದ ಇದಕ್ಕೆ ಹಜಾರರಾಮ ಎಂಬ ಹೆಸರು ಬಂದಿರಲಿಕ್ಕೆ ಸಾಕು. ಈ ದೇವಾಲಯ ಅಂದದ ದೇವಾಲಯಗಳಲ್ಲಿ ಒಂದು. ಇದರ ಉದ್ದ ೩೩.೫ ಮೀ. x ೬೧ ಮೀ ಅಗಲದ ವಿಸ್ತೀರ್ಣದ ಪ್ರಕಾರವನ್ನು ಒಳಗೊಂಡಿದೆ. ಈ ದೇವಾಲಯ ಗರ್ಭಗೃಹ, ಅಂತರಾಳ, ಅರ್ಧಮಂಟಪ ಮತ್ತು ನವರಂಗ ತೆರೆದ ಮಂಟಪಗಳನ್ನು ಒಳಗೊಂಡಿದೆ. ರಾಮಮೂರ್ತಿ ಶಿಲ್ಪವೂ ಇರದಿದ್ದರೂ ಅದರ ಪೀಠವೂ ಇಲ್ಲಿದೆ.

ಗರ್ಭಗೃಹದ ಪ್ರವೇಶದ್ವಾರ ಸರಳ ಕೆತ್ತನೆಯಿಂದ ಕೂಡಿದ್ದು, ಗರ್ಭಗೃಹದ ಪ್ರವೇಶದ್ವಾರದ ಎಡಬಲದಲ್ಲಿ ಶಂಖ, ಚಕ್ರ, ಗದೆ ಹಿಡಿದು ನಿಂತ ಭಂಗಿಯಲ್ಲಿದ್ದ ವೈಷ್ಣವ ದ್ವಾರಪಾಲಕರಿದ್ದಾರೆ. ಗರ್ಭಗುಡಿಯ ದ್ವಾರದ ಲಲಾಟ ಬಿಂಬದಲ್ಲಿ ದೇವಿ ಆಸೀನಳಾಗಿದ್ದಾಳೆ. ಪ್ರವೇಶದ್ವಾರದ ಭಿತ್ತಿಗೆ ಕುಂಭ ಪುಷ್ಪಗಳ ಸೂಕ್ಷ್ಮ ಕೆತ್ತನೆ ಇದೆ. ಇದರ ಮೇಲ್ಛಾವಣೆಯಲ್ಲಿ ಕಮಲದ ಮೊಗ್ಗು ಅಲಂಕೃತವಾಗಿದೆ. ಅಂತರಾಳದ ಪ್ರವೇಶದ್ವಾರದಲ್ಲಿ ಸ್ತಂಭಗಳು ಪುಷ್ಪ ಬೋದಿಗೆಗಳಿಂದ ಅಲಂಕೃತವಾಗಿವೆ. ಈ ಸ್ತಂಭಗಳ ಮೇಲೆ ಅಶ್ವಾರೋಹಿ, ಧನುರ್ಧಾರಿ, ನವಿಲು, ಸಿಂಹ ಲತೆಗಳಿಂದ ಅಲಂಕೃತವಾಗಿದೆ. ಇಲ್ಲಿ ಲಕ್ಷ್ಮೀ ನರಸಿಂಹನ ಚಿತ್ರಣವೂ ಇದೆ. ಅಂತರಾಳದ ಮೇಲ್ಛಾವಣೆ ತೆರೆದ ಕಮಲವನ್ನು ಒಳಗೊಂಡಿದೆ. ಪ್ರದಕ್ಷಿಣಾ ಪಥವಿದ್ದು ಇದೊಂದು ಸಾಂಧಾರ ದೇವಾಲಯ. ಅಂತರಾಳ ಮತ್ತು ಮಂಟಪಗಳಲ್ಲಿ ದೇವಕೋಷ್ಠಕಗಳು, ಕುಂಭ ಪಂಜರಗಳು ಈ ದೇವಾಲಯದ ಮೆರಗನ್ನು ಹೆಚ್ಚಿಸಿವೆ. ಸಭಾಮಂಟಪದ ಮೇಲ್ಛಾವಣಿ ಅಷ್ಟಕೋನಾಕೃತಿ ಮಧ್ಯೆ ಭುವನೇಶ್ವರಿಯಿಂದ ಅಲಂಕೃತವಾಗಿದೆ. ಭಿತ್ತಿಯಲ್ಲಿ ಮಂಗಗಳ ಚಿತ್ರಣವೂ

ಇದೆ. ನವರಂಗದ ಮಧ್ಯೆ ಘನಾಕೃತಿಯ ಕಪ್ಪು ಗ್ರಾನೈಟ್ ಶಿಲೆಯ ಸ್ತಂಭಗಳಿವೆ. ಸ್ತಂಭಗಳು ಚೌಕಾಕಾರವಾಗಿದ್ದು ಅಡ್ಡಪಟ್ಟಿಕೆ ಮೇಲ್ಭಾಗ ಪುಷ್ಪ ಬೋದಿಗೆಗಳಿಂದ ಒಳಗೊಂಡಿವೆ. ನಾಲ್ಕು ಸ್ತಂಭಗಳಲ್ಲಿ ವಿಷ್ಣುವಿನ ಇಪ್ಪತ್ನಾಲ್ಕು ಅವತಾರಗಳು ಇರುವುದು ವಿಶೇಷ ವೈಶಿಷ್ಟ್ಯತೆಗಳಲ್ಲಿ ಒಂದು. ರಾಮ, ಲಕ್ಷ್ಮಣ, ಸೀತೆ, ಅಂಜಲಿ ಮುದ್ರೆಯಲ್ಲಿದ್ದ ಭಕ್ತ, ವೇಣುಗೋಪಾಲ, ಶಂಖ ಚಕ್ರ, ಸ್ತ್ರೀಪುರುಷ ಶಿಲ್ಪ. ದೇವಿಯ ಚಿತ್ರಣ, ತಪಸ್ವಿನಿ, ಲಕ್ಷ್ಮೀನರಸಿಂಹ ಮುಂತಾದ ಮೂರ್ತಿಶಿಲ್ಪಗಳು ಇಲ್ಲಿ ಪ್ರತಿಬಿಂಬಿತವಾಗಿವೆ. ಒಟ್ಟಾರೆ ಗಮನಿಸಿದರೆ ಇಲ್ಲಿನ ಹೆಚ್ಚಿನ ಮೂರ್ತಿಶಿಲ್ಪಗಳು ವೈಷ್ಣವ ಪಂಥವನ್ನೇ ಪ್ರತಿಬಿಂಬಿಸುತ್ತವೆ.

ಮುಖಮಂಟಪದಲ್ಲಿ ಎರಡು ಸ್ತಂಭಗಳ ಮೇಲೆ ಕೋಲಾಟದ ದೃಶ್ಯ, ವಾಲಿ ಸುಗ್ರೀವರ ಹೋರಾಟ ಅಂಜಲಿಮುದ್ರೆಯಲ್ಲಿದ್ದ ಗರುಡ, ಆಂಜನೇಯ, ಬಾಗಲ ತೋರಣದಲ್ಲಿ ನರ್ತಕಿಯ ಚಿತ್ರಣಗಳು ದೇವಾಲಯದ ಮೆರಗನ್ನು ಹೆಚ್ಚಿಸಿವೆ. ಮುಖಮಂಟಪದಲ್ಲಿ ನಾಲ್ಕು ಸ್ತಂಭಗಳು ಚೌಕಾಕಾರವಾಗಿದ್ದು, ಮೇಲ್ಭಾಗದಲ್ಲಿ ಪುಷ್ಪ ಬೋದಿಗೆಯನ್ನು ಒಳಗೊಂಡಿದೆ ಹನುಮಂತ, ಗರುಡ, ಉಗ್ರನರಸಿಂಹ, ಲಕ್ಷ್ಮಿ, ನಾಗಕನ್ನಿಕೆಯರು ಮುಂತಾದ ಮೂರ್ತಿಶಿಲ್ಪಗಳು, ಸ್ತಂಭಗಳ ಮೆರಗನ್ನು ಹೆಚ್ಚಿಸಿವೆ. ದೇವಾಲಯದ ಹೊರಭಾಗದ ಇನ್ನೊಂದು ವೈಶಿಷ್ಟ್ಯ ಎಂದರೆ ಹೊರಭಿತ್ತಿ ರಾಮಾಯಣದ ವಿವಿಧ ದೃಶ್ಯಗಳನ್ನು ಒಳಗೊಂಡಿದೆ. ಪುತ್ರಕಾಮೇಷ್ಠಿಯಾಗ, ರಾಮ ಲಕ್ಷ್ಮಣರು ವಿಶ್ವಾಮಿತ್ರನೊಂದಿಗೆ ಕಾಡಿಗೆ, ತಾಟಕಿಯವಧೆ, ರಾಮ ಹನುಮಂತನ, ಮಿಲನ, ಸೀತೆ ಅಪಹರಿಸುವ ದೃಶ್ಯ, ರಾಮ ರಾವಣರ ಯುದ್ಧ, ಇವೆಲ್ಲವೂ ನೋಡಲು ನಿಜಕ್ಕೂ ಸುಂದರ. ಅಲ್ಲಲ್ಲಿ ಕಲಾಕೃತಿಯಿಂದ ಒಳಗೂಡಿದ ಕುಂಭ ಪಂಜರಗಳು ರಾಮಾಯಣದ ಕಥಾನಕಗಳು, ಶಿಲ್ಪಿಯ ಕಲಾ ನೈಪುಣ್ಯಕ್ಕೆ ಸಾಕ್ಷಿಯಾಗಿವೆ.

ಹೊರಭಿತ್ತಿಯಲ್ಲಿ, ಆನೆ, ಕುದುರೆ, ಒಂಟೆಗಳ ಸೈನಿಕರ ಸಾಲುಗಳು ನರ್ತನದ ವೈವಿಧ್ಯತೆ ಇವೆಲ್ಲವೂ ಪ್ರತಿಬಿಂಬಿತವಾಗಿವೆ. ಇದರ ಪಕ್ಕದಲ್ಲಿ ಇರುವುದು ಅಮ್ಮನವರ ದೇವಾಲಯ, ದೇವಾಲಯದ ಆವರಣದಲ್ಲಿ ಈಶಾನ್ಯಕ್ಕೆ ಕಲ್ಯಾಣ ಮಂಟಪ, ಇದರ ನಿರ್ಮಾಣ ಕೃಷ್ಣದೇವರಾಯನ ಕಾಲದಲ್ಲಿ ಅಧಿಷ್ಠಾನದ ಮೇಲೆ ಎತ್ತರವಾದ ಮಂಟಪವಿದ್ದು, ಹನ್ನೆರಡು ಸ್ತಂಭಗಳಿಂದ ಆವೃತ್ತವಾಗಿದೆ. ಪ್ರತಿಯೊಂದು ಸ್ತಂಭ ಚೌಕಕಾರವಾಗಿದ್ದು, ಸ್ತಂಭದ ಮೇಲ್ಗಡಿ ಪುಷ್ಪ ಬೋದಿಗೆಗಳಿಂದ ಅಲಂಕೃತವಾಗಿದೆ. ಮೇಲ್ಛಾವಣಿಯಲ್ಲಿ ತೆರೆದ ಕಮಲದ ಹೂ, ಅದರ ಸುತ್ತಲೂ ನವಿಲುಗಳು, ನೃತ್ಯ ಮಾಡುವ ಸ್ತ್ರೀಯರ ಶಿಲ್ಪ ಕಲ್ಯಾಣ ಮಂಟಪದ ಮೆರಗನ್ನು ಹೆಚ್ಚಿಸಿವೆ. ಮಂಟಪದ ಮಧ್ಯೆ ಎತ್ತರವಾದ ವೇದಿಕೆಯಿದ್ದು ನಾಲ್ಕು ಸ್ತಂಭಗಳಿಂದ ಅಲಂಕೃತವಾಗಿದೆ. ಅಧಿಷ್ಠಾನದ ಸುತ್ತಲೂ ಆನೆಗಳ ಸಾಲು ಚಿತ್ರಿತವಾಗಿದೆ. ಪ್ರವೇಶದ್ವಾರದ ಮೇಲ್ಭಾಗದ ಪಟ್ಟಿಕೆಯಲ್ಲಿ ದೇವಿ, ಆನೆ ಚಿತ್ರಣ, ದ್ವಾರ ತೋರಣಗಳಿಂದ ಅಲಂಕೃತವಾಗಿದೆ. ಕೆಳಭಾಗದಲ್ಲಿ ಆನೆ, ಸಿಂಹ, ವಿವಿಧ ಭಂಗಿಯಲ್ಲಿನ ಸ್ತ್ರೀ ಚಿತ್ರಣ, ನವಿಲು, ಪುಷ್ಪಗಳು, ಮತ್ಸ್ಯ ಸ್ತ್ರೀ

[illegible]

ಆನೆ ಮತ್ತು ಎತ್ತು ಎರಡು ಪ್ರಾಣಿ ಮುಖದ ಒಂದು ಚಿತ್ರಣ ಈ ಎಲ್ಲಾ ಮೂರ್ತಿಶಿಲ್ಪಗಳು ಚಿತ್ರಿತವಾಗಿರುವುದು ಇದೊಂದು ವೈಶಿಷ್ಟತೆಯೇ ಸರಿ. ದೇವಾಲಯದ ಮುಖ್ಯದ್ವಾರದ ಬಲಭಿತ್ತಿ ರಾಮಾಯಣದ ಚಿತ್ರಣ, ರಾಮ, ಲಕ್ಷ್ಮಣ, ಸೀತೆ ನದಿಯನ್ನು ದಾಟುವ ಚಿತ್ರಣ. ವಾಲಿ ಸುಗ್ರೀವನೊಂದಿಗೆ ಇರುವುದು, ರಾವಣ ಆಸ್ಥಾನದಲ್ಲಿದ್ದ ಹನುಮಂತನ ಚಿತ್ರಣ. ಆನೆ, ಓಂಟೆ, ಕುದುರೆಯ ಸಾಲುಗಳ ಚಿತ್ರಣ, ಯುದ್ಧ ಸಿದ್ಧರಾದ ಯೋಧರು ನೃತ್ಯ, ಸಂಗೀತಗಾರರು ಹೀಗೆ ಈ ಮೂರ್ತಿಶಿಲ್ಪಗಳ ಚಿತ್ರಣ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ಇದೊಂದು ಪರಕಾಷ್ಠೆತೆಯ ಕಾಲವೆಂಬುದಕ್ಕೆ ಸಾಕ್ಷಿಯಾಗಿದೆ.

ಉತ್ಸವ ಮಂಟಪ ಈ ಮಂಟಪದ ಆವರಣ ಹಜಾರಾಮ ದೇವಾಲಯದ ಉತ್ತರಕ್ಕಿದೆ. ಮಧ್ಯದಲ್ಲಿ ಎತ್ತರವಾದ ವೇದಿಕೆ, ನಾಲ್ಕು ಸ್ತಂಭಗಳು, ಪುಷ್ಪಬೋದಿಗೆಗಳನ್ನು ಒಳಗೊಂಡಿದ್ದು, ಮೇಲ್ಛಾವಣಿ ಅಷ್ಟಕೋನಾಕೃತಿ, ಮಧ್ಯದಲ್ಲಿ ಅರಳಿದ ಹೂ, ಶಿಲ್ಪ, ಅದರ ಸುತ್ತಲೂ ಕೀರ್ತಿಮುಖದ ಚಿತ್ರಣದಿಂದ ಅಲಂಕೃತವಾಗಿದೆ. ಉತ್ತರದ ಮತ್ತು ಪೂರ್ವಭಿತ್ತಿಯಲ್ಲಿ ರಾಮಾಯಣದ ಕಥಾನಕಗಳು ಹೆಣೆಯಲ್ಪಟ್ಟಿವೆ. ಕುಂಭಗಳ ಮೇಲೆ ಹನುಮಂತ, ವಿಷ್ಣು, ಕೋಳಿ, ಶಂಖ, ರಾಮ, ನರ್ತಕಿ, ಕಾಮಧೇನು, ನವಿಲು, ಆಕಳು, ಕರು, ಉಗ್ರನರಸಿಂಹ, ಶಿಲಿಂಗ ಮುಂತಾದ ಶಿಲ್ಪಗಳೂ ಇಲ್ಲಿವೆ. ಮಂಟಪದಲ್ಲಿ ಹತ್ತು ಸ್ತಂಭಗಳಿದ್ದು ಮಂಟಪದ ಪ್ರವೇಶದ್ವಾರ ಸುಂದರ ಕೆತ್ತನೆಯಿಂದ ಒಳಗೊಂಡಿದೆ.

ಹೆಸರು	:	ಗೋಪಾಲಕೃಷ್ಣ ದೇವಾಲಯ
ಸ್ಥಳ	:	ಕೋಟೆಯ ಹಿಂಬದಿಯಲ್ಲಿ ಪಾಂಡುರಂಗ ದೇವಸ್ಥಾನ
ಕಾಲ	:	೧೬ ೧೭ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರೋತ್ತರ
ದಿಕ್ಕು	:	ದಕ್ಷಿಣಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟನಾ	:	

ಈ ದೇವಾಲಯದ ಉದ್ದ ೧೪ ಮೀ. ೨೫ ಸೆ.ಮೀ. x ಅಗಲ ೮ ಮೀ.೫೦ ಸೆ.ಮೀ ಹೊಂದಿದೆ. ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹದ ಮೇಲ್ಛಾವಣಿ ಚತುಶ್‌ಕೋನಾ ಕೃತಿಯಲ್ಲಿ ಅಲಂಕೃತಗೊಂಡಿದ್ದು, ಉದ್ದವಾಗಿ ಬಂಡೆಗಲ್ಲುಗಳು ಹಾಸಲ್ಪಟ್ಟಿವೆ. ಗರ್ಭಗೃಹದಲ್ಲಿ ಕೊಳಲನ್ನು ಊದುತ್ತಿರುವ ವೇಣುಗೋಪಾಲ ಮೂರ್ತಿ ಶಿಲ್ಪವಿದೆ. ಅಂತರಾಳ ಸರಳವಾಗಿದ್ದು, ಇಲ್ಲಿನ ಪ್ರವೇಶ ದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಪದ್ಮಾಸೀನಳಾಗಿದ್ದಾಳೆ. ಎಡ ಬಲಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ನವರಂಗದಲ್ಲಿನ ನಾಲ್ಕು ಸ್ತಂಭಗಳಿದ್ದು ಚೌಕಾಕಾರ ಅಷ್ಟಪಟ್ಟಿಕೆ,

ಚೌಕಾಕಾರ ಪುನಃ ಅಷ್ಟಪಟ್ಟಿಕೆ ಚೌಕಾಕಾರದ ಬೋದಿಗೆಯನ್ನು ಒಳಗೊಂಡಿದೆ. ಶಂಖ, ಚಕ್ರ, ಶ್ರೀವೈಷ್ಣವ ಚಿಹ್ನೆ, ಪುಷ್ಪ, ಕಾಳಿಂಗ ಮರ್ಧನ, ಬಾಲಕೃಷ್ಣ, ನವಿಲು, ಸಿಂಹಮುಖ, ಸರ್ಪಾಧಾರಿ ಕೃಷ್ಣ, ಅಭಯಮುದ್ರೆಯಲ್ಲಿ ಕೃಷ್ಣ ಹಾವನ್ನು ಕೊಕ್ಕೆಯಲ್ಲಿ ಹಿಡಿದ ನವಿಲು, ವೀರಾಂಜನೆಯ, ರಾಮಾನುಜಾ ಚಾರ್ಯರು, ಗಣಪ, ಗರುಡ, ಖಂಜರವನ್ನು ಹಿಡಿದ ಬಾಲಕ, ಆಮೆ, ಮಗವನ್ನು ಎತ್ತಿಕೊಂಡು ನಿಂತ ಭಂಗಿಯಲ್ಲಿ ಕೃಷ್ಣ, ಇವು ಸ್ತಂಭಗಳ ಮೇಲಿ ಚಿತ್ರಿತವಾಗಿದ್ದು ವೈಷ್ಣವ ಮೂರ್ತಿ ಶಿಲ್ಪದ ಪ್ರಾಧಾನ್ಯತೆಯನ್ನು ಎತ್ತಿ ತೋರಿಸುವಂತಿವೆ. ಮೇಲ್ಭಾವಣಿ ಅಷ್ಟಕೋನಾಕೃತಿಯಲ್ಲಿ ಅರಳಿದ ಕಮಲದೊಂದಿಗೆ ಅಲಂಕೃತವಾಗಿದೆ. ಪ್ರವೇಶದ್ವಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಪದ್ಮಾಸೀನಳಾಗಿ ದ್ದಾಳೆ. ಬಾಗಿಲು ದ್ವಾರದ ಎರಡು ಕಡೆಗೆ ವೈಷ್ಣವ ದ್ವಾರಪಾಲಕರು ನಿಂತ ಭಂಗಿಯಲ್ಲಿದ್ದಾರೆ. ಪ್ರವೇಶದ್ವಾರದ ಮೇಲೆ ಗಜಲಕ್ಷ್ಮಿಯನ್ನು ಹೊರತುಪಡಿಸಿದರೆ ಯಾವುದೇ ಕೆತ್ತನೆ ಕಾಣಬರುವುದಿಲ್ಲ. ದೇವಾಲಯದ ಹೊರಭಾಗ ಪೂರ್ತಿಯಾಗಿ ಪುನರ್‌ನವೀಕರಿಸಲಾಗಿದೆ. ದ್ವಾರಸ್ತಂಭಗಳು ಪೀಠಭಾಗ, ಗೋಪುರ ಮತ್ತು ಪ್ರಧಾನ ದ್ವಾರಗಳು ಪೂರ್ತಿಯಾಗಿ ಜೀರ್ಣೋದ್ಧಾರವಾದಂತಿದೆ. ದೇವಾಲಯದ ನೆಲಗಟ್ಟವನ್ನು ಪೂರ್ತಿಯಾಗಿ ಸಿಮೆಂಟನಿಂದ ಅವೃತ್ತವಾಗಿವೆ.

ಹೆಸರು	:	ವಿಷ್ಣು ದೇವಾಲಯ
ಸ್ಥಳ	:	ಚಂದ್ರಶೇಖರ ದೇವಾಲಯದ ಉತ್ತರಕ್ಕೆ ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ದಕ್ಷಿಣಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಕ್ರಿ.ಶ.೧೫೫೪ರ ಶಾಸನವೊಂದು ಇದು ತಿರುವೆಂಗಳನಾಥ ದೇವಾಲಯವೆಂದು ತಿಳಿಸಿರುವುದರಿಂದ ಪ್ರಸ್ತುತ ಇದು ಸರಸ್ವತಿ ದೇವಾಲಯವೆಂದು ಕರೆಯಲ್ಪಟ್ಟಿದ್ದರೂ ಮೂಲತಃ ಇದು ವೈಷ್ಣವ ದೇವಾಲಯ. ದೇವಾಲಯದ ಸುತ್ತಲೂ ವೈಷ್ಣವ ಸಂಪ್ರದಾಯದ ಮೂರ್ತಿಶಿಲ್ಪಗಳು ಇದ್ದುದರಿಂದ ಇದು ವೈಷ್ಣವ ಪಂಥಕ್ಕೆ ಸೇರಿದ ದೇವಾಲಯ ಎಂಬುದು ಸ್ಪಷ್ಟ. ಈ ದೇವಾಲಯ ಗರ್ಭಗುಡಿ, ಅಂತರಾಳ, ಅರ್ಧಮಂಟಪ, ನವರಂಗ ಮಂಟಪಗಳನ್ನು ಒಳಗೊಂಡಿದೆ. ಈ ದೇವಾಲಯ ದಕ್ಷಿಣ ದಿಕ್ಕಿಗೆ ಮುಖವಾಗಿರುವುದು ಇದೊಂದು ವಿಶೇಷತೆ. ಏಕೆಂದರೆ ಹೆಚ್ಚಿನ ಮಟ್ಟಿಗೆ ದೇವಾಲಯಗಳು ಪೂರ್ವದಿಕ್ಕಿಗೆ ಮುಖವಾಗಿರುತ್ತವೆ. ಈ ದೇವಾಲಯದ ಗರ್ಭಗೃಹದಲ್ಲಿ ಪಾಣಿ ಪೀಠವಿದೆ. ಪಾಣಿಪೀಠದ ಮುಂಭಾಗದಲ್ಲಿ ಅಂಜಲಿ ಮುದ್ರೆಯಲ್ಲಿದ್ದ ಗರುಡನಿದ್ದಾನೆ. ಪ್ರಸ್ತುತ ಪೀಠದ ಮೇಲೆ ಮೂರ್ತಿ ಶಿಲ್ಪವಿಲ್ಲ. ಅಂತರಾಳದ

ಮೇಲ್ಛಾವಣಿ ತೆರೆದ ಕಮಲ ಹೊಂದಿದೆ. ಗರ್ಭಗೃಹದ ಬಾಗಿಲುವಾಡದ ಮೇಲೆ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಇದೆ. ಇದರ ಇಕ್ಕೆಲುಗಳಲ್ಲಿ ಆನೆಗಳ ಚಿತ್ರಣ. ಪ್ರವೇಶದ್ವಾರದ ಎರಡೂ ಕಡೆ ಹೂಬಳ್ಳಿಗಳಿಂದ ಅಲಂಕೃತಗೊಂಡಿರುವುದು ಇಲ್ಲಿಯ ಇನ್ನೊಂದು ವಿಶೇಷತೆ. ಅರ್ಧಮಂಟಪದ ಮೇಲ್ಛಾವಣಿ ಕಮಲದ ಹೂವಿನಿಂದ ಅಲಂಕೃತವಾಗಿದೆ. ಮಧ್ಯೆ ನಾಲ್ಕು ಸ್ತಂಭಗಳು ಮತ್ತು ಬೋದಿಗೆಗಳು ಚೌಕಾಕಾರ, ಶಂಖ, ಹೂ, ಸಿಂಹಮುಖ, ಹನುಮಂತ, ಮೂರುನಾಮ ಚಿಹ್ನೆ, ತಪಸ್ವಿ, ಕುಳಿತ ದೇವಿ, ಅಂಜಲಿ ಮುದ್ರೆಯಲ್ಲಿದ್ದ ಸ್ತ್ರೀ, ಕೃಷ್ಣ ಆಮೆಗಳ ಚಿತ್ರಣ ಇಲ್ಲಿಯ ಮೂರ್ತಿ ಶಿಲ್ಪಕ್ಕೆ ಮೆರಗನ್ನು ನೀಡುವಂತಿದೆ. ನವರಂಗದ ಮಂಟಪದಲ್ಲಿ ಸ್ತಂಭಗಳಿದ್ದು ಈ ಸ್ತಂಭಗಳು ಚೌಕಾಕಾರವಾಗಿದ್ದು ಮೇಲೆ ಪುಷ್ಪ ಬೋದಿಗೆಗಳಿವೆ. ಮಂಟಪದ ಮೇಲ್ಛಾವಣಿ ಭುವನೇಶ್ವರಿಯನ್ನು ಒಳಗೊಂಡಿದೆ. ಇಲ್ಲಿಯ ಸ್ತಂಭಗಳ ಮೇಲೆ ವಿಷ್ಣು, ನಂದಿ, ಕೀರ್ತಿಮುಖ, ಹನುಮಂತ, ದೇವಿ, ಗರುಡ, ವಾಮನ, ನವಿಲು, ಆಯುಧದಾರಿ, ಚಾಮರಧಾರಿಣಿ, ಡೋಲುವಾದಕ, ಪುರುಷ ಮತ್ತು ಸ್ತ್ರೀಯರ ವಿವಿಧ ಭಂಗಿ ಈಟಿ ಹಿಡಿದ ಮನುಷ್ಯ, ಸ್ಥಾನಿಕಭಂಗಿಯಲ್ಲಿ ಸ್ತ್ರೀ ಆನೆ, ಕಿನ್ನರ, ಗಣೇಶ, ಸಿಂಹ, ಕೃಷ್ಣ ಮತ್ತು ಗೋಪಿಕಾ ಸ್ತ್ರೀಯರು ಮುಂತಾದ ಮೂರ್ತಿಶಿಲ್ಪಗಳು ಈ ಸ್ತಂಭಗಳಲ್ಲಿ ಮೂಡಿವೆ. ದೇವಾಲಯದ ಹೊರಭಾಗ, ಅಧಿಷ್ಠಾನ, ಭಿತ್ತಿ ಮತ್ತು ಶಿಖರವನ್ನು ಒಳಗೊಂಡಿದೆ. ಅಧಿಷ್ಠಾನ ಮಂಚ ಬಂಧ ಮಾದರಿಯಲ್ಲಿದೆ. ಭಿತ್ತಿ ಸಪಾಟಾಗಿದ್ದು ಇಲ್ಲಿ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದೆ. ಭಿತ್ತಿಯ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಗಳಿಂದ ಕಟ್ಟಲ್ಪಟ್ಟಿದ್ದು ಪ್ರಸ್ತು ಶಿಥಿಲಾವಸ್ಥೆ. ಗರ್ಭಗುಡಿಯ ಹೊರಭಾಗದಲ್ಲಿ ಹಾವು, ಆಮೆ, ಮೀನುಗಳ ಚಿತ್ರಣಗಳಿವೆ. ಭಿತ್ತಿಯ ಹೊರಭಾಗ ಗೂಡುಗಳಿದ್ದು, ಪ್ರಸ್ತುತ ಯಾವುದೇ ಮೂರ್ತಿಶಿಲ್ಪವಿಲ್ಲ. ಗರ್ಭಗುಡಿಯ ಹೊರಭಾಗದಲ್ಲಿ ಅಭಿಶೇಕ ನೀರು ಹೊರಗಡೆ ಹೋಗಲು ಸಿಂಹಮುಖದ ಪ್ರಣಾಳಿಕೆ ಇದೆ. ಗರ್ಭಗುಡಿಯ ಮೇಲಿನ ಶಿಖರದಲ್ಲಿ ಕರ ಜೋಡಿಸಿ ನಿಂತಿರುವ ಹನುಮಂತ ಹಾಗೂ ಅಂಜಲಿ ಮುದ್ರೆಯಲ್ಲಿದ್ದ ಸ್ತ್ರೀ ಮುಂತಾದ ಮೂರ್ತಿಶಿಲ್ಪಗಳು ಗಾರೆಯಿಂದ ಮಾಡಲ್ಪಟ್ಟು ಮೊದಲು ಎರಡು ಹಂತಗಳು ಮೂರ್ತಿಶಿಲ್ಪಗಳು ಆವರಿಸಿದ್ದು ಕಂಡುಬರುತ್ತವೆ. ಇದರ ಮೇಲ್ಭಾಗವೇ ಸ್ತೂಪಿ. ಒಟ್ಟಾರೆ ಈ ದೇವಾಲಯ ವೈಷ್ಣವ ಸಂಪ್ರದಾಯಕ್ಕೆ ಸೇರಿದೆ ಎಂಬುದನ್ನು ಮೂರ್ತಿಶಿಲ್ಪ ಮತ್ತು ಶಾಸನಗಳು ಸ್ಪಷ್ಟಪಡಿಸಿವೆ.

ಹೆಸರು	:	ವಿಷ್ಣು ದೇವಾಲಯ
ಸ್ಥಳ	:	ಗಜಶಾಲೆಯ ಹಿಂಭಾಗದಲ್ಲಿ ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೬ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	(ವಸುಂಧರ ಫಿಲಿಯೋಜ, ೧೯೮೨, ಪು.೪೭)

[illegible]

ಈ ದೇವಾಲಯ ಉದ್ದ ೩೦ ಮೀ. x ಅಗಲ ೧೫ ಮೀ. ವಿಸ್ತೀರ್ಣ ಹೊಂದಿದೆ. ಒಳಭಾಗ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹ ಪ್ರದಕ್ಷಿಣ ಪಥವನ್ನು ಒಳಗೊಂಡಿದೆ. ಅಂದರೆ ಇದು ಸಾಂಧಾರ ದೇವಾಲಯ. ಗರ್ಭಗೃಹದಲ್ಲಿ ಪ್ರಸ್ತುತ ಮೂರ್ತಿಶಿಲ್ಪವಿಲ್ಲ. ಅಂತರಾಳದ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ಬಾಗಿಲು ದ್ವಾರದ ಇಕ್ಕೆಲುಗಳಲ್ಲಿ ದ್ವಾರಪಾಲಕಿಯರಿದ್ದಾರೆ.

ಸಭಾಮಂಟಪದ ಮೇಲ್ಛಾವಣಿಗೆ ಹಾಸುಗಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದ್ದು ಸಬಾಮಂಟಪದಲ್ಲಿನ ನಾಲ್ಕು ಸ್ತಂಭಗಳು ಚೌಕಾಕಾರವಾಗಿದ್ದು, ಪುಷ್ಪ ಬೋದಿಗೆಗಳನ್ನು ಒಳಗೊಂಡಿದೆ. ಸ್ತಂಭಗಳ ಮೇಲೆ ಗರುಡ, ವಿಷ್ಣು ಬಿಂದಿಗೆ ಹೊತ್ತ ಮಹಿಳೆ, ಮತ್ಸಾವತಾರ, ಹೂವಿನ ಗುಚ್ಛ ಹಿಡಿದ ಮಹಿಳೆ, ಚಾಮರಧಾರಾಣಿ, ನವಿಲು, ಶಂಖ, ಧ್ಯಾನಮಗ್ನ ಮನುಷ್ಯ, ಸಂಜೀವಿನಿ ಪರ್ವತ ಕೈಯಲ್ಲಿ ಹಿಡಿದಿರುವ ಆಂಜನೇಯ, ಬಾಲಕೃಷ್ಣ, ವಂದಿಸುತ್ತಿರುವ ಹನುಮಂತ, ಕಾರ್ತೀಕೆಯ ಮುಂತಾದ ಮೂರ್ತಿಶಿಲ್ಪಗಳಿವೆ. ಮೇಲ್ಛಾವಣಿಯ ಸುತ್ತಲೂ ಒಳಮುಖದಲ್ಲಿ ಕುಳಿತ ಎಂಟು ಸಿಂಹ ಮುಖಗಳಿವೆ. ಇವುಗಳ ಮಧ್ಯೆ ಸ್ತ್ರೀಯರ ಕೋಲಾಟದ ವಿವಿಧ ಭಂಗಿಗಳು ಇಲ್ಲಿವೆ. ಪೂರ್ವಪಶ್ಚಿಮ ಪ್ರವೇಶ ದ್ವಾರಗಳಲ್ಲಿ ತೆರೆದ ಮಂಟಪಗಳಿವೆ. ಇಲ್ಲಿ ಎರಡು ಸ್ತಂಭಗಳಿದ್ದು, ಚೌಕಾಕಾರವಾಗಿ ಪುಷ್ಪ ಬೋದಿಗೆಗಳನ್ನು ಒಳಗೊಂಡಿದೆ.

ಮುಖಮಂಟಪದ ಮೇಲ್ಛಾವಣಿ ಉದ್ದವಾಗಿ ಬಂಡೆಗಳು ವಿಸ್ತೃತವಾಗಿ ಹಾಸಲ್ಪಟ್ಟಿವೆ. ನಾಲ್ಕು ಸ್ತಂಭಗಳಿದ್ದು, ಕೆಳಭಾಗ ಚೌಕಾಕಾರ ಮೇಲ್ಭಾಗ ವರ್ತುಲಾಕಾರ ಮತ್ತು ಪೋಡಾಶ್ರ ಪಟ್ಟಿಕೆಗಳಿವೆ. ಅಕ್ಕಪಕ್ಕ ಕಂಬಗಳ ಮೇಲೆ ಪುಷ್ಪ ಬೋದಿಗೆಗಳಿವೆ. ನಾಗಬಂಧ ಮನುಷ್ಯ, ಕಳಹೆ ಊದುತ್ತಿರುವ ಮನುಷ್ಯ, ಬ್ರಹ್ಮ, ಹನುಮಂತ, ಇಬ್ಬರು ಮಹಿಳೆಯರು ನಿಂತ ಭಂಗಿ ಮುಂತಾದ ಮೂರ್ತಿಶಿಲ್ಪಗಳಿವೆ. ಮುಖಮಂಟಪದಲ್ಲಿ ಒಳಮುಖ ದ್ವಾರಪಾಲಕರ, ಮೂರ್ತಿಶಿಲ್ಪಗಳಿವೆ. ಈ ಮಂಟಪ ಒಳಬಿತ್ತಿ, ಪುಷ್ಪ, ಕುಂಭ, ಪಂಜರ, ಕೋಷ್ಠಕಗಳಿಂದ ಅಲಂಕೃತವಾಗಿವೆ. ಭಿತ್ತಿಯ ಎರಡೂ ತುದಿಗಳಲ್ಲಿ ಕೀರ್ತಿಮುಖ, ಗರುಡ, ವಿಷ್ಣು, ಕಾಳಿಂಗಮರ್ಧನ, ಕಷ್ಣ, ಆನೆ, ನವಿಲು ಮುಂತಾದ ಮೂರ್ತಿಶಿಲ್ಪಗಳು ಇಲ್ಲಿವೆ. ಹೊರಭಾಗ ಅಧಿಷ್ಠಾನ ಭಿತ್ತಿ ಮತ್ತು ಗೋಪುರಗಳನ್ನು ಒಳಗೊಂಡಿದೆ. ಅಧಿಷ್ಠಾನ ಮಂಚ ಬಂದ ಮಾದರಿ. ಭಿತ್ತಿಗೆ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದೆ. ಗೋಪುರ, ಇಟ್ಟಿಗೆ ಗಾರೆಗಳಿಂದ, ನಿರ್ಮಿತವಾಗಿದೆ. ಶಿಖರದ ಮುಂಭಾಗ ಸುಖನಾಸಿ ಇದ್ದರೂ ಈಗ ಶಿಥಿಲವಾಗಿದೆ.

ಹೆಸರು	:	ಗಾರಿ ಬಾವಿ ಆಂಜನೇಯ
ಸ್ಥಳ	:	ಕನ್ನಡ ವಿಶ್ವವಿದ್ಯಾಲಯಕ್ಕೆ ಹೋಗುವ ರಸ್ತೆಯ ಎಡಭಾಗದಲ್ಲಿ
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯ ಗರ್ಭಗೃಹ, ತೆರೆದ ಮಂಟಪ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಮೇಲ್ಛಾವಣಿಯ ಬಂಡೆಗಳು ಉದ್ದವಾಗಿ ಹಾಸಲ್ಪಟ್ಟಿದು ಭಿತ್ತಿಗೆ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿವೆ. ಗರ್ಭಗೃಹದಲ್ಲಿ ಹನುಮಂತನ ಮೂರ್ತಿಶಿಲ್ಪವಿದೆ. ಇದರ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಹೂವಿನ ಚಿತ್ರವಿದೆ. ಇಲ್ಲಿನ ಮುಖಮಂಟಪವು ೯ ಅಂಕಣಗಳಿಂದ ಹತ್ತು ಸ್ತಂಭಗಳಿಂದ ರಚಿತವಾಗಿದೆ. ಈ ಸ್ತಂಭಗಳು ಚೌಕಾಕಾರವಾಗಿದ್ದು ಮೂಲರೂಪದಲ್ಲಿರುವುದೇ ಈ ಸ್ತಂಭಗಳ ವೈಶಿಷ್ಟ್ಯತೆ ಈ ಸ್ತಂಭಗಳ ಮೇಲ್ಭಾಗದಲ್ಲಿ ಚೌಕಾರದ ಮತ್ತು ಪುಷ್ಪ ಬೋದಿಗೆಗಳನ್ನು ಒಳಗೊಂಡಿದೆ. ಮುಖಮಂಟಪದ ಮುಂಭಾಗದಲ್ಲಿ ಮುಂಚಾಚಿತ ಬಂಡೆಕಲ್ಲಿನ ಕಪೋತವಿದೆ.

ಹೆಸರು	:	ಹನುಮಂತ ದೇವಾಲಯ, ಕಾಮಲಾಪುರ
ಸ್ಥಳ	:	ಅಕ್ಕ ತಂಗಿಯರ ಬೆಟ್ಟದ ಪಕ್ಕದಲ್ಲಿ
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ದಕ್ಷಿಣಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯ ಗರ್ಭಗುಡಿ ಮತ್ತು ಮಂಟಪವನ್ನು ಮಾತ್ರ ಒಳಗೊಂಡಿದೆ. ಗರ್ಭಗುಡಿಯ ಮೇಲ್ಛಾವಣಿ ಅಷ್ಟಕೋನಾಕೃತಿಯಲ್ಲಿ ಅರಳಿದ ಕಮಲದಿಂದ ಅಲಂಕೃತವಾಗಿದೆ. ಪ್ರವೇಶದ್ವಾರದ ಇಕ್ಕೆಲುಗಳಲ್ಲಿ ಹೆಡೆ ಬಿಚ್ಚಿದ ನಾಗಗಳಿವೆ. ಲಾಲಾಟಬಿಂಬದಲ್ಲಿ ಅರಳಿದ ಪುಷ್ಪಗಳಿವೆ. ಮುಖಮಂಟಪದ ಬಲಗಡೆ ಅಂಜಲಿ ಮುದ್ರೆಯಲ್ಲಿದ್ದ ನಾಗಕನ್ಯೆಯ ಚಿತ್ರಣವಿದೆ. ಇದರ ಮೇಲ್ಛಾವಣಿಯಲ್ಲಿ ಅಡ್ಡವಾದ ಬಂಡೆಗಳು ಹಾಸಲ್ಪಟ್ಟಿವೆ. ಹೊರಭಾಗ ಭಿತ್ತಿ ಅಡ್ಡಲಾಗಿ ಕಟ್ಟಲ್ಪಟ್ಟರೂ ಮುಂಭಾಗದ ೨ ಸ್ತಂಭಗಳು ಚೌಕಾಕಾರ ಅಷ್ಟಕೋನ, ಪುನಃ ಚೌಕಾಕಾರ ಮತ್ತು ಚೌಕ ಬೋದಿಗೆಗಳನ್ನು ಒಳಗೊಂಡಿದೆ. ಬಂಡೆಗಲ್ಲಿನಿಂದ ಕಪೋತವನ್ನು ಹಾಸಿರುವುದು ಇಲ್ಲಿನ ಮತ್ತೊಂದು ವೈಶಿಷ್ಟ್ಯತೆ. ಮೇಲ್ಛಾವಣಿಯನ್ನು ಜೀರ್ಣೋದ್ಧಾರ ಮಾಡಲಾಗಿದ್ದು ಪ್ರಸ್ತುತ ಶಿಖರವಿಲ್ಲದೆ ಗಾರೆಯಿಂದ ಮಾಡಲ್ಪಟ್ಟಿದೆ.

ಹೆಸರು	:	ಕೋಟೆ ಆಂಜನೇಯ
ಸ್ಥಳ	:	ನಗರೇಶ್ವರ ದೇವಾಲಯದ ಪೂರ್ವಕ್ಕೆ, ಕಾಮಲಾಪುರ, ಹೊಸಪೇಟೆ
ಕಾಲ	:	೧೭-೧೮ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರೋತ್ತರ
ದಿಕ್ಕು	:	ದಕ್ಷಿಣಾಭಿಮುಖ
ವಸ್ತು	:	ಗ್ರ್ಯಾನೈಟ್ ಶಿಲೆ

ಈ ದೇವಾಲಯದ ಉದ್ದ ೨೯ ಮೀ. ೧೦ ಸೆಂ.ಮೀ. x ಅಗಲ ೧೩ ಮೀ. ೮೦ ಸೆಂ.ಮೀ. ಹೊಂದಿದೆ. ಈ ದೇವಾಲಯ ಗರ್ಭಗೃಹ, ಸಭಾಮಂಟಪವನ್ನು ಹೊಂದಿದ್ದು, ದೇವಾಲಯದ ಆವರಣ ಪ್ರವೇಶದ್ವಾರ ಪೂರ್ವದಿಕ್ಕಿಗೆ ಇದೆ. ಗರ್ಭಗೃಹದ ಮೇಲ್ಛಾವಣಿ ಉದ್ದವಾಗಿ ಹಾಸಲ್ಪಟ್ಟಿದ್ದು, ಭಿತ್ತಿಗೆ ವಿಸ್ತೃತವಾಗಿ ಹಾಸುಗಲ್ಲು ಹಾಸಲ್ಪಟ್ಟಿದೆ. ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಹೂವಿನ ಚಿತ್ರಣವಿದೆ. ನವರಂಗ ಆರುಸ್ತಂಭಗಳಿದ್ದು ಚೌಕಾಕಾರ, ಅಮಾಲಕ ಮತ್ತು ಬೋದಿಗೆಗಳನ್ನು ಹೊಂದಿದೆ. ನವರಂಗದಲ್ಲಿನ ಎರಡು ಸ್ತಂಭಗಳಲ್ಲಿ ವಿವಿಧ ಪುಷ್ಪಗಳು ಸ್ತ್ರೀಯರ ನೃತ್ಯಭಂಗಿ, ಆಂಜನೇಯ ಮುಂತಾದ ಮೂರ್ತಿಶಿಲ್ಪವನ್ನು ಕಾಣಬಹುದು. ದೇವಾಲಯದ ಎದುರಿಗೆ ಗರುಡ ಸ್ತಂಭ, ಬಲಿಪೀಠವೂ ಇದೆ. ಪ್ರವೇಶದ್ವಾರದ ಎರಡೂ ಕಡೆಗೆ ಆನೆಯ ಖಟಾಂಜನವಿದೆ. ಹೂರಭಾಗ ಸಣ್ಣ ಅಧಿಷ್ಠಾನ ಭಿತ್ತಿ ಮತ್ತು ಸುಖನಾಸಿಯನ್ನು ಒಳಗೊಂಡಿದೆ. ದೇವಾಲಯದ ಪ್ರವೇಶದ್ವಾರದಲ್ಲಿ ಶೈವ ದ್ವಾರಪಾಲಕರ ಲತಾ ಬಳ್ಳಿಗಳಿವೆ. ಒಟ್ಟಾರೆ ಈ ದೇವಾಲಯ ವಿಜಯನಗರೋತ್ತರ ಲಕ್ಷಣಗಳನ್ನು ಒಳಗೊಂಡಿದೆ.

ಹೆಸರು	:	ಆಂಜನೇಯ ದೇವಾಲಯ
ಸ್ಥಳ	:	ಪಟಗಿ ಶ್ರೀನಿವಾಸರಾವ್ ಮನೆಯ ಪೂರ್ವಕ್ಕೆ, ಕಾಮಲಾಪುರ
ಕಾಲ	:	೧೭-೧೮ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರೋತ್ತರ
ದಿಕ್ಕು	:	ದಕ್ಷಿಣಾಭಿಮುಖ
ವಸ್ತು	:	ಗ್ರ್ಯಾನೈಟ್ ಶಿಲೆ

ಈ ದೇವಾಲಯದ ಉದ್ದ ೧೨ ಮೀ. x ಅಗಲ ೧೦ ಮೀ ೨೦ ಸೆಂ.ಮೀ. ಹೊಂದಿದೆ. ಈ ದೇವಾಲಯ ಗರ್ಭಗೃಹ, ಮುಖಮಂಟಪವನ್ನು ಒಳಗೊಂಡಿದೆ. ಮೇಲ್ಛಾವಣಿಯ ಬಂಡೆಗಳು ಉದ್ದವಾಗಿ ಹಾಸಲ್ಪಟ್ಟಿದ್ದು ಭಿತ್ತಿಗೆ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿವೆ. ಗರ್ಭಗೃಹದಲ್ಲಿ ಹನುಮಂತನಮೂರ್ತಿಶಿಲ್ಪವಿದೆ. ಇದರ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಪುಷ್ಪ, ಮೇಲ್ಭಾಗದಲ್ಲಿ ಕೀರ್ತಿಮುಖವಿದೆ. ಇಲ್ಲಿನ ಮುಖಮಂಟಪ ಒಂಭತ್ತು ಅಂಕಣಗಳಿಂದ ಕೂಡಿದ್ದು ೧೬ ಸ್ತಂಭಗಳಿಂದ ರಚಿತವಾಗಿದೆ. ಈ ಸ್ತಂಭಗಳು

ಚೌಕಾಕಾರ, ಅಷ್ಟಕೋನ, ಚೌಕಾಕಾರ ಮತ್ತು ಚೌಕಾಕಾರದ ಬೋದಿಗೆಯನ್ನು ಒಳಗೊಂಡಿದೆ. ಮಧ್ಯದ ಆರು ಸ್ತಂಭಗಳ ಮೇಲೆ ಕಾಳಿಂಗ ಮರ್ದನ ಕೃಷ್ಣ, ಸಿಂಹಮುಖ, ಪುಷ್ಪ, ನವಿಲು, ಬಿಲ್ಲು ಹಿಡಿದ ಕಾರ್ತಿಕೇಯ, ವೇಣುಗೋಪಲ, ಬ್ರಹ್ಮ ಚತುರ್ಮುಖ ಬ್ರಹ್ಮ, ವರಹಾ, ನವಿಲು, ಗೋಪಿಕಾ, ಸ್ತ್ರೀಯರೊಂದಿಗೆ ಗೋಪಾಲಕೃಷ್ಣ, ಗಡ್ಡದಾರಿ, ವಿರಭದ್ರ, ಹಾವನ್ನು ಹಿಡಿದ ನವಿಲು, ಕಾಮಧೇನು, ಚಿತ್ರಿತವಾಗಿದೆ.

ಮುಖಮಂಟಪದ ಪ್ರವೇಶದ್ವಾರದ ಎರಡು ಸ್ತಂಭಗಳಲ್ಲಿ ನಾಲ್ಕು ಪುಷ್ಪ ಬೋದಿಗೆಗಳಿವೆ. ಬಲಪೀಠವಿದ್ದುದು, ಮೇಲೆ ಗೋಚರ. ಪ್ರವೇಶ ದ್ವಾರದ ಇಕ್ಕೆಲುಗಳಲ್ಲಿ ದ್ವಾರಪಾಲಕರು, ಮೇಲ್ಪಟ್ಟಿಕೆಯಲ್ಲಿ ಹೂ, ಮುಂಚಾಚಿದ ಕಪೋತವಿದೆ. ಹೊರ ಆವರಣದ ಭಾಗ ಪೂರ್ತಿಯಾಗಿ ಜೀರ್ಣೋದ್ಧಾರವಾಗಿ ಮುಂಭಾಗದಲ್ಲಿ ಇತ್ತೀಚಿಗೆ ಕಕ್ಷಾಸನ ಮಾಡಲಾಗಿದೆ. ಗರ್ಭಗುಡಿಯ ಭಿತ್ತಿಗೆ ಕಲ್ಲು ವಿಸ್ತೃತವಾಗಿ ಹಾಸಲ್ಪಟ್ಟಿದೆ. ಮೇಲೆ ಮುಂಚಾಚಿದ ಬಂಡೆ ಕಲ್ಲಿನ ಕಪೋತವಿದೆ. ಕಪೋತದ ಮೇಲ್ಭಾಗ ಇತ್ತೀಚಿಗೆ ಸಿಮೆಂಟಿನಿಂದ ಆವೃತ ಮಾಡಲಾಗಿದೆ.

ಹೆಸರು	:	ವೇಣುಗೋಪಾಲ ದೇವಾಲಯ
ಸ್ಥಳ	:	ರಾಯರ ಗುಡಿಯ ಎದುರು ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೬-೧೭ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯದ ಉದ್ದ ೭ ಮೀ. ೯೦ಸೆಂ.ಮೀ. x ಅಗಲ ೧೩ ಮೀ ೮೫ ಸೆಂ.ಮೀ. ಹೊಂದಿದೆ. ಈ ದೇವಾಲಯ ಗರ್ಭಗೃಹ ಮತ್ತು ಮಂಟಪವನ್ನು ಒಳಗೊಂಡಿದೆ. ಗರ್ಭಗುಡಿಯ ಮೇಲ್ಛಾವಣಿ ಷೋಡಶಕೋನಾಕೃತಿಯಿಂದ ಒಳಗೊಂಡಿದ್ದು ಅರಳಿದ ಕಮಲ ಇಲ್ಲಿ ಅಲಂಕೃತವಾಗಿದೆ. ಗರ್ಭಗುಡಿಯಲ್ಲಿ ವೇಣುಗೋಪಾಲನ ಮೂರ್ತಿ ಇದ್ದು, ಇದು ಪ್ರಸ್ತುತ ಪೂಜೆಗೊಳ್ಳುತ್ತಲಿದೆ. ಪ್ರವೇಶದ್ವಾರದಲ್ಲಿ ಎರಡು ಕಲಶಗಳ ಉಬ್ಬುಶಿಲ್ಪಗಳಿವೆ. ಹೊಸ್ತಿಲಿನ ಒಳಭಾಗ ಕೀರ್ತಿಮುಖವನ್ನು ಒಳಗೊಂಡಿದೆ. ಇದು ಸಾಂಧಾರ ದೇವಾಲಯ. ಅಂದರೆ ಪ್ರದಕ್ಷಿಣಾ ಪಥವಿದೆ. ಈ ದೇವಾಲಯದ ಮುಖ್ಯ ಲಕ್ಷಣಗಳಲ್ಲಿ ಒಂದು. ಈ ದೇವಾಲಯಕ್ಕೆ ಪೂರ್ವಪಶ್ಚಿಮಕ್ಕೂ ಪ್ರವೇಶದ್ವಾರಗಳಿದ್ದು ಮೇಲ್ಭಾಗದ ಪಟ್ಟಿಕೆಯಲ್ಲಿ ಹೂವಿನ ಚಿತ್ರಣವಿದೆ. ಮಂಟಪದಲ್ಲಿ ಒಟ್ಟು ಹನ್ನೆರಡು ಸ್ತಂಭಗಳಿದ್ದು ಈ ಸ್ತಂಭಗಳು ಚೌಕ ಮತ್ತು ಚೌಕಾಕಾರದ

ಬೋದಿಗೆಗಳನ್ನು ಒಳಗೊಂಡಿದೆ. ಈ ಸ್ತಂಭಗಳಲ್ಲಿ ನಕ್ಷತ್ರ, ಮರ, ಪುಷ್ಪ, ಶಂಖ, ಹನುಮಂತ ಬಾಲಕೃಷ್ಣ, ಹಸು ಕುರವಿಗೆ ಹಾಲು ಉಣಿಸುತ್ತಿರುವುದು ಶ್ರೀ ವೈಷ್ಣವ ಚಿಹ್ನೆ, ಗಣಪ, ತಪಸ್ವಿನಿ, ಕಾಮಧೇನು ಕಾಳಿಂಗ ಮರ್ಧನ ಕೃಷ್ಣ, ಮತ್ಸ್ಯಾವತಾರ, ಆನೆಯ ಮೇಲೆ ನರ್ತಿಸುವ ಕೃಷ್ಣ, ಶಂಖನಾದ ಗೈಯುತ್ತಿರುವ ಕೃಷ್ಣ, ಆಮೆ ಕೃಷ್ಣ ನೃತ್ಯ, ಘೀಳಿಡುತ್ತಾ ಸೊಂಡಿಲೆತ್ತಿ ಓಡುತ್ತಿರುವ ಆನೆ, ಪ್ರಸನ್ನ ಆಂಜನೇಯ, ಸ್ತ್ರೀಮುಖ ಕಾಮಧೇನು, ನವಿಲು, ಕೀರ್ತಿಮುಖ ವಿಠಲ, ಈ ಮೂರ್ತಿ ಶಿಲ್ಪಗಳು ಈ ದೇವಾಲಯದ ಇನ್ನೂ ಮೆರಗನ್ನು ಹೆಚ್ಚಿಸಿವೆ. ಮುಖಮಂಟಪದ ಇಕ್ಕೆಲುಗಳಲ್ಲಿ ದೀಪಸ್ತಂಭಗಳೂ ಇವೆ. ಮೆಟ್ಟಿಲುಗಳ ಎರಡೂ ಕಡೆಗೆ ೨ ಆನೆಗಳ ಖಟಾಂಜನವಿದೆ. ಪ್ರವೇಶದ್ವಾರದಲ್ಲಿ ವೈಷ್ಣವ ದ್ವಾರಪಾಲಕರಿದ್ದು, ಪ್ರವೇಶ ಪಟ್ಟಿಕೆಯ ಮೇಲೆ ಗಜಲಕ್ಷ್ಮಿ ಪ್ರತಿಬಿಂಬಿತವಾಗಿದೆ. ಹೊರಭಾಗ ಅಧಿಷ್ಠಾನ, ಭಿತ್ತಿ ಒಳಗೊಂಡಿದ್ದು ಶಿಖರ ಶಿಥಿಲವಾಗಿದೆ. ಮುಂಭಾಗದಲ್ಲಿ ಸುಖನಾಸಿ ಗೋಚರವಾಗುತ್ತದೆ. ಹೊರಭಿತ್ತಿ ಜೀರ್ಣೋದ್ಧಾರವಾಗಿದೆ. ಒಟ್ಟಾರೆ ೧೬-೧೭ನೇ ಶತಮಾನಕ್ಕೆ ಸೇರಿದ ದೇವಾಲಯದ ಲಕ್ಷಣಗಳನ್ನು ಒಡಮೂಡಿಸುವಂತಿದೆ.

ಹೆಸರು	:	ಹನುಮಂತ ದೇವಾಲಯ
ಸ್ಥಳ	:	ಸಿಂಗಾರದ ಬಾಗಲಿನ ಬಲಭಾಗ, ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೬ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯದ ಉದ್ದ ೧೦ ಮೀ. ೬೦ಸೆಂ.ಮೀ. x ಅಗಲ ೬ ಮೀ ೭೦ ಸೆಂ.ಮೀ. ಇದೆ. ಈ ದೇವಾಲಯ ಗರ್ಭಗೃಹ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗುಡಿಯ ಮೇಲ್ಛಾವಣಿ ಅಷ್ಟಕೋನಾಕೃತಿ, ಪ್ರವೇಶದ್ವಾರದ ಇಕ್ಕೆಲುಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಈ ಕಟ್ಟಡದ ಪೂರ್ವಕ್ಕೆ ಮತ್ತೊಂದು ಗರ್ಭಗೃಹ ಇದೆ. ಇದರ ಮೇಲ್ಛಾವಣಿ ಅಷ್ಟಕೋನಾಕೃತಿ. ಮುಖಮಂಟಪ ನಾಲ್ಕು ಶಿಲಾಸ್ತಂಭಗಳಿದ್ದು, ಎರಡು ಸ್ತಂಭಗಳು ಚೌಕಾಕಾರವಾಗಿದ್ದು, ಈ ಸ್ತಂಭಗಳಲ್ಲಿ ಪುಷ್ಪ, ಭೈರವ, ಗಣಪತಿ, ಸಿಂಹ, ಕೋತಿ, ಬಾಲಕೃಷ್ಣ ಮೂರ್ತಿಶಿಲ್ಪಗಳು ಪ್ರತಿಬಿಂಬಿತವಾಗಿವೆ. ಉಳಿದ ಎರಡು ಸ್ತಂಭಗಳು ಚೌಕಾಕಾರವಾಗಿದ್ದು ಯಾವುದೇ ಅಲಂಕಾರತೆಗೆ ಪ್ರಾಧಾನ್ಯತೆ ನೀಡದೆ ಮೂಲರೂಪದಲ್ಲಿರುವುದೇ ಇದರ ಇನ್ನೊಂದು ವೈಶಿಷ್ಟ್ಯತೆ. ಈ ದೇವಾಲಯ ಪದ್ಮ ಬಂಧದ ಅಧಿಷ್ಠಾನ, ಭಿತ್ತಿ, ಶಿಖರ, ಕಪೋತ ಹೊಂದಿದೆ. ಭಿತ್ತಿಗೆ ಕಲ್ಲುವಿಸ್ತೃತವಾಗಿ ಹಾಸಲ್ಪಟ್ಟಿದೆ.

[illegible]

ಹೆಸರು : ಆಂಜನೇಯ ದೇವಾಲಯ

ಸ್ಥಳ : ವಾಮನಾಚಾರ್ ಮನೆಯ ಹತ್ತಿರ, ಕಾಮಲಾಪುರ

ಕಾಲ : ೧೬-೧೭ನೇ ಶತಮಾನ

ರಾಜವಂಶ/ಮಾಂಡಲೀಕರು : ವಿಜಯನಗರೋತ್ತರ

ದಿಕ್ಕು : ಪೂರ್ವಾಭಿಮುಖ

ವಸ್ತು : ಗ್ರ್ಯಾನೈಟ್ ಶಿಲೆ

ಈ ದೇವಾಲಯದ ಉದ್ದ ೬ ಮೀ. ೪೦ಸೆಂ.ಮೀ. x ಅಗಲ ೭ ಮೀ ೨೫ ಸೆಂ.ಮೀ. ಹೊಂದಿದೆ. ಈ ದೇವಾಲಯ ಪೂರ್ತಿಯಾಗಿ ಜೀರ್ಣೋದ್ಧಾರವಾಗಿದೆ. ಈ ದೇವಾಲಯ ಗರ್ಭಗುಡಿ ಮತ್ತು ಹೊರಮಂಟಪವನ್ನು ಮಾತ್ರ ಒಳಗೊಂಡಿದೆ. ಗರ್ಭಗುಡಿಯಲ್ಲಿ ಆಂಜನೇಯ ಮೂರ್ತಿಯಿದ್ದು, ಇದರ ಮೇಲ್ಛಾವಣಿ ಅಷ್ಟಕೋನಾಕೃತಿ ಇದರ ಮಧ್ಯೆ ಅರಳಿದ ಕಮಲ ಅಲಂಕೃತವಾಗಿದೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ವೈಷ್ಣವ ದ್ವಾರಪಾಲಕ ಲಲಾಟಬಿಂಬದಲ್ಲಿ ಉಗ್ರನರಸಿಂಹ ಪ್ರತಿಬಿಂಬಿತವಾಗಿದ್ದಾರೆ. ಹೊರ ಮಂಟಪದಲ್ಲಿ ೪ ಸ್ತಂಭಗಳು ಚೌಕಾಕಾರವಾಗಿದ್ದು, ಮೇಲ್ಭಾಗ ಚೌಕಾಕಾರದ ಬೋದಿಗೆಗಳನ್ನು ಒಳಗೊಂಡಿದೆ. ಮಂಟಪದ ಮಧ್ಯಭಾಗ ಷೋಡಶಕೋನಾಕೃತಿಯನ್ನು ಒಳಗೊಂಡಿದ್ದು, ಅರಳಿದ ಕಮಲವು ಇಲ್ಲಿ ಪ್ರತಿಬಿಂಬಿತವಾಗಿದೆ. ಈ ದೇವಾಲಯದ ಹೊರಭಾಗ ಅಧಿಷ್ಠಾನ ಭಿತ್ತಿ, ಕಪೋತ ಮತ್ತು ಶಿಖರವನ್ನು ಒಳಗೊಂಡಿದೆ. ಈ ದೇವಾಲಯದ ಮುಭಾಗ ಹೊಸದಾಗಿ ಕಬ್ಬಿಣದ ಸರಳುಗಳಿಂದ ಆವೃತ್ತವಾಗಿದ್ದರೂ ಎಡ-ಬಲ ಮತ್ತು ಹಿಂಭಾಗದ ಭಿತ್ತಿ ಮತ್ತು ಶಿಖರದ ಭಾಗ ಹೊಸದಾಗಿ ನಿರ್ಮಿತಿಯಾಗಿದೆ. ಕಪೋತ ಮಾತ್ರ ಮುಂಚಾಚಿದೆ.

ಹೆಸರು : ವಿಷ್ಣು ದೇವಾಲಯ

ಸ್ಥಳ : ಸಿಂಗಾರದ ಬಾಗಿಲಿನ ಸಮೀಪ, ಕಾಮಲಾಪುರ

ಕಾಲ : ೧೬ನೇ ಶತಮಾನ

ರಾಜವಂಶ/ಮಾಂಡಲೀಕ : ವಿಜಯನಗರ

ದಿಕ್ಕು : ಉತ್ತರಾಭಿಮುಖ

ವಸ್ತು : ಗ್ರ್ಯಾನೈಟ್ ಶಿಲೆ

ಪ್ರಕಟಣೆ : ವಸುಂಧರ ಫಿಲಿಯೋಜ, ೧೯೮೨, ಪು.೪೬-೪೮

ಈ ದೇವಾಲಯದ ಉದ್ದ ೧೫ ಮೀ. ೨೫ಸೆಂ.ಮೀ. x ಅಗಲ ೮ ಮೀ ೨೦ ಸೆಂ.ಮೀ. ಇದೆ. ಈ ದೇವಾಲಯದ ಒಳಭಾಗದ ಗರ್ಭಗುಡಿ ಅಂತರಾಳ, ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗುಡಿಯ ಮೇಲ್ಛಾವಣೆ ಅಷ್ಟಕೋನಾಕೃತಿಯನ್ನು ಒಳಗೊಂಡಿದೆ ಗರ್ಭಗುಡಿಯ ಮೇಲ್ಛಾವಣೆ ಅಷ್ಟಕೋನಾ ಕೃತಿಯನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಎತ್ತರದ ಪಾಣಿಪೀಠವಿದೆ. ಗರ್ಭಗುಡಿಯ ಪ್ರವೇಶ ದ್ವಾರ

ದಲ್ಲಿ ಇಕ್ಕೆಲುಗಳಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಪದ್ಮಾಸೀನಳಾಗಿದ್ದಾಳೆ. ಗರ್ಭಗುಡಿಯ ಮುಂದಿನ ಭಾಗ ಅಂತರಾಳ. ಇಲ್ಲಿ ಪ್ರವೇಶದ್ವಾರದಲ್ಲಿ ವೈಷ್ಣವ ದ್ವಾರಪಾಲಕರು ನಿಂತ ಭಂಗಿಯಲ್ಲಿದ್ದಾರೆ. ಸಭಾಮಂಟಪದ ಮೇಲ್ಛಾವಣಿ ಅಷ್ಟಕೋನಾಕೃತಿ ಮಧ್ಯ ಭುವನೇಶ್ವರಿಯನ್ನು ಒಳಗೊಂಡಿದೆ. ಸಭಾಮಂಟಪದಲ್ಲಿ ೪ ಚೌಕ ಶಿಲಾಸ್ತಂಭಗಳು ಬೋದಿಗೆಯನ್ನು ಒಳಗೊಂಡಿದೆ. ಅಂಜಲಿ ಮುದ್ರೆ ಭಕ್ತ, ಚಕ್ರ, ಸಿಂಹ, ಹನುಮಂತ, ಕೃಷ್ಣ, ತಪಸ್ವಿ, ಶ್ರೀವೈಷ್ಣವ ಚಿಹ್ನೆ, ಮತ್ಸವತಾರಿ, ಆಮೆ, ದೇವಿ, ಬಾತುಕೋಳಿ, ವೇಣುಗೋಪಾಲ, ವಿಷ್ಣುವಿನ ಅವತಾರಗಳು ಉಬ್ಬುಶಿಲ್ಪದ ಮೂಲಕ ಹೊರ ಹೊಮ್ಮಿದೆ. ಈ ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಕಪೋತ ಮತ್ತು ಶಿಖರವನ್ನು ಒಳಗೊಂಡಿದೆ. ಶಿಖರದ ಮುಂಭಾಗದಲ್ಲಿ ಸುಖನಾಸಿ ಇದ್ದು ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದೆ.

ಹೆಸರು	:	ಶ್ರೀರಾಮದೇವಾಲಯ
ಸ್ಥಳ	:	ಗುಂಡುರಾವ್ ದೇಸಾಯಿ ಸಮೀಪ, ಕಾಮಲಾಪುರ
ಕಾಲ	:	೧೬ನೇ ಶತಮಾನ
ರಾಜವಂಶ/ಮಾಂಡಲೀಕ	:	ವಿಜಯನಗರ
ದಿಕ್ಕು	:	ಪೂರ್ವಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯದ ಉದ್ದ ೧೧ ಮೀ. ೮೦ಸೆಂ.ಮೀ. x ಅಗಲ ೧೦ಮೀ ೫೦ ಸೆಂ.ಮೀ. ಹೊಂದಿದೆ. ಈ ದೇವಾಲಯ ಗರ್ಭಗುಡಿ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ರಾಮ, ಲಕ್ಷ್ಮಣ, ಸೀತೆಯರ ಮೂರ್ತಿಶಿಲ್ಪಗಳಿವೆ. ಗರ್ಭಗೃಹದ ಮೇಲ್ಛಾವಣಿ ಅಷ್ಟಕೋನಾಕೃತಿ ಇದರ ಮಧ್ಯೆ ತೆರಳಿದ ಕಮಲ ಅಲಂಕೃತವಾಗಿದೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಲಲಾಟಬಿಂಬದಲ್ಲಿ ಪುಷ್ಪವೊಂದು ಪ್ರತಿಬಿಂಬಿತವಾಗಿದೆ. ಪ್ರವೇಶದ್ವಾರ ಸಪಾಟವಾಗಿದ್ದು ಅಲಂಕಾರತೆಗೆ ಹೆಚ್ಚಿ ಪ್ರಾಧಾನ್ಯತೆ ನೀಡಿಲ್ಲ. ಮುಖಮಂಟಪದಲ್ಲಿ ಎಂಟು ಸ್ತಂಭಗಳಿದ್ದು ಮಧ್ಯೆದಲ್ಲಿ ಅಷ್ಟಪಟ್ಟಿಕೆಯನ್ನು ಒಳಗೊಂಡಿದೆ. ಹೂ, ನಾಗಬಂಧ, ಚಕ್ರ, ಗದೆ ಹಿಡಿದು ಕುಳಿತ ಆಂಜನೇಯ, ಕೀರ್ತಿಮುಖ, ಶ್ರೀ ವೈಷ್ಣವ ಚಿಹ್ನೆ, ಗಣಪತಿ, ಬಾಲಕೃಷ್ಣ, ಅಂಜಲಿ ಮುದ್ರೆ ಭಕ್ತ, ಕಾಳಿಂಗ ಮರ್ಧನಕೃಷ್ಣ, ಆಂಜನೇಯ, ಚಕ್ರ, ಶಂಖ ಊದುತ್ತಿರುವ ಮಹಿಳೆ, ಸ್ತ್ರೀಯರ ವಿವಿಧ ನೃತ್ಯ ಭಂಗಿ, ಅಂಜಲಿ ಮುದ್ರೆಯಲ್ಲಿದ್ದ ಗರುಡ, ಗಡ್ಡಧಾರಿ, ಶಂಖ, ಲಿಂಗಕ್ಕೆ ಹಾಲುಣಿಸುವ ಕಾಮಧೇನು ತಪಸ್ವಿ, ನಂದಿ, ಕಾಮದೇನು, ಗೋವರ್ಧನ ಗಿರಿಯನ್ನು ಎತ್ತಿದ ಕೃಷ್ಣ, ಬೆಣ್ಣೆ ಕೃಷ್ಣಮೂರ್ತಿ ಶಿಲ್ಪಗಳು ಸ್ತಂಭಗಳ ಮೇಲೆ ಪ್ರತಿಬಿಂಬಿತವಾಗಿದೆ. ದೇವಾಲಯದ ಮುಂದೆ ಗರುಡ ಸ್ತಂಭವಿದೆ. ಈ ದೇವಾಲಯದ ಹೊರಭಾಗ ಅಧಿಷ್ಠಾನ ತೆರೆದ ಮಂಟಪ, ಕಪೋತ, ಶಿಖರವನ್ನು ಒಳಗೊಂಡಿದೆ. ಕಪೋತದ ಮೇಲ್ಭಾಗ ಪೂರ್ತಿಯಾಗಿ ಜೀರ್ಣೋದ್ಧಾರ ವಾಗಿದೆ.

ಹೆಸರು	:	ವಿಷ್ಣುದೇವಾಲಯ
ಸ್ಥಳ	:	ವೇಣುಗೋಪಾಲ ದೇವಾಲಯದ ಎದುರಿಗೆ, ಕಾಮಲಾಪುರ
ಕಾಲ	:	೧೬-೧೭ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರೋತ್ತರ
ದಿಕ್ಕು	:	ಪಶ್ಚಿಮಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ

ಈ ದೇವಾಲಯದ ಉದ್ದ ೮ ಮೀ. ೪೫ಸೆಂ.ಮೀ. x ಅಗಲ ೧೫ಮೀ ೪೦ ಸೆಂ.ಮೀ. ಇದೆ. ಈ ದೇವಾಲಯ ವಿಷ್ಣು ದೇವಾಲಯವೆಂದು ಹೇಳಲ್ಪಟ್ಟಿದ್ದರೂ ಪ್ರಸ್ತುತ ರಾಯರ ದೇವಾಲಯವೆಂದು ಹೆಸರಾಗಿದೆ. ಈ ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಮೇಲ್ಛಾವಣಿಯಲ್ಲಿ ಅರಳಿದ ಪುಷ್ಪ ಅಲಂಕೃತವಾಗಿದೆ. ಗರ್ಭಗೃಹದ ಪ್ರವೇಶದ್ವಾರದಲ್ಲಿ ಸ್ತ್ರೀ ವೈಷ್ಣವ ಪಾಲಕರಿದ್ದಾರೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಪ್ರತಿಬಿಂಬಿತವಾಗಿದೆ. ನವರಂಗದ ಮಂಟಪದ ಪ್ರವೇಶದಲ್ಲಿ ವೈಷ್ಣವ ದ್ವಾರಪಾಲಕರಿದ್ದು ಪ್ರವೇಶದ ಬಾಗಿಲು ಅಲಂಕರಣೆ ಇಲ್ಲದೆ ಮೂಲರೂಪದಲ್ಲಿದೆ. ಇಲ್ಲಿ ಹತ್ತು ಸ್ತಂಭಗಳು ಚೌಕಾಕಾರದ ಬೋದಿಗೆಗಳನ್ನು ಒಳಗೊಂಡಿದೆ. ಒಂಭತ್ತು ಅಂಕಣಗಳಲ್ಲಿ ಹಾಸುಗಲ್ಲು ಹಾಸಲ್ಪಟ್ಟಿದೆ. ಮೇಲ್ಛಾವಣಿ ಭುವನೇಶ್ವರಿಯನ್ನು ಒಳಗೊಂಡಿದೆ. ಗಣಪತಿ, ವೇಣುಗೋಪಾಲ, ಎರಡು ಹಸುಗಳು, ಚತುರ್ಭುಜದೇವಿ, ನಂದಿ, ಕಾಮಧೇನು, ಧನುರ್ಧಾರಿ, ಹಸು, ಲಿಂಗಕ್ಕೆ ಹಾಲೆರೆಯುತ್ತಿರುವ ಕಾಮಧೇನು, ಪಾಣಿಪೀಠ, ವೀರಭದ್ರ, ದಕ್ಷಬ್ರಹ್ಮ, ಬೇಡರ ಕಣ್ಣಪ್ಪ, ವೀರಾಂಜನೇಯ, ಗರುಡ, ತಪಸ್ವಿ ಮೀನು ಚಕ್ರ, ನವಿಲು, ಆಮೆ, ವಿಷ್ಣು, ಸಿಂಹ, ಕಾರ್ತಿಕೆಯ ನವಿಲು, ಲಕ್ಷ್ಮೀನರಸಿಂಹ, ಬಾಲಕೃಷ್ಣ ಮುಂತಾದ ಮೂರ್ತಿಶಿಲ್ಪಗಳು ದೇವಾಲಯದ ಒಳಭಾಗದಲ್ಲಿ ಸ್ತಂಭದಲ್ಲಿ, ಪ್ರತಿಬಿಂಬಿತವಾಗಿದೆ. ಮುಖಮಂಟಪದಲ್ಲಿ ನಾಲ್ಕು ಸ್ತಂಭ, ತಳಭಾಗ, ಚೌಕಾಕಾರ, ಷೋಡಾಶ್ರಪಟ್ಟಿಕೆ ಮೇಲ್ಭಾಗ ೨ ಬೋದಿಗೆಗಳು ಇವೆ. ಪ್ರವೇಶದ್ವಾರದ ಮೇಲ್ಪಟ್ಟಿಕೆಯಲ್ಲಿ ಹೂವು ಚಿತ್ರಿತವಾಗಿದೆ. ಈ ದೇವಾಲಯ ಹೊರಭಾಗದಿಂದ ಪೂರ್ತಿಯಾಗಿ ನವೀಕರಿಸಲ್ಪಟ್ಟಿದೆ.

[illegible]

ಜೈನಪಂಥ ದೇವಾಲಯಗಳು

ಹೆಸರು	:	ಗಾಣಗಿತ್ತಿ ಕುಂತುನಾಥ ಜಿನ ಬಸದಿ
ಸ್ಥಳ	:	ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೩೮೨ ಕ್ರಿ.ಶ.
ರಾಜವಂಶ/ಮಾಂಡಲೀಕರು	:	ವಿಜಯನಗರ ಇಮ್ಮಡಿ ಬುಕ್ಕ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣೆ	:	ವಾಸುದೇವ ಬಡಿಗೇರ, ೧೯೯೯, ಪು.೧೨೨-೧೨೩

ಗಾಣಗಿತ್ತಿ ಜೈನ ಬಸದಿಯ ಮುಂದೊಂದು ದೀಪಸ್ತಂಭದ ಶಾಸನ ಇರುಗುಪ್ಪ ದಂಡನಾಯಕನು ವಿಜಯನಗರದಲ್ಲೇ ಈ ಕುಂತುನಾಥ ಜಿನಾಲಯವನ್ನು ಕಟ್ಟಿಸಿದನೆಂಬ ವಿಷಯವನ್ನು ತಿಳಿಸುತ್ತದೆ. ಈ ದೇವಾಲಯದ ಸಮೀಪದಲ್ಲೇ ಇನ್ನೊಂದು ಶಾಸನವು ಬಿದ್ದುದ್ದು ಪ್ರಸ್ತುತ ಈ ಶಾಸನವನ್ನು ಬಸದಿಯ ಒಳಗಡೆ ಇಡಲಾಗಿದೆ. ಈ ಬಸದಿಯಲ್ಲಿನ ಈ ಶಾಸನ ಮಹಾಮಂಡಲೇಶ್ವರ ಶ್ರೀರಂಗರಾಜ ರಾಮರಾಜ ಅಯ್ಯನು ಚಿಕ್ಕ ದೇವರ ಬಸದಿಯ ಶಾಂತಿನಾಥ ಸ್ವಾಮಿಗೆ ಅಂಗಡಿಯಿಂದ ಬರುವ ಆದಾಯವನ್ನು ದಾನಮಾಡಿದನೆಂದು ತಿಳಿಸುತ್ತದೆ. ಅಲ್ಲದೇ ವೀರನರಸಣ್ಣನು ಬಸದಿಗಾಗಿ ಕಟ್ಟಿಸಿದ ಅಂಗಡಿಯ ವಿಷಯವನ್ನು ಪ್ರಸ್ತುತ ಪಡಿಸುತ್ತದೆ. ಈ ಪ್ರಸ್ತುತ ಜೈನ ಬಸದಿ ಗಾಣಗಿತ್ತಿ ಬಸದಿ ಕುಂತುನಾಥ ಜಿನಾಲಯ ಎಂಥು ಕರೆಯಲ್ಪಡುತ್ತದೆ. ಬೀಮದ್ವಾರಕ್ಕೆ ಹೋಗುವ ದಾರಿಯಲ್ಲಿ ಈ ಬಸದಿ ಇದೆ. ಈ ಬಸದಿಯ ಒಳಭಾಗ ನವರಂಗ ಅಥವಾ ಸಭಾಮಂಟಪ ಹಾಗೂ ಎರಡು ಗರ್ಭಗೃಹಗಳನ್ನೊಳಗೊಂಡಿದೆ. ಇದು ದ್ವಿಕೂಟಾಚಲಕ್ಕೆ ಒಂದು ಮಾದರಿ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಗರ್ಭಗೃಹದ ಲಲಾಟಬಿಂಬದಲ್ಲಿ ತೀರ್ಥಂಕರ ಈ ಶಿಲ್ಪವಿದೆ. ಗರ್ಭಗೃಹದ ಬಾಗಿಲುವಾಡ ಹೂ-ಬಳ್ಳಿಯಿಂದ ಅಲಂಕರಣಗೊಂಡಿದೆ. ಇನ್ನೊಂದು ಗರ್ಭಗೃಹದ ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಪದ್ಮಾಸೀನಳಾಗಿದ್ದಾಳೆ. ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಸ್ತಂಭಗಳಿದ್ದು, ಈ ಸ್ತಂಭಗಳು ಚೌಕಾಕಾರದ ಬೋದಿಗೆಗಳನ್ನು ಒಳಗೊಂಡಿದೆ. ಅಂತರಂಗದ ಮೇಲ್ಛಾವಣಿ ವಿಸ್ತೃತವಾಗಿದೆ. ಇಲ್ಲಿ ಎರಡು ದೇವಕೋಷ್ಠಕಗಳಿವೆ. ಇಲ್ಲಿನ ಸಣ್ಣ ಗುಡಿ ಪೂರ್ವಭಿಮುಖವಾಗಿದ್ದು ಚೌಕಾಕಾರದಲ್ಲಿದೆ. ಸಭಾಮಂಟಪ ದೊಡ್ಡದಿದ್ದು, ಹದಿನಾರು ಸ್ತಂಭಗಳು ನಾಲ್ಕು ಸಾಲುಗಳಲ್ಲಿ ಪಸರಿಸಿವೆ. ನವರಂಗದ ಮೇಲ್ಛಾವಣೆಯಲ್ಲಿ ಭುವನೇಶ್ವರಿ ಇದ್ದು, ಅಷ್ಟಕೋನಾಕೃತಿಯಿಂದ ಅಲಂಕರಣಗೊಂಡಿದೆ. ಸಭಾಮಂಟಪದ ಎರಡೂ

[illegible]

[illegible]

[illegible]

ದಿಕ್ಕುಗಳಲ್ಲಿ ಚಿಕ್ಕ ಚಿಕ್ಕ ಎಂಟು ಗೂಡುಗಳಿವೆ. ಮುಖಮಂಟಪದ ಪ್ರವೇಶದ್ವಾರದಲ್ಲಿ, ತೀರ್ಥಂಕರ ಪದ್ಮಾಸನದಲ್ಲಿ ಕುಳಿತಿದ್ದಾನೆ. ದ್ವಾರದ ಇಕ್ಕೆಲುಗಳಲ್ಲ ಸ್ಥಾನಿಕ ಸಿಂಹ ಶಿಲ್ಪಗಳಿವೆ. ಮುಖ ಮಂಟಪದ ಸ್ತಂಭದ ಕೆಳಭಾಗ ಚೌಕಾಕಾರವಾಗಿದ್ದು, ಮೇಲ್ಭಾಗ ಷೋಡಾಶ್ರ ಪಟ್ಟಿಕೆಗಳನ್ನು ಒಳಗೊಂಡಿದೆ. ಮೇಲ್ಭಾಗದ ನಾಲ್ಕು ಬೋದಿಗೆಗಳು ಚೌಕಾಕಾರದಲ್ಲಿವೆ. ಮುಖಮಂಟಪದ ಎಡ-ಬಲ ಭಾಗದಲ್ಲಿ ಕಕ್ಷಾಸನವಿದೆ. ಕಕ್ಷಾಸನಕ್ಕೆ ನಾಲ್ಕು ಸ್ತಂಭಗಳು ಚೌಕಾಕಾರದ ಪೀಠಭಾಗ ಚೌಕಾಕಾರ ಷೋಡಾಶ್ರ ಪಟ್ಟಿಕೆ ಮತ್ತು ಅಮಾಲಕ ಪಟ್ಟಿಕೆಗಳನ್ನು ಒಳಗೊಂಡಿದೆ. ಸ್ತಂಭದ ಚೌಕಾಕಾರದಲ್ಲಿ ನವಿಲು ಶಿಲ್ಪಗಳಿಂದ ಅಲಂಕೃತವಾಗಿದೆ. ದಕ್ಷಿಣದ ಮುಖ ಮಂಟಪದಲ್ಲಿ ಇದೇ ಮಾದರಿಯ ಎರಡು ಸ್ತಂಭಗಳಿದ್ದು, ಇಕ್ಕೆಲುಗಳಲ್ಲಿ ಎತ್ತರವಾದ ಜಗತಿಗಳಿವೆ. ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ ಸಣ್ಣ ಕಪೋತ ಮತ್ತು ಶಿಖರವನ್ನು ಒಳಗೊಂಡಿದೆ. ಚೌಕಾಕಾರದ ಶಿಖರದ ಮಧ್ಯೆ ಅಂಡಾಕಾರದ ಗುಮ್ಮಟವಿದೆ. ಶಿಖರ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾಗಿದೆ. ಒಟ್ಟಾರೆ ಕಾಮಲಾಪುರ ಗ್ರಾಮದಲ್ಲಿನ ಈ ಬಸದಿ ಕ್ರಿ.ಶ.೧೫ನೇ ಶತಮಾನಕ್ಕೆ ಸೇರಿದ್ದು, ಇಲ್ಲಿನ ಮುಖಮಂಟಪ ನಂತರದ ಕಾಲದಲ್ಲಿ ಸೇರ್ಪಡಿಸಲ್ಪಟ್ಟಿದೆ. (ತಳವಾರ್ ಎಚ್.ಟಿ. ೧೯೯೬, ಪು.೧೩) ಈ ಬಸದಿಯ ಮುಂದೆ ಮಾನಸ್ತಂಭವಿರುವುದು ವಿಶೇಷ ಲಕ್ಷಣಗಳಲ್ಲಿ ಒಂದು. ಒಟ್ಟಾರೆ ಎರಡು ಗರ್ಭಗೃಹ ಸಭಾಮಂಟಪ ಮತ್ತು ಮುಖಮಂಟಪ, ಪ್ರವೇಶದ್ವಾರದಲ್ಲಿನ ಕುಡ್ಯಸ್ತಂಭ, ಲತಾ, ಲಲಾಟ ಬಿಂಬದಲ್ಲಿನ ಪದ್ಮಾಸನದಲ್ಲಿ ಸ್ಥಾನಿಕ ತೀರ್ಥಂಕರ, ವಿಶಾಲವಾದ ಮುಖಮಂಟಪ ಮತ್ತು ಕಕ್ಷಾಸನ ಇವು ಈ ಬಸದಿಯಲ್ಲಿನ ವೈಶಿಷ್ಟ್ಯತೆಯಾಗಿದೆ.

ಹೆಸರು	:	ಜೈನ ಬಸದಿ
ಸ್ಥಳ	:	ಕಾಮಲಾಪುರದ ಆನೆಲಾಯದ ಹಿಂಬದಿ, ಕಮಲಾಪುರ, ಹೊಸಪೇಟೆ ತಾ.
ಕಾಲ	:	ಕ್ರಿ.ಶ.೧೪೩೬
ರಾಜವಂಶ/ಮಾಂಡಲೀಕ	:	ವಿಜಯನಗರ
ದಿಕ್ಕು	:	ಉತ್ತರಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟನಾ	:	(ವಾಸುದೇವ ಬಡಿಗೇರ, ೧೯೯೯, ಪು.೧೨೨)

ಈ ಬಸದಿ ೪೩ಮೀ ೮೫.ಸೆಂ.ಮೀ ಉದ್ದ, ೨೭ಮೀ ೬೫.ಸೆಂ.ಮೀ ಅಗಲವನ್ನು ಹೊಂದಿದೆ. ಗಜಶಾಲೆಯ ಹಿಂಬದಿಯಲ್ಲಿ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ಕ್ರಮುಕ ಪರ್ಣಾಪನ ವೀಧಿ ಅಥವಾ ಪರ್ಣಪೂಗೀಫನಾ ವೀಧಿ(ಪಾನ್ ಸುಪಾರಿ ಬಜಾರ್) ಎಂದು ಉಲ್ಲೇಖಿಸಲ್ಪಟ್ಟ ಈ ಪ್ರದೇಶದಲ್ಲಿ ಅರ್ಧಮುಚ್ಚಿ ಹೋಗಿದ್ದ ನಾಲ್ಕು ದೇವಾಲಯಗಳನ್ನು ಬೆಳಕಿಗೆ ತರಲಾಯಿತು.(ಮಹಾದೇವ.ಸಿ ೨೦೦೨, ಪು.೧೩೦) ಇವುಗಳಲ್ಲಿ ಎರಡು ಜೈನ ಸಂಪ್ರದಾಯಕ್ಕೆ ಸಂಬಂಧಸಿದೆ. ಕ್ರಿ.ಶ.೧೪೨೬ರಲ್ಲಿ ಪಾನ್ ಸುಪಾರಿ

ಬಜಾರಿನ ಬೀದಿಯಲ್ಲಿ ಅರ್ಹತ್ ಪಾರ್ಶ್ವನಾಥನಿಗಾಗಿ ಕಲ್ಲಿನಲ್ಲಿ ಚೈತ್ಯಾಲಯ ಕಟ್ಟಿಸದನೆಂದು ಶಾಸನವೊಂದು ದಾಖಲಿಸುತ್ತದೆ.(SII, Vol.I, No.261) ಪ್ರಸ್ತುತ ಈ ಬಸದಿಯ ಒಳಭಾಗ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಿದೆ. ಗರ್ಭಗುಡಿಯ ಒಳಭಾಗದ ಮೇಲ್ಛಾವಣಿ ಅಷ್ಟಕೋನಾಕೃತಿಯಿಂದ ಕೂಡಿದ್ದು, ಅರಳಿದ ಹೂವಿನಿಂದ ಅಲಂಕೃತವಾಗಿದೆ. ಈ ಪ್ರವೇಶ ದ್ವಾರದ ಲಲಾಟಬಿಂಬದಲ್ಲಿ ಕುಳಿತ ತೀರ್ಥಕರ ಶಿಲ್ಪವಿದೆ. ಅಂತರಾಳ ಯಾವುದೇ ಅಲಂಕರಣತೆ ಇಲ್ಲದೆ ಸರಳವಾಗಿದೆ ಇಲ್ಲಿ ಮೂಲರೂಪಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಂತಿದೆ. ನವರಂಗದ ಮೇಲ್ಛಾವಣಿಯ ಮಧ್ಯದಲ್ಲಿ ಭುವನೇಶ್ವರಿ ಇದೆ. ಮಧ್ಯದ ನಾಲ್ಕು ಸ್ತಂಭಗಳು ನಾಶಿ, ಹಾರಿಕಾ, ವೃತ್ತ, ವೇತ್ರ, ಚೌಕಾಕಾರದ ಬೋದಿಗೆಗಳನ್ನು ಒಳಗೊಂಡಿದೆ ಎಡಬಲ ಬಾಗದಲ್ಲ ಎತ್ತರವಾದ ಪೀಠ ಕಟ್ಟೆಗಳಿದ್ದು, ಬಹುಶಃ ಇದು ೨೪ ತೀರ್ಥಂಕರರನ್ನು ಇಡಲು ಮಾಡಿದ ಪೀಠವಿರಬೇಕು. ಪಶ್ಚಿಮ ದಿಕ್ಕಿಗೆ ಇನ್ನೊಂದು ಗರ್ಭಗೃಹವಿದ್ದು, ಪೂರ್ವದಿಕ್ಕಿಗೆ ಪ್ರವೇಶದ್ವಾರವಿದೆ. ಎಡಬಲಭಾಗದಲ್ಲಿ ದ್ವಾರಪಾಲಕರ ಚಿತ್ರಣವಿದೆ. ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಪದ್ಮಾಸನದಲ್ಲಿದ್ದ ತೀರ್ಥಕರ ಎಡಬಲಭಾಗದಲ್ಲಿ ಆನೆಗಳಿರುವ ಉಬ್ಬುಶಿಲ್ಪಗಳಿರುವುದು ವಿಶೇಷ ಲಕ್ಷಣಗಳಲ್ಲಿ ಒಂದು. ದ್ವಾರದ ಇಕ್ಕೆಲುಗಳಲ್ಲಿ ಸಿಂಹ, ಆನೆಗಳ ಚಿತ್ರಣ ಹೂಬಳ್ಳಿಗಳಿಂದ ಅಲಂಕೃತವಾಗಿದೆ. ಮುಖಮಂಟಪದಲ್ಲಿ ನಾಲ್ಕು ಸ್ತಂಭಗಳಿದ್ದು, ಚೌಕಾಕಾರ, ಷೋಡಾಶ್ರ, ಅಮಾಲಕಗಳನ್ನು ಒಳಗೊಂಡಿದೆ. ಮುಖ ಮಂಟಪಕ್ಕೆ ಎದುರುಗಡೆ ಪ್ರವೇಶದ್ವಾರವಿದ್ದು, ಕಕ್ಷಾಸನವೂ ಇದೆ. ಹೊರಭಾಗ ಅಧಿಷ್ಠಾನ, ಭಿತ್ತಿ ಮ್ತು ಶಿಖರವನ್ನು ಒಳಗೊಂಡಿದೆ. ಬಹುಮಟ್ಟಿಗೆ ಈ ಜಿನಾಲಯ ಹೇಮಕೂಟ ದೇವಾಲಯವನ್ನು ಹೋಲುತ್ತದೆ.(ಮಹಾದೇವ.ಸಿ, ೨೦೦೨, ಪು.೧೩೧)

ಹೆಸರು	:	ಜೈನ ಬಸದಿ
ಸ್ಥಳ	:	ಗಜಶಾಲೆಯ ಹಿಂದೆ ಬಾಳೆ ತೋಟದಲ್ಲಿ ಕಾಮಲಾಪುರ, ಹೊಸಪೇಟೆ ತಾ.
ಕಾಲ	:	೧೫ನೇ ಶತಮಾನ
ರಾಜವಂಶ/ಮಾಂಡಲೀಕರು	:	ವಿಜಯನಗರ
ದಿಕ್ಕು	:	ದಕ್ಷಿಣಾಭಿಮುಖ
ವಸ್ತು	:	ಗ್ರಾನೈಟ್ ಶಿಲೆ
ಪ್ರಕಟಣ	:	(ವಸುಂಧರಾ ಫಿಲಿಯೋಜ, ೧೯೮೨, ಪು.೪೭-೪೮)

ಈ ದೇವಾಲಯದ ಉದ್ದ ೯ಮೀ ೮೦ಸೆಂ.ಮೀ, ಅಗಲ ೨೧ಮೀ ೬೦ಸೆಂ.ಮೀ ಹೊಂದಿದೆ. ಈ ಬಸದಿ ಪ್ರಸ್ತುತ ಶಿಥಿಲವಾಗಿದೆ. ಹೆಚ್ಚಿನ ಅಲಂಕಾರತೆಗೆ ಇಲ್ಲಿ ಪ್ರಾಧ್ಯಾನತೆ ಕೊಡದೆ ಇರುವುದು ಈ ಬಸದಿಯ ವೈಶಿಷ್ಟ್ಯಗಳಲ್ಲಿ ಒಂದು. ಒಳಭಾಗದ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದ ಮೇಲ್ಛಾವಣಿ ಅಷ್ಟಕೋನಾಕೃತಿ ಮಧ್ಯದಲ್ಲಿ ಅರಳಿದ

[illegible]

ಕಮಲವಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಪ್ರವೇಶದ್ವಾರ ಯಾವುದೇ ಕೆತ್ತನೆ ಇರದೇ ಸಪಾಟಾಗಿದೆ. ಅಂತರಾಳದ ಪ್ರವೇಶದ್ವಾರ ಹಾಳಾಗಿದ್ದು, ಪ್ರವೇಶದ್ವಾರದ ಲಲಾಟಬಿಂಬದಲ್ಲಿ ಪದ್ಮಾಸೀನ ಜಿನ ಚಿತ್ರಣ ಸುತ್ತಲೂ ಹೂ-ಬಳ್ಳಿಯ ಚಿತ್ರಣವಿದೆ. ಇಲ್ಲಿನ ಪ್ರದಕ್ಷಿಣಾ ಪಥ ಸಾಂಧಾರ ದೇವಾಲಯವನ್ನು ನೆನಪಿಗೆ ತರುವಂತಿದೆ. ಸಭಾಮಂಟಪದ ಮೇಲ್ಛಾವಣಿ ಭುವನೇಶ್ವರಿಯನ್ನು ಒಳಗೊಂಡಿದ್ದು, ಅರಳಿದ ಕಮಲವಿದೆ. ಚೌಕಾಕಾರದ ಸ್ತಂಭ, ಸ್ತಂಭಗಳ ಮೇಲೆ ಬೋದಿಗೆ ಇದೆ. ಸಭಾಮಂಟಪವನ್ನು ಪ್ರವೇಶಿಸುವ ದ್ವಾರದ ಲಲಾಟ ಬಿಂಬದಲ್ಲಿ ಪದ್ಮಾಸನದಲ್ಲಿದ್ದ ಜಿನನ ಚಿತ್ರಣವಿದೆ. ಮುಂಭಾಗದ ನಾಲ್ಕು ಸ್ತಂಭಗಳಲ್ಲಿ ಎರಡು ಸ್ತಂಭಗಳು, ಪೀಠ, ಚೌಕಾಕಾರ ಮತ್ತು ಬೋಧಿಗೆಯನ್ನು ಒಳಗೊಂಡಿದೆ. ಈ ಬಸದಿ ಶಿಥಿಲವಾಗಿದ್ದು, ಪ್ರಸ್ತುತ ಅಧಿಷ್ಠಾನ ಮತ್ತು ಮೇಲ್ಛಾವಣಿ ಮಾತ್ರ ಕಾಣಸಿಗುತ್ತದೆ.

ವೈಶಿಷ್ಟತೆ

ಕಾಮಲಾಪುರ ಗ್ರಾಮದ ದೇವಾಲಯಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ತುಲನಾತ್ಮಕ ಅಧ್ಯಯನ ಮಾಡಿ ನೋಡಿದ್ದಲ್ಲಿ ಹೆಚ್ಚಿನ ಮಟ್ಟಿಗೆ ವೈಷ್ಣವ ದೇವಾಲಯಗಳಾಗಿವೆ. ಇಲ್ಲಿ ಶೈವ ದೇವಾಲಯಗಳು ಅಷ್ಟೇ ಮಹತ್ವದು. ಗಾಣಪತ್ಯ ಮತ್ತು ಶಕ್ತಿ ಪಂಥದೇವಾಲಯಗಳು ಇಲ್ಲಿ ಸುತ್ತಮುತ್ತ ಪರಿಸರದಲ್ಲಿ ಪಸರಿಸಿವೆ. ಕಾಮಲಾಪುರ ಗ್ರಾಮದಲ್ಲಿನ ಲಭ್ಯವಾದ ದೇವಾಲಯಗಳು ವಿಜಯನಗರ, ವಿಜಯನಗರೋತ್ತರ ಕಾಲಕ್ಕೆ ಸೇರಿವೆ. ದೇವಾಲಯ, ದೇವಾಲಯದ ವಾಸ್ತು ಶೈಲಿಯಲ್ಲಿ ವೈವಿಧ್ಯತೆ ಇದೆ. ಒಟ್ಟಾರೆ ಈ ದೇವಾಲಯಗಳ ಅಧ್ಯಯನವನ್ನು ಮಾಡಿ ನೋಡಿದರೆ ಈ ದೇವಾಲಯಗಳ ವಾಸ್ತುಶೈಲಿ ವೈಶಿಷ್ಟ್ಯತೆಯನ್ನು ಈ ಕೆಳಗೆ ಹೇಳಲಾಗಿದೆ. ಜೈನ ಪಂಥದ ಬಸದಿಗಳು ಕಡಿಮೆ ಇದ್ದರೂ ಇವುಗಳನ್ನು ಕಡೆಗಣಿಸುವಂತಿಲ್ಲ.

ಒಟ್ಟಾರೆ ಆನೇಕ ಧಾರ್ಮಿಕ ವಿಧಿಗಳನ್ನು ದೇವಾಲಯದಲ್ಲಿಯೇ ನೆರವೇರಿಸಬೇಕಾಗಿದುದರಿಂದ ದೇವಾಲಯದ ತಲವಿನ್ಯಾಸ ಹೆಚ್ಚು ವಿಸ್ತಾರವಾಗಿರುತ್ತದೆ. ಸಾಮಾನ್ಯವಾಗಿ ಗರ್ಭಗೃಹ, ಪ್ರದಕ್ಷಿಣಾಪಥ, ಸುಕನಾಸಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿರುವುದು ಸಾಮಾನ್ಯ ಲಕ್ಷಣ. ವಿಜಯನಗರ ಕಾಲದಲ್ಲಿ ನವರಂಗಕ್ಕೆ ಮೂರು ಪ್ರವೇಶದ್ವಾರಗಳಿದ್ದು ಪಕ್ಕದಲ್ಲಿರುವ ಪ್ರವೇಶ ದ್ವಾರಗಳು ನವರಂಗವನ್ನು ಚಿಕ್ಕ ದ್ವಾರಮಂಟಪಗಳಿಗೆ ಕೂಡಿಸಿರುತ್ತದೆ. ದೇವಾಲಯದ ಸುತ್ತಲೂ ನಿರ್ದಿಷ್ಟಪಡಿಸಿದ ದಿಕ್ಕಿನಲ್ಲಿ ಪರಿವಾರ ದೇವತೆಗಳಿಗಾಗಿ ಚಿಕ್ಕಗುಡಿಗಳಿರುತ್ತವೆ. ವಿಶಾಲವಾದ ಪ್ರಕಾರದ ಸುತ್ತಲೂ ಎತ್ತರವಾದ ಗೋಡೆಯಿರುತ್ತದೆ. ಈ ಪ್ರವೇಶ ಮಂಟಪಗಳ ಮೇಲೆ ಎತ್ತರವಾದ ಗೋಪುರಗಳನ್ನು ಕಟ್ಟಿರುತ್ತಾರೆ. ಅಲ್ಲದೆ ಪ್ರಕಾರದಲ್ಲಿ ಕಲ್ಯಾಣಮಂಟಪ ಉತ್ಸವ ಮಂಟಪಗಳಿರುತ್ತವೆ. ಉದಾ.ಪಟ್ಟಾಭಿರಾಮ ದೇವಾಲಯ, ಹಜಾರರಾಮ ದೇವಾಲಯ, ದೇವಾಲಯದ ಆವರಣದಲ್ಲಿ ಉಯ್ಯಾಲೆ ಮಂಟಪ, ವಸಂತಮಂಟಪ, ವಾಹನ ಮಂಟಪ, ಕನ್ನಡಿ ಮಂಟಪ ಮತ್ತು ರಂಗಮಂಟಪಗಳನ್ನು ವಿಜಯನಗರ

ಕಾಲದಲ್ಲಾದ ವೈಶಿಷ್ಟತೆ. ಕ್ರಿ.ಶ.೧೫೩೧ರಲ್ಲಿ ಕೃಷ್ಣದೇವರಾಯನ ಅಧಿಕಾರಿಯೊಬ್ಬನು ಹಜಾರರಾಮನ ದೇವಾಲಯದಲ್ಲಿ ಉತ್ಸವ ಮಂಟಪವನ್ನು ಕಟ್ಟಿಸಿದ(S.I.I. IV, Vol.I, No.250). ಇಂತಹ ತಲವಿನ್ಯಾಸದ ಮೇಲೆ ಕಟ್ಟಡ ಆದರಲ್ಲೂ ಪರಿವಾರ ದೇವತಾ ಗುಡಿಗಳನ್ನು ಹೊಂದಿದ ದೇವಾಲಯಗಳು ತಮಿಳುನಾಡಿನಲ್ಲಿ ಸಾಕಷ್ಟಿದ್ದು. ಈ ದೇವಾಲಯಗಳೇ ಹಂಪೆ ವಿಜಯನಗರದ ದೇವಾಲಯಗಳ ತಲವಿನ್ಯಾಸದ ಮೇಲೆ ಪ್ರಭಾವ ಬೀರಿದವು. ಇಲ್ಲವೇ ವಿಸ್ತರಣೆಗೆ ಕಾರಣವೆಂದು ಹೇಳಲೂಬಹುದು. ದೊಡ್ಡ ಗಾತ್ರದ ದೇವಾಲಯಗಳಲ್ಲಿ ಕಾಣುಬರುವ ಲಕ್ಷಣಗಳಲ್ಲಿ ಪ್ರದಕ್ಷಿಣಾಪಥ ಒಂದು ಗರ್ಭಗೃಹದ ಸುತ್ತಲೂ ಕಟ್ಟಿರುವ ಈ ಪಥ ಲಕ್ಷಣದಲ್ಲಿ ೧೪ನೇ ಶತಮಾನದ ಹಿಂದೆ ಕರ್ನಾಟಕದ ದೇವಾಲಯಗಳಲ್ಲಿ ಕಂಡುಬರುವ ಪ್ರದಕ್ಷಿಣಾಪಥಕ್ಕಿಂತ ತೀರಾಭಿನ್ನವಾಗಿದೆ. ಇಂತಹ ಪ್ರದಕ್ಷಿಣಾಪಥವನ್ನು ಬಾಲಕೃಷ್ಣ ವಿಠಲ ಮುಂತಾದ ದೇವಾಲಯಗಳಲ್ಲಿ ನೋಡಬಹುದು. ವಿಜನಯಗರ ಪೂರ್ವದ ಪ್ರದಕ್ಷಿಣಾಪಥ ಗರ್ಭಗೃಹದ ಸುತ್ತಲೂ ಇದ್ದು. ಇಲ್ಲಿ ಗರ್ಭಗೃಹದ ನೆಲಗಟ್ಟು ಒಂದಕ್ಕೊಂದು ಸಮನಾಗಿವೆ. ವಿಜಯನಗರದ ಪ್ರದಕ್ಷಿಣಾಪಥ ಗರ್ಭಗೃಹದ ನೆಲಗಟ್ಟಿಗಿಂತ ಕೆಳಮಟ್ಟದಲ್ಲಿದ್ದು ಸೋಪಾನವೊದರ ಮೂಲಕ ಕೆಳಗಿಳಿಯುವ ವ್ಯವಸ್ಥೆ ಇರುತ್ತದೆ. ಅಲ್ಲದೆ ಗರ್ಭಗೃಹಕ್ಕೂ ಮತ್ತು ಪ್ರದಕ್ಷಿಣಾಪಥಕ್ಕೂ ಮಧ್ಯ ಸುಮಾರು ೨ ಅಡಿ ಖಾಲಿ ಜಾಗ ಇದೆ. ವಿಜಯನಗರ ಕಾಲಕ್ಕಿಂತ ಮುಂಚಿನ ಪ್ರದಕ್ಷಿಣಾಪಥ ಗರ್ಭಗೃಹದ ಗೋಡೆಗೆ ಹೊಂದಿಕೊಂಡಿರುವುದರಿಂದ ವಿಜಯನಗರ ಕಾಲದ ಪ್ರದಕ್ಷಿಣಾಪಥ ಸಂಪೂರ್ಣವಾಗಿ ಮುಚ್ಚಲ್ಪಟ್ಟಿರುತ್ತದೆ. ಕೆಲವು ದೇವಾಲಯಗಳಲ್ಲಿ ಬೆಳಕು, ಗಾಳಿ, ಬರಲು ಜಾಲಂಧ್ರಗಳನ್ನು ಇರಿಸಲಾಗಿದೆ.

ವಿಜಯನಗರ ದೇವಾಲಯಗಳ ಗರ್ಭಗೃಹ ಸಾಮಾನ್ಯವಾಗಿ ಚೌಕಾಕಾರವಾಗಿರುತ್ತದೆ. ಆದರೆ ನಿದ್ರಿಸುತ್ತಿರುವ ಅಥವಾ ಒರಗಿರುವ ಭಂಗಿಯಲ್ಲಿರುವ ದೇವತೆಗಾಗಿ ದೇವಾಲಯವನ್ನು ಕಟ್ಟಿಸಿದಾಗ ಮಾತ್ರ ಗರ್ಭಗೃಹ ಸಮಚತುಷ್ಕೋಣಾಕಾರದಲ್ಲಿರುತ್ತದೆ. ವಿಜಯನಗರ ದೇವಾಲಯಗಳು ಎತ್ತರವಾದ ಅಧಿಷ್ಠಾನವನ್ನು ಹೊಂದಿರುತ್ತವೆ. ಹಜರರಾಮ ದೇವಾಲಯ ಮತ್ತು ಪಟ್ಟಾಭಿರಾಮ ದೇವಾಲಯಗಳಲ್ಲಿಯ ಅಧಿಷ್ಠಾನ ವಿವಿಧ ಬಗೆಯ ಭಾಗಗಳನ್ನು ಹೊಂದಿದ್ದು ಕೈ ಬಳೆಯಾಕಾರದ ಭಾಗ ಎದ್ದು ಕಾಣುತ್ತದೆ. ಇನ್ನೆರಡು ವಿಶಿಷ್ಟವಾದ ಅಧಿಷ್ಠಾನ ಭಾಗಗಳೆಂದರೆ ಬಹುಮುಖ ಕುಮುದ ಅಥಾ ತ್ರಿಪಟ್ಟ ಕುಮುದ ಮತ್ತು ಪದ್ಮಭಾಗ. ಅಧಿಷ್ಠಾನದ ಮೇಲ್ಭಾಗದಲ್ಲಿ ಕಪೋತ ಭಾಗ ಸಾಮಾನ್ಯವಾಗಿ ಇಲ್ಲಿ ಕಂಡುಬರುತ್ತದೆ. ಚಿಕ್ಕ ಆಕಾರದ ದೇವಾಲಯಗಳಲ್ಲಿ ಗೋಡೆಗಳು ಸರಳವಾಗಿದ್ದರೆ ದೊಡ್ಡ ದೇವಾಲಯಗಳಲ್ಲಿ ಗೋಡೆಗಳು ಹೆಚ್ಚು ಅಲಂಕೃತವಾಗಿರುತ್ತವೆ. ಇಲ್ಲಿ ಹೊರಗೋಡೆಗಳನ್ನು ಸಮಮಟ್ಟದಲ್ಲಿ ವಿಂಗಡಿಸಿರುತ್ತಾರೆ. ಗೋಡೆಯ ಕೆಳಗಿನ ಭಾಗದಲ್ಲಿ ಅಧಿಷ್ಠಾನದಲ್ಲಿ ಕಂಡುಬರುವ ವಿವಿಧ ಭಾಗಗಳನ್ನು ಪುನರಾವರ್ತಿಸಿರುವುದನ್ನು ಕಾಣಬಹುದು. ಇಂತಹ ರಚನೆ ಇದು ಪಟ್ಟಾಭಿರಾಮ ಮುಂತಾದ ದೇವಾಲಯದಲ್ಲಿ ಕಂಡುಬರುತ್ತದೆ. ಇದರ ಮೇಲಿನ ಭಾಗದಲ್ಲಿ ಕೋಷ್ಠಗಳು, ಅರ್ಧಕಂಬಗಳು, ಪಂಜರಗಳು, ತೋರಣಗಳು ಮತ್ತು

ಮೂರ್ತಿಶಿಲ್ಪಗಳನ್ನು ಅಳವಡಿಸಿರುತ್ತಾರೆ. ಇವುಗಳಲ್ಲಿಯೇ ಅತಿ ವಿಶಿಷ್ಟವಾದುದೆಂದರೆ ಕುಂಭ ಪಂಜರ. ಕುಂಭ ಪಂಜರ ದ್ರಾವಿಡ ದೇವಾಲಯಗಳಲ್ಲಿ ಕಂಡುಬರುವ ವಿಶಿಷ್ಟ ಅಲಂಕರಣ. ಹಂಪೆಯ ದೇವಾಲಯಗಳಲ್ಲಿ ಇಂಥ ವಿವಿಧ ಬಗೆಯ ಕುಂಭಗಳನ್ನು ನೋಡಬಹುದು. ಕೆಲವು ಸಾದಾ ಕೆತ್ತನೆ ಇದ್ದರೆ ಕೆಲವು ಹೆಚ್ಚು ಅಲಂಕೃತವಾಗಿವೆ. ಈ ಕುಂಭಗಳ ಮೇಲ್ಭಾಗದಿಂದ ಅರ್ಧಕಂಬಗಳು ಉದ್ಭವಿಸಿ ಮೇಲಕ್ಕೆ ಹೋಗಿವೆ. ಅರ್ಧಕಂಬದ ತುದಿಯಲ್ಲಿ ಎಲೆಗಳ ಗೊಂಚಲನ್ನು ಬಿಡಿಸಲಾಗಿದೆ. ಹಿಂದೂ ದೇವಾಲಯಗಳ ಆರಂಭ ಕಾಲದಲ್ಲಿ ಕುಂಭವು ಲಕ್ಷ್ಮೀ ಅಥವಾ ಸಿರಿ ಸಂಪದದ ಚಿಹ್ನೆಯಾಗಿತ್ತು. ಬರಬರುತ್ತ ಅದು ಒಂದು ಅಲಂಕಾರವಾಗಿ ಪರಿಣಮಿಸಿತು. ವಿಜಯನಗರದ ದೇವಾಲಯಗಳಲ್ಲಿ ಇದನ್ನು ಹೆಚ್ಚಾಗಿ ಗೋಡೆಗಳ ಅಲಂಕರಣೆಗೆ ಉಪಯೋಗಿಸಲಾಗಿದೆ (ರಾಜಶೇಖರ ಎಸ್., ೧೯೮೮, ಪು.೧೩೮).

ಗೋಡೆಗಳ ಅಲಂಕಾರದಲ್ಲಿ ಮೂರ್ತಿಶಿಲ್ಪಗಳನ್ನು ಕೂಡ ಕೆತ್ತಿರುವುದು ಕಂಡುಬರುತ್ತದೆ. ಈ ಶಿಲ್ಪಗಳು ಪುರಾಣಗಳ ಮತ್ತು ಮಹಾಕಾವ್ಯಗಳಲ್ಲಿ ಬರುವ ಪ್ರಸಂಗಗಳನ್ನು ಪ್ರತಿನಿಧಿಸುತ್ತವೆ. ಉದಾ. ಹಜಾರರಾಮ ದೇವಾಲಯದ ಹೊರಗೋಡೆಗಳ ಮೇಲೆ ರಾಮಾಯಣಕ್ಕೆ ಸಂಬಂಧಿಸಿದ ದೃಶ್ಯಗಳಿವೆ. ಚಿಕ್ಕ ದೇವಾಲಯಗಳಲ್ಲಿ ಮತ್ತು ದೊಡ್ಡ ದೇವಾಲಯಗಳ ನವರಂಗಗಳಲ್ಲಿ ಒಂದು ಪ್ರಕಾರದ ಕಂಬಗಳಿವೆ. ಇಂತಹ ಕಂಬಗಳು ಕಾಂಡಭಾಗದಲ್ಲಿ ಮೂರು ಚಚ್ಚೌಕ ಭಾಗಗಳಿದ್ದು ಪ್ರತಿಯೊಂದರ ಮಧ್ಯೆ ಎಂಟು ಹದಿನಾರ ಮುಖದ ಭಾಗಗಳಿವೆ. ಈ ಕಂಬಗಳ ಕೆಳಗಿನ ಚಚ್ಚೌಕ ಭಾಗದ ಮೇಲ್ಭಾಗದಲ್ಲಿ ನಾಗಬಂಧಗಳಿವೆ. ಈ ನಾಗಬಂಧಗಳು ದ್ರಾವಿಡ ಶೈಲಿಯ ಪ್ರಭಾವವನ್ನು ಸೂಚಿಸುತ್ತವೆ. ಮೂರು ಚಚ್ಚೌಕಾರದ ನಾಲ್ಕು ಮುಖಗಳಲ್ಲಿ ಮೂರ್ತಿಶಿಲ್ಪಗಳಿವೆ. ಕೆಲವು ದೇವಾಲಯಗಳಲ್ಲಿ ಇಂತಹ ಕಂಬಗಳಲ್ಲಿ ಚಚ್ಚೌಕದ ಭಾಗದಲ್ಲಿ ಯಾವುದೇ ಮೂರ್ತಿಗಳಿಲ್ಲದಿರುವ ಉದಾಹರಣೆಗಳೂ ಉಂಟು. ಸಾಮಾನ್ಯವಾಗಿ ಈ ಭಾಗದಲ್ಲಿ ಕಂಡುಬರುವ ಮೂರ್ತಿಶಿಲ್ಪಗಳೆಂದರೆ ಕಾಳಿಂಗ ಮರ್ಧನ, ಕೃಷ್ಣ, ಬಾಲಕೃಷ್ಣ, ಬೇಡರ ಕಣ್ಣಪ್ಪ, ವಿಷ್ಣುವಿನ ದಶಾವತಾರಗಳು, ಶಿಲಿಂಗ, ಗರುಡ, ಹನುಮ, ನರಸಿಂಹ, ಕೋಲಾಟ ಆಡುವವರು, ಮದ್ದಳೆ ಬಾರಿಸುವವರು ಮತ್ತು ನೃತ್ಯಾಗಾರರು ಕಂಬದ ಮೇಲ್ಭಾಗದಲ್ಲಿ ಪುಷ್ಪ ಬೋದುಗೆಗಳು ಇರುತ್ತವೆ. ಹೆಚ್ಚಿನ ಮಟ್ಟಿಗೆ ವೈಷ್ಣವ ಮೂರ್ತಿಶಿಲ್ಪಗಳು ಪ್ರತಿಬಿಂಬಿತವಾಗಿವೆ.

ಎರಡನೇ ಪ್ರಕಾರದ ಕಂಬಗಳು ವಿನ್ಯಾಸದಲ್ಲಿ ಕೆತ್ತನೆಯಲ್ಲಿ ರುವಾರಿಯ ನೈಪುಣ್ಯತೆಗೆ ಸಾಕ್ಷಿಯಾಗಿವೆ. ಈ ಸ್ತಂಭಗಳು ಗಾತ್ರದಲ್ಲಿ ದೊಡ್ಡವು. ಸ್ತಂಭಗಳಲ್ಲಿ ನೇರವಾಗಿ ಎರಡು ಭಾಗಗಳಾಗಿ ವಿಂಗಡಿಸಿ ಮೊದಲನೆಯ ಭಾಗದಲ್ಲಿ ಚಚ್ಚೌಕ ಪ್ರಧಾನವಾದ ಮೇಲೆ ಹೇಳಿರುವ ಕಂಬಗಳ ವಿನ್ಯಾಸವಿದ್ದು ಇನ್ನೊಂದು ನೇರ ಭಾಗವನ್ನು ಕಾಲೆತ್ತಿನಿಂತ ಯಾಳಿಯಾಕಾರವಾಗಿಯೂ, ಕುದುರೆಯಾಕಾರವಾಗಿಯೂ ಸಿಂಹದಾಕಾರವಾಗಿಯೂ ಕೆತ್ತಿರುತ್ತಾರೆ. ಕೆಲವು ಸಲ ಈ ರೀತಿ ಹಿಂಗಾಲೂ ಮೇಲೆ ನಿಂತ ಪ್ರಾಣಿಗಳ

ಬದಲು ಚಿಕ್ಕ ಚಿಕ್ಕ ಪ್ರಮಾಣದ (ಎರಡು, ನಾಲ್ಕು, ಎಂಟು) ಉಪಕಂಬಗಳನ್ನು ಕೆತ್ತಿರುತ್ತಾರೆ. ಉದಾ. ಪಟ್ಟಾಭಿರಾಮ ದೇವಾಲಯ ಮುಖಮಂಟಪದಲ್ಲಿ ಇಂತಹ ಉಪಕಂಬಗಳನ್ನು ಕಾಣಬಹುದು. ಇಲ್ಲಿಯ ಸ್ತಂಭಗಳನ್ನು ನಿಂತ ಸಿಂಹಗಳು ಹೊತ್ತು ನಿಂತಿವೆ. ಇಲ್ಲಿಯ ಕೆಲವೊಂದು ಸ್ತಂಬಗಳಿಗೂ ಪುಷ್ಪ ಬೋದಗೆಗಳು ಇವೆ. ಇಂತಹ ಕಂಬಗಳು ನಿಸ್ಸಂಶಯವಾಗಿ ದ್ರಾವಿಡ ದೇವಾಲಯಗಳ ಕಂಬಗಳಿಂದ ಪ್ರಭಾವಿತವಾಗಿವೆ. ಪಲ್ಲವರ ಕಾಲದಿಂದಲೂ ಕಾಲೆತ್ತಿನಿಂತ ಸಿಂಹಗಳನ್ನೊಳಗೊಂಡ ಕಂಬಗಳು ರೂಢಿಯಲ್ಲಿದ್ದವು. ಮುಂದೆ ಚೋಳ ಪಾಂಡ್ಯರ ಕಾಲದಲ್ಲಿ ಈ ಕಂಬಗಳ ವಿನ್ಯಾಸದಲ್ಲಿ ಬದಲಾವಣೆ ಮತ್ತು ಪ್ರಗತಿಯುಂಟಾಗಿ ಕೊನೆಗೆ ವಿಜಯನಗರ ಕಾಲದಲ್ಲಿ ಈ ಬದಲಾವಣೆಯ ತುತ್ತ ತುದಿಯನ್ನು ಕಾಣುತ್ತವೆ. ಅದಕ್ಕಾಗಿಯೇ ಪರ್ಸಿಬ್ರೌನರು ವಿಜಯನಗರದ ದೇವಾಲಯಗಳಲ್ಲಿ ದ್ರಾವಿಡ ಶೈಲಿಯ ಪರಕಾಷ್ಠೆಯನ್ನು ಕಾಣಬಹುದೆಂದು ಹೇಳುತ್ತಾರೆ(ಪರ್ಸಿಪ್ರೌನ್, ಪು.೯೧). ಒಟ್ಟಾರೆ ಕಮಲಾಪುರ ಪರಿಸರದ ದೇವಾಲಯಗಳಲ್ಲಿ ಭುವನೇಶ್ವರಿ ಹೆಚ್ಚು ಅಲಂಕೃತವಾಗಿರದೇ ಚಪ್ಪಟೆಯಾಗಿರುತ್ತದೆ. ನವರಂಗ ಮತ್ತು ಮುಖಮಂಟಪದ ಮಧ್ಯದ ಭುವನೇಶ್ವರಿ ಮಾತ್ರ ಸಾಮಾನ್ಯವಾಗಿ ಹೆಚ್ಚು ಅಲಂಕೃತವಾಗಿರುತ್ತದೆ. ಇದರ ಸುತ್ತಲೂ ಹೂ ಗೊಂಚಲುಗಳು, ಪದ್ಮಗಳನ್ನು ಹಂಸಗಳನ್ನು ಕೋಲಾಟ ವಾಡುವವರ ಶಿಲ್ಪಗಳನ್ನು ಕಾಣಬಹುದು. ಇದಕ್ಕೆ ಉದಾಹರಣೆ ಗಜಶಾಲೆಯ ಹಿಂಬದಿಯಲ್ಲಿರುವ ವಿಷ್ಣು ದೇವಾಲಯದ ಕಲ್ಯಾಣ ಮಂಟಪದಲ್ಲಿ ಮಧ್ಯದ ಭುವನೇಶ್ವರಿಯ ಸುತ್ತಲೂ ಹಂಸಗಳ ಶಿಲ್ಪವಿರುವುದು ಉತ್ತಮ ಉದಾಹರಣೆ. ದೇವಾಲಯಗಳನ್ನು ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಿರುವುದರಿಂದ ಭಕ್ತರು ಮೇಲೇರಲು ಸೋಪಾನ ರಚಿಸಿರುವುದು ಇನ್ನೊಂದು ಪ್ರಮುಖ ಲಕ್ಷಣ. ಈ ಸೋಪಾನಗಳನ್ನು ನವರಂಗದ ಪಕ್ಕದ ಪ್ರವೇಶ ಮಂಟಪಗಳಿಗೆ ಅಥವಾ ಮುಖಮಂಟಪಗಳಿಗೆ ಅಳವಡಿಸಿದ್ದಾರೆ. ಈ ಸೋಪಾನಗಳ ಎರಡು ಬದಿಗೆ ಆನೆಗಳು ಇಲ್ಲವೇ ಸುರುಳ್ಯಾಳಿಗಳ ಶಿಲ್ಪಗಳನ್ನು ನಿಲ್ಲಿಸಿರುವುದು ಸಾಮಾನ್ಯ. ವಿಜಯನಗರ ದೇವಾಲಯಗಳಲ್ಲಿಯ ಶಿಖರಕ್ಕೆ ಅಷ್ಟೇನು ಪ್ರಾಮುಖ್ಯವಿಲ್ಲ. ಗರ್ಭಗೃಹದ ಮೇಲೆ ದ್ರಾವಿಡ ಶಿಖರವನ್ನು ಕಟ್ಟುವುದು ಹೆಚ್ಚಾಗಿ ಬಳಕೆಯಲ್ಲಿತ್ತು. ಶಿಖರದ ಮೇಲ್ಭಾಗದಲ್ಲಿ ವೃತ್ತಾಕಾರದ ಇಲ್ಲವೇ ಅಷ್ಟಕೋನಾಕಾರದ ಸ್ತೂಪಿ ಇದ್ದು ಅದರ ಮೇಲ್ಭಾಗದಲ್ಲಿ ಕಳಸವನ್ನಿಡಲಾಗುತ್ತಿತ್ತು. ಈ ಶಿಖರಗಳು ಶಾಲಾ ಕೂಟ ಮತ್ತು ಕರ್ಣ ಕೂಟಗಳಿಂದ ಕೂಡಿವೆ. ಉದಾ. ಹಜಾರರಾಮ ದೇವಾಲಯದ ದ್ರಾವಿಡ ಶಿಖರ.

ದೊಡ್ಡ ಪ್ರಮಾಣದಲ್ಲಿ ಕಟ್ಟಿದ ದೇವಾಲಯಗಳು ಸಾಮಾನ್ಯವಾಗಿ ವಿಶಾಲವಾದ ಪ್ರಕಾರಗಳೆಗೊಂಡಿರುತ್ತವೆ. ಪ್ರಕಾರದ ಗೋಡೆಗಳಿಗೆ ಹೊಂದಿಕೊಂಡು ಮಂಟಪಗಳು ಪ್ರವೇಶದ್ವಾರಗಳು ಇರುತ್ತವೆ. ಹಜಾರರಾಮ ದೇವಾಲಯದ ಪ್ರಕಾರದ ಗೋಡೆಯ ಹೊರ ಮತ್ತು ಒಳಭಾಗಗಳ ಮೇಲೆ ಮೂರ್ತಿ

[illegible]

ಶಿಲ್ಪಗಳಿವೆ. ಒಳಗೋಡೆಯಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ದೃಶ್ಯಗಳನ್ನು ಕೆತ್ತಿದ್ದಾರೆ. ಹೊರಭಾಗದಲ್ಲಿ ಆನೆ ಕುದುರೆ ಒಂಟೆ ಮುಂತಾದ ಪ್ರಾಣಿಗಳ ಸಾಲು ಚಿತ್ರಗಳಿವೆ.

ವಿಜಯನಗರ ಕಾಲದ ದೇವಾಲಯಗಳಲ್ಲಿ ದ್ವಾರ ಮಂಟಪಗಳ ಮೇಲೆ ಕಟ್ಟಿರುವ ಗೋಪುರಗಳು ವಿಶಿಷ್ಟ ಸ್ಥಾನ ಪಡೆದಿವೆ. ದ್ವಾರಮಂಟಪಗಳು ಶಿಲಾ ನಿರ್ಮಿತವಾಗಿದ್ದರೆ ಗೋಪುರಗಳು ಇಟ್ಟಿಗೆ ಗಾರೆಗಳಿಂದ ನಿರ್ಮಿಸಲಾಗಿದೆ. ದ್ವಾರಮಂಟಪಗಳು ಸಾಕಷ್ಟು ವಿಶಾಲವಾಗಿದ್ದು ಎರಡು ಬದಿಗಳಲ್ಲಿ ಸುಂದರವಾಗಿ ಕಂಡರಿಸಿವೆ.

ವಿಜಯ.ನಗರ ಪೂರ್ವ ನಿರ್ಮಿತ ಗೋಪುರಗಳು ಅಷ್ಟೇನು ಎತ್ತರವಾಗಿಲ್ಲ. ಆದರೆ ವಿಜಯನಗರ ಅರಸರ ಅದರಲ್ಲೂ ತುಳುವಂಶದ ಅರಸನ ಕಾಲದಲ್ಲಿ ಬೃಹದಾಕಾರದ ಗೋಪುರಗಳು ನಿರ್ಮಾಣವಾದವು. ಉದಾ. ಕಾಮಲಾಪುರದ ಪಟ್ಟಾಭಿರಾಮ ದೇವಾಲಯ ಮತ್ತು ನಲಾಪುರಕ್ಕೆ ಹೋಗುವಾಗ ರಸ್ತೆಯ ಬದಿಯಲ್ಲಿನ ವಿಷ್ಣು ದೇವಾಲಯ.

ಒಟ್ಟಾರೆ ಕಲ್ಯಾಣಮಂಟಪ, ಉತ್ಸವ ಮಂಟಪ, ಹೆಚ್ಚಿನ ವೈಷ್ಣವ ಮೂರ್ತಿ ಶಿಲ್ಪಗಳು, ಎತ್ತರವಾದ ಗೋಪುರುಗಳು, ೨-೩ ಪ್ರಕಾರ, ಇಟ್ಟಿಗೆಯನ್ನು ಶಿಖರಕ್ಕೆ ಬಳಸಿರುವುದು, ಗಾರೆಶಿಲ್ಪಗಳು ಇವೆಲ್ಲವೂ ವಿಜಯನಗರಕಾಲದಲ್ಲಾದ ವೈಶಿಷ್ಟ್ಯತೆಗಳಾಗಿವೆ.

ಅಧ್ಯಾಯ ೫

ಮೂರ್ತಿಶಿಲ್ಪ

ದೇವಾಲಯ ಎಂಬುದು ಇದು "ದೇವರ ಆಲಯ" ಎಂದರೆ ದೇವರಿಗಾಗಿ ಕಟ್ಟಲ್ಪಟ್ಟ ಮಂದಿರ ಎಂದರ್ಥ. ದೇವರು ಎಂಬ ಪದ ಬೆಳೆದು ಬಂದ ರೀತಿ ಅಥವಾ ಇದರ ವಿಕಾರ ರೂಪವನ್ನು ಮೂರ್ತಿ ಶಿಲ್ಪಗಳಲ್ಲಿ, ಪ್ರತಿಮೆಗಳಲ್ಲಿ ಕಾಣಬಹುದು. ನಮ್ಮ ದೇಶದ ದೇವತಾಮೂರ್ತಿಗಳಲ್ಲಿ ಎದ್ದು ಕಾಣುವುದು ಅಪ್ರಾಕೃತ ಮತ್ತು ಅಸ್ವಾಭಾವಿಕ ಸ್ವರೂಪ (ರಾಮಚಂದ್ರಮೂರ್ತಿ ಎಸ್.ಕೆ., ೧೯೭೫ ಪು. ೫೦). ಮೂರ್ತಿಶಿಲ್ಪದ ರೂಪ ಮೊದಲು ದೊರೆತದ್ದು ಹರಪ್ಪಾ ಮತ್ತು ಮೆಹೆಂಜೋದಾರೋದಲ್ಲಿನ ಮೂರು ತಲೆಯ ಪಶುಪತಿ. ಪಶು ಮತ್ತು ಮನುಷ್ಯರ ದೇಹದ ಸಂಯೋಗ. ಮರ-ಮನುಷ್ಯರ ಮೂರ್ತಿಗಳು ಇವೆಲ್ಲವನ್ನೂ ಕಾಣಬಹುದು. ವೈದಿಕ ಸಾಹಿತ್ಯದಲ್ಲಿ ಅಗ್ನಿಗೆ ಎರಡು ತಲೆ, ನಾಲ್ಕು ಕೊಂಬು, ಮೂರು ಕಾಲು, ಏಳು ಕೈ ಇಂತಹ ಮೂರ್ತಿಶಿಲ್ಪವನ್ನು ನೋಡಿದಾಗ ಅನುಮಾನಗಳು ಬರುವುದು ಸಹಜವಾದದ್ದು. ಆದರೆ ಇಂತಹ ಹಲವಾರು ದೇವತೆಗಳು ಉಳಿದುಕೊಂಡುದುದು ಸಹಜವೇ. ದೇವರು-ದೇವತೆಗಳೆಷ್ಟು ಎಂಬ ಪ್ರಶ್ನೆ ಉದ್ಭವಿಸಿದ್ದಲ್ಲಿ ಇದಕ್ಕೆ ಉತ್ತರ ಸಿಗುವುದು ಕಷ್ಟ. ಆದರೆ ಋಗ್ವೇದದಲ್ಲಿ "ಏಕಂ ಸತ್ ವಿಪ್ರಃ ಬಹುದಾವದಂತಿ" ಹೆಸರುಗಳು ಬಹಳವಿದ್ದರೂ ಶಕ್ತಿ ಒಂದೇ ಎಂಬುದು ಇಲ್ಲಿ ಮುಖ್ಯ. ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಬಂದ ಬೈಬಲ್ ಕುರಾನ್ ಆಯಾ ಪ್ರದೇಶದ ಜನವರ್ಗ ಸಾಹಿತ್ಯ ಹಾಗೂ ಪವಿತ್ರ ಗ್ರಂಥಗಳಾಗಿರದೇ, ಇಡೀ ಮಾನವನ ಜನಾಂಗಕ್ಕೆ ಸಂಬಂಧಪಟ್ಟಿವೆ. ಶ್ರದ್ಧಾ ಪೂರಕ. ಭಾವನಾ ಪೂರಕ, ಭಕ್ತಿಮಾರ್ಗ ಜನಪ್ರಿಯವಾದಂತೆ ಹಿಂದಿನಿಂದ ನಡೆದುಕೊಂಡು ಬಂದ ವೈದಿಕ ಪೂಜೆ, ಬುದ್ಧ, ತೀರ್ಥಂಕರ ಬೋಧನೆಯಲ್ಲಿ ಕಾಣಬರುವಂತಹ ಚಿಂತನೆ, ಸಾತ್ವಿಕ ರೂಪವನ್ನು ಪಡೆಯುತ್ತಾ ಬಂದಿತು.

ಮಣ್ಣಿನಲ್ಲಿ, ಮರದಲ್ಲಿ, ಗೊಂಬೆಗಳನ್ನು ಮಾಡಿಕೊಂಡು ಮರದ ಬುಡದಲ್ಲಿ, ಕಟ್ಟೆಯ ಮೇಲೆ, ಕಲ್ಲು ಚಪ್ಪಡಿಯ ಮೇಲೆ ಚಪ್ಪಡಿಯನ್ನು ಇಟ್ಟು ಗುಡಿಯಲ್ಲಿ ಇಟ್ಟು ತಮಗೆ ತೋರಿ ಬಂದ ರೀತಿಯಲ್ಲಿ ಪೂಜಿಸುತ್ತಿದ್ದರು. (ಸುಂದರ ಅ. ೧೯೯೪ ಪು. ೭೨) ಸೃಷ್ಠಿ ಕರ್ತ ಪರಮಾತ್ಮನಿಗೆ ಯಾವುದೇ ಒಂದು ನಿರ್ದಿಷ್ಟ ಆಕಾರವಿಲ್ಲ. ಇದು ಪರಮಸತ್ಯ. ಒಂದೊಂದು ದೇವರ ಮೂರ್ತಿಯು ಒಂದೊಂದು ಆಧ್ಯಾತ್ಮಿಕ ತತ್ವವನ್ನು ಒಳಗೊಂಡಿದೆ. ಸಮಾಜದಲ್ಲಿ ಬಳಕೆಯಲ್ಲಿರುವ ಅರ್ಥಪೂರ್ಣ ಸಂಕೇತ ಮುದ್ರೆ ಅಥವಾ ಮಾಧ್ಯಮದ ಮೂಲಕ ಸೂಚಿಸುತ್ತದೆ. ಮೂರ್ತಿಯ ರೂಪವನ್ನು ಮನದಲ್ಲಿ ಕಲ್ಪಿಸಿಕೊಂಡು ಶಾಸ್ತ್ರ ರೀತಿಯ ಒಂದು ವಸ್ತು ಆಯ್ಕೆ ಮಾಡಿಕೊಂಡು, ಆ ವಸ್ತುವಿನಲ್ಲಿ ಮೂರ್ತಿಶಿಲ್ಪವನ್ನು ಚಿತ್ರಿಸಿಕೊಂಡು,

ಮೂರ್ತಿಶಿಲ್ಪದ ಉಗಮಕ್ಕೆ ಕಾರಣವಾಗಿರಬೇಕು. ಶಿಲ್ಪ ಶಾಸ್ತ್ರಗಳ ಗ್ರಂಥಗಳಾದ ಮಯಮತ, ಮಾನಸಾರ, ಅಂಶುಮದ್ಭೇಗಾಮನ, ಶಿಲ್ಪಿ ಸಂಗ್ರಹ, ಇವು ದೇವಾನುದೇವತೆಗಳನ್ನು ಉಲ್ಲೇಖಿಸಿವೆ. ಮೂರ್ತಿ ಶಿಲ್ಪ ಮಾಧ್ಯಮ, ಶಿಲೆಯಾಗಿರಬಹುದು. ಲೋಹವಾಗಿರಬಹುದು. ಮಣ್ಣು ಇರಬಹುದು. ಒಟ್ಟಾರೆ ಶಿಲ್ಪಿ ಮಾಧ್ಯಮದ ಮೂಲಕ ಆಕಾರವನ್ನು ಕೊಡುತ್ತಾನೆ. ಇದು ಶಾಸನದಲ್ಲೂ ಉಲ್ಲೇಖಿತವಾಗಿದೆ (ಚಿದಾನಂದಮೂರ್ತಿ ಎಂ., ೧೯೭೭, ಪುಟ. ೪೫೫).

ದೇವಾಲಯಕ್ಕೆ ವಾಸ್ತು ವಿನ್ಯಾಸಕ್ಕಿಂತಲೂ ಹೆಚ್ಚು ಆಕರ್ಷಿಸುವುದು ಅಲ್ಲಿಯ ಮೂರ್ತಿಶಿಲ್ಪ. ಮೂರ್ತಿಶಿಲ್ಪದಲ್ಲಿ ೩ ವಿಧಗಳು. ೧. ಸ್ಥಾನಿಕ ೨. ಆಸೀನ ೩. ಶಯನ ಮೂರ್ತಿ ಶಿಲ್ಪವನ್ನು ಇಂತಹುದೇ ಎಂದು ಗುರುತಿಸಲು ಇದಕ್ಕೆ ತನ್ನದೇ ಆದ ಪ್ರತಿಮಾ ಲಕ್ಷಣಗಳಿರುತ್ತವೆ. ಲಾಂಛನಗಳೂ ಇರುತ್ತವೆ. ಈ ಹಿನ್ನೆಲೆಯನ್ನು ಆಧರಿಸಿ ಪ್ರಸ್ತುತ ಕಾಮಲಾಪುರ ಗ್ರಾಮದಲ್ಲಿನ ಮೂರ್ತಿಶಿಲ್ಪದ ಪ್ರತಿಮಾ ಲಕ್ಷಣದ ಪ್ರಸ್ತಾಪನೆಯನ್ನು ಇಲ್ಲಿ ಮಾಡಲಾಗಿದೆ.

ವೈಷ್ಣವ ಮೂರ್ತಿ ಶಿಲ್ಪಗಳು

ಯಜ್ಞಯಾಗಾದಿಗಳಿಗೆ ವರ್ಣಾಶ್ರಮಕ್ಕೆ ಪ್ರಾಧಾನ್ಯತೆ ಕೊಟ್ಟಿದ್ದ ವೈದಿಕ ಧರ್ಮ ಅಕ್ಕ-ಪಕ್ಕದಲ್ಲಿ ಅದಕ್ಕೆ ಭಿನ್ನವಾದ ಇನ್ನೊಂದು ಧರ್ಮ. ಭಾಗವತ ಧರ್ಮ. ಈ ಧರ್ಮದ ಸ್ಥಾಪಕ ಕ್ಷತ್ರಿಯನಾದ ಕೃಷ್ಣ ವಾಸುದೇವ. ಕೃಷ್ಣ ತನ್ನ ಆರಾಧ್ಯ ದೈವವನ್ನು ಭಾಗವತ್ ಎಂದು ಹೇಳಲಾಗಿ ತನ್ನ ಅನುಯಾಯಿಗಳನ್ನು ಭಾಗವತರು ಎಂದು ಕರೆದನು. ಈ ಅನುಯಾಯಿಗಳು ಕೃಷ್ಣನಿಗೆ ದೈವ ಪಟ್ಟ ಕಟ್ಟಿ ಅವನು ಒಂದು ಅವತಾರವೆಂದು ಭಾವಿಸಿದರು. ಇದೇ ವೈಷ್ಣವ ಧರ್ಮ. ದೇವತೆಗಳಿಗೆಲ್ಲ ವಿಷ್ಣುವೇ ವರಿಷ್ಠ ದೇವತೆ ಎಂದು ಹೇಳಲಾಗಿದೆ. ಬ್ರಾಹ್ಮಣಕದಲ್ಲಿ ಅಸುರರ ವಿರುದ್ಧ ಹೋರಾಡಲು ದೇವತೆಗಳಿಗೆ ಸಹಾಯ ಮಾಡಲು ವಿಷ್ಣು ಎಂದು ಹೇಳಲಾಗಿದೆ. (ಭಂಡಾರಕರ್ ಆರ್.ಜಿ., ಪು.೪೭) ಈ ವೈಷ್ಣವ ಪಂಥಕ್ಕೆ ಸಂಬಂಧಿಸಿದಂತೆ ಹಲವಾರು ಮೂರ್ತಿಶಿಲ್ಪಗಳು ಈ ಗ್ರಾಮದಲ್ಲಿ ಪಸರಿಸಿವೆ. ವೇಣುಗೋಪಾಲ, ಲಕ್ಷ್ಮೀ ನಾರಾಯಣ ಗರುಡ ವಿಷ್ಣುವಿನ ಅವತಾರ, ಶ್ರೀರಂಗನಾಥ, ಆಂಜನೇಯ ಮೂರ್ತಿಶಿಲ್ಪ ಅಶೋಕ ವನದಲ್ಲಿ ಸೀತೆ, ಯೋಗ ಪಟ್ಟ ನರಸಿಂಹ ಶ್ರೀ ನಗರಸಿಂಹ, ಲಕ್ಷ್ಮೀನರಸಿಂಹ, ಇವು ವೈಷ್ಣವ ಪಂಥಕ್ಕೆ ಸೇರಿದ ಕಾಮಲಾಪುರ ಗ್ರಾಮದಲ್ಲಿ ಲಭ್ಯವಾದ ಮೂರ್ತಿಶಿಲ್ಪಗಳಾಗಿವೆ. ತ್ರಿಮೂರ್ತಿಗಳಲ್ಲಿ ವಿಷ್ಣು ಎರಡನೆಯವ. ಈ ವೈಷ್ಣವ ಪಂಥ ದಕ್ಷಿಣ ಭಾರತದಲ್ಲಿ ಹರಡಿವೆ. ವಿಷ್ಣು ಎಂದರೆ ಹರಡು. ವ್ಯಾಪಿಸುವುದು. ವಿಷ್ಣುವಿನ ವೈಶಿಷ್ಟ್ಯ. ಕಾಮಲಾಪುರ ಗ್ರಾಮದಲ್ಲಿ ಪಸರಿಸಿದ ವೈಷ್ಣವ ಪಂಥಕ್ಕೆ ಸೇರಿದ ಆಯ್ದ ಮೂರ್ತಿಶಿಲ್ಪಗಳನ್ನು ಇಲ್ಲಿ ಸೆರೆ ಹಿಡಿಯಲಾಗಿದೆ.

ಹೆಸರು	:	ವಿಷ್ಣು
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ನಿಂತ ಭಂಗಿಯಲ್ಲಿದೆ. ವಿಷ್ಣುವಿಗೆ ಚತುರ್ಭುಜವಿದೆ. ಬಲಗಡೆ ಕೈಗಳಲ್ಲಿ ಸ್ಥಿತಿ ಚಕ್ರ, ಅಭಯಹಸ್ತ ಎಡಗಡೆ ಕೈಗಳಲ್ಲಿ ಗಧೆ, ವರದಮುದ್ರೆ ಇದೆ. ಕೈಯಲ್ಲಿ ತೋಳು ಬಂಧಿ, ವಾಜೀಬಂದ, ಕಂಕಣಧರಿಸಿದ್ದಾನೆ. ಕರಂಡ ಮುಕುಟವಿದೆ. ಹಣೆಯಲ್ಲಿ ತ್ರಿನಾಮವಿದೆ. ಯಜ್ಞೋಪವೀತ, ಕಂಠೀಹಾರ, ಮಾಲೆಗಳು ವಿಷ್ಣುವಿಗೆ ಅಂಲಕೃತವಾಗಿವೆ. ಕಿವಿಯಲ್ಲಿ ಪತ್ರಕುಂಡಲ ಮತ್ತು, ಮಕರ ಕುಂಡಲಗಳಿರುವುದು ಈ ಮೂರ್ತಿಶಿಲ್ಪದ ವಿಶೇಷ ಲಕ್ಷಣ. ಸೊಂಟಕ್ಕೆ ಕಟೇಸೂತ್ರ ಮತ್ತು ಉತ್ತರೀಯ ಬಂಧವಿದೆ. ಧೋತ್ರವನ್ನು ಮೊಣಕಾಲಿನವರೆಗೂ ಕಲಾತ್ಮಕವಾಗಿ ಕೆತ್ತಲಾಗಿದೆ.

ಹೆಸರು	:	ವಿಷ್ಣು (ಜನಾರ್ಧನ)
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ನಿಂತ ಭಂಗಿಯಲ್ಲಿರುವ ಈ ಮೂರ್ತಿಶಿಲ್ಪ ಚತುರ್ಭುಜವುಳ್ಳವನಾಗಿದ್ದಾನೆ. ಬಲಗೈಯಲ್ಲಿ ಚಕ್ರ, ಗದೆ ಎಡಗೈಯಲ್ಲಿ ಶಂಖ, ಮಾಲೆ ಹಿಡಿದ ಅಭಯ ಹಸ್ತವಿದೆ. ಕರಂಡ ಮುಕುಟವನ್ನು ಧರಿಸಿದ್ದಾನೆ. ಕಿವಿಯಲ್ಲಿ ವರ್ತಲಾಕಾರಾದ ಓಲೆ ಮತ್ತು ಕರ್ಣಕುಂಡಲಗಳಿವೆ. ಕೈಗಳಿಗೆ ತೋಳುಬಂಧಿ, ವಾಜೀಬಂಧ ಮತ್ತು ಹಾರ, ಯಜ್ಞೋಪವೀತ ಉದರಬಂಧ ಧರಿಸಿದ್ದಾನೆ. ಸೊಂಟಕ್ಕೆ ಕಟೀ ಸೂತ್ರವಿದೆ. ಪಾದಗಳಲ್ಲಿ ಅಕ್ಕಪಕ್ಕ ಶ್ರೀದೇವಿ ಭೂದೇವಿಯ ಶಿಲ್ಪಗಳಿವೆ. ಇವರು ಸ್ಥಾನಿಕ ಭಂಗಿ, ಕಿರೀಟ ಮುಕುಟ ಧರಿಸಿದ್ದಾರೆ. ಬಲಗೈ ಕಟ್ಯಾವಲಂಬಿತ ಮುದ್ರೆಯಲ್ಲಿದೆ. ಎಡಗೈಗಳಲ್ಲಿ ಪದ್ಮ ಹಿಡಿದಿದ್ದಾಳೆ.

ಹೆಸರು	:	ವಿಷ್ಣು (ಮಾಧವ)
ಸಿಕ್ಕ ಸ್ಥಳ	:	ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದ ಮುಂಭಾಗ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಕುಳಿತ ಭಂಗಿಯಲ್ಲಿದ್ದ ವಿಷ್ಣು ಚತುರ್ಭುಜನಾಗಿದ್ದಾನೆ. ಬಲಗೈಯಲ್ಲಿ ಅಭಯಹಸ್ತ, ಚಕ್ರ, ಎಡಗೈಯಲ್ಲಿ ಶಂಖ, ಗದೆ, ಆಯುಧಗಳನ್ನು ಹಿಡಿದಿದ್ದಾನೆ. ಕೈಯಲ್ಲಿ ವಾಜೀಬಂಧ, ಕೈಬಳೆ, ತೋಳುಬಂಧಗಳನ್ನು ಧರಿಸಿದ್ದಾನೆ. ಕರಂಡ ಮುಕುಟ ಶಿಖಾಮಣಿ, ಕಿವಿಯಲ್ಲಿ ವರ್ತುಲಾಕಾರದ ಒಲೆ, ಕೊರಳಲ್ಲಿ ಹಾರ, ಕಂಠೀಹಾರ ಉದರಬಂಧ, ಕಟೀಸೂತ್ರ, ಯಜ್ಞೋಪವೀತ ಧರಿಸಿದ್ದಾನೆ. ನೆರಿಗೆಯುಳ್ಳ ಧೋತಿಯ ಕೆತ್ತನೆ ಇವೆಲ್ಲವೂ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು	:	ವಿಷ್ಣು
ಸಿಕ್ಕ ಸ್ಥಳ	:	ರಾಜ್ಯ ಪ್ರಾಚ್ಯ ವಸ್ತು ಸಂಶೋಧನಾ ಇಲಾಖೆ, ಕಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಕುಳಿತ ಭಂಗಿಯಲ್ಲಿ, ಚತುರ್ಭುಜ ವಿಷ್ಣು, ಬಲಗೈಯಲ್ಲಿ, ಚಕ್ರ, ಎಡಗೈಯಲ್ಲಿ ಶಂಖ ಧರಿಸಿದ್ದಾನೆ. ಉಳಿದ ಎರಡು ಕೈಗಳು ಹಾಳಾಗಿವೆ. ಕಿವಿಯಲ್ಲಿ ಪತ್ರ ಕುಂಡಲ, ಮಕರ ಕುಂಡಲಗಳು ಹಾಳಾಗಿವೆ. ಕೊರಳಲ್ಲಿ ಕಂಠೀಹಾರ, ಪದಕಹಾರ, ಮಣಿಹಾರ, ತೋಳುಬಂಧಿ, ವಾಜೀಬಂಧ, ಕಂಕಣ ಇವು ಈ ಮೂರ್ತಿ ಶಿಲ್ಪದ ಸಾಮಾನ್ಯ ಲಕ್ಷಣಗಳಾಗಿವೆ.

ಹೆಸರು	:	ವೇಣುಗೋಪಾಲ
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ಏಕಶಿಲಾಮೂರ್ತಿ ವೇಣುಗೋಪಾಲ ನಿಂತ ಭಂಗಿಯಲ್ಲಿ ಚತುರ್ಭುಜವುಳ್ಳವನಾಗಿದ್ದಾನೆ. ಶಿರದ ಮೇಲೆ ಏಳು ಹೆಡೆ ಬಿಚ್ಚಿದ ಸರ್ಪ. ಕರಂಡಮುಕುಟಧರಿಸಿದ್ದಾನೆ. ಹಣೆಯಲ್ಲಿ ಮೂರು ನಾಮದ ಚಿಹ್ನೆ ಇದೆ. ಕೈಗಳಿಗೆ ತೋಳುಬಂಧಿ ವಾಜೀಬಂಧ, ಕೈಬಳೆ ಧರಿಸಿದ್ದಾನೆ. ಕಿವಿಯಲ್ಲಿ ವರ್ತುಲಾಕಾರದ ಓಲೆ ಮತ್ತು ಪತ್ರ ಕುಂಡಲಗಳಿವೆ. ಬಲಗೈಯಲ್ಲಿ ಚಕ್ರ ಎಡಗೈಯಲ್ಲಿ ಶಂಖ ಉಳಿದ ಎರಡೂ ಕೈಗಳಲ್ಲಿ ಕೊಳಲು ಊದುತ್ತಿರುವ ದೃಶ್ಯ ಈ ಮೂರ್ತಿಶಿಲ್ಪದ ಲಕ್ಷಣಗಳು.

ಹೆಸರು	:	ಲಕ್ಷ್ಮಿನಾರಾಯಣ
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ಇಲ್ಲಿ ಸ್ಥಾನಿಕ ಭಂಗಿಯಲ್ಲಿ ಬಲಗಾಲನ್ನು ಕೆಳಗಿಳಿಸಿ ಕುಳಿತಿದ್ದಾನೆ. ಚತುರ್ಭುಜವನ್ನು ಹೊಂದಿದ್ದಾನೆ. ಬಲಗೈಯಲ್ಲಿ ಚಕ್ರ ಅಭಯಹಸ್ತ ಎಡಗೈಗಳಲ್ಲಿ ಶಂಖ ಸಾಮಾನ್ಯ ಲಕ್ಷಣವಾದರೂ ಪ್ರಾಮುಖ್ಯತೆ ಪಡೆದಿದೆ. ಕರಂಡ ಮುಕುಟ ಶಿಖಾಮಣಿ, ರತ್ನ ಪಟ್ಟಿಕೆಗಳಿವೆ. ಹಣೆಯಲ್ಲಿ ತ್ರಿನಾಮ ತಿಲಕ, ಕಿವಿಯಲ್ಲಿ ವರ್ತುಲಾಕಾರದ ಓಲೆಗಳಿವೆ. ಮಕರ ಕುಂಡಲಗಳಿರದೇ ಇರುವುದು ಈ ಮೂರ್ತಿಶಿಲ್ಪದ ವೈಶಿಷ್ಟ್ಯ. ಕೊರಳಲ್ಲಿ ಹಾರ, ಜಪಮಾಲೆ ಧರಿಸಿದ್ದಾನೆ. ಯಜ್ಞೋಪವೇತವನ್ನು ಧರಿಸಿದ್ದಾನೆ. ಎಡಗಡೆ ತನ್ನ ಎಡ ತೊಡೆಯ ಮೇಲೆ ಲಕ್ಷ್ಮಿಯನ್ನು ಕುಳ್ಳಿರಿಸಿಕೊಂಡಿದ್ದಾನೆ.

ಲಕ್ಷ್ಮೀ ಕರಂಡ ಮುಕುಟ ಧರಿಸಿದ್ದಾಳೆ. ಎಡಗೈಯಲ್ಲಿ ಕಮಲ, ಬಲಗೈಯಲ್ಲಿ ವಿಷ್ಣುವಿನ ಸೊಂಟ ಹಿಡಿದ ದೃಶ್ಯದ ಕೆತ್ತನೆ ಸುಂದರ. ಕೊರಳಿನಲ್ಲಿ ಹಾರ, ವೈಜಯಂತಿಹಾರ ಧರಿಸಿದ್ದಾಳೆ. ಸೀರೆಯ ನೆರಿಗೆಯ ಕೆತ್ತನೆ ಕಲ್ಮಾತವಾಗಿದೆ.

ಹೆಸರು	:	ಹನುಮಾನ್
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಎಡಗಡೆ ಮುಖ ಮಾಡಿಕೊಂಡು ನಿಂತ ಭಂಗಿಯಲ್ಲಿದೆ. ಶಿಖೆ ಕಟ್ಟಲಾಗಿದೆ. ಹಣೆಯಲ್ಲಿ ತ್ರಿನಾಮ ತಿಲಕವಿದೆ. ಕಿವಿಯಲ್ಲಿ ಕರ್ಣಕುಂಡಲಗಳಿವೆ. ದ್ವಿಬಾಹು. ಬಲಗೈ ಅಭಯಹಸ್ತ, ಎಡಗೈಯಲ್ಲಿ ಪುಷ್ಪ ಗುಚ್ಛಾಕಾದ ಗದೆ ಇದೆ. ಕೈಯಲ್ಲಿ ಕಂಕಣ ವಾಜೀಬಂಧ, ಲಂಗೋಟಿ ಧರಿಸಿದ್ದಾನೆ. ಪಾದಗಳ ಮಧ್ಯೆ ಅಕ್ಷಯ ಕುಮಾರ ಮಲಗಿದ ಶಯನ ಶಿಲ್ಪವಿದೆ. ಪಾದಗಳಲ್ಲಿ ಗೆಜ್ಜೆ ಸರಗಳಿವೆ. ಮೂರ್ತಿಯ ಮುಖದ ಬಲಗಡೆ ಶಂಖ, ಚಕ್ರ, ಮುದ್ರೆಗಳಿವೆ. ಶಿರದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಚಿಹ್ನೆಗಳಿವೆ.

ಹೆಸರು	:	ಹನುಮಾನ್
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಈ ಮೂರ್ತಿ ಶಿಲ್ಪ ಎಡಗಡೆ ಮುಖಮಾಡಿಕೊಂಡು ನಿಂತ ಭಂಗಿಯಲ್ಲಿದೆ. ಹನುಮಂತನಿಗೆ ಎರಡು ಕೈಗಳಿವೆ. ಬಲಗೈ ಅಭಯಹಸ್ತ ಎಡಗೈಯಲ್ಲಿ ಪುಷ್ಪಗುಚ್ಛಾಕಾರದ ಗದೆ ಹಿಡಿದಿದ್ದಾನೆ. ಕೈಯಲ್ಲಿ ತೋಳುಬಂಧ, ಕೈಬಳೆ ಕಟ್ಟಲಾಗಿದೆ. ಮೈಮೇಲೆ ಯಜ್ಞೋಪವೀತವಿದೆ. ಉದರಬಂಧವಿದೆ. ಕಂಠಿಹಾರ

ಧರಿಸಿದ್ದಾನೆ. ಕಿವಿಯಲ್ಲಿ ಕರ್ಣಕುಂಡಲಗಳಿವೆ. ಬಾಲವು ತಲೆಯ ಮೇಲಿಂದ ಎಡಭುಜನದವರಿಗೂ ಹಬ್ಬಿದೆ. ಮೂರ್ತಿಶಿಲ್ಪ ಕಲಾತ್ಮಕವಾಗಿದೆ.

ಹೆಸರು	:	ಹನುಮಂತ
ಸಿಕ್ಕ ಸ್ಥಳ	:	ಅಕ್ಕ ತಂಗಿಯ ಬೆಟ್ಟದ ಹತ್ತಿರ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಒಂದು ಅಡಿ ಪೀಠದ ಮೇಲೆ ಹನುಮಂತ ಶಿಲ್ಪ ನಿಂತ ಭಂಗಿಯಲ್ಲಿದೆ. ಎಡಗಡೆ ಮುಖಮಾಡಿ ಕೊಂಡಿರುವುದು ಸಾಮಾನ್ಯ. ಶಿಖೆ ಕಟ್ಟಲಾಗಿದೆ. ಎರಡು ಕೈಗಳಿವೆ. ಎಡಕೈಯಲ್ಲಿ ಗದೆ, ಬಲಗೈ ಅಭಯಹಸ್ತದಿಂದ ಕೂಡಿದೆ. ಪ್ರಭಾವಳಿ ಇದೆ. ಆಂಜನೆಯ ಬಾಲವು ಶಿರವನ್ನು ದಾಟಿದೆ. ಬಾಲದ ಹಿಂದೆ ಗೆಜ್ಜೆಯ ಸರಪಣಿ ಅಲಂಕೃತವಾಗಿದೆ. ಕೈಗಳಲ್ಲಿ ತೋಳುಬಂಧಿ, ವಾಜೀಬಂಧ, ಕಂಕಣ, ಕೊರಳಲ್ಲಿ ಮಣಿಸರ, ಲಂಗೋಟಿ ಇವು ಈ ಮೂರ್ತಿಶಿಲ್ಪದ ಲಕ್ಷಣಗಳು. ಎರಡೂ ಪಾದಗಳಲ್ಲಿ ಪಾದರಸ ಧರಿಸಿದ್ದಾನೆ. ಈ ಎರಡೂ ಪಾದಗಳ ಮಧ್ಯೆ, ಅಕ್ಷಯಕುಮಾರ ಮಲಗಿರುವ ದೃಶ್ಯ ಅತ್ಯಂತ ಸೂಕ್ಷ್ಮವಾಗಿ ಕೆತ್ತಲಾಗಿದೆ.

ಹೆಸರು	:	ಹನುಮಂತ
ಸಿಕ್ಕ ಸ್ಥಳ	:	ವಾಮನಾಚಾರ್ ಮನೆಯ ಹತ್ತಿರ ಆಂಜನೇಯ ದೇವಾಲಯದಲ್ಲಿ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ನಿಂತಭಂಗಿಯಲ್ಲಿ ಎಡಗಡೆ ಮುಖಮಾಡಿ ನಿಂತ ಭಂಗಿಯಲ್ಲಿದೆ. ಎರಡು ಕೈಗಳಿವೆ. ತೋಳುಗಳಿವೆ. ತೋಳು ಬಂಧಿ, ಕೈಬಳೆ ಕೊರಳಲ್ಲಿ ಎರಡು ಮುತ್ತಿನ ಹಾರ, ಧೋತ್ರಿ ಧರಿಸಿ, ಬಲಗೈ ಅಭಯಹಸ್ತ, ಎಡಗೈ ಗದೆ ಹಿಡಿದು ತೊಡೆಗೆ ತಾಕಿಸಿದ್ದಾನೆ. ಇದರ ಕೆಳಗೆ ಗರುಡ ಶಿಲ್ಪವಿದೆ. ಕರಂಡ ಮುಕುಟ ಧರಿಸಿ, ಎಡಗಡೆ ಮುಖ ಮಾಡಿ, ಅಂಜಲಿ ಹಸ್ತದಲ್ಲಿರುವುದು ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು	:	ಆಂಜನೇಯ
ಸಿಕ್ಕ ಸ್ಥಳ	:	ನಗರೇಶ್ವರ ದೇವಾಲಯದ ಹಿಂಬದಿಯಲ್ಲಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಆಂಜನೇಯ ಎಡಗಡೆ ಮುಖ ಮಾಡಿ, ನಿಂತಭಂಗಿಯಲ್ಲಿದ್ದಾನೆ. ಎಡಗೈಯಲ್ಲಿ ಗದೆ ಬಲಗೈಯು ಅಭಯ ಹಸ್ತದಿಂದ ಕೂಡಿದೆ. ಬಾಲ ಶಿರದ ಮೇಲ್ಭಾಗದಿಂದ ನಡುವಿನವರೆಗೂ ಇದೆ. ಕೊರಳಲ್ಲಿ ಮುತ್ತಿನ ಸರ, ಮಾಲೆಗಳನ್ನು ಧರಿಸಿದ್ದಾನೆ. ಕೈಯಲ್ಲಿ ತೋಳು ಬಂಧಿ, ವಾಜೀಬಂಧ, ಕಂಕಣವಿದೆ. ಶಿಕೆ ಕಟ್ಟಿಕೊಳ್ಳಲಾಗಿದೆ. ನಿಂತ ಎರಡೂ ಪಾದಗಳ ಮಧ್ಯೆ ಅಕ್ಷಯ ಕುಮಾರ ರಾಕ್ಷಸನ ಮಲಗಿದ ದೃಶ್ಯವಿದೆ.

ಹೆಸರು	:	ವೀರ ಆಂಜನೆಯ
ಸಿಕ್ಕ ಸ್ಥಳ	:	ಪಟಗಿ ಶ್ರೀನಿವಾಸರಾವ್ ಮನೆಯ ಪೂರ್ವದಿಕ್ಕಿಗೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ನಿಂತ ಭಂಗಿಯಲ್ಲಿದ್ದ ಈ ಶಿಲ್ಪ ಎಡಗಡೆ ಮುಖಮಾಡಿಕೊಂಡಿದೆ. ದ್ವಿಬಾಹು, ಬಲಗೈ ಅಭಯ ಹಸ್ತ, ಎಡಗೈಯಲ್ಲಿ ಗದೆ, ಹಿಡಿದಿದ್ದಾನೆ. ಕೈಗಳಿಗೆ ತೋಳುಬಂಧಿ, ವಾಜೀಬಂಧ, ಕಂಕಣ, ಕೊರಳಲ್ಲಿ ಕಂಠೀಹಾರ ಧರಿಸಿದ್ದಾನೆ. ಉದರ ಬಂಧವಿದೆ. ಯಜ್ಞೋಪವೀತ ಧರಿಸಿದ್ದಾನೆ. ಬಾಲವು ಶಿರದ ಮುಂಭಾಗದವರೆಗೂ ಮುಂದುವರೆದಿದೆ. ಎರಡೂ ಪಾದಗಳಲ್ಲಿ ಕಡಗ ಇವುಗಳ ಮಧ್ಯೆ ಅಕ್ಷಯ ಕುಮಾರ ರಾಕ್ಷಸನ ಚಿತ್ರಣವಿದೆ. ಕೀರ್ತಿಮುಖದ ಪ್ರಭಾವಳಿ, ನವಿಲು, ಹೂಗಳಿಂದ ಈ ಮೂರ್ತಿ ಅಲಂಕೃತವಾಗಿದೆ.

ಹೆಸರು	:	ಗರುಡ
ಸಿಕ್ಕ ಸ್ಥಳ	:	ಭಾರತೀಯ ಪುರಾತತ್ವ ವಸ್ತುಸಂಗ್ರಹಾಲಯ, ಕಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಗರುಡ ನಿಂತ ಭಂಗಿಯಲ್ಲಿರುವುದು ವಿಶೇಷ ಲಕ್ಷಣಗಳಲ್ಲೊಂದು. ಚಕ್ರ ಎಡಗಡೆ ಶಂಖದ ಕೆತ್ತನೆ ಇದೆ. ಎರಡು ಕೈಗಳಿವೆ. ಬಲಗೈ ಅಭಯಹಸ್ತ ಎಡಗೈಯಲ್ಲಿ ನಾಗ ಹಿಡಿದಿದ್ದಾನೆ. ಕರಂಡ ಮುಕುಟ ಧರಿಸಿದ್ದಾನೆ. ಹಣೆಯ ಮೇಲೆ ತಿಲಕವಿದೆ. ಕಿವಿಯಲ್ಲಿ ವರ್ತುಲಾಕಾರದ ಓಲೆ, ಕೊರಳಲ್ಲಿ ಹಾರ, ಕೈಗಳಲ್ಲಿ ನಾಗವಲಯ ಬಂಧಿತವಾಗಿವೆ. ಸೊಂಟಕ್ಕೆ ಉತ್ತರೀಯವಿದೆ. ನೆರಗೆಯುಳ್ಳ ಧೋತ್ರ ಕೆತ್ತನೆ ಅತ್ಯಂತ ಕಲಾತ್ಮಕವಾಗಿದೆ.

ಹೆಸರು	:	ಗರುಡ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಎಡಕ್ಕೆ ಮುಕಮಾಡಿಕೊಂಡಿದೆ. ಬಾಗಿದ ಚೂಪಾದ ಮೂಗು ಆಕರ್ಷಕ. ನಿಂತ ಭಂಗಿಯಲ್ಲಿದೆ. ಗರುಡ ಕರಂಡ ಮುಕುಟವನ್ನು ಧರಿಸಿದ್ದಾನೆ. ಕಿರೀಟದ ಬಲಗಡೆ ಚಕ್ರ ಎಡಗಡೆ ಶಂಖ ಇದೆ. ಕಿರೀಟದ ಎರಡೂ ಹಂತಗಳಲ್ಲಿ ಹೆಡೆ ಬಿಚ್ಚಿದ ಸರ್ಪಗಳಿವೆ. ಕಿವಿಯಲ್ಲಿ ವರ್ತುಲಾಕಾರದ ಒಲೆಗಳಿವೆ. ಎರಡು ಕೈಗಳಿವೆ. ಬಲಗೈ ಅಭಯಹಸ್ತ ಎಡಗೈ ನಾಗ, ಹಿಡಿದ ಸೂಚೀ ಮುದ್ರೆ ಇದೆ. ಕೈ ತೋಳಿಗೆ ನಾಗಬಂಧಗಳಿವೆ. ಎದೆಗೆ ನಾಗಬಂಧವಿದೆ. ಕೈಕಾಲುಗಳಿಗೆ ಬಳೆಗಳಿವೆ. ಉದರ ಬಂಧ, ಕಟೀಬಂಧ, ಕಾಲ್ಗಡಗ ಧರಿಸಿದ್ದಾನೆ. ಗರುಡನ ಎರಡು ಪಾದಗಳ ಮಧ್ಯೆ ಹೆಡೆಬಿಚ್ಚಿದ ಸರ್ಪದ ಕೆತ್ತನೆ ಇದೆ.

ಹೆಸರು	:	ಅಂಜಲಿ ಮುದ್ರೆಯಲ್ಲಿ ಗರುಡ
ಸಿಕ್ಕ ಸ್ಥಳ	:	ಹಂಪೆ(ಪ್ರಸ್ತುತ ವಸ್ತುಸಂಗ್ರಹಾಲಯದಲ್ಲಿ) ಕಮಲಾಪುರ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ವಂದಿಸುವ ಮುದ್ರೆಯಲ್ಲಿನ ಗರುಡ ನಿಂತ ಭಂಗಿಯಲ್ಲಿದ್ದಾನೆ. ಬಲಗಡೆ ಮುಖ ಮಾಡಿಕೊಂಡಿದ್ದಾನೆ. ಕರಂಡಮುಕಟ ಧರಿಸಿರುವುದು ಪ್ರಮುಕ ಲಕ್ಷಣಗಳಲ್ಲಿ ಒಂದು. ಕಿವಿಯಲ್ಲಿ ವರ್ತುಲಾಕಾರದ ಓಲೆಗಳಿವೆ. ಕೊರಳಲ್ಲಿ ಹಾರವಿದೆ. ರೆಕ್ಕೆಗಳ ಕೆತ್ತನೆ ಅತ್ಯಂತ ಸೂಕ್ಷ್ಮವಾಗಿ ಕಲಾತ್ಮಕವಾಗಿ ಕೆತ್ತನೆ ಮಾಡಲಾಗಿದೆ. ಕೈಯಲ್ಲಿ ವಾಜೀಬಂಧ, ಕಂಕಣ ಧರಿಸಿದ್ದಾನೆ. ಎಲ್ಲಾ ಗರುಡಮೂರ್ತಿ ಶಿಲ್ಪಗಳಲ್ಲಿ ನಾಗಬಂಧವಿರುತ್ತದೆ. ಈ ಮೂರ್ತಿಶಿಲ್ಪಕ್ಕೆ ನಾಗಬಂಧ ಇಲ್ಲದಿರುವುದೇ ಪ್ರಮುಖ ಅಂಶ. ಸೊಂಟಕ್ಕೆ ಕಟೀಸೂತ್ರವಿದೆ. ಉತ್ತರೀಯ ಬಂಧವಿದೆ. ಪಾದಗಳಲ್ಲಿ ಪಾದಸರಗಳಿವೆ.

ಹೆಸರು	:	ರಾಮ, ಲಕ್ಷ್ಮಣ, ಸೀತೆ
ಸಿಕ್ಕ ಸ್ಥಳ	:	ರಾಮ ದೇವಾಲಯದಲ್ಲಿ
ರಾಜವಂಶ/ಮಾಂಡಲೀಕರು	:	ವಿಜಯನಗರೋತ್ತರ
ಕಾಲ	:	೧೮ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಮೂರು ಮೂರ್ತಿಶಿಲ್ಪಗಳು ನಿಂತಭಂಗಿಯಲ್ಲಿವೆ. ರಾಮ ಎಡಗೈಯಲ್ಲಿ ಬಿಲ್ಲು ಹಿಡಿದಿದ್ದಾನೆ. ಬಲಗೈ ಕಟ್ಯಾವಲಂಬಿತ ಕಿರೀಟ ಮುಕುಟ, ಕೊರಳಲ್ಲಿ ಮಣಿ, ಪದಕ, ಹಾರ, ವೈಜಯಂತಿಹಾರ

ಧರಿಸಿದ್ದಾನೆ. ತೋಳುಬಂಧಿ, ನೆರಿಗೆಯುಳ್ಳ ಧೋತ್ರದ ಕೆತ್ತನೆ ತುಂಬಾ ಕಲಾತ್ಮಕವಾಗಿದೆ. ಎಡಬಲಗಳಲ್ಲಿ ಲಕ್ಷ್ಮಣ ಸೀತೆಯರು ರಾಮನೊಡನೆ ನಿಂತ ಭಂಗಿಯಲ್ಲಿದ್ದಾರೆ.

ಹೆಸರು	:	ಪಾಂಡುರಂಗ ಮತ್ತು ರಾಕುಮಾಬಾಯಿ
ಸಿಕ್ಕ ಸ್ಥಳ	:	ಪಾಂಡುರಂಗ ದೇವಸ್ಥಾನದಲ್ಲಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಈ ಎರಡೂ ಮೂರ್ತಿಶಿಲ್ಪಗಳು ಸೊಂಟದ ಮೇಲೆ ಕೈ ಇಟ್ಟು ನಿಂತ ಭಂಗಿಯಲ್ಲಿವೆ. ದ್ವಿಬಾಹು ಮೂರ್ತಿಗಳು, ಪಾಂಡುರಂಗ ಕರಂಡ ಮುಕುಟ ಧರಿಸಿದ್ದಾನೆ. ಕೊರಳಲ್ಲಿ ಕಂಠೀ ಮಣಿಸರ, ಪದಕಸರ ಧರಿಸಿದ್ದಾನೆ. ನೆರಿಗೆಯು ಧೋತ್ರದ ಕೆತ್ತನೆ ಪಾದದವರೆಗೂ ಇದೆ. ಪಾದದಲ್ಲಿ ಕಡಗಗಳಿವೆ.

ರಕುಮಾಬಾಯಿ ನಿಂತ ಭಂಗಿಯಲ್ಲಿ ಶಿಖೆ ಕಟ್ಟಲಾಗಿದೆ. ಕೈಗೆ ತೋಳು ಬಂಧಿ ಬಳೆ ಧರಿಸಿದ್ದಾಳೆ. ಕೊರಳಲ್ಲಿ ಹಾರ, ವೈಜಯಂತಿಧರಿಸಿದ್ದಾಳೆ. ಸೀರೆಯ ನೆರಿಗೆಯ ಕೆತ್ತನೆ ತುಂಬಾ ಮನೋಹರವಾಗಿದೆ.

ಹೆಸರು	:	ಅನಂತ ಪದ್ಮನಾಭ
ಸಿಕ್ಕ ಸ್ಥಳ	:	ರಾಜ್ಯ ಪ್ರಾಚ್ಯ ವಸ್ತು ಸಂಶೋಧನಾ ಇಲಾಖೆ, ಕಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಏಳು ಹೆಡೆಯ ಸರ್ಪದ ಮೇಲೆ ಅನಂತಶಯನ ಮಲಗಿದ್ದಾನೆ. ಚತುರ್ಭುಜ, ಬಲಗೈಯ ಚಕ್ರ ಎಡಗೈ ಎರಡು ಕೈಗಳು ಹಾಳಾಗಿವೆ. ಮತ್ತೊಂದು ಬಲಗೈ ತಲೆಗೆ ತಾಕಿಸಿಕೊಂಡು ಮಲಗಿದ ಕೆತ್ತನೆ ಸುಂದರವಾಗಿದೆ. ಕರಂಡ ಮುಕುಟಧರಿಸಿದ್ದಾನೆ. ಶಿಖಾಮಣಿ ಮತ್ತು ರತ್ನಪಟ್ಟಿ ಇದೆ. ಕಿವಿಯಲ್ಲಿ ಕರ್ಣಕುಂಡಲ ಮತ್ತು ಪತ್ರ ಕುಂಡಲಗಳನ್ನು ಧರಿಸಿದ್ದಾನೆ. ಕೊರಳಲ್ಲಿ ಕಂಠೀಹಾರ, ಮಣಿಸರ, ಯಜ್ಞೋಪವೀತ ಧರಿಸಿದ್ದಾನೆ. ಕೈಗಳಿಗೆ ತೋಳುಬಂಧಿ, ವಾಜೀಬಂಧ, ಕಂಕಣ ಧರಿಸಿದ್ದಾನೆ. ಸೊಂಟಕ್ಕೆ ಕಟೀಸೂತ್ರವಿದೆ. ಧೋತ್ರದ ಕೆತ್ತನೆ ಪಾದದವರೆಗೂ ಆಕರ್ಷಣೀಯವಾಗಿ ಕಲ್ಮಾತಕವಾಗಿ ಕೆತ್ತಲಾಗಿದೆ. ಪಾದಗಳನ್ನು ಒತ್ತುತ್ತಿರುವ ಇಬ್ಬರು ಸ್ತ್ರೀಯರ ಶಿಲ್ಪದ ಶಿರಭಾಗ ಹಾಳಾಗಿದೆ.

ಹೆಸರು	:	ಅಶೋಕವನದಲ್ಲಿ ಸೀತೆ
ಸಿಕ್ಕ ಸ್ಥಳ	:	ಪವರ್ ಕ್ಯಾಂಪ್ (ಪ್ರಸ್ತುತ ಭಾರತೀಯ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ)
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

[illegible]

ಅಶೋಕ ವನದ ಬಾಳೆ ಗಿಡಗಳ ಮಧ್ಯದಲ್ಲಿ ಅಂಜಲಿ ಮುದ್ರೆಯಲ್ಲಿ ಧ್ಯಾನಾಸೀನ ಭಂಗಿಯಲ್ಲಿ ಕುಳಿತ ಈ ಶಿಲ್ಪ ಅತ್ಯಂತ ಆಕರ್ಷಣೀಯ. ಸೀತೆಯು ಕೈಗೆ ಬಳೆಗಳು, ತೋಳುಬಂಧಿಗಳು, ಕೊರಳಲ್ಲಿ ಹಾರ ಮತ್ತು ಮಾಂಗಲ್ಯ, ಕಿವಿಯಲ್ಲಿ ವರ್ತುಲಾಕಾರದ ಓಲೆಗಳು ಧರಿಸಿದ್ದಾರೆ. ಸೀತಾ ಮೂರ್ತಿಯ ಬಲಗಡೆ ಅಂಜಲಿ ಮುದ್ರೆಯಲ್ಲಿ, ವಿನಯ ರೀತಿಯಲ್ಲಿ, ಬಾಲವೆತ್ತಿ ಬಾಗಿದ ಭಂಗಿಯಲ್ಲಿ ಹನುಮಂತ ಮೂರ್ತಿ ಇದೆ. ಎಡಗಡೆ ಸಖಿಯರ ಶಿಲ್ಪವಿದೆ. ಇವಳ ಕೈಯಲ್ಲಿ ಗದೆ ಆಯುಧವು ಇದೆ. ಉದ್ಯಾನವನದ ಬಾಳೆಗಿಡಗಳ ಮೇಲೆ ಸ್ಥಾನಿಕ ಭಂಗಿಯಲ್ಲಿ ಮಂಗಗಳು ಕುಳಿತಿರುವ ದೃಶ್ಯ ನೋಡಲು ಮನೋಹರ.

ಹೆಸರು	:	ವರಹಾಮೂರ್ತಿ
ಸಿಕ್ಕ ಸ್ಥಳ	:	ಹಂಪೆ (ಪ್ರಸ್ತುತ ವಸ್ತುಸಂಗ್ರಹಾಲಯದಲ್ಲಿ)
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಚತುರ್ಭುಜ ವರಹಾ ಮೂರ್ತಿ. ಇದು ಸ್ಥಾನಿಕ ಭಂಗಿಯಲ್ಲಿದೆ. ಬಲಗೈಗಳಲ್ಲಿ ಸ್ಥಿತಿಚಕ್ರ, ಅಭಯಹಸ್ತ, ಎಡಗೈಗಳಲ್ಲಿ ಶಂಖ, ವರದ ಮುದ್ರೆ, ಶಿರ ಶಿಥಿಲವಾಗಿದೆ ಬಾಯಿಯಿಂದ ಹೊರಚಾಚಿದ ಎರಡು ಕೋರೆ ಹಲ್ಲುಗಳು ಕೈಗಳಲ್ಲಿ ತೋಳುಬಂಧಿ, ಕಂಕಣ ಎಂಬ ಆಭರಣಗಳನ್ನು ಅಲಂಕರಿಸಿದ್ದಾನೆ. ಕೊರಳಲ್ಲಿ ಹಾರವಿದೆ. ಉದರ ಬಂಧದ ಕೆತ್ತನೆ ಅತ್ಯಂತ ಸೂಕ್ಷ್ಮವಾಗಿದೆ. ಕಾಲುಗಳಲ್ಲಿ ಕಡಗ ಹಾಕಿದ್ದಾನೆ.

ಹೆಸರು	:	ನರಸಿಂಹ
ಸಿಕ್ಕ ಸ್ಥಳ	:	ಭಾರತೀಯ ಪುರಾತತ್ವ(ಪ್ರಸ್ತುತ ವಸ್ತುಸಂಗ್ರಹಾಲಯದಲ್ಲಿ) ಕಮಲಾಪುರ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಪದ್ಮಾಸೀನವಾಗಿರುವ ನರಸಿಂಹ ಚತುರ್ಭುಜವುಳ್ಳವನಾಗಿದ್ದಾನೆ. ಎರಡು ಭುಜಗಳೂ ಶಿಥಿಲವಾಗಿದೆ. ಬಲಗೈಯಲ್ಲಿ ಅಭಯಹಸ್ತ, ಎಡಗೈ ವರದ ಮುದ್ರೆಯಲ್ಲಿದ್ದಾನೆ. ಕೊರಳಲ್ಲಿ ಹಾರ, ಯಜ್ಞೋಪವೀತ, ಉದರಬಂಧ, ಕೈಗಳಲ್ಲಿ ಕಂಕಣ, ವಾಜೀಬಂಧ, ತೋಳುಬಂಧಿಗಳನ್ನು ಧರಿಸಿದ್ದಾನೆ. ಸಿಂಹಮುಖ ಮನುಷ್ಯದೇಹ ಇವೆರಡರ ಸಮ್ಮಿಳನವೇ ಈ ಮೂರ್ತಿಯ ವೈಶಿಷ್ಟತೆಯಾಗಿದೆ.

ಹೆಸರು	:	ವೆಂಕಟೇಶ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ, ಕಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಚತುರ್ಭುಜ ವಿಷ್ಣು ನಿಂತ ಭಂಗಿಯಲ್ಲಿದ್ದಾನೆ. ಕಿರೀಟವು ಶಿಥಿಲವಾಗಿದೆ. ಬಲಗೈಯಲ್ಲಿ ಸುದರ್ಶನ ಚಕ್ರ, ಶಂಖ, ಎಡಗೈ ಕಟ್ಯಾವಲಂಬಿತ ಮುದ್ರೆ ಮತ್ತೊಂದು ಎಡಗೈ ಶಿಥಿಲವಾಗಿದೆ. ಕಿವಿಯಲ್ಲಿ ಮಕರ ಕುಂಡಲ, ಪುತ್ರ ಕುಂಡಲಗಳಿವೆ. ಕೊರಳಲ್ಲಿ ಕಂಠೀ ಮತ್ತು ಹಾರ, ಮಾಲ್ಯ, ಯಜ್ಞೋಪವೀತ, ಉದರ ಬಂಧ, ಕಟೀಸೂತ್ರ, ಉತ್ತರೀಯ ಬಂಧ, ಕೈಗಳಿಗೆ ತೋಳುಬಂಧಿ, ವಾಜೀಬಂಧಗಳನ್ನು ಅಲಂಕಾರಗಳು ಇದೆ. ಧೋತಿ ನೆರಿಗೆಯ ಕೆತ್ತನೆ ಕಲಾತ್ಮಕವಾಗಿದೆ.

ಹೆಸರು	:	ಪ್ರಸನ್ನ ನರಸಿಂಹ
ಸಿಕ್ಕ ಸ್ಥಳ	:	ಕಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ನಿಂತ ಭಂಗಿಯಲ್ಲಿರುವ ಈ ಮೂರ್ತಿಗೆ ಚತುರ್ಭುಜಗಳಿವೆ. ಬಲಗೈಯಲ್ಲಿ ಚಕ್ರ ಎಡಗೈಯಲ್ಲಿ ಶಂಖ ಆಯುಧಗಳನ್ನು ಧರಿಸಿದ್ದಾನೆ. ಅಭಯ ಮುದ್ರೆಯಲ್ಲಿ ಆರ್ಶೀವಾದ ಮಾಡುವ ಕಲಾತ್ಮಕ ಕೆತ್ತನೆ ಇಲ್ಲಿವೆ. ಕಟಿಬಂಧ ಧರಿಸಿದ್ದಾನೆ. ಧೋತ್ರ ನೆರಿಗೆಯ ಕೆತ್ತನೆ, ಕಾಲಲ್ಲಿ ಗೆಜ್ಜೆ ಸರ ಇವು ಮೂರ್ತಿಶಿಲ್ಪಗಳ ಲಕ್ಷಣಗಳಾಗಿವೆ.

ಹೆಸರು	:	ಲಕ್ಷ್ಮೀನರಸಿಂಹ
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಬಲಗಾಲನ್ನು ಕೆಳಗೆ ಬಿಟ್ಟು, ಸ್ಥಾನಿಕ ಭಂಯಿಲ್ಲಿ ಬಲಗಡೆ ನರಸ ಇಂಹ, ಎಡಗಡೆ ನರಸಿಂಹನ ತೊಡೆಯ ಮೇಲೆ ಲಕ್ಷ್ಮೀ ಆಸೀನಳಾಗಿದ್ದಾಆಳೆ. ಚತುರ್ಭುಜ ನರಸಿಂಹನ ಎಡಗಡೆ ಕೈಗಳಲ್ಲಿ ಶಂಖ, ದೇವಿಯ ಸೊಂಟ ಹಿಡಿದಿದ್ದಾನೆ. ಬಲಗೈಗಳಲ್ಲಿ ಚಕ್ರ ಅಭಯ ಹಸ್ತ ಹೊಂದಿದ್ದಾನೆ. ಕರಂಡ ಮುಕುಟ ಧರಿಸಿದ್ದಾನೆ. ದೇವಿಯ ಸ್ಥಾನಿಕ ಭಂಗಿಯಲ್ಲಿದೆ. ದೇವಿಯು ಮುಕುಟ ಕಿರೀಟ ಧರಿಸಿ ಎಡಗೈಯಲ್ಲಿ ಪದ್ಮವಿದೆ. ಕೊರಳಲ್ಲಿ ಕಂಠಾಭರಣ ಧರಿಸಿದ್ದಾಳೆ. ಕಾಲುಗಳಲ್ಲಿ ಗೆಜ್ಜೆ ಸರಗಳಿವೆ.

ಹೆಸರು	:	ವೇಣುಗೋಪಾಲ
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ನಿಂತಭಂಗಿಯಲ್ಲಿ ವೇಣುಗೋಪಾಲ ಚತುರ್ಭುಜವುಳ್ಳವನಾಗಿದ್ದಾನೆ. ಬಲಗೈಯಲ್ಲಿ ಚಕ್ರ ಎಡಗೈಯಲ್ಲಿ ಶಂಖ, ಎರಡು ಕೈಗಳಲ್ಲಿ ಕೊಳಲು ಹಿಡಿದು ನುಡಿಸುವಂತ ಕಲಾತ್ಮಕವಾಗಿ ಕೆತ್ತಲಾಗಿದೆ. ಮುಕುಟ ಕಿರೀಟ ಧರಿಸಿ, ಕಿರೀಟದ ಮೇಲ್ಬಾಗದಲ್ಲಿ ಐದು ಹೆಡೆ ಬಿಚ್ಚಿದ ಸರ್ಪ ಕೈಯಲ್ಲಿ ತೋಳುಬಂಧಿ, ಸೊಂಟಕ್ಕೆ ಉತ್ತರೀಯ ಬಂಧ ಮತ್ತು ಕಟೀ ಸೂತ್ರ ಪಾದಗಳ ಇಕ್ಕೆಲಗಳಲ್ಲಿ ಗೋವುಗಳು ಕೊಳಲು ನಾದವನ್ನು ಆಲಿಸುವಂತಿದೆ. ಬಲಭಾಗದಲ್ಲಿ ಮೂವರು ಎಡಭಾಗದಲ್ಲಿ ನಾಲ್ಕು ಗೋಪಿಕಾ ಸ್ತ್ರೀಯರು ನಿಂತ ಭಂಗಿಯಲ್ಲಿದ್ದಾರೆ.

ಹೆಸರು	:	ಶ್ರೀರಂಗನಾಥ ಶ್ರೀದೇವಿ ಮತ್ತು ಭೂದೇವಿಯರೊಂದಿಗೆ
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಮೂರ್ತಿ ಶಯನ ಭಂಗಿಯಲ್ಲಿರುವ ಪದ್ಮಪೀಠದ ಮೇಲಿದೆ. ಶ್ರೀದೇವಿ ಮತ್ತು ಭೂದೇವಿಯರ ತೊಡೆಗಳ ಮೇಲೆ ಚಾಚಿದ ಪಾದಗಳಿವೆ. ರತ್ನ ಕಿರೀಟ ಶಿಥಿಲವಾಗಿದೆ. ತಲೆಯ ದಿಂಬಿನ ಮುಂಭಾಗದಲ್ಲಿ ಶಂಖಮುದ್ರೆ ಇರುವ ದಿಂಬಿನ ಮೇಲೆ ಬಲಗೈ ಓರೆಯಾಗಿ ಇಟ್ಟುಕೊಂಡು ಮಲಗಿದ ಶಿಲ್ಪ ಅಂತ್ಯತ ಆಕರ್ಷಣೀಯ. ಎಡಗೈ ಹಾಳಾಗಿದೆ. ಶಿಲ್ಪದ ಕೊರಳಲ್ಲಿ ಕಂಠೀಹಾರ, ಉದರ ಬಂಧ, ಯಜ್ಞೋಪವೀತವಿದೆ. ಕಟೀಸೂತ್ರವಿದೆ. ಆದಿಶೇಷನ ಮೇಲೆ ಮಲಗಿ ನಿದ್ರಿಸುತ್ತಿರುವುದು ಶಿಲ್ಪದ ವಿಶೇಷ ಲಕ್ಷಣವಾಗಿದೆ. ಗೆಜ್ಜೆ ಸರಗಳ ಕೆತ್ತನೆ ಸೂಕ್ಷ್ಮವಾಗಿದೆ. ಶ್ರೀದೇವಿ ಭೂದೇವಿಯರು ಕಿರೀಟ ಮುಕುಟವನ್ನು ಧರಿಸಿದ್ದಾರೆ. ಕೊರಳಲ್ಲಿ ಹಾರ, ಸರ, ವೈಜಯಂತೀಹಾರ ಧರಿಸಿದ್ದಾರೆ. ಕೈಯಲ್ಲಿ ತೋಳುಬಂಧಿ, ಬಳೆಗಳನ್ನು ಧರಿಸಿದ್ದಾರೆ. ಸೀರೆಯ ನೆರಿಗೆಯ ಕೆತ್ತನೆಯು ತುಂಬಾ ಆಕರ್ಷಣೀಯವಾಗಿದೆ.

ಹೆಸರು	:	ಭಗವದ್ಗೀತಾ ಕೃಷ್ಣ
ಸಿಕ್ಕ ಸ್ಥಳ	:	ಹಂಪೆ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರ್ಯಾನೈಟ್ ಶಿಲೆ

ಸ್ಥಾನಿಕ ಭಂಗಿಯಲ್ಲಿರುವ ಕೃಷ್ಣ ಕರಂಡ ಮುಕುಟ ಧರಿಸಿದ್ದಾನೆ. ಕೃಷ್ಣ ರಥದ ಸಾರಥಿಯಾಗಿ ರಥ ಓಡಿಸುತ್ತಿರುವ ದೃಶ್ಯದ ಕೆತ್ತನೆಯನ್ನು ಅತ್ಯಂತ ಕಲಾತ್ಮಕವಾಗಿ ಚಿತ್ರಿಸಲಾಗಿದೆ. ಬಲಗೈಯಲ್ಲಿ ಕುದುರೆಯ ಲಗಾಮ ಹಿಡಿದಿದ್ದಾನೆ. ಎಡಗೈ ಅಭಯ ಮುದ್ರೆಯಲ್ಲಿದೆ. ಕೈಯಲ್ಲಿ ತೋಳುಬಂಧಿ, ವಾಜೀಬಂಧ ಮತ್ತು ಕಂಕಣಗಳಿವೆ. ಸೊಂಟಕ್ಕೆ ಕಟೀಬಂಧವಿದೆ. ಉತ್ತರೀಯ ಬಂಧವಿದೆ. ಕಾಲಲಲ್ಲಿ ಗೆಜ್ಜೆ ಸರಗಳಿವೆ.

ಅರ್ಜುನ ಮಕುಟ ಕಿರೀಟವನ್ನು ಧರಿಸಿ ಕಿವಿಯಲ್ಲಿ ವರ್ತುಲಾಕಾರದ ಒಲೆಗಳು ಬಲಗೈಯಲ್ಲಿ ಧನಸ್ಸು ಎಡಗೈಯಲ್ಲಿ ಬಾಣ ಹಿಡಿದು ರಥ ಬಿಡುತ್ತಿರುವಂತಿದೆ. ಈ ಶಿಲ್ಪ ಕೆತ್ತನೆಯ ಕೆಲಸ ತುಂಬಾ ಕಲಾತ್ಮಕವಾಗಿ ಕೆತ್ತಲಾಗಿದೆ.

ಹೆಸರು	:	ವೇಣು ಗೋಪಾಲ
ಸಿಕ್ಕ ಸ್ಥಳ	:	ವೇಣು ಗೋಪಾಲ ದೇವಾಲಯ, ಕಮಲಾಪುರ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ನಂತ ಭಂಗಿ ಕೈಯಲ್ಲಿ ನಾಲ್ಕು ಕೈಗಳನ್ನು ಹೊಂದಿದ್ದಾನೆ. ಕೊಳಲನ್ನು ಎರಡು ಕೈಗಳಿಂದ ಹಿಡಿದು ಊದುವ ದೃಶ್ಯ ಸುಂದರ. ಉಳಿದ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರ ಹಿಡಿದಿದ್ದಾನೆ. ತ್ರಿಭಂಗಿಯಲ್ಲಿದೆ. ಈ ಮೂರ್ತಿಯ ತಲೆಯ ಹಿಂಬದಿಯಲ್ಲಿ ಆದಿಶೇಷನಿದ್ದಾನೆ. ಕೈಯಲ್ಲಿ, ವಾಜೀಬಂಧ, ತೋಳುಬಂಧಿ, ಕಂಕಣ ಕರಂಡ ಮುಕುಟ, ಕಾಲಗಳಲ್ಲಿ ಗೆಜ್ಜೆ ಸರಗಳಿವೆ. ಅಕ್ಕಪಕ್ಕದಲ್ಲಿ ಗೋವುಗಳು ಕೊಳಲಿನ ನಾದವನ್ನು ಆಲಿಸುವಂತಿದೆ.

ಹೆಸರು	:	ವೇಣುಗೋಪಾಲ
ಸಿಕ್ಕ ಸ್ಥಳ	:	ಪಾಂಡುರಂಗ ದೇವಸ್ಥಾನದ ಹಿಂದೆ ಕೃಷ್ಣದೇವಾಲಯದಲ್ಲಿ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ನಿಂತಭಂಗಿಯಲ್ಲಿರುವ ಕರಂಡ ಮಕುಟ ಧರಿಸಿದ ವೇಣುಗೋಪಾಲ ಚತುರ್ಭುಜಧಾರಿ. ಬಲಗೈಯಲ್ಲಿ ಚಕ್ರ ಎಡಗೈಯಲ್ಲಿ ಶಂಖ ಆಯುಧ ಹಿಡಿದಿದ್ದಾನೆ. ಉಳಿದ ಎರಡು ಕೈಗಳಿಂದ ಕೊಳಲನ್ನು ಹಿಡಿದ ದೃಶ್ಯ ಮನೋಹರವಾಗಿದೆ. ಕೈಯಲ್ಲಿ ತೋಳುಬಂಧಿ, ವಾಜೀಬಂಧ, ಕಂಕಣ ಧರಿಸಿದ್ದಾನೆ. ಕೊರಳಲ್ಲಿ ಕಂಠೀಹಾರ, ವೈಜಯಂತೀಹಾರ ಕಟೀಸೂತ್ರ ಉತ್ತರೀಯ ಬಂಧ, ಪಾದಗಳಲ್ಲಿ ಕಡಗ ಧರಿಸಿದ್ದಾನೆ. ಶಿರದ ಹಿಂಭಾಗದಲ್ಲಿ ಏಳು ಹೆಡೆಯ ಸರ್ಪವಿದೆ. ಪಾದಗಳ ಇಕ್ಕೆಲುಗಳಲ್ಲಿ ಗೋವುಗಳು ಕೊಳಲಿನ ನಾದವನ್ನು ಆಲಿಸುವಂತಿದೆ.

ಶೈವಮೂರ್ತಿಶಿಲ್ಪಗಳು

ಶೈವ ಪಂಥ ಪ್ರಾಚೀನ ಪಂಥವೆಂಬುದಂತೂ ಸ್ಪಷ್ಟ. ಶೈವ ಮೂರ್ತಿಗಳು ಸರ್ವತ್ರ ವ್ಯಾಪಿಸಿದೆ. ತ್ರಿಮೂರ್ತಿಗಳಲ್ಲಿ ಮೂರನೆಯ ಶಿವ. ಮೂರ್ತಿ ರೂಪಕ್ಕಿಂತ ಅಮೂರ್ತವಾದ ಲಿಂಗರೂಪದಲ್ಲಿಯೇ

ಹೆಚ್ಚಿನ ಮಟ್ಟಿಗೆ ಶಿವನನ್ನು ಪೂಜಿಸುವ ಸಂಪ್ರದಾಯವಿದೆ. ಶಿವಪೂಜೆ ಎಂದರೆ ಲಿಂಗಪೂಜೆಯೇ (ಸ್ವಾಮಿ ಹರ್ಷಾನಂದ ೧೯೫೨ ಪು. ೫೯) ಶಿವ ಪ್ರಳಯ ಕರ್ತೃ. ಶಿವಲಿಂಗದಲ್ಲಿ ಎರಡು ವಿಧಗಳಿವೆ. ಒಂದು ಚಲ ಎರಡು ಅಚಲ. ಕಾಮಲಾಪುರ ಗ್ರಾಮಕ್ಕೆ ಪ್ರಸ್ತುತ ಅಧ್ಯಯನ ಸೀಮಿತ ಮಾಡಿಕೊಂಡು ಕಾಮಲಾಪುರ ಗ್ರಾಮದ ಶೈವ ದೇವಾಲಯಗಳ ಅಧ್ಯಯನ ಇಲ್ಲಿ ಮಾಡಲಾಗಿದೆ. ಮುಖ್ಯವಾಗಿ ಈಶ್ವರಲಿಂಗ, ಭಿಕ್ಷಾಟನಾಮೂರ್ತಿ ಶಿವ, ಶಿವ ಆತ್ಮಲಿಂಗದೊಡನೆ, ಉಮಾಮಹೇಶ್ವರ, ನಗರೇಶ್ವರ, ದೇವಾಲಯದಲ್ಲಿಯ ಶಿವಲಿಂಗ ಇವು ಮುಖ್ಯವಾದ ಶಿವಲಿಂಗ ಮತ್ತು ಶೈವಮೂರ್ತಿಗಳು ಇಲ್ಲಿವೆ.

ಶೈವ ಪಂಥಕ್ಕೆ ಸೇರಿದ ಇತರ ಮೂರ್ತಿಶಿಲ್ಪಗಳು ಕಾಮಲಾಪುರ ಗ್ರಾಮದಲ್ಲಿವೆ. ಅವುಗಳಲ್ಲಿ ಮುಖ್ಯವಾಗಿ ವೀರಭದ್ರ, ಭೈರವ ಮತ್ತು ನಂದಿ ಮೂರ್ತಿಶಿಲ್ಪಗಳು ಮುಖ್ಯವಾಗಿವೆ. ಭೈರವ ಶಿಲ್ಪ ಮೂರ್ತಿ ಈತನಿಗೆ ಕಾಲ ಭೈರವನೆಂತಲೂ ಕರೆಯುತ್ತಾರೆ. 'ಕ್ಷೇತ್ರ ಪಾಲ' ಎಂದು ಕರೆಯಲು ಕಾರಣ. ಈ ಕ್ಷೇತ್ರವನ್ನು ರಕ್ಷಿಸು ಎಂದರ್ಥ. ಬತ್ತಲೆ, ಹರಡಿದ ತಲೆಕೂದಲು, ಕೈಗಳಿಲ್ಲಿ ಕತ್ತಿ, ಶೂಲ, ಕಪಾಲ ಡಮರು, ಕೊರೆ, ಹಲ್ಲಿನ ದೃಶ್ಯ ಇವು ಭೈರವ ಮೂರ್ತಿಶಿಲ್ಪದ ಲಕ್ಷಣಗಳು. ಕಪಾಲ ಹಿಡಿದು ಭಿಕ್ಷಾಟನೆ ಮಾಡುವ ದೃಶ್ಯವಿದ್ದರೆ ಭಿಕ್ಷಾಟನೆ ಎಂದು ಕರೆಯುತ್ತಾರೆ. ಶಿವನು ಸೃಷ್ಠಿಸುವ ಇನ್ನೊಂದು ರೂಪವೇ ವೀರಭದ್ರ ಬಿಲ್ಲು, ಬಾಣ, ಕತ್ತಿ, ಗಧೆ, ತಲೆಬರುಡೆಯ ಸರಮಾಲೆ ಉಗ್ರರೂಪ, ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ. ನಂದಿಕೇಶ್ವರ ಶಿವಗಣಗಳಿಗೆ ಮುಖ್ಯಸ್ಥ ಅಧಿಕಾರ ನಂದಿ ಎಂದು ಕರೆಯುತ್ತಾರೆ. ವೃಷಭ ಅಥವಾ ನಂದಿ ಸಂಕೇತದಿಂದಲೂ ತೋರಿಸುತ್ತಾರೆ. ಕಾಮಲಾಪುರದ ನಂದಿಕೇಶ್ವರ ಮೂರ್ತಿಗಳೆಲ್ಲವೂ ಈ ಮಾದರಿಯವು ಒಟ್ಟಾರೆ ಇಲ್ಲಿ ಲಭ್ಯವಾದ ಮೂರ್ತಿಶಿಲ್ಪಗಳ ಹಿನ್ನೆಲೆಯ ಆಧಾರದಲ್ಲಿ ಇಲ್ಲಿ ಕೆಲವು ಆಯ್ದು ಮೂರ್ತಿಶಿಲ್ಪಗಳ ಲಕ್ಷಣಗಳನ್ನು ಅಧ್ಯಯನಕ್ಕೆ ಅಳವಡಿಸಲಾಗಿದೆ.

ಹೆಸರು	:	ಈಶ್ವರಲಿಂಗ
ಸಿಕ್ಕ ಸ್ಥಳ	:	ಹಂಪಿ ಬಜಾರದ ಎದುರುಗಡೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಶಿವಲಿಂಗ ಪಾಣಿಪೀಠದ ಮೇಲೆ ಇದೆ. ಮೇಲ್ಭಾಗ ಚಪ್ಪಟೆಯಾಕಾರದರಲ್ಲಿದೆ. ಲಿಂಗದ ಮುಖ ಭಾಗದಲ್ಲಿ ಬ್ರಹ್ಮಸೂತ್ರವಿರುವುದು ವಿಶೇಷ ಲಕ್ಷಣಗಳಲ್ಲಿ ಒಂದು.

ಹೆಸರು	:	ಈಶ್ವರಲಿಂಗ
ಸಿಕ್ಕ ಸ್ಥಳ	:	ವೀರಭದ್ರ ದೇವಾಲಯ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

[illegible]

[illegible]

[illegible]

[illegible]

ವೀರಭದ್ರ ದೇವಾಲಯದಲ್ಲಿ ವೀರಭದ್ರ ಮೂರ್ತಿಶಿಲ್ಪದ ಬಲಭಾಗದಲ್ಲಿದೆ. ಇದರ ಮುಖಭಾಗದಲ್ಲಿ 'ಓಂ' ಎಂಬ ಅಕ್ಷರ ಕೆತ್ತಲಾಗಿದೆ. ಮುಖಭಾಗದಲ್ಲಿ ಬ್ರಹ್ಮಸೂತ್ರವೂ ಇದೆ.

ಹೆಸರು : ಈಶ್ವರಲಿಂಗ
ಸಿಕ್ಕ ಸ್ಥಳ : ಹಂಪಿ
ರಾಜವಂಶ/ಮಾಂಡಲೀಕರು : ವಿಜಯನಗರ
ಕಾಲ : ೧೬ನೇ ಶತಮಾನ
ವಸ್ತು : ಗ್ರಾನೈಟ್ ಶಿಲೆ

ಈ ಶಿವಲಿಂಗ ಪಾಣಿ ಪೀಠದ ಮೇಲಿದೆ. ಶಿಲಿಂಗದ ಮೇಲೆ ಹೂವಿನ ಗುಚ್ಚವನ್ನು ಇಟ್ಟಿರುವುದು ಇದೊಂದು ವೈಶಿಷ್ಠತೆ ಎಂದು ಹೇಳಬೇಕು.

ಹೆಸರು : ಶಿವ ಆತ್ಮಲಿಂಗದೊಡನೆ
ಸಿಕ್ಕ ಸ್ಥಳ : ಹಂಪಿ
ರಾಜವಂಶ/ಮಾಂಡಲೀಕರು : ವಿಜಯನಗರ
ಕಾಲ : ೧೬ನೇ ಶತಮಾನ
ವಸ್ತು : ಗ್ರಾನೈಟ್ ಶಿಲೆ

ಧ್ಯಾನ ಭಂಗಿಯಲ್ಲಿದ್ದ ಶಿವ ಸರ್ಪದ ಮೇಲೆ ಆಸೀನನಾಗಿದ್ದಾನೆ. ಚತುರ್ಭುಜಧಾರಿಯಾಗಿ ಎಡಗೈಯಲ್ಲಿ ಶಿವಲಿಂಗ, ಜಪಮಾಲೆ ಕತ್ತಿ ಹಿಡಿದಿದ್ದಾನೆ. ವ್ಯಾಖ್ಯಾನ ಮುದ್ರೆಯಲ್ಲಿದೆ. ಜಟಾಮುಕುಟ ಕಿವಿಯಲ್ಲಿ ವರ್ತುಲಾಕಾರದ ಓಲೆಗಳು ಕಾಲಿಗೆ ಕಾಲ್ಕಡಗ ಇರುವುದು ಈ ಮೂರ್ತಿಶಿಲ್ಪದ ಲಕ್ಷಣಗಳು.

ಹೆಸರು : ಶಿವಲಿಂಗ
ಸಿಕ್ಕ ಸ್ಥಳ : ಅಗ್ರತಟಾಕ
ರಾಜವಂಶ/ಮಾಂಡಲೀಕರು : ವಿಜಯನಗರ
ಕಾಲ : ೧೫ನೇ ಶತಮಾನ
ವಸ್ತು : ಗ್ರಾನೈಟ್ ಶಿಲೆ

ಈ ಮೂರ್ತಿಶಿಲ್ಪದಲ್ಲಿ ಸರ್ಪದ ದೇಹವನ್ನೇ ಪಾಣಿ ಪೀಠವನ್ನಾಗಿ ಮಾಡಿಕೊಂಡು ತಲೆಯ ಮೇಲೆ ಏಳು ಹೆಡೆಯ ಸರ್ಪ ಇದೆ. ಬ್ರಹ್ಮಸೂತ್ರ ಶಿವಲಿಂಗದ ಇನ್ನೊಂದು ವಿಶೇಷತೆ.

ಹೆಸರು : ನಗರೇಶ್ವರ
ಸಿಕ್ಕ ಸ್ಥಳ : ನಗರೇಶ್ವರ ದೇವಾಲಯ
ರಾಜವಂಶ/ಮಾಂಡಲೀಕರು : ವಿಜಯನಗರೋತ್ತರ
ಕಾಲ : ೧೬ನೇ ಶತಮಾನ
ವಸ್ತು : ಕಪ್ಪುಶಿಲೆ

ಕಪ್ಪುಶಿಲೆಯ ಪಾಣಿ ಪೀಠದ ಮೇಲೆ ಈ ಶಿವಲಿಂಗವಿದೆ. ಆದರೆ ನಗರೇಶ್ವರ ಎಂಬ ಹೆಸರು ಕರೆಯುವ ವಾಡಿಕೆ ಇದೆ. ಲಿಂಗದ ಮುಖಭಾಗದಲ್ಲಿ ಬ್ರಹ್ಮಸೂತ್ರವಿರುವುದು ಈ ಮೂರ್ತಿಶಿಲ್ಪದ ವೈಶಿಷ್ಟತೆ.

ಹೆಸರು	:	ಉಮಾಮಹೇಶ್ವರ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಉಮಾಮಹೇಶ್ವರ ಮೂರ್ತಿಶಿಲ್ಪದಲ್ಲಿ ಎರಡು ವಿಧ. ಒಂದು ಮಹೇಶ್ವರ ಉಗ್ರನಾಗಿ. ಎರಡು ಮಹೇಶ್ವರ ಶಾಂತ ಸ್ವರೂಪ (ಭಟ್‌ಸೂರಿ.ಕೆ.ಜಿ.೧೯೫೫, ಪು. ೩೦) ಇಲ್ಲಿ ದೊರೆತ ಮೂರ್ತಿಶಿಲ್ಪ. ಎರಡನೇಯ ಸ್ವರೂಪಕ್ಕೆ ಸೇರಿದೆ. ಇಲ್ಲಿ ಮಹೇಶ್ವರ ಸುಖಾಸನದಲ್ಲಿ ಕುಳಿತಿದ್ದು ನಾಲ್ಕು ಕೈಗಳಿವೆ. ಮೇಲಿನ ಬಲಗೈಯಲ್ಲಿ ಡಮರುಗ, ಎಡಗೈಯಲ್ಲಿ ಖಡ್ಗ ಹಿಡಿದಿದ್ದಾನೆ. ಕೆಳ ಬಲಗೈಯ ಅಭಯಹಸ್ತದಲ್ಲಿದ್ದು ಇನ್ನೊಂದು ಎಡಗೈ ಪಾರ್ವತಿಯ ಬೆನ್ನಮೇಲೆ ಇದೆ. ಪಾರ್ವತಿ ಶಿವನ ಎಡ ತೊಡೆಯ ಮೇಲೆ ಸುಖಾಸೀನದಲ್ಲಿದ್ದಾಳೆ. ಮಕುಟು, ಕಿರೀಟ, ಕಂಠಹಾರ, ಕಿವಿ ಓಲೆ, ಕೈ ಬಳೆ, ಕಾಲ್ಕಡಗ ಯಜ್ಞೋಪವೀತ, ಭುಜಬಂಧ ಧರಿಸಿದ್ದಾನೆ. ಇವು ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು	:	ವೀರಭದ್ರ
ಸಿಕ್ಕ ಸ್ಥಳ	:	ಪ್ರಾಚ್ಯ ಸಂಶೋಧನಾ ಇಲಾಕೆಯ ಹೊರ ಆವರಣ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ವೀರಭಂಗದಲ್ಲಿ ನಿಂತಿದ್ದು ಈ ಮೂರ್ತಿಶಿಲ್ಪಕ್ಕೆ ನಾಲ್ಕು ಕೈಗಳಿವೆ. ಬಲಗೈಗಳಲ್ಲಿ ಕತ್ತಿ-ಬಾಣ, ಎಡಗೈಗಳಲ್ಲಿ ಬಿಲ್ಲು ಈಟಿ ಹಿಡಿದಿದ್ದಾನೆ. ಕರಂಡ ಮುಕುಟ, ಕಂಠೀಹಾರ, ರುಂಡುಮಾಲೆ, ಉದರ ಬಂಧ, ಕೈಬಳೆ ಮತ್ತು ಕಾಲ್ಕಡಗ ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ. ಟಗರು ತಲೆಯ ದಕ್ಷ ಬ್ರಹ್ಮ ಬಲಗಡೆ ಅಂಜಲಿ ಮುದ್ರೆಯಲ್ಲಿದ್ದಾನೆ.

ಹೆಸರು	:	ವೀರಭದ್ರ
ಸಿಕ್ಕ ಸ್ಥಳ	:	ನಗರೇಶ್ವರ ದೇವಾಲಯದ ಬಲಭಾಗದಲ್ಲಿ
ರಾಜವಂಶ/ಮಾಂಡಲೀಕ	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕ್ಲೋರೈಟಿಕ್‌ಸಿಸ್ಟ್

ಇಲ್ಲಿ ವೀರಭದ್ರ ನಿಂತ ಭಂಗಿಯಲ್ಲಿದ್ದು ಚತುರ್ಭುಜಗಳಿವೆ. ಬಲ ಮೇಲಿನ ಕೈ ಬಾಣ, ಎಡ ಮೇಲಿನ ಕೈ ಬಿಲ್ಲು. ಬಲ ಕೆಳಗಿನ ಕೈ ಖಡ್ಗ ಮತ್ತು ಎಡ ಕೆಳಗಿನ ಕೈ ಗುರಾಣಿಯನ್ನು ಹಿಡಿದು ನಿಂತಿದ್ದಾನೆ. ಮಕುಟ, ವರ್ತುಲಾಕಾರದ ಕಿವಿ ಓಲೆ, ಕಂಠಹಾರ, ಯಜ್ಞೋಪವೀತ, ಕಪೀಬಂಧ, ಇವು ಈ ಮೂರ್ತಿಶಿಲ್ಪಕ್ಕೆ ಮೆರಗನ್ನು ನೀಡಿವೆ. ಬಲಭಾಗದಲ್ಲಿ ದಕ್ಷ ಬ್ರಹ್ಮ ಅಂಜಲಿ ಮುದ್ರೆಯಲ್ಲಿದ್ದಾನೆ.

ಹೆಸರು	:	ವೀರಭದ್ರ
ಸಿಕ್ಕ ಸ್ಥಳ	:	ನಗರೇಶ್ವರ ದೇವಾಲಯದ ಹೊರಾವರಣ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಇಲ್ಲಿ ವೀರಭದ್ರ ನಿಂತ ಭಂಗದಲ್ಲಿ ನಿಂತಿದ್ದು ಎರಡು ಕೈಗಳಿವೆ. ಜಟಾಮುಕುಟ, ವರ್ತುಲಾಕಾರದ ಓಲೆ, ಕಂಠಹಾರ, ಯಜೋಪವೀತ ಧರಿಸಿದ್ದಾನೆ. ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಗುರಾಣಿ ಹಿಡಿದು ರುಂಡದ ಮೇಲೆ ನೆಲಕ್ಕೆ ಊರಿದ್ದಾವೆ. ಭುಜಬಂಧ, ಕೈಬಳೆ, ಕಟೀಬಂಧ, ರುಂಡಮಾಲೆ ಧರಿಸಿದ್ದಾನೆ. ಮುಳ್ಳಾವಿಗೆಯ ಮೇಲೆ ನಿಂತಿದ್ದು ಬಲಗಡೆ ದಕ್ಷ ಬ್ರಹ್ಮನಿದ್ದಾನೆ. ಈ ಮೂರ್ತಿಶಿಲ್ಪದ ಪ್ರಭಾವಳಿ ಕೀರ್ತಿ ಮುಖಾಲಂಕೃತವಾಗಿದೆ.

ಹೆಸರು	:	ವೀರಭದ್ರ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ದ್ವಿಭಂಗದಲ್ಲಿ ನಿಂತಿದ್ದು. ಚತುರ್ಭುಜನಾಗಿದ್ದಾನೆ. ಬಲಭಾಗದ ಕೈಗಳಲ್ಲಿ ಬಾಣ, ಖಡ್ಗ, ಎಡಕೈಗಳಲ್ಲಿ ಬಿಲ್ಲು, ಗುರಾಣಿ ಹಿಡಿದು ನೆಲಕ್ಕೆ ಊರಿದಂತಿದೆ. ಕರಂಡಮುಕುಟ, ವರ್ತುಲಾಕಾರದ ಕಿವಿಯೋಲೆ, ಕಂಠಹಾರ, ಭುಜಭಂದ, ಯಜ್ಞೋಪವೀತ, ಕಟೀಬಂಧ, ಸೊಂಟಕ್ಕೆ ಬಲಗಡೆ ಕತ್ತಿ ಸಿಕ್ಕಿಸಿದಂತಿದೆ. ಕೊರಳಲ್ಲಿ ರುಂಡಮಾಲೆ, ಯಜ್ಞೋಪವೀತ, ಬಲ ಬದಿಯಲ್ಲಿ ಟಗರು ತಲೆಯ ದಕ್ಷ ಬ್ರಹ್ಮ ಅಂಜಲಿ ಮುದ್ರೆಯಲ್ಲಿ ನಿಂತಿರುವುದು. ಕೀರ್ತಿಮುಖದ ಪ್ರಭಾವಳಿ ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳು.

ಹೆಸರು	:	ವೀರಭದ್ರ
ಸಿಕ್ಕ ಸ್ಥಳ	:	ಕ.ವಿ.ವಿ. ಆವರಣ, ಕಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಈ ಮೂರ್ತಿಶಿಲ್ಪ ನಿಂತ ಭಂಗಿಯಲ್ಲಿದ್ದು ಒಟ್ಟು ಎಂಟು ಕೈಗಳಿವೆ. ಬಲಗೈಗಳಲ್ಲಿ ತ್ರಿಶೂಲ, ವಜ್ರ ಖಡ್ಗ ಹಿಡಿದಿದ್ದಾನೆ. ಎಡಗೈಗಳಲ್ಲಿ ಕತ್ತೆ, ಬಿಲ್ಲು, ಗುರಾಣಿ ಮತ್ತು ಬಿಲ್ಲು ಹಿಡಿದಂತಿದೆ. ಕಿರೀಟ ಮಕುಟ ಕಂಠಹಾರ, ರುಂಡಮಾಲೆ ವರ್ತುಲಾಕಾರದ ಕಿವಿ ಓಲೆ, ಉದರಬಂಧ ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ. ಬಲಕ್ಕೆ ಟಗರು ತಲೆಯ ದಕ್ಷ ಬ್ರಹ್ಮನಿದ್ದಾನೆ. ಇವು ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು	:	ವೀರಭದ್ರ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಇಲ್ಲಿ ವೀರಭದ್ರ ನಿಂತ ಭಂಗಿಯಲ್ಲಿದ್ದಾನೆ. ಹತ್ತು ಕೈಗಳಿವೆ. ಬಲಗೈಗಳಲ್ಲಿ ಖಡ್ಗ, ಡಮರುಗ, ಈಟಿ, ತ್ರಿಶೂಲ, ಎಡಗೈಗಳಲ್ಲಿ ಕತ್ತಿ, ಚಾಕು, ಬಿಲ್ಲು, ಬಾಣ ಹಿಡಿದ್ದಾನೆ. ಉಳಿದ ಆಯುಧಗಳು ಅಸ್ಪಷ್ಟ. ಜಟಾಮಕುಟ, ಕಿವಿಯಲ್ಲಿ ವರ್ತುಲಾಕಾರದ ಓಲೆ, ಕಂಠಹಾರ, ಭುಜಬಂದ, ಕೈಬಳೆ, ಕಾಲ್ಕಡಗ ಭುಜಬಂಧ ಕಪೀಬಂಧ ಯಜ್ಞೋಪವೀತ ಧರಿಸಿದ್ದಾನೆ. ಪ್ರಭಾವಳಿ ಕೀರ್ತಿಮುಖಾಲಂಕೃತವಾಗಿ ಸೂಕ್ಷ್ಮ ಕೆತ್ತನೆಯಿಂದ ಕೂಡಿದೆ.

ಹೆಸರು	:	ಭೈರವ
ಸಿಕ್ಕ ಸ್ಥಳ	:	ಪಟ್ಟಾಭಿರಾಮ ದೇವಾಲಯ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ಇಲ್ಲಿ ಭೈವರ ಮೂರ್ತಿ ನಿಂತ ಭಂಗಿಯಲ್ಲಿದ್ದು ನಾಲ್ಕು ಕೈಗಳಿವೆ. ಬಲಗೈಯಲ್ಲಿ ಖಡ್ಗ, ಡಮರುಗ ಎಡಗೈಯಲ್ಲಿ ರುಂಡ, ತ್ರಿಶೂಲವಿದೆ. ಕೊರೆದವಡೆ ಭಯಂಕರ ದೃಶ್ಯ ಭೈರವ ಮೂರ್ತಿಯ ಇನ್ನೊಂದು ಲಕ್ಷಣ. ಕಿರೀಟ ಮಕುಟ, ಕಂಠಹಾರ, ಕಾಲ್ಕಡಗ ಕೈಬಳೆ ಬೆತ್ತಲೆಯನ ಧೃಶ್ಯ ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು	:	ವೀರಭದ್ರ
ಸಿಕ್ಕ ಸ್ಥಳ	:	ಆರ್.ಕೆ.ಇ.ಪಿ. ಶಾಲೆ, ಕಾಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಮೂರ್ತಿಶಿಲ್ಪ ನಿಂತ ಭಂಗಿಯಲ್ಲಿದೆ. ನಾಲ್ಕು ಕೈಗಳಿವೆ. ಬಲಗೈಯಲ್ಲಿ ಖಡ್ಗ, ಬಾಣ ಎಡಗೈಯಲ್ಲಿ ಗಧೆ ಬಿಲ್ಲು ಹಿಡಿದಿದ್ದಾರೆ. ಕಿರೀಟ ಮಕುಟು, ವರ್ತಲಾಕಾರದ ಓಲೆ, ಕಂಠಹಾರ ಭುಜಬಂಧ, ಕೈಬಳೆ, ಯಜ್ಞೋಪವೀತ, ಕಟೀಬಂಧ ರುಂಡಮಾಲೆ ಧರಿಸಿರುವುದು ಈ ಮೂರ್ತಿಶಿಲ್ಪದ ವೈಶಿಷ್ಟ್ಯಗಳಾಗಿವೆ. ಕೀರ್ತಿಮುಖದಿಂದ ಪ್ರಭಾವಳಿ ಅಲಂಕೃತವಾಗಿದೆ. ವೀರಭದ್ರನ ಬಲಭಾಗದಲ್ಲಿ ಟಗರು ತಲೆಯ ದಕ್ಷ ಬ್ರಹ್ಮ ಅಂಜಲಿ ಮುದ್ರೆಯಲ್ಲಿದ್ದಾನೆ.

ಹೆಸರು	:	ಭಿಕ್ಷಾಟನಾಮೂರ್ತಿ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಇಲ್ಲಿ ಈ ಮೂರ್ತಿಶಿಲ್ಪ ಕುಳಿತ ಭಂಗಿಯಲ್ಲಿದೆ. ನಾಲ್ಕು ಭುಜಗಳಿವೆ. ಬಲಗೈಯಲ್ಲಿ ತ್ರಿಶೂಲ, ಖಡ್ಗ, ಎಡಗೈಯಲ್ಲಿ ಡಮರುಗ, ಕಪಾಲ, ಹಿಡಿದಂತಿದೆ. ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕರಂಡ ಮುಕುಟ, ವರ್ತುಲಾಕಾರದ ಓಲೆ, ಕಟೀಬಂಧ ಕಾಲಿಗೆ ಕಾಲ್ಕಡಗವಿದೆ. ಪ್ರಭಾವಳಿಗೆ ಕೀರ್ತಿಮುಖ ಇದ್ದು ಸೂಕ್ಷ್ಮ ಕೆತ್ತನೆಯನ್ನು ಒಳಗೊಂಡಿದೆ.

ಹೆಸರು	:	ಭಿಕ್ಷಾಟನಾಮೂರ್ತಿ
ಸಿಕ್ಕ ಸ್ಥಳ	:	ಅಚ್ಯುತಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಈ ಮೂರ್ತಿಶಿಲ್ಪ ನಿಂತ ಭಂಗಿಯಲ್ಲಿದೆ. ನಾಲ್ಕು ಕೈಗಳಿವೆ. ಬಲಗೈಯಲ್ಲಿ ತ್ರಿಶೂಲ, ಖಡ್ಗ, ಎಡಗೈಯಲ್ಲಿ ಡಮರುಗ, ಭಿಕ್ಷಾಟನಾ ಪಾತ್ರೆ ಹಿಡಿದಿದ್ದಾನೆ. ಕಿರೀಟ ಮಕುಟ, ಕಿವಿಯಲ್ಲಿ ವೃತ್ತಾಕಾರದ ಓಲೆ ಯಜ್ಞೋಪನಾವೀತ ಇವು ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು	:	ಭೈರವಮೂರ್ತಿ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಇಲ್ಲಿ ಭೈರವಮೂರ್ತಿ ನಿಂತ ಭಂಗಿಯಲ್ಲಿದೆ. ಸಾತ್ವಿ ರೂಪದ ಈ ಭೈರವ ಭತ್ತಲೆಯಾಗಿದ್ದಾನೆ. ನಾಲ್ಕು ಕೈಗಳಿವೆ. ಬಲಗೈಯಲ್ಲಿ ಡಮರುಗ ಕತ್ತಿ ಹಿಡಿದಿದ್ದಾನೆ. ಎಡಗೈಯಲ್ಲಿ ರುಂಡ, ತ್ರಿಶೂಲ ಹಿಡಿದಿದ್ದಾನೆ. ಕಿರೀಟ ಮಕುಟ, ರುಂಡಮಾಲೆ ಕಾಲಿಗೆ ಸುತ್ತಿಕೊಂಡ ಸರ್ಪ, ಕಟೀಬಂಧ ವರ್ತುಲಾಕಾರದ ಓಲೆ, ಕೈಬಳೆ, ಕಾಲ್ಕಡಗ ಇವು ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು	:	ನಂದಿ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಈ ನಂದಿ ಶಿಲ್ಪ ಕುಳಿತ ಭಂಗಿಯಲ್ಲಿದೆ. ಕೊರಳಲ್ಲಿ ಅಗಲವಾದ ಕಂಠಹಾರ, ಘಂಟೆಯ ಗೆಜ್ಜೆ ಸರ, ಹಣೆಯಲ್ಲಿ ಪಟ್ಟಿಗೆ ಬೆನ್ನಗೂನ ಕೆಳಗೆ ಮಣಿ ಸರಳಗಳಿಂದ ಅಲಂಕೃತವಾಗಿದೆ.

ಹೆಸರು	:	ನಂದಿ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಕುಳಿತ ಭಂಗಿಯಲ್ಲಿದೆ. ಎಡಕ್ಕೆ ಮುಖ ಮಾಡಿಕೊಂಡಂತಿದೆ. ಕೊರಳಲ್ಲಿ ಘಂಟೆಯ ಗೆಜ್ಜೆ ಸರ ಬೆನ್ನ ಹಿಂಬದಿಗೆ ಅಗಲವಾದ ಹಾರ ನೋಡಲು ಆಕರ್ಷಣೀಯ.

ಹೆಸರು	:	ನಂದಿ
ಸಿಕ್ಕ ಸ್ಥಳ	:	ನಗರೇಶ್ವರ ದೇವಾಲಯದ ಹೊರ ಆವರಣ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಕುಳಿತ ಭಂಗಿಯಲ್ಲಿದೆ. ಹಣೆಪಟ್ಟಿ ಧರಿಸಿದೆ. ಕೊರಳಲ್ಲಿ ಗೆಜ್ಜೆ ಸರ ಮಧ್ಯೆ ಗಂಟೆ ಬೆನ್ನಗೂನ ಕೆಳಭಾಗಕ್ಕೆ ಅಗಲವಾದ ಹಾರ ಧರಿಸಿದೆ. ಇವು ಈ ಮೂರ್ತಿಶಿಲ್ಪದ ವೈಶಿಷ್ಟ್ಯಗಳಾಗಿವೆ.

ಹೆಸರು	:	ಕಾರ್ತಿಕೇಯ
ಸಿಕ್ಕ ಸ್ಥಳ	:	ಅಚ್ಯುತಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಇಲ್ಲಿ ಕಾರ್ತಿಕೇಯ ನಿಂತ ಭಂಗಿಯಲ್ಲಿದ್ದು ನವಿಲನ್ನೇ ವಾಹನವನ್ನಾಗಿ ಮಾಡಿಕೊಂಡಿದ್ದಾನೆ. ನಾಲ್ಕು ಕೈಗಳಿವೆ. ಎಡಗೈಯಲ್ಲಿ ತ್ರಿಶೂಲ, ಬಿಲ್ಲು, ಬಲಗೈಯಲ್ಲಿ ಬಾಣ, ಪದ್ಮ ಹಿಡಿದಿದ್ದಾನೆ. ಕಿರೀಟ ಮಕುಟ ಕಂಠಹಾರ, ತೋಳುಬಂಧಿ, ಕೈಬಳೆ, ಉದರ ಬಂಧ ನೆರಿಗೆಯುಳ್ಳ ಧೋತ್ರ ಈ ಮೂರ್ತಿಶಿಲ್ಪಕ್ಕೆ ಮೆರಗನ್ನು ನೀಡಿದೆ. ಅಕ್ಕ-ಪಕ್ಕ ದೇವಸೇನೆಯರು ನಿಂತ ಭಂಗಿಯಲ್ಲಿದ್ದು ಕೈಯಲ್ಲಿ ಖಡ್ಗ ಹಿಡಿದಂತಿದೆ.

ಶಾಕ್ತ ಮೂರ್ತಿಶಿಲ್ಪಗಳು

ಸೃಷ್ಟಿ ಕರ್ತ ಬ್ರಹ್ಮ, ಸ್ಥಿತ ಕರ್ತೃ ವಿಷ್ಣು ಪ್ರಳಯ ಕರ್ತೃ ಶಿವನ ಪಾಲಾದರೆ ಸಮಸ್ತ ಸೃಷ್ಟಿಗೆ ಮೂಲಕಾರಣ ಕೃರ್ತ್ರು ಶಕ್ತಿ ಎಂಬುದನ್ನು ಮರೆಯುವಂತಿಲ್ಲ. ಆ ಶಕ್ತಿಯೇ ದೇವಿ. ದೇವಿ ಸೃಷ್ಟಿ ಮಾಡಲು ಮಹಾಕಾಳಿಯಾಗಿ, ಐಶ್ವರ್ಯ ನೀಡಲು ಶ್ರೀಲಕ್ಷ್ಮಿಯಾಗಿ, ಜ್ಞಾನ ನೀಡಲು ಸರಸ್ವತಿಯಾಗಿ, ಸಂಹಾರ ಮಾಡಲು ರೌದ್ರಳಾಗಿ, ಐಶ್ವರ್ಯ ನಾಶಮಾಡಲು ಜೇಷ್ಠಾದೇವಿಯಾಗುತ್ತಾಳಂತೆ. ದೇವಿಯ ವರ್ಣನೆ ಕುರಿತು ಮಾಕಾಂಡೇಯ ಪುರಾಣ, ದೇವಿ ಮಹಾತ್ಮೆಯಲ್ಲೂ ಉಲ್ಲೇಖಿಸಲ್ಪಟ್ಟಿವೆ. ಮಾತೃದೇವತೆ ಶಾಕ್ತ ಸಂಪ್ರದಾಯಕ್ಕೆ ಮೂಲಾಧಾರ. ಎಲ್ಲಾ ಹೆಂಗಸರು ದೇವತಾ ಸ್ವರೂಪರು ಎಂಬುದು ಮಾತೃದೇವತೆಯ ಕಲ್ಪನೆಗೆ ಎಡೆಮಾಡಿಕೊಟ್ಟಿತು. ಶಿವ ವಿಷ್ಣುವಿಗೆ ಹಲವಾರು ರೂಪಗಳಿರುವಂತೆ ಶಕ್ತಿಗೂ ಹಲವಾರು ರೂಪಗಳಿರುವುದುಂಟು. ಪ್ರಸ್ತುತ ಅಧ್ಯಯನ ಕಾಮಲಾಪುರ ಗ್ರಾಮಕ್ಕೆ ಸೀಮಿತವಾಗಿದ್ದರಿಂದ ಈ ಗ್ರಾಮದ ಮೂರ್ತಿಶಿಲ್ಪಗಳಲ್ಲಿ ಮುಖ್ಯವಾಗಿ ಮಹಿಷಾಸುರ ಮರ್ಧಿನಿ, ದುರ್ಗ, ಕಾಳಿ, ಪಟ್ಟಣದ ಎಲ್ಲಮ್ಮ, ಕಾಳಿ ಲಕ್ಷ್ಮೀ ಮೂರ್ತಿಶಿಲ್ಪಗಳು ಅಳವಡಿಸಲ್ಪಟ್ಟಿವೆ. ಇಂತಹ ಮೂರ್ತಿಶಿಲ್ಪಗಳ ಲಕ್ಷಣಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

[illegible]

ಹೆಸರು	:	ಮಹಿಷಾಸುರ ಮರ್ಧಿನಿ
ಸಿಕ್ಕ ಸ್ಥಳ	:	ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದ ಮುಂಭಾಗದಲ್ಲಿ ಕಾಮಲಾಪುರ. ಹೊಸಪೇಟೆ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ಆಸೀನ ಭಂಗಿಯಲ್ಲಿದ್ದು ಚತುರ್ಭುಜವುಳ್ಳವಳು. ಬಲಗೈಯಲ್ಲಿ ತ್ರಿಶೂಲ, ಕತ್ತಿ, ಎಡಗೈಯಲ್ಲಿ ಬಟ್ಟಲು ಮತ್ತೊಂದು ಕೈ ಹಾಳಾಗಿದೆ. ಕರಂಡಮುಕುಟ, ತೋಳುಬಂಧಿ ಮತ್ತು ಬಳೆಗಲನ್ನು, ಕಿವಿಯಲ್ಲಿ ವರ್ತುಲಾಕಾರದ ಓಲೆ, ಕಂಠೀಹಾರ, ವೈಜಯಂತೀಹಾರ, ಕಟಿಬಂಧ ಧರಿಸಿದ್ದಾಳೆ. ಪುಷ್ಪಾಲಂಕಾರಗಳಿಂದ ಕೇಶವಲಂಕಾರ ಮಾಡಲಾಗಿದೆ. ಸೀರೆಯ ಕೆತ್ತನೆಯ ಕೆಲಸ ತುಂಬಾ ಕಲಾತ್ಮಕವಾಗಿದೆ. ಪೀಠದಲ್ಲಿ ಮಹಿಷಿನ ಶಿಲ್ಪ ಪಕ್ಕ ವಾಹನ ಸಿಂಹ ಮೂರ್ತಿಶಿಲ್ಪವಿದೆ. ಬಲಗಡೆ ಕೈ ಮುಗಿದು ನಿಂತಿರುವ ಭಕ್ತನ ಮೂರ್ತಿಶಿಲ್ಪವಿದೆ.

ಹೆಸರು	:	ಶಕ್ತಿದೇವತೆ
ಸಿಕ್ಕ ಸ್ಥಳ	:	ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದ ಮುಂಭಾಗದಲ್ಲಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ದ್ವಿಭುಜವುಳ್ಳವಳಾಗಿ ೧/೨ ಅಡಿ ಪೀಠಿದ ಮೇಲೆ ಸ್ಥಾನಿಕ ಭಂಗಿಯಲ್ಲಿ ಬಲಗಾಲು ಕೆಳಗೆ ನಿಲುವಾಗಿ ಬಿಟ್ಟು ಎಡಗಾಲು ಮಡಿಚಿಕೊಂಡು, ಕರಂಡ ಮಕುಟುವನ್ನು ಧರಿಸಿದ್ದಾಳೆ. ಬಲಗೈ ಹಾಳಾಗಿದೆ. ಎಡಗೈಯಲ್ಲಿ ಬಿಟ್ಟಲು ಹಿಡಿದಿದ್ದಾಳೆ. ಕಿವಿಯಲ್ಲಿ ನಾಗಾಭರಣ ಎಂಬ ಆಭರಣ ಧರಿಸಿದ್ದಾಳೆ. ಶಿರದ ಹಿಂಬದಿಯಲ್ಲಿ ಕೇಶಾಲಂಕೃತವಾದ ತುರುಬಿನ ಜಡೆ ಇದೆ. ತೊಳು ಬಂಧಿ, ಬಳೆ ಧರಿಸಿದ್ದಾಳೆ. ಕೊರಳಲ್ಲಿ ಮಣಿಸರ, ವೈಜಯಂತೀಹಾರ, ಪದಕಹಾರ, ಕಟೀಬಂಧ ಪಾದಗಳಲ್ಲಿ ಪಾದಸರ, ಕಾಲುಂಗರ, ಇವೆಲ್ಲವೂ ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳು.

ಹೆಸರು	:	ದುರ್ಗಾ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ, ಕಾಮಲಾಪುರ. ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಮೂರ್ತಿಶಿಲ್ಪ ಸ್ಥಾನಿಕ ಭಂಗಿಯಲಿದೆ. ಚತುರ್ಭುಜಗಳಲ್ಲಿ ೨ ಭುಜಗಳು ಹಾಳಾಗಿವೆ. ಬಲಗೈಯಲ್ಲಿ ತ್ರಿಶೂಲ ಖಡ್ಗ ಎಡಗೈಯಲ್ಲಿ ಡಮರುಗು ಬಿಲ್ಲು ಹಿಡಿದು ಸಿಂಹವನ್ನು ವಾಹನವನ್ನಾಗಿ ಮಾಡಿಕೊಂಡು ರಾಕ್ಷಸನ ತಲೆಯ ಮೇಲೆ ತನ್ನ ಬಲ ಪಾದವನ್ನು ಇಟ್ಟಿದ್ದಾಳೆ. ಕೊರಳಲ್ಲಿ ರುಂಡಮಾಲೆ, ಕಂಠೀಹಾರ, ವೈಜಯಂತೀ ಹಾರ, ಕಿವಿಯಲ್ಲಿ ವೃತ್ತಾಕಾರದ ಓಲೆ, ಕಿರೀಟ ಮಕುಟ, ಕೈಯಲ್ಲಿ ಬಳೆ, ಕಾಲಲ್ಲಿ ಪಾದಸರ ಇವು ದುರ್ಗಾ ಶಿಲ್ಪಮೂರ್ತಿಯ ಮೆರಗನ್ನು ಹೆಚ್ಚಿಸಿವೆ.

ಹೆಸರು	:	ಕಾಳಿ
ಸಿಕ್ಕ ಸ್ಥಳ	:	ಭಾರತೀಯ ಪುರಾತತ್ವ ವಸ್ತುಸಂಗ್ರಹಾಲಯ, ಕಾಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಕಾಳಿ ಆಸೀನಳಾಗಿದ್ದಾಳೆ. ಚುತುರ್ಭುಜ ದೇವಿ. ಬಲಗೈಯಲ್ಲಿ ಖಡ್ಗ, ಡಮರುಗ, ಎಡಗೈಯಲ್ಲಿ ತ್ರಿಶೂಲ, ಬಟ್ಟಲು, ಹಿಡಿದಿದ್ದಾಳೆ. ಕರಂಡ ಮುಕುಟ, ಕಿವಿಯಲ್ಲಿ ವೃತ್ತಾಕಾರದ ಓಲೆ, ತೋಳುಬಂದಿ, ನಾಗಬಂಧ ಬಳೆ, ಧರಿಸಿದ್ದಾಳೆ. ಕಂಠಹಾರ ಮಣಿಸರ, ಪದಕದ ಹಾರ, ಕಟಿಬಂಧ ಧರಿಸಿದ್ದಾಳೆ. ಪಾದದಲ್ಲಿ ಪಾದಸರ ಗಜ್ಜೆ ಧರಿಸಿದ್ದಾಳೆ. ಸೀರೆಯ ನೆರಿಗೆಯ ಕೆತ್ತನೆ ತುಂಬಾ ಸೂಕ್ಷ್ಮವಾಗಿ ಕೆತ್ತಲ್ಪಟ್ಟಿವೆ.

ಹೆಸರು	:	ದೇವಿ
ಸಿಕ್ಕ ಸ್ಥಳ	:	ಕೋಟೆ ಆಂಜನೇಯ ದೇವಾಲಯದ ಮುಂಭಾಗದಲ್ಲಿ ಕಾಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಬಲಗಾಲನ್ನು ರುಂಡದ ಮೇಲೆ ಊರಿ, ಎಡಗಾಲನ್ನು ಮಡಿಚಿ ಆಸೀನಳಾಗಿದ್ದಾಳೆ. ಚತುರ್ಭುಜದೇವಿಯ ಬಲಗೈ ಡಮರುಗ, ಖಡ್ಗ, ಎಡಕ್ಕೆ ತ್ರಿಸೂಲ ಕುಂಕುಮ ಬಟ್ಟಲು ಹಿಡಿದಿದ್ದಾಳೆ. ತೋಳು ಬಂಧಿ, ವಾಜೀಬಂಧ ಕೈಗೆ ಬಳೆ, ಕರಂಡ ಮುಕುಟ ಧರಿಸಿದ್ದಾಳೆ. ಕೊರಳಲ್ಲಿ ಅಗಲವಾದ ಕಂಠಹಾರವಾದ ಓಲೆ ಕಟೀಬಂಧ ಧರಿಸಿದ್ದಾಳೆ. ಇವು ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು	:	ಪಟ್ಟಣದ ಎಲ್ಲಮ್ಮ
ಸಿಕ್ಕ ಸ್ಥಳ	:	ಪಟ್ಟಣದ ಎಲ್ಲಮನ ದೇವಾಲಯದಲ್ಲಿ, ಕಾಮಲಾಪುರ ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ಬಲಗಾಲನ್ನು ಮಹಿಷನ ಮೇಲೆ ಊರಿದ್ದಾಳೆ. ಎಡಗಾಲನ್ನು ಮಡಚಿ ಆಸೀನ ಭಂಗಿಯಲ್ಲಿದ್ದಾಳೆ. ಚತುರ್ಭುಜಗಳಲ್ಲಿ ಬಲಗೈಗಳಲ್ಲಿ ಡಮರುಗ, ಖಡ್ಗ, ಎಡೈಗಯಲ್ಲಿ ತ್ರಿಶೂಲ, ಬಟ್ಟಲು, ಹಿಡಿದಿದ್ದಾಳೆ. ತೋಳುಬಂಧಿ, ನಾಗಬಂಧ, ಕೈಬಳೆ, ಕರಂಡಮುಕುಟ, ಕಿವಿಯಲ್ಲಿ ವರ್ತುಲಾಕಾರದ ಓಲೆ, ಕೊರಳಲ್ಲಿ ಹಾರ, ಮಣಿಸರ, ಕಂಠಿಹಾರ, ಪದಕಸರ, ವೈಜಯಂತೀಹಾರ, ರುಂಡಮಾಲೆಗಳನ್ನು ಧರಿಸಿದ್ದಾಳೆ. ½ ೨ ಅಡಿ ಪೀಠದ ಮುಂಭಾಗದಲ್ಲಿ ವಾಹನ ಸಿಂಹದ ಚಿತ್ರಣವಿದೆ.

ಹೆಸರು	:	ದೇವಿ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ, ಕಾಮಲಾಪುರ, ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಬಲಗಾಲನ್ನು ಅಸುರನ ಮೇಲೆ ಇಟ್ಟು ಎಡಗಾಲನ್ನು ಮಡಚಿ ಪಾದ ಪೀಠದಲ್ಲಿ ಆಸೀನ ಭಂಗಿಯಲ್ಲಿ ಕುಳಿತಿದ್ದಾಳೆ. ಚತುರ್ಭುಜಗಳಲ್ಲಿ ಬಲಗೈಗಳಲ್ಲಿ ಕತ್ತಿ, ತ್ರಿಶೂಲ ಹಿಡಿದಿದ್ದಾಳೆ. ಎಡಗೈಗಳಲ್ಲಿ ಒಂದು ಕೈ ಹಾಳಾಗಿದೆ. ಮತ್ತೊಂದು ಕೈಯಲ್ಲಿ ಬಟ್ಟಲು ಇದೆ. ತೋಳುಬಂಧಿ ಮತ್ತು ಬಳೆಗಳಿವೆ. ಶಿರದ ಮೇಲ್ಭಾಗವು ಶಿಥಿಲವಾಗಿದೆ. ಕೊರಳಲ್ಲಿ ಹಾರ, ವೈಜಯಂತೀಹಾರ, ಕಟಿಬಂಧ, ಪಾದಗಳಲ್ಲಿ ಪಾದಸರ ಗೆಜ್ಜೆ ಧರಿಸಿದ್ದಾಳೆ. ಸೀರೆಯ ನೆರಿಗೆಯ ಕೆತ್ತನೆ ತುಂಬಾ ಕಲಾತ್ಮಕವಾಗಿದೆ.

ಹೆಸರು	:	ಕಾಳಿಕಾದೇವಿ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ, ಕಾಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಸ್ಥಾನಿಕ ಭಂಗಿಯಲ್ಲಿ ಕುಳಿತಿದ್ದಾಳೆ. ಕರಂಡಮುಕುಟ, ಕಿವಿಯಲ್ಲಿ ವರ್ತುಲಾಕಾರದ ಓಲೆ ಇದೆ ಚತುರ್ಭುಜಗಳಲ್ಲಿ, ಬಲಗೈಯಲ್ಲಿ ಕತ್ತಿ ಶೂಲ. ಎಡಗೈಗಳಲ್ಲಿ ಬಿಲ್ಲು ಮತ್ತೊಂದು ಕೈ ಹಾಳಾಗಿದೆ ಕೊರಳಲ್ಲಿ ಕಂಠೀಹಾರ ವೈಜಯಂತೀಹಾರವಿದೆ. ಕೈಯಲ್ಲಿ ಬಳೆ, ತೋಳುಬಂಧಿ, ಕಾಲ್ಗಡಗ, ಇವೆಲ್ಲವೂ ಈ ಮೂರ್ತಿಶಿಲ್ಪದ ವೈಶಿಷ್ಟ್ಯಗಳಾಗಿವೆ.

ಹೆಸರು	:	ದೇವಿ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ, ಕಾಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಪದ್ಮಾಸನ ಭಂಗಿಯಲ್ಲಿದೆ. ಚತುರ್ಭುಜದೇವಿ, ಬಲಗೈಯಲ್ಲಿ ಕತ್ತಿ, ಡಮರುಗ, ಎಡಗೈಯಲ್ಲಿ ತ್ರಿಶೂಲ, ಮತ್ತೊಂದು ಆಯುಧ ಸ್ಪಷ್ಟವಿಲ್ಲ. ಕೊರಳಲ್ಲಿ ವೈಜಯಂತೀಹಾರ, ಕೈಗೆ ತೋಳುಬಂಧಿ ಬಳೆ, ಕರಂಡಮುಕುಟ ಇವೆಲ್ಲವೂ ಈ ಮೂರ್ತಿಶಿಲ್ಪದ ಮೆರಗನ್ನು ನೀಡಿವೆ.

ಹೆಸರು	:	ಪಾರ್ವತಿ
ಸಿಕ್ಕ ಸ್ಥಳ	:	ಭಾರತೀಯ ಪುರಾತತ್ವ ವಸ್ತುಸಂಗ್ರಹಾಲಯ ಕಾಮಲಾಪುರ, ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಪಾರ್ವತಿ ಸುಖಾಸೀನದಲ್ಲಿದ್ದಾಳೆ. ಚತುರ್ಭುಜ ದೇವಿ. ಬಲಗೈಯಲ್ಲಿ ಡಮರುಗ, ಈಟಿ, ಎಡಗೈಗಳಲ್ಲಿ ತ್ರಿಶೂಲ ಮತ್ತು ಬಟ್ಟಲು ಹಿಡಿದ್ದಾಳೆ. ಕಿರೀಟ ಮುಕುಟ, ವರ್ತುಲಾಕಾರ ಓಲೆ, ವೈಜಯಂತೀಹಾರ, ಕಟಿಬಂಧ ಧರಿಸಿದ್ದಾಳೆ. ಸೀರೆಯ ನೆರಿಗೆಯ ಕೆತ್ತನೆ ತುಂಬಾ ಕಲಾತ್ಮಕವಾಗಿದೆ.

ಹೆಸರು	:	ದೇವಿ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯದ ಹೊರ ಆವರಣದಲ್ಲಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಕಿರೀಟ ಮುಕುಟ ಧರಿಸಿ ಆಸೀನ ಭಂಗಿಯಲ್ಲಿ ಕುಳಿತಿದೆ. ತನ್ನ ಬಲಗಾಲನ್ನು ಮಹಿಷಿನ ಮೇಲೆ ಇಟ್ಟು ಎಡಗಾಲನ್ನು ಮಡಿಚಿದ್ದಾಳೆ. ಚತುರ್ಭುಜ ದೇವಿ ಬಲಗೈಯಗಳಲ್ಲಿ ಚಕ್ರ ಮತ್ತು ತ್ರಿಶೂಲ ಎಡಗೈಯಗಳಲ್ಲಿ ಶಂಕು ಮತ್ತು ರುಂಡಗಳಿವೆ. ತನ್ನ ಎಡಗೈಯಲ್ಲಿನ ರುಂಡವನ್ನು ಮಹಿಷಿನ ತಲೆಯ ಮೇಲೆ ಇಟ್ಟಿದೆ. ತ್ರಿಶೂಲ ಅಸುರನ ಕುತ್ತಿಗೆಗೆ ಬಿದ್ದಿದೆ. ತೋಳುಬಂಧಗಳಿವೆ. ಪ್ರಭಾವಳಿಯಲ್ಲಿ ನೈಜಕತೆಗೆ ಪ್ರಾಧಾನ್ಯತೆ ನೀಡಲಾಗಿದೆ.

ಹೆಸರು	:	ಕಾಳಿ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ, ಕಾಮಲಾಪುರ. ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ನಿಂತ ಭಂಗಿಯಲ್ಲಿರುವ ಕಾಳಿ. ಚತುರ್ಭುಜವುಳ್ಳವಳು. ಬಲಗೈಯಲ್ಲಿ ಬಾಣ, ಖಡ್ಗ, ಎಡಗೈಯಲ್ಲಿ ಬಿಲ್ಲು, ಇನ್ನೊಂದು ಆಯುಧ ಅಸ್ಪಷ್ಟ. ಕಿರೀಟ ಮುಕುಟ, ರತ್ನಪಟ್ಟಿಕೆ, ಕೊರಳಲ್ಲಿ ವೈಜಯಂತೀಹಾರ,

ರುಂಡಮಾಲೆ, ಕಂಠಹಾರ ಧರಿಸಿದ್ದಾಳೆ. ಕೈಗೆ ಬಳೆ, ತೋಳು ಬಂಧಿಗಳಿವೆ. ಪೀತಾಂಬರ ಧರಿಸಿದ್ದಾಳೆ. ಇವು ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳಾಗಿವೆ.

ಹೆಸರು	:	ಮಹಿಷಾಸುರಮರ್ದಿನಿ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ, ಕಾಮಲಾಪುರ. ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಈ ಮೂರ್ತಿಯ ಮಹಿಷಿನ ಬೆನ್ನ ಮೇಲೆ ಎಡಗಾಲನ್ನು ಇಟ್ಟು ತ್ರಿಶೂಲದಿಂದ ಮಹಿಷಿನ ಕುತ್ತಿಗೆ ತಿವಿಯುತ್ತಿರುವ ದೃಶ್ಯ ಆಕರ್ಷಣೀಯ. ಅಷ್ಟು ಭುಜಗಳಲ್ಲಿ ಬಲಗೈಯಲ್ಲಿ ತ್ರಿಶೂಲ, ಕತ್ತಿ, ಈಟಿ ಮತ್ತೊಂದು ಸ್ಪಷ್ಟ ಚಿತ್ರಣವಿಲ್ಲ. ಎಡಗೈಯಲ್ಲಿ ಶಂಖ ಬಿಲ್ಲು ಗುರಾಣಿ ಆಯುಧವನ್ನು ಹಿಡಿದಿದ್ದಾಳೆ. ಕರಂಡಮುಕುಟ ಧರಿಸಿದ್ದು, ಶಿಖಾಮಣಿ ಮತ್ತು ರತ್ನಪಟ್ಟಿಕೆ, ಕಿವಿಯಲ್ಲಿ ವರ್ತುಲಾಕಾರದ ಓಲೆ, ಕಂಠಹಾರ, ತೋಳುಬಂಧಿ, ಕೈಕಡಗ, ಕಾಲ್ಗಡಗಗಳು, ಈ ಮೂಲಕ ಮೂರ್ತಿಶಿಲ್ಪದ ಮುಖ್ಯ ಲಕ್ಷ್ಮಣಗಳಾಗಿವೆ.

ಹೆಸರು	:	ಲಕ್ಷ್ಮಿ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ, ಕಾಮಲಾಪುರ, ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಲಕ್ಷ್ಮಿ ಪದ್ಮಾಸೀನಗಳಾಗಿದ್ದಾಳೆ. ಚತುರ್ಭುಜಗಳಿವೆ. ಎರಡು ಎಡ-ಬಲಗೈಗಳಲ್ಲಿ ಶಂಖ, ಚಕ್ರ ಒಂದು ಬಲಗೈ ಅಭಯಹಸ್ತ ಇನ್ನೊಂದು ಎಡಗೈ ವರದಮುದ್ರೆಯಲ್ಲಿದೆ. ಪ್ರತಿಯೊಂದು ಕೈಯ ಬೆರಳುಗಳಲ್ಲಿ ಉಂಗುರಗಳಿವೆ. ಕಿರೀಟಮುಕುಟ, ಕಿವಿಯಲ್ಲಿ ಮರ್ತುಲಾಕಾರದ ಓಲೆ, ಕಂಠಹಾರ, ವೈಜಯಂತೀಹಾರ, ಕೈಯಲ್ಲಿ ಬಳೆ, ತೋಳುಬಂಧಿ ಇವು ಈ ಮೂರ್ತಿಶಿಲ್ಪದ ಮೆರಗನ್ನು ಹೆಚ್ಚಿಸಿವೆ.

ಹೆಸರು	:	ಕಾಳಿ
ಸಿಕ್ಕ ಸ್ಥಳ	:	ವೀರಭದ್ರ ದೇವಾಲಯದ ಕಾಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಬಲಗಾಲನ್ನು ಕೆಳಗೆ ಬಿಟ್ಟು ಎಡಗಾಲನ್ನು ಮಡಿಚಿ ಸುಖಾಸಿನಗಳಾಗಿದ್ದಾಳೆ. ಚತುರ್ಭುಜವಿದೆ. ಬಲಗೈಯಲ್ಲಿ ಖಡ್ಗ, ಡಮರುಗ, ಎಡಗೈಯಲ್ಲಿ ತ್ರಿಶೂಲ, ಬಟ್ಟಲು ಹಿಡಿದಿದ್ದಾಳೆ. ತೋಳುಬಂಧ,

[illegible]

[illegible]

[illegible]

[illegible]

[illegible]

[illegible]

[illegible]

ಕೈಬಳೆ, ಕರಂಡಮುಕುಟ, ಕೊರಳಲ್ಲಿ ಪದಕಹಾರ, ಕಾಲಿಗೆ ಗೆಜ್ಜೆ ಸರ ಇವೆಲ್ಲವೂ ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳಾಗಿವೆ.

ಹೆಸರು	:	ಕಾಳಿ
ಸಿಕ್ಕ ಸ್ಥಳ	:	ಕಾಳಿಕಾ ದೇವಾಲಯ, ಕಾಮಲಾಪುರ ಹೊಸಪೇಟೆ.ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರೋತ್ತರ
ಕಾಲ	:	೧೬-೧೭ನೇ ಶತಮಾನ
ವಸ್ತು	:	ಕಪ್ಪುಶಿಲೆ

ಬಲಗಾಲನ್ನು ನೆಲಕ್ಕೆ ಊರಿ ಎಡಗಾಲನ್ನು ಮಡಿಚಿಕೊಂಡು ಸುಖಾಸೀನನಳಾಗಿದ್ದಾಳೆ. ಚುತುರ್ಭುಜ ದೇವಿ, ಎಡಗೈಯಲ್ಲಿ ಡಮರುಗ, ಖಡ್ಗ, ಬಲಗೈಯಲ್ಲಿ ತ್ರಿಶೂಲ, ಬಟ್ಟಲು ಹಿಡಿದಿದ್ದಾಳೆ. ಕೈಗಳಿಗೆ ತೋಳುಬಂಧಿ, ಬಳೆಗಳಿವೆ. ಕರಂಡಮುಟುಕ ಧರಿಸಿದ್ದಾಳೆ. ಕೊರಳಲ್ಲಿ ಮಾಂಗಲ್ಯಸರ, ಪದಕಹಾರ ವೈಜಯಂತೀಹಾರವಿದೆ. ಸೊಂಟಕ್ಕೆ ಕಟಿಬಂಧ, ಪಾದಗಳಲ್ಲಿ ಪಾದರಸ ಗೆಜ್ಜೆಗಳಿವೆ. ಸೀರೆಯ ಕೆತ್ತನೆ ಇವು ತುಂಬಾ ಕಲಾತ್ಮಕವಾಗಿ ಮೂಡಿ ಬಂದಿವೆ.

ನಾಗಪಂಥ

ಹೆಸರು	:	ನಾಗಿಣಿ
ಸಿಕ್ಕ ಸ್ಥಳ	:	ಗಾರಿ ಬಾವಿ ಆಂಜನೇಯ ದೇವಾಲಯದ ಬಲಬದಿಯಲ್ಲಿ ಕಾಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಗ್ರಾನೈಟ್ ಶಿಲೆ

ಈ ಮೂರ್ತಿ ಶಿಲ್ಪವು ಅಂಜಲಿ ಮುದ್ರೆಯಿಂದ ಕರ ಜೋಡಿಸಿ ನಿಂತ ಭಂಗಿಯಲ್ಲಿದೆ. ರುಂಡ, ದೇಹ, ಮನುಷ್ಯನ ಆಕಾರ ಕೆಳಭಾಗ ಹಾವಿನ ಆಕಾರವಿದೆ. ಕರಂಡ ಮುಕುಟ ಧರಿಸಿದ್ದಾಳೆ. ಕಿವಿಯಲ್ಲಿ ವರ್ತುಲಾಕಾರದ ಓಲೆಗಳಿವೆ. ಕೈಗಳಿಗೆ ನಾಗ ವಲಯಗಳಿವೆ. ಬಳೆ ಧರಿಸಿದ್ದಾಳೆ. ಕೊರಳಲ್ಲಿ ಕಂಠಹಾರವಿದೆ.

ಗಾಣಪತ್ಯ ಮೂರ್ತಿಶಿಲ್ಪಗಳು

ಗಣಗಳಿಗೆ ಪತಿ ಗಣಪತಿ. ವಿನಾಯಕ. ವಿಘ್ನೇಶ್ವರ, ಗಜಮುಖ ಎಂಬ ಹಲವಾರು ಹೆಸರುಗಳು ಗಣಪತಿಗೆ ಇದೆ. ಗಣಪತಿ ಇಲ್ಲದ ಸ್ಥಳ ಇಲ್ಲ. ಎಲ್ಲಾ ಪಂಥದವರು ಗಣಪತಿಯನ್ನು ಪೂಜಿಸುತ್ತಾರೆ. ನಾಡಿನವರೆಲ್ಲರೂ ಗಾಣಪತ್ಯರೇ. ಗಣೇಶನ ಮೂರ್ತಿಶಿಲ್ಪ ಪಂಚಾಯತನ ದೇವಾಲಯಗಳಲ್ಲಿ, ಶೈವದೇವಾಲ

[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

[illegible]

[illegible]

[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

[illegible]

[illegible]

ಯಗಳಲ್ಲಿ ಅಥವಾ ಗಣಪತಿಗಾಗಿ ಪ್ರತ್ಯೇಕ ದೇವಾಲಯಗಳಿರುತ್ತವೆ. ಸಪ್ತಮಾತೆಯರ ಪಟ್ಟಿಯಲ್ಲೂ ಎಡ ಪಕ್ಕದಲ್ಲಿ ಗಣಪತಿಯನ್ನು ಕಾಣುತ್ತೇವೆ. ಎಲ್ಲೆಲ್ಲೂ ಪ್ರಥಮ ಪೂಜೆ ಗಣಪತಿಗೇ.

ದೇವಾಲಯಗಳಲ್ಲಿ ಅಥವಾ ಮನೆಗಳಲ್ಲಿ ಪೂಜಿಸುವ ಗಣಪತಿಗಳಲ್ಲಿ ಹಲವು ವೈವಿಧ್ಯತೆಗಳಿವೆ. ಪ್ರಸ್ತುತ ಅಧ್ಯಯನ ಕಾಮಲಾಪುರ ಗ್ರಾಮಕ್ಕೆ ಸೀಮಿತವಾಗಿದ್ದರಿಂದ, ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದಲ್ಲಿನ ಕಾಮಲಾಪುರ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿನ ಇತರೆ ಗಣಪತಿ ಮೂರ್ತಿಶಿಲ್ಪಗಳಲ್ಲಿ ಆಯ್ದ ಮೂರ್ತಿಶಿಲ್ಪಗಳನ್ನು ಆಯ್ದುಕೊಂಡು, ಗಾಣಪತ್ಯ ಮೂರ್ತಿಶಿಲ್ಪದ ಲಕ್ಷಣಗಳನ್ನು ಇಲ್ಲಿ ಅಳವಡಿಸಲಾಗಿದೆ.

ಹೆಸರು	:	ಅಷ್ಟಭುಜ ವಿನಾಯಕ
ಸಿಕ್ಕ ಸ್ಥಳ	:	ರಾಜ್ಯ ಪಾಚ್ಯ ವಸ್ತು ಸಂಶೋಧನಾ ಇಲಾಖೆ ಕಾಮಲಾಪುರ. ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೪ನೇ ಶತಮಾನ
ವಸ್ತು	:	ಕಪ್ಪುಶಿಲೆ

ಸುಖಾಸೀನನಾಗಿದ್ದು, ಗಣಪತಿಗೆ ಅಷ್ಟಭುಜಗಳಿವೆ. ಶಿರವು ಸ್ವಲ್ಪ ಶಿಥಿಲವಾಗಿದೆ. ಎಡಭಾಗದ ತೊಡೆಯ ಮೇಲೆ ಸ್ತ್ರೀ (ಶಕ್ತಿ) ಆಸೀನಳಾಗಿದ್ದಾಳೆ. ಈ ಶಕ್ತಿಗೆ ಶ್ಯಾಮಲಂಗಿ ಅಥವಾ ಜಯಂತಿ ಎಂದು ಹೆಸರು. ಈಕೆಯ ಕೈಯಲ್ಲಿ ಪದ್ಮವಿದೆ. ಗಣೇಶ ಇವಳನ್ನು ಅಲಂಗಿಸಿಕೊಂಡಿದ್ದಾನೆ. ಎಂಟು ಕೈಗಳಲ್ಲಿ ಹಿಡಿದ ಆಯುಧಗಳು ಶಿಥಿಲವಾಗಿದ್ದರಿಂದ ಈ ಆಯುಧಗಳು ಅಸ್ಪಷ್ಟ. ಆನೆಯ ಕಿವಿಯಂತಿ ಅಗಲವಾದ ಕಿವಿಗಳು, ಎಡಭಾಗಕ್ಕೆ ಬಾಗಿರುವ ಸೊಂಡಿಲಿದೆ. ಏಕದಂತವಿದೆ. ಗಣಪತಿಯ ಕರಂಡಮುಕುಟವನ್ನು ಧರಿಸಿದ್ದಾನೆ. ಕೊರಳಲ್ಲಿ ಹಾರ, ಕಂಠೀ, ಪದಕಹಾರ, ಯಜ್ಞೋಪವೀತ ಧರಿಸಿದ್ದಾನೆ. ಉದರ ಬಂಧವಿದೆ. ಉದರಕ್ಕೆ ಹಾವು ಸುತ್ತಿದ ಬಂಧವಿದೆ. ಕೈಗೆ ಬಳೆ, ಭುಜ ಬಂಧ, ವಾಜೀ ಬಂಧಗಳಿವೆ. ಶಕ್ತಿದೇವತೆ ಅಗಲವಾದ ಹಾರ ಮುಕುಟ ಕಿರೀಟ, ವೈಜಯಂತೀಹಾರ, ಧರಿಸಿದ್ದಾಳೆ.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ರಾಜ್ಯ ಪಾಚ್ಯ ವಸ್ತು ಸಂಶೋಧನಾ ಇಲಾಖೆ ಕಾಮಲಾಪುರ. ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೪ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಪದ್ಮಾ ಪೀಠದ ಮೇಲೆ ಸುಖಾಸೀನ ಭಂಗಿಯಲ್ಲಿ ಕುಳಿತಿದ್ದಾನೆ. ಚತುರ್ಭುಜವುಳ್ಳವನಾಗಿದ್ದಾನೆ. ಬಲಗೈಯಲ್ಲಿ ಪಾಶ, ವ್ಯಾಖ್ಯಾನ ಮುದ್ರೆ ಎಡಗೈಯಲ್ಲಿ ಅಂಕುಶ ಮೋದಕವನ್ನು ಹಿಡಿದ ಪಾತ್ರೆ ಇದೆ. ಕಿರೀಟ ಮಕುಟ ಕೈಗಳಲ್ಲಿ ತೋಳುಬಂಧಿ, ವಾಜೀಬಂಧ, ಕಂಕಣ, ಉದರ ಬಂಧವಿದೆ. ಯಜ್ಞೋಪವೀತ ಧರಿಸಿದ್ದು ಇವೆಲ್ಲವೂ ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳು.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ರಾಜ್ಯ ಪಾಚ್ಯ ವಸ್ತು ಸಂಶೋಧನಾ ಇಲಾಖೆ ಕಾಮಲಾಪುರ. ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಈ ಮೂರ್ತಿಶಿಲ್ಪ ಪದ್ಮಾಸೀನ ಭಂಗಿಯಲ್ಲಿದೆ. ಚತುರ್ಭುಜ ಗಣೇಶನ ಬಲಗೈ ಹಾಳಾಗಿದೆ. ಅದರಲ್ಲಿ ಹಿಡಿದ ಆಯುಧಗಳು ಶಿಥಿಲವಾಗಿದೆ. ಎಡಗೈಯಲ್ಲಿ ಪಾಶ ಹಿಡಿದಿದ್ದಾನೆ. ಮೊದಕದ ಪಾತ್ರೆ ಹಿಡಿದಿದ್ದಾನೆ. ಉದರ ಬಂಧ ಯಜ್ಞೋಪ ಧರಿಸಿದ್ದಾನೆ. ಕರಂಡ ಮಕುಟವಿದೆ. ಇವು ಈ ಮೂರ್ತಿಶಿಲ್ಪಕ್ಕೆ ಮೆರಗನ್ನು ನೀಡಿದೆ.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ವಸ್ತುಸಂಗ್ರಹಾಲಯ ಕಾಮಲಾಪುರ ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ಚತುರ್ಭುಜ ಗಣೇಶ ಸುಖಾಸೀನ ಭಂಗಿಯಲ್ಲಿದ್ದಾನೆ. ಕರಂಡ ಮುಕುಟ ಧರಿಸಿದ್ದಾನೆ. ಬಲಗೈಯಲ್ಲಿ ಅಂಕುಶ ಆಯುಧ ಹಿಡಿದಿದ್ದಾನೆ. ಮತ್ತೊಂದು ಬಲಕೈ ಹಾಳಾಗಿದೆ. ಎಡಗೈಯಲ್ಲಿ ಪಾಶ, ಮೊದಕ ಪಾತ್ರೆ ಹಿಡಿದಿದ್ದಾನೆ. ಸಿಂಹ ಪೀಠದ ಮೇಲೆ ಕುಳಿತ ಗಣಪ ಹೇರಂಬ ಗಣಪತಿ, ದಂತಭಗ್ನ, ಮೈಮೇಲೆ ಸರ್ಪ ಉದರ ಬಂಧವಿದೆ. ಯಜ್ಞೋಪವೀತ ಧರಿಸಿದ್ದಾನೆ. ಕೈಗಳಿಗೆ ತೋಳು ಬಂಧಿ, ವಾಜೀಬಂಧ ಧರಿಸಿದ್ದಾನೆ. ಈ ಮೂರ್ತಿಶಿಲ್ಪದ ಸುತ್ತಲೂ ಕೀರ್ತಿಮುಖದ ಪ್ರಭಾವಳಿ ಅಲಂಕೃತವಾಗಿದೆ.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ವೀರಭದ್ರ ದೇವಸ್ಥಾನದಲ್ಲಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

[illegible]

ಸುಖಾಸೀನ ಭಂಗಿ, ಚತುರ್ಭುಜನಾಗಿ ಕುಳಿತಿದ್ದಾನೆ. ಕರಂಡ ಮುಕುಟ, ಬಲಗೈಯಲ್ಲಿ ಅಂಕುಶ ವ್ಯಾಖ್ಯಾನ ಮುದ್ರೆ, ಎಡಗೈಯಲ್ಲಿ ಪಾಶ, ಮೊದಕದ ಪಾತ್ರೆ, ಸರ್ಪದ ಉದರ ಬಂಧ, ಯಜ್ಞೋಪವೀತ ಧಾರಣೆ, ಕೈಬಳೆ, ಕಾಲ್ಗಡಗ ಈ ಮೂರ್ತಿಶಿಲ್ಪದ ಲಕ್ಷಣಗಳು.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ಗಾರಿಬಾವಿ ಆಂಜನೇಯ ದೇವಾಲಯ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಈ ಚತುರ್ಭುಜ ಗಣೇಶ ಸುಖಾಸೀನ ಭಂಗಿಯಲ್ಲಿ ಕುಳಿತಿದ್ದಾನೆ. ಬಾಲ ಗಣೇಶ ಎಡಗೈಯಲ್ಲಿ ಅಂಕುಶ, ಅಭಯಹಸ್ತ, ಎಡಗೈಯಲ್ಲಿ ಪಾಶ, ಮೊದಕಪಾತ್ರೆ ಹಿಡಿದಿದ್ದಾನೆ. ಉದರಬಂಧವಿದೆ. ಯಜ್ಞೋಪವೀತ, ಕೈಬಳೆ, ಕಾಲ್ಗಡಗ ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳಾಗಿವೆ.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ನಗರೇಶ್ವರ ದೇವಸ್ಥಾನದ ಗರ್ಭಗುಡಿಯಲ್ಲಿ, ಕಾಮಲಾಪುರ ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬-೧೭ನೇ ಶತಮಾನ
ವಸ್ತು	:	ಕಪ್ಪುಶಿಲೆ

ಚತುರ್ಭುಜ ಗಣೇಶ. ಸುಖಾಸೀನ ಮುದ್ರೆಯಲ್ಲಿದ್ದಾನೆ. ಬಲಗೈಯಲ್ಲಿ ಖಡ್ಗ, ಅಭಯಹಸ್ತ, ಎಡಗೈಗಳಲ್ಲಿ ಪಾಶ, ಮೊದಕ ಪಾತ್ರೆ ಇದೆ. ಕರಂಡ ಮುಕುಟ ಧರಿಸಿದ್ದಾನೆ. ಕಂಠಹಾರ, ಉದರ ಬಂಧ, ಯಜ್ಞೋಪವೀತ ಧರಿಸಿದ್ದಾನೆ. ನೆರಿಗೆಯುಳ್ಳ ಪಂಚೆ (ಧೋತ್ರದ)ಯನ್ನು ಸೂಕ್ಷ್ಮ ಕೆತ್ತನೆಯಲ್ಲಿ ತೋರಿಸಲಾಗಿದೆ.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ನಗರೇಶ್ವರ ದೇವಸ್ಥಾನದಲ್ಲಿ ಕಾಮಲಾಪುರ, ಹೊಸಪೇಟೆ ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೆಟ್‌ಶಿಲೆ

ಸುಖಾಸೀನ ಭಂಗಿಯಲ್ಲಿ ಕುಳಿತಿದ್ದಾನೆ. ಗಣೇಶನಿಗೆ ಚುತುರ್ಭುಜಗಳಿವೆ. ಎಡಗಡೆ ಪಾಶ, ಮೊದಕ ಪಾತ್ರೆ, ಬಲಗಡೆ ಅಂಕುಶ ವ್ಯಾಖ್ಯಾನ ಮುದ್ರೆಯಲ್ಲಿದ್ದಾನೆ. ಕರಂಡ ಮುಕುಟ ಸರ್ಪದ ಉದರಬಂಧ, ಸಿಂಹ ಲಾಂಛನ ಈ ಮೂರ್ತಿಶಿಲ್ಪದ ವೈಶಿಷ್ಟ್ಯಗಳಾಗಿವೆ.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ಕಾಳಿಕಾದೇವಿ ದೇವಾಲಯದ ಹೊರ ಆವರಣ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬-೧೭ನೇ ಶತಮಾನ
ವಸ್ತು	:	ಕಪ್ಪುಶಿಲೆ

ನಿಂತ ಭಂಗಿಯಲ್ಲಿರುವ ಈ ಗಣೇಶ ಕರಂಡ ಮಕುಟ ಧರಿಸಿ, ಚತುರ್ಭುಜವುಳ್ಳವನಾಗಿದ್ದಾನೆ. ಗಣೇಶ ಬಲಗೈಯಲ್ಲಿ ಅಂಕುಶ ಅಭಯಹಸ್ತ ಎಡಗೈಯಲ್ಲಿ ಪಾಶ ಲಡ್ಡಿನ ಪಾತ್ರೆ ಹಿಡಿದಿದ್ದಾನೆ. ಧೋತ್ರದ ಕೆತ್ತನೆ ತುಂಬಾ ಕಾಲಾತ್ಮಕವಾಗಿದೆ. ಕೊರಳಲ್ಲಿ ಯಜ್ಞೋಪವೀತವಿದೆ. ಸರ್ಪದ ಉದರಬಂಧ ಇದೆ. ಇವು ಈ ಮೂರ್ತಿಶಿಲ್ಪದ ಸಾಮಾನ್ಯ ಲಕ್ಷಣಗಳಾಗಿವೆ.

ಹೆಸರು	:	ಗಣೇಶ
ಸಿಕ್ಕ ಸ್ಥಳ	:	ನಗರೇಶ್ವರ ದೇವಸ್ಥಾನದಲ್ಲಿ, ಕಾಮಲಾಪುರ, ಹೊಸಪೇಟೆ.ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಸುಖಾಸೀನ ಭಂಗಿಯಲ್ಲಿ ಕುಳಿತಿದ್ದಾನೆ. ಚತುರ್ಭುಜನಾಗಿದ್ದು, ಗಣೇಶ ಕರಂಡ ಮುಕುಟ ಕಿರೀಟ ಧರಿಸಿದ್ದಾನೆ. ಎಡಗಡೆ ಪಾಶ, ಮೊದಕ ಪಾತ್ರೆ, ಬಲಗಡೆ ಅಂಕುಶ ದಂತ ಹಿಡಿದಿದ್ದಾನೆ. ಸರ್ಪದಿಂದ ಉದರಬಂಧವಾಗಿದೆ. ಯಜ್ಞೋಪವೀತ ಧರಿಸಿದ್ದಾನೆ. ಕೈ ಬಳೆ ಇದೆ. ವಾಹನ ಸಿಂಹ ಪೀಠದ ಮೇಲೆ ಕುಳಿತಿದ್ದಾನೆ.

ಹೆಸರು	:	ಚತುರ್ಭುಜ ಗಣೇಶ
ಸಿಕ್ಕ ಸ್ಥಳ	:	ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಗ್ರಾನೈಟ್‌ಶಿಲೆ

ಸುಖಾಸೀನ ಭಂಗಿಯಲ್ಲಿ ಕುಳಿತಿದ್ದಾನೆ. ಚತುರ್ಭುಜ ಗಣೇಶ ಎಡಗೈಯಲ್ಲಿ ಪಾಶ ಮೋದಕ ಪಾತ್ರೆ ಬಲಗೈಯಲ್ಲಿ ಅಂಕುಶ ಹಿಡಿದು ವ್ಯಾಖ್ಯಾನ ಮುದ್ರೆಯಲ್ಲಿದ್ದಾನೆ. ಕರಂಡ ಮುಕುಟ ಧರಿಸಿದ್ದಾನೆ. ಕೊರಳಲ್ಲಿ ಯಜ್ಞೋಪವೀತವಿದೆ. ಉದರಕ್ಕೆ ಸರ್ಪ ಬಂಧವಿದೆ. ಕಾಲ್ಗಡಗವಿದೆ. ಇವು ಈ ಮೂರ್ತಿಶಿಲ್ಪದ ಲಕ್ಷಣಗಳಾಗಿವೆ.

ಹೆಸರು : ಗಣೇಶ
ಸಿಕ್ಕ ಸ್ಥಳ : ಕರೆಯ ದಿಡ್ಡಿಯ ಮುಂಭಾಗದಲ್ಲಿ
ರಾಜವಂಶ/ಮಾಂಡಲೀಕರು : ವಿಜಯನಗರ
ಕಾಲ : ೧೪-೧೫ನೇ ಶತಮಾನ
ವಸ್ತು : ಗ್ರಾನೈಟ್‌ಶಿಲೆ

ಸ್ಥಾನಿಕಭಂಗಿಯಲ್ಲಿದೆ. ಈ ಮೂರ್ತಿ ಕರಂಡ ಮುಕುಟ ಧರಿಸಿ ಚುತುರ್ಭುಜಗಳಲ್ಲಿ ಬಲಭಾಗದಲ್ಲಿ ಅಂಕುಶ ಎಡಗೈಯಲ್ಲಿ ಪಾಶ ಹಿಡಿದಿದ್ದಾನೆ. ಒಂದು ಬಲಗೈ ಅಭಯಹಸ್ತದಲ್ಲಿದೆ. ಮೊದಕ ಪಾತ್ರೆಯನ್ನು ಎಡಗೈಯಲ್ಲಿ ಹಿಡಿದು ನಿಂತಿದ್ದಾನೆ. ಕೊರಳಲ್ಲಿ ಯಜ್ಞೋಪವೀತವಿದೆ. ಕಾಲಗಳಲ್ಲಿ ಕಡಗಗಳಿವೆ. ಕಾಲುಗಳ ಬಲಗಡೆ ವಾಹನ ಮೂಷಕವಿದೆ.

ಹೆಸರು : ಚತುರ್ಭುಜ ಗಣೇಶ
ಸಿಕ್ಕ ಸ್ಥಳ : ಕಾಳಿಕಾ ದೇವಾಲಯದಲ್ಲಿ ಕಾಮಲಾಪುರ.ಹೊಸಪೇಟೆ.ತಾ.
ರಾಜವಂಶ/ಮಾಂಡಲೀಕರು : ವಿಜಯನಗರೋತ್ತರ
ಕಾಲ : ೧೬-೧೭ನೇ ಶತಮಾನ
ವಸ್ತು : ಗ್ರಾನೈಟ್‌ಶಿಲೆ

ಈ ಮೂರ್ತಿ ಸುಖಾಸೀನ ಭಂಗಿಯಲ್ಲಿದೆ. ಚತುರ್ಭುಜ ಧಾರಿಯಾಗಿ ಎಡಗಡೆ ಪಾಶ, ಮೋದಕ ಪಾತ್ರೆ, ಬಲಗಡೆ ಅಂಕುಶ ಹಿಡಿದು ವ್ಯಾಖ್ಯಾನ ಮುದ್ರೆಯಲ್ಲಿ ಇದ್ದಾನೆ. ತೋಳುಬಂಧಿ, ವಾಜೀಬಂಧ ಧರಿಸಿದ್ದಾನೆ. ಸರ್ಪದ ಉದರ ಬಂಧವಿದೆ. ಯಜ್ಞೋಪವೀತ ಧರಿಸಿದ್ದಾನೆ. ಕರಂಡ ಮುಕುಟ, ಧರಿಸಿದ್ದಾನೆ. ಅಲಂಕೃತ ಕೀರ್ತಿಮುಖದ ಪ್ರಭಾವಳಿ ಮೂರ್ತಿಶಿಲ್ಪದ ಸುತ್ತಲೂ ಹರಡಿದೆ. ಸಿಂಹ ಆಸನದ ಮೇಲೆ ಈ ಮೂರ್ತಿ ಇದೆ.

ಹೆಸರು : ಗಣೇಶ
ಸಿಕ್ಕ ಸ್ಥಳ : ಗಾರಿಭಾವಿ ಆಂಜನೇಯ ದೇವಸ್ಥಾನದಲ್ಲಿ
ರಾಜವಂಶ/ಮಾಂಡಲೀಕ : ವಿಜಯನಗರೋತ್ತರ
ಕಾಲ : ೧೬ನೇ ಶತಮಾನ
ವಸ್ತು : ಗ್ರಾನೈಟ್‌ಶಿಲೆ

ಸುಖಾಸೀನ ಭಂಗಿಯಲ್ಲಿದ್ದಾನೆ. ಚತುರ್ಭುಜ ಗಣೇಶ ಎಡಗೈಯಲ್ಲಿ ಪಾಶ ಮತ್ತು ಮೋದಕ ಪಾತ್ರೆ ಬಲಗೈಯಲ್ಲಿ ಅಂಕುಶ ವ್ಯಾಖ್ಯಾನ ಮುದ್ರೆಯಲ್ಲಿದ್ದಾನೆ. ಎಡಭಾಗದಲ್ಲಿ ಕೊರೆದಂತವಿದೆ. ಬಲಭಾಗದ ದಂತ ಹಾಳಾಗಿದೆ. ಕೈಬಳೆ ಧರಿಸಿದ್ದಾನೆ. ಸರ್ಪದ ಉದರ ಬಂಧವಿದೆ. ಕಾಲಲ್ಲಿ ಕಡಗ ಧರಿಸಿದ್ದಾನೆ. ಸಿಂಹ ಪೀಠವಿದೆ. ಕೀರ್ತಿಮುಖದ ಅಲಂಕೃತ ಪ್ರಭಾವಳಿ ಸುತ್ತುವರಿದಿದೆ.

ಜೈನಧರ್ಮ

ಭಾರತೀಯ ಸಂಸ್ಕೃತಿಗೆ ಧರ್ಮ, ದರ್ಶನ, ಸಾಹಿತ್ಯ ಕಲೆ ಪ್ರಮುಖವಾದ ಅಂಗಗಳು. ಜೈನಧರ್ಮ ಕರ್ನಾಟಕದಲ್ಲಿ ಕ್ರಿ.ಪೂ. ಕಾಲದಿಂದಲೇ ಪ್ರವಹಿಸಿತ್ತು ಎಂಬುದಕ್ಕೆ ಶಾಸನ ಮತ್ತು ಸಾಹಿತ್ಯಿಕ ಆಧಾರಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಜೈನ ತೀರ್ಥಂಕರರೆಲ್ಲರೂ ಉತ್ತರ ಭಾರತದಲ್ಲೇ ಜನಿಸಿದರೂ ಜೈನಶಾಸ್ತ್ರ ಗ್ರಂಥಗಳನ್ನು ರಚಿಸಿದ ಆಚಾರ್ಯರು ಹೆಚ್ಚಿನವರು ಕರ್ನಾಟಕದವರು ಪ್ರಾಚೀನ ಕರ್ನಾಟಕದಲ್ಲಿ ಶ್ರವಣಬೆಳಗೊಳ. ಬನವಾಸಿ ಕೊಪ್ಪಳ, ಹಲಸಿ, ಹೊನಸೋಗಿ, ಹುಂಚ ಮುಂತಾದ ಕಡೆಗಳಲ್ಲಿ ಜೈನ ಕೇಂದ್ರಗಳು ಪ್ರವರ್ಧಮಾನಕ್ಕೆ ಬಂದವು. ಕ್ರಿ.ಶ. ಆರಂಭದ ಕಾಲದಲ್ಲಿ ರಾಜಾಶ್ರಯ ದೊರೆತಿದ್ದರಿಂದ ಜೈನ ಧರ್ಮ ಹೆಚ್ಚು ಪ್ರವರ್ಧಮಾನಕ್ಕೆ ಬಂತು. ಜೈನಧರ್ಮವು ಅಭಿವೃದ್ಧಿಯಾದಂತೆ ಅದಕ್ಕೆ ಸಂಬಂಧಿಸಿದಂತೆ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆ ಮುಂತಾದವುಗಳೂ ಪ್ರಾರಂಭವಾದವು. ಜೈನಧರ್ಮ ಬೋಧಿಸಿದ ತೀರ್ಥಂಕರು ದಿವ್ಯತ್ವವನ್ನು ಪಡೆದ ಮಾನವರಾದರು ದೇವತಾ ಪುರುಷರಂತೆ ಆರಾಧಿಸಲ್ಪಟ್ಟರು.

ಪ್ರಸ್ತುತ ಅಧ್ಯಯನ ಕಮಲಾಪುರದ ಜೈನ ಮೂರ್ತಿಶಿಲ್ಪಕ್ಕೆ ಸಂಬಂಧಿಸಿದ್ದರಿಂದ ಇದನ್ನು ಸೀಮಿತವಾಗಿರಿಸಿಕೊಂಡು ಇಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಮೂರ್ತಿಶಿಲ್ಪದಲ್ಲಿ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದ್ದಲ್ಲಿ ಜೈನಮೂರ್ತಿ ಹಿಂದೂ ಮೂರ್ತಿ ಶಿಲ್ಪಗಳಂತೆ ಹೆಚ್ಚು ಬೆಳವಣಿಗೆ ಕಂಡಿಲ್ಲ. ಕಾರಣ ಜೈನ ತೀರ್ಥಂಕರ ರಚನೆ ತೀರ ಸರಳವಾಗಿರುತ್ತದೆ: ಇಲ್ಲಿ ಯಾವುದೇ ಉಡುಗೆ-ತೊಡುಗೆ ಅಲಂಕಾರತೆಗೆ ಪ್ರಾಧಾನ್ಯತೆ ಇಲ್ಲ. ಶಿಲ್ಪ ರಚನೆಯಲ್ಲಿ ೨ ಭಂಗಿ. ಕಾಯೋತ್ಸಂಗ ಭಂಗಿ ಮತ್ತು ಖಡ್ಗಾಸನ ಭಂಗಿ. ಜೈನ ಪರಂಪರೆಯ ೨೪ ತೀರ್ಥಂಕರರಲ್ಲಿ ೨೧ ತೀರ್ಥಂಕರರು ಕಾಯೋತ್ಸಂಗ ಭಂಗಿಯಲ್ಲಿ ನಿಂತು ನಿರ್ವಾಣ ಹೊಂದಿದ್ದಾರೆ. ಉಳಿದ ತೀರ್ಥಂಕರು ಆದಿನಾಥ, ನೇಮಿನಾಥ, ಮಹಾವೀರ ಇವರು ಪಲ್ಯಂಕಾಸನ ಭಂಗಿಯಲ್ಲಿ ಕುಳಿತು ನಿರ್ವಾಣ ಹೊಂದಿದ್ದಾರೆ. ಹೀಗಾಗಿ ಈ ಎರಡೇ ಭಂಗಿಗಳು ಜನಪ್ರಿಯವಾದವು. (ಶೆಟ್ಟಿ ಎಸ್.ಡಿ. ೧೯೯೯, ಪು. ೩೬) ಚಾಮರಸ, ಸಿಂಹಾಸನ, ಪ್ರಭಾಮಂಡಲ ದುಂದುಬಿ ಯಕ್ಷ-ಯಕ್ಷಿಯರು, ತೀರ್ಥಂಕರ ತಲೆಯ ಮೇಲೆ ೩ ಛತ್ರಗಳು, ಈ ಲಕ್ಷಣಗಳೆಲ್ಲವನ್ನೂ ಜೈನ ಪ್ರತಿಮೆಯಲ್ಲಿ ಕಾಣಬಹುದು. ಕೆಲವೊಮ್ಮೆ ಅವನಿಗಿಂತ ಹಿಂದೆ ಆಗಿ ಹೋದ ತೀರ್ಥಂಕರರನ್ನು ೨೩ ತೀರ್ಥಂಕರನ್ನು ಪ್ರಭಾವಳಿಯಲ್ಲಿ ತೋರಿಸಲಾಗಿದೆ. ಮಧ್ಯದಲ್ಲಿರುವ ತೀರ್ಥಂಕರನ್ನು ಹೆಸರಿಸಿ ಒಟ್ಟು ೨೪ ತೀರ್ಥಂಕರೆಂದು ಕರೆಯಲಾಗುತ್ತಿದೆ. ಈ ೨೪ ತೀರ್ಥಂಕರರ ಹೆಸರು. ಲಾಂಛನ ಯಕ್ಷ-ಯಕ್ಷಿಯರು ಈ ಕೆಳಗಿನಂತಿವೆ.

ಅ.ನಂ.	ತೀರ್ಥಂಕರರ ಹೆಸರು	ಲಾಂಛನ	ಯಕ್ಷ-ಯಕ್ಷಿಯರು
೦೧	ವೃಷಭನಾಥ	ಎತ್ತು	ಗೋಮುಖ-ಚಕ್ರೇಶ್ವರಿ
೦೨	ಅಜಿತನಾಥ	ಆನೆ	ಮಹಾಯಕ್ಷ-ರೋಹಿಣಿ
೦೩	ಶಂಭವನಾಥ	ಕುದುರೆ	ತ್ರಿಮುಕ-ಪ್ರಜ್ಞಪ್ತಿ
೦೪	ಅಭಿನಂದನ	ಕಪಿ	ಯಕ್ಷೇಶ್ವರ-ವಜ್ರಶಂಕಲ
೦೫	ಸುಮತಿನಾಥ	ಕೋಕ	ತುಂಬರು-ಪುರುಷದತ್ತೆ
೦೬	ಪದ್ಮಪ್ರಭ	ಕಮಲ	ಕುಸುಮಾವರ-ಮನೋವೇಗೆ
೦೭	ಸುಪಾರ್ಶ್ವನಾಥ	ಸ್ವಸ್ತಿಕ	ವರನಂದಿ-ಕಾಲಿ
೦೮	ಚಂದ್ರನಾಥ	ಚಂದ್ರ	ಶ್ಯಾಮ-ಜ್ವಾಲಾಮಾಲಿನಿ
೦೯	ಪುಷ್ಪದಂತ	ಮಕರ	ಅಜಿತ-ಮಹಾಕಾಲಿ
೧೦	ಶೀತಲನಾಥ	ಕಲ್ಪವೃಕ್ಷ	ಬ್ರಹ್ಮ-ಮಾನವಿ
೧೧	ಶ್ರೇಯಾಂಸ	ಗಂಡಕ	ಈಶ್ವರ-ಗೌರಿ
೧೨	ವಾಸುಪೂಜ್ಯ	ಮಹಿಷ	ಕಮಾರ-ಗಾಂಧಾರಿ
೧೩	ವಿಮಲನಾಥ	ವರಾಹ	ಷಣ್ಮುಖ-ವೈರೋಟಿ
೧೪	ಅನಂತನಾಥ	ಭಲ್ಲೂಕ	ಪಾತಾಲ-ಅನಂತಮತಿ
೧೫	ಧರ್ಮನಾಥ	ವಜ್ರ	ಕಿನ್ನರ-ಮಾನಸಿ
೧೬	ಶಾಂತಿನಾಥ	ಹರಿಣಿ	ಗರುಡ-ಮಹಾಮಾನಸಿ
೧೭	ಕುಂಥುನಾಥ	ಮೇಷ	ಗಂಧರ್ವ-ಜಯ
೧೮	ಅರನಾಥ	ಮತ್ಸ್ಯ	ಮಹೇಂದ್ರ-ವಿಜಯ
೧೯	ಮಲ್ಲಿನಾಥ	ಕಲಸ	ಕುಬೇರ-ಅಪರಾಜಿತೆ
೨೦	ಮುನಿಸೂವ್ರತ	ಕೂರ್ಮ	ವರುಣ-ಬಹುರೂಪಿಣಿ
೨೧	ನಮಿನಾಥ	ಇಂದೀವರ	ವಿದ್ಯುತ್ಪ್ರಭ-ಚಾಮುಂಡಿ
೨೨	ನೇಮಿನಾಥ	ಶಂಖ	ಸರ್ವಾಹ್ನ-ಕೂಷ್ಮಾಂಡಿನಿ
೨೩	ಪಾರ್ಶ್ವನಾಥ	ಸರ್ಪ	ಧರಣೇಂದ್ರ-ಪದ್ಮಾವತಿ
೨೪	ವರ್ಧಮಾನ	ಸಿಂಹ	ಮಾತಂಗ-ಸಿದ್ದಾಯಿನಿ

ಬಸದಿಯಲ್ಲಿ ತೀರ್ಥಂಕರ ಶಿಲ್ಪವಲ್ಲದೆ. ಅವರ ಯಕ್ಷ ಯಕ್ಷಿಯರ ಬ್ರಹ್ಮದೇವನ ಶಿಲ್ಪಗಳನ್ನು ಕಾಣಬಹುದು. ಕೆಲವು ಬಸದಿಗಳು ಯಕ್ಷಿಯ ಹೆಸರಿನಿಂದಲೇ ಪ್ರಸಿದ್ಧ ಪಡೆದಿವೆ. ಇವುಗಳಲ್ಲಿ ಪದ್ಮಾವತಿ ಯಕ್ಷಿ ತುಂಬ ಪ್ರಸಿದ್ಧ. ಲಕ್ಕುಂಡಿಯ ಅತ್ತಿಮಬ್ಬೆ ಬಸದಿಯಲ್ಲಿ ಬ್ರಹ್ಮನ ವಿಗ್ರಹವಿರುವುದನ್ನು ಇಲ್ಲಿ

ಉದಾಹರಿಸಬಹುದು. ಪ್ರಸ್ತುತ ಕಾಮಲಾಪುರ ಗ್ರಾಮದಲ್ಲಿ ಲಭ್ಯವಾದ ಜೈನಮೂರ್ತಿ ಶಿಲ್ಪಗಳ ಲಕ್ಷಣಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

ಹೆಸರು	:	ಬಾಹುಬಲಿ
ಸಿಕ್ಕ ಸ್ಥಳ	:	ಹಂಪಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಬಾಹುಬಲಿ ಮೂರ್ತಿಶಿಲ್ಪ ಸ್ಥಾನಕಭಂಗಿಯಲ್ಲಿದೆ. ಎರಡು ಕೈಗಳನ್ನು ಪಕ್ಕದಲ್ಲಿ ಇಳಿಬಿಟ್ಟು ನೆಟ್ಟಗೆ ನಿಂತಿರುವುದು ಇದಕ್ಕೆ ಕಾಯೋತ್ಸರ್ಗ ನಿಲುವೆನ್ನುವರು. ಈ ಬಾಹುಬಲಿ ಮೂರ್ತಿ ಪೂರ್ಣನಗ್ನನಾಗಿದ್ದಾನೆ. ನಿರಾಭರಣನಾಗಿರುತ್ತಾನೆ. ಈ ಶಿಲ್ಪದ ದೇಹ ಸುತ್ತಲೂ ಹೂಬಳ್ಳಿಗಳು ಅಲಂಕೃತವಾಗಿ ಸುತ್ತುವರೆದುಕೊಂಡಿವೆ. ತಲೆಯ ಮೇಲೆ ಗುಂಗರಗೂದಲುಗಳಿವೆ. ಧ್ಯಾನ ಮುದ್ರೆ, ನಿರಾಭರಣ, ಪೂರ್ಣ ನಗ್ನತೆ, ಇವೆಲ್ಲವೂ ಈ ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳಾಗಿವೆ.

ಹೆಸರು	:	ಪಾರ್ಶ್ವನಾಥ ತೀರ್ಥಂಕರರು
ಸಿಕ್ಕ ಸ್ಥಳ	:	ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದ ಮುಂಭಾಗದಲ್ಲಿ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೫-೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಮೂರ್ತಿಶಿಲ್ಪ ಪದ್ಮಾಸೀನನಾಗಿ ಧ್ಯಾನ ಭಂಗಿಯಲ್ಲಿ ಕುಳಿತಿದ್ದಾನೆ. ಶಿರದ ಮೇಲೆ ಏಳು ಹೆಡೆಯ ಸರ್ಪ ತಲೆಯ ಮೇಲೆ ರಕ್ಷಣೆ ನೀಡುವಂತಿದೆ. ನಿರಾಭರಣ, ಪೂರ್ಣನಗ್ನನಾಗಿರುತ್ತಾನೆ. ಈ ಮೂರ್ತಿಶಿಲ್ಪಿಯ ಅಕ್ಕ-ಪಕ್ಕ ಧರಣೇಂದ್ರ ಮತ್ತು ಪದ್ಮಾವತಿ ಎಂಬ ಯಕ್ಷ-ಯಕ್ಷಿಣಿಯರು ಇದ್ದಾರೆ. ಈ ಮೂರ್ತಿಶಿಲ್ಪದ ಕೈಗಳು ಶಿಥಿಲವಾಗಿದೆ. ಕಿರೀಟ, ವರ್ತುಲಾಕಾರದ ಓಲೆ, ಕಂಠಹಾರವನ್ನು ಯಕ್ಷ-ಯಕ್ಷಣಿಯರು ಧರಿಸಿದ್ದಾರೆ.

ಹೆಸರು	:	ಪಾರ್ಶ್ವನಾಥ
ಸಿಕ್ಕ ಸ್ಥಳ	:	ರಾಜ್ಯ ಪುರಾತತ್ವ ಪಾಚ್ಯ ಸಂಶೋಧನಾ ಕೇಂದ್ರದ ಒಳ ಆವರಣ ಕಾಮಲಾಪುರದಲ್ಲಿ ಹೊಸಪೇಟೆ.ತಾ.
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಸ್ಥಾನಿಕವಾಗಿ ಎರಡೂ ಕೈಗಳನ್ನು ಇಳಿಬಿಟ್ಟು ಕಾಯೋತ್ಸರ್ಗ ಮುದ್ರೆಯಲ್ಲಿದ್ದಾನೆ. ೨೩ನೇ ತೀರ್ಥಂಕರ ಮಧ್ಯದಲ್ಲಿರುವವನು. ಈ ಮೂರ್ತಿಶಿಲ್ಪಕ್ಕೆ ಮೂರು ಹಂತದ ಕೊಡೆಯ (ಛತ್ರಿ)ಇದೆ. ಈ ಮೂರ್ತಿಶಿಲ್ಪದ ಪ್ರಭಾವಳಿಯಲ್ಲಿ ಬಲಗಡೆ ೧೧ ತೀರ್ಥಂಕರು, ಎಡಗಡೆ ೧೦ ತೀರ್ಥಂಕರರಿದ್ದಾರೆ. ಈತನ ಶಿರದಲ್ಲಿ ಗುಂಗರು ಕೂದಲುಗಳಿವೆ. ಅಕ್ಕ-ಪಕ್ಕ ೨ ಚಾಮರಗಳು ಇವೆ. ಧರಣೇಂದ್ರ, ಪದ್ಮಾವತಿ ಎಂಬ ಯಕ್ಷ-ಯಕ್ಷಿಣಿಯರಿದ್ದಾರೆ. ಪೀಠದಲ್ಲಿ ಸರ್ಪದ ಚಿಹ್ನೆ ಇದೆ.

ಹೆಸರು	:	ಶಂಭವನಾಥ ತೀರ್ಥಂಕರ
ಸಿಕ್ಕ ಸ್ಥಳ	:	ರಾಜ್ಯ ಪುರಾತತ್ವ ಪಾಚ್ಯ ಸಂಶೋಧನಾ ಇಲಾಖೆ, ಕಾಮಲಾಪುರ
ರಾಜವಂಶ/ಮಾಂಡಲೀಕರು	:	ವಿಜಯನಗರ
ಕಾಲ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಮೂರ್ತಿಶಿಲ್ಪ ಕಾಯೋತ್ಸರ್ಗದಲ್ಲಿದ್ದು, ಪೀಠದಲ್ಲಿ ಮುಂಭಾಗದಲ್ಲಿ ಕುದುರೆ ಚಿಹ್ನೆ ಇದೆ. ಆದಕಾರಣ ಆ ಮೂರ್ತಿಶಿಲ್ಪದಲ್ಲಿನ ತೀರ್ಥಂಕರ ಹೆಸರು ಶಂಭವನಾಥ. ಈ ಮೂರ್ತಿಶಿಲ್ಪದ ಅಕ್ಕ-ಪಕ್ಕ ತ್ರಿಮುಖ ಪ್ರಜ್ಞಪ್ತಿ ಎಂಬ ಯಕ್ಷ-ಯಕ್ಷಣಿಯರು ಇದ್ದಾರೆ.

ಒಟ್ಟಾರೆ ಈವರೆಗೆ ನಡೆಸಿದ ಅಧ್ಯಯನದಲ್ಲಿ ಲಭ್ಯವಾದ ಮೂರ್ತಿಶಿಲ್ಪಗಳು ವೈಷ್ಣವ, ಶೈವ, ಶಾಕ್ತ ಗಾಣಪತ್ಯ, ಜೈನ ಪಂಥಕ್ಕೆ ಸೇರಿದವು. ವೈಷ್ಣವ ಪಂಥಕ್ಕೆ ಸೇರಿದಂತೆ ಹೆಚ್ಚಿನ ಮೂರ್ತಿಶಿಲ್ಪಗಳು ವೈಷ್ಣವ ದೇವಾಲಯಗಳಲ್ಲೇ ದೊರೆತಿವೆ. ಇವುಗಳಲ್ಲಿ ರಾಮಕೃಷ್ಣ, ಬೆಣ್ಣೆಕೃಷ್ಣ, ವೇಣುಗೋಪಾಲ, ಗರುಡ, ಆಂಜನೇಯ ಇವೇ ಹೆಚ್ಚಿನ ಪಾಲಿನವುಗಳಾಗಿವೆ. ಉದಾಹರಣೆಗೆ ಕಾಮಲಾಪುರ ಗ್ರಾಮದಲ್ಲಿನ ಪಟ್ಟಾಭಿರಾಮ ದೇವಾಲಯ, ಹಜಾರಾಮದೇವಾಲಯ, ವಿಷ್ಣುದೇವಾಲಯ ಇತ್ಯಾದಿ. ಶೈವ ಪಂಥದಲ್ಲಿ ಮುಖಲಿಂಗಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡದೆ. ನೈಜಕತೆಗೆ ಶಿವಲಿಂಗಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. ಶೈವಪಂಥದಲ್ಲಿ ಶಿವಲಿಂಗ, ವೀರಭದ್ರ, ಭೈರವ, ನಂದಿ, ಇವು ಮುಖ್ಯವಾಗಿ ಕಾಣಲ್ಪಡುವ ಮೂರ್ತಿಶಿಲ್ಪ ಗಳಾಗಿವೆ. ಶಾಕ್ತಪಂಥದಲ್ಲಿ ಮಹಿಷಾಸುರಮರ್ಧಿನಿ, ಕಾಳಿ, ದುರ್ಗಾ ಇವು ಮುಖ್ಯವಾಗಿವೆ. ಒಟ್ಟಿನಲ್ಲಿ ಮಾತೃದೇವತೆ ಶಾಕ್ತ ಸಂಪ್ರದಾಯಕ್ಕೆ ಮೂಲಾಧಾರ. ಗಾಣಪತ್ಯದಲ್ಲಿ, ಗಣೇಶ ಮೂರ್ತಿಶಿಲ್ಪ ಪಂಚಾಯತನ ದೇವಾಯಗಳಲ್ಲಿ ಹಾಗೂ ಪ್ರತ್ಯೇಕವಾಗಿ ಪೂಜಿಸಲ್ಪಟ್ಟಿದೆ. ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ಗಣಪತಿಯನ್ನು ಶೈವ, ಶಕ್ತಿ ದೇವರುಗಳ ಜೊತೆಗೇ ಪೂಜಿಸಿರುವುದುಂಟು. ಇಲ್ಲಿ ಗಣಪತಿಗೆ ಪ್ರಥಮ ಪೂಜೆ ಜೈನಧರ್ಮ ಕುರಿತು ಹಲವಾರು ಶಾಸನಗಳು ಉಲ್ಲೇಖಿಸಲ್ಪಟ್ಟಿರೂ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದರೆ ಸಂಖ್ಯೆಯ ದೃಷ್ಠಿಯಿಂದ ಕಡಿಮೆ ಎಂದೆನಿಸಿದೆ. ಬಾಹುಬಲಿ ಪಾರ್ಶ್ವನಾಥ,

